# ಪೌಲನು ರೋಮನರಿಗೆ ಬರೆದ ಪತ್ರ

# 1 1

**1:1** *"ಪೌಲನು"*– ಅಪೊ 7:38; 8:13; 9:1-19; 13:9.

*"ದಾಸನು"*– ಈ ಗ್ರೀಕ್ ಪದವನ್ನು ಸೇವಕನು ಎಂಬದಾಗಿಯೂ ಭಾಷಾಂತರ ಮಾಡಬಹುದು, ಸೇವಕನೆಂದರೆ ಮತ್ತೊಬನಿಗೆ ಸಂಪೂರ್ಣವಾಗಿ ಸೇರಿದವನು. ಈ ಅರ್ಥದಲ್ಲಿ ವಿಶ್ವಾಸಿಗಳೆಲ್ಲರೂ ಯೇಸು ಕ್ರಿಸ್ತನ ದಾಸರು ಅಥವಾ ಸೇವಕರಾಗಿದ್ದಾರೆ – ತನ್ನ ಸ್ವಾಸ್ಥಸ್ಥ್ಯ, ತನ್ನ ಜನರಾಗುವ ಸಲುವಾಗಿ ಪಾಪದ ದಾಸತ್ವದಲ್ಲಿದ್ದ ಎಲ್ಲರನ್ನೂ ಆತನು ಖರೀದಿಸಿಕೊಂಡಿದ್ದಾನೆ (6:16-18,22; ಮತ್ತಾಯ 20:28; 1 ಕೊರಿಂಥ 6:19-20). ಕ್ರಿಸ್ತನೊಂದಿಗಿನ ಸಂಬಂಧವನ್ನು ಪೌಲನು ಮನಃಪೂರ್ವಕವಾಗಿ ಸಂತೋಷದಿಂದ ಅಂಗೀಕರಿಸಿಕೊಂಡನು, ವಿಶ್ವಾಸಿಗಳೆಲ್ಲರೂ ಹೀಗೆಯೇ ಅಂಗೀಕರಿಸಿಕೊಳ್ಳಬೇಕು. 8:14 ನೋಟ್ ನೋಡಿರಿ.

*"ಅಪೊಸ್ತಲನು"*– 1 ಕೊರಿಂಥ 1:1; ಗಲಾ 1:1. ಈ ಪದದ ಅರ್ಥ ಒಬ್ಬನು ಮತ್ತೊಬ್ಬನನ್ನು ಯಾವುದಾದರು ಕೆಲಸ ಅಥವಾ ನಿಯೋಗಕ್ಕೆ ಕಳುಹಿಸಿಕೊಡುವದಾಗಿದೆ. ಮತ್ತಾಯ 10:2 ನೋಡಿರಿ.

*"ನೇಮಿಸಲ್ಪಟ್ಟವನು"*– ದೇವರು ಪೌಲನಿಗೆ ಯೇಸು ಕ್ರಿಸ್ತನ ಸುವಾರ್ತೆಯನ್ನು ಸಾರುವ, ವಿವರಿಸುವ ಮತ್ತು ಕಾಪಾಡಿಕೊಳ್ಳುವ ವಿಶೇಷವಾದ ಕಾರ್ಯವನ್ನು ಒಪ್ಪಿಸಿದನು. ಈ ಸುವಾರ್ತೆಯು "ದೇವರದ್ದೆಂದು ತಿಳಿದು" ಅಭ್ಯಾಸಿಸಿರಿ. ಒಬ್ಬನೇ ನಿಜವಾದ ದೇವರು ಇದನ್ನು ಯೋಚಿಸಿದನು, ಪ್ರಾರಂಭಿಸಿದನು, ಇದಕ್ಕಾಗಿ ಮಾರ್ಗವನ್ನು ಸಿದ್ಧಮಾಡಿದನು ಮತ್ತು ಈಗ ಎಲ್ಲಾ ಭಾಗಗಳಲ್ಲಿರುವ ಜನರಿಗೆ ಒದಗಿಸುತ್ತಿದ್ದಾನೆ. **2**

**1:2** ಯೇಸು ಕ್ರಿಸ್ತನ ಸುವಾರ್ತೆಯು ಸಂಪೂರ್ಣವಾಗಿ ಹೊಸದಲ್ಲ. ಹಳೆಯ ಒಡಂಬಡಿಕೆಯಲ್ಲಿ ("ಪವಿತ್ರಶಾಸ್ತ್ರಗಳಲ್ಲಿ") ಸುವಾರ್ತೆಯ ವಾಗ್ದಾನಗಳು, ಪ್ರವಾದನೆಗಳು, ವಿಧಾನಗಳು ಮತ್ತು ಚಿತ್ರಣಗಳಿದ್ದವು. ಲೂಕ 24:25-27,46,47; ಮತ್ತಾಯ 5:17; ಇಬ್ರಿ 8:5; 10:1 ನೋಡಿರಿ. **3**

**1:3** ಯೇಸು ಕ್ರಿಸ್ತನು ದೈವೀಕ ಸ್ವಭಾವ ಮತ್ತು ಮಾನವ ಸ್ವಭಾವ ಎಂಬ ಎರಡು ಸ್ವಭಾಗಳಿದ್ದ ಒಬ್ಬನೇ ವ್ಯಕ್ತಿಯಾಗಿದ್ದನು. ಅವನು ದಾವೀದ ಕುಮಾರನು ಮತು ಮನುಷ್ಯ ಕುಮಾರನಾಗಿದ್ದನು (ಮತ್ತಾಯ 1:1; 3:17; ಇಬ್ರಿ 2:14,17). **4**

**1:4** *"ಪವಿತ್ರವಾದ ಆತ್ಮವುಳ್ಳವನು"*– ಅಂದರೆ ಪವಿತ್ರಾತ್ಮನಾಗಿದ್ದಾನೆ (ಯೋಹಾನ 14:16-17,26). ಯಾಜಕ 20:7; ಯೋಹಾನ 17:17-19ರಲ್ಲಿ ಪವಿತ್ರತೆಯ ಬಗ್ಗೆ ನೋಟ್ಸ್

ಕೊಡಲಾಗಿದೆ. ಪುನರುತ್ಥಾನವು ಯೇಸು ಕ್ರಿಸ್ತನು ದೇವಕುಮಾರನಾಗಿದ್ದಾನೆ ಎಂಬದಕ್ಕೆ ಅಂತಿಮವಾದ ಪುರಾವೆಯಾಗಿದೆ. ಮತ್ತಾಯ 28:6 ನೋಡಿರಿ. ಆತನು ಕಾಣಿಸಿಕೊಳ್ಳಲಿಲ್ಲ, ತನ್ನ ಬಗ್ಗೆ ದೊಡ್ಡ ದೊಡ್ಡ ಹೇಳಿಕೆಗಳನ್ನು ಕೊಡಲಿಲ್ಲ, ನಂತರ ಮೃತಪಟ್ಟು ಸಮಾಧಿಯಲ್ಲಿಯೇ ಉಳಿಯಲಿಲ್ಲ. ತಾನು ಮಾಡುವ ಕಾರ್ಯಗಳ ಬಗ್ಗೆ ಹೇಳಿದ ಹಾಗೆಯೇ ನಡೆದುಕೊಂಡನು. ಆತನು ದೇವಕುಮಾರನಾಗಿದ್ದಾನೆ ಎಂಬದಕ್ಕೆ ಹೆಚ್ಚಿನ ಪುರಾವೆಗಳು ಬೇಕಿರುವದಾದರೆ ಯೋಹಾನ 5:31-47 ನೋಡಿರಿ. **5**

**1:5** ತನ ರಕ್ಷಣೆ ಮತ್ತು ಯೇಸು ಕ್ರಿಸ್ತನ ಸೇವೆ ಮಾಡಲು ತನಗೆ ದೊರೆತಿರುವ ಅವಕಾಶ ಎರಡೂ ದೇವರ ಕೃಪೆಯಾಗಿದೆ ಎಂಬದನ್ನು ಪೌಲನು ಚೆನ್ನಾಗಿ ಅರ್ಥಮಾಡಿಕೊಂಡಿದ್ದನು (ಎಫೆ 2:3-10; 3:7-8; 1 ತಿಮೊ 1:13-17; 2 ತಿಮೊ 1:9; ತೀತ 3:3-8). ವಿಶೇಷವಾಗಿ ಅನ್ಯರ (ಯೆಹೂದ್ಯರಲ್ಲದ ಬೇರೆ ಜನರು) ಮಧ್ಯದಲ್ಲಿ ಸೇವೆ ಮಾಡಲು ದೇವರು ಅವನನ್ನು ನೇಮಿಸಿದನು. ಆದರೆ ಆತನು ಯೆಹೂದ್ಯರಿಗೂ ಸುವಾರ್ತೆ ಸಾರಿದನು – ಅಪೊ 13:45-47; 22:21; 26:17-18; ಗಲಾ 1:16; 2:7-8.

*"ನಂಬಿಕೆಯೆಂಬ ವಿಧೇಯತ್ವ"*– "ನಂಬಿಕೆಗೆ ವಿಧೇಯರಾಗುವದು" ಎಂಬದಾಗಿ ಕೆಜೆವಿ ಆವೃತ್ತಿ ಹೇಳುತ್ತದೆ ಆದರೆ "ಎಂಬ" ಪದವನ್ನು ಸೇರಿಸಲಾಗಿದೆ. ಈ ಪದ ಗ್ರೀಕ್ ಭಾಷೆಯಲ್ಲಿ ಇಲ್ಲ. ಸತ್ಯದ ದೇಹ ಮತ್ತು ಯೇಸು ಕ್ರಿಸ್ತನು ಹಾಗೂ ಆತನ ಅಪೊಸ್ತಲರು ಕಲಿಸಿದ ಸಿದ್ಧಾಂತವನ್ನು ಸೂಚಿಸಲು "ನಂಬಿಕೆ" ಎಂಬ ಪದವನ್ನು ಸತ್ಯವೇದದಲ್ಲಿ ಉಪಯೋಗಿಸಲಾಗಿದೆ (ಉದಾಹರಣೆಗೆ, 1 ತಿಮೊ 4:1; ಯೂದ 3 ನೋಡಿರಿ). ಆದರೆ ನಂಬಿಕೆ ("ಯೆಂಬ" ಇಲ್ಲದೆ) ವಿಶ್ವಾಸದ ಅನುಭವವಾಗಿದೆ. ನಂಬಿಕೆ ಮತ್ತು ವಿಧೇಯತೆಯ ನಡುವೆಯಿರುವ ನಿಕಟವಾದ ಸಂಪರ್ಕವು ಹೊಸ ಒಡಂಬಡಿಕೆಯ ಅನೇಕ ಸ್ಥಳಗಳಲ್ಲಿ ಕಾಣಿಸುತ್ತದೆ. 6:16-23; 8:14; ಮತ್ತಾಯ 7:21,24; ಅಪೊ 5:32; 22:10 (ಇಲ್ಲಿ ಅನೇಕ ವಾಕ್ಯಭಾಗಗಳನ್ನು ಕೊಡಲಾಗಿದೆ); 2 ಥೆಸ 1:8; ಇಬ್ರಿ 5:9; 1 ಪೇತ್ರ 1:2; 4:7; 1 ಯೋಹಾನ 2:4-6 ಮತ್ತು ಈ ಭಾಗಗಳಲ್ಲಿರುವ ನೋಟ್ಸ್ ನೋಡಿರಿ. ರಕ್ಷಣೆಯು ನಂಬಿಕೆಯ ಮೂಲಕ ಕೃಪೆಯಿಂದ ದೊರೆಯುತ್ತದೆ (ಇದನ್ನೇ ನಾವು ರೋಮಾ ಪತ್ರಿಕೆಯ ಉಳಿದ ಭಾಗದಲ್ಲಿ ಸ್ಪಷ್ಟವಾಗಿ ನೋಡಬಹುದಾಗಿದೆ), ಆದರೆ ನಮ್ಮನ್ನು ರಕ್ಷಿಸುವ ಸಮಯದಲ್ಲಿ ದೇವರು ನಮ್ಮೊಳಗೆ ಅಗಾಧವಾದ ಬದಲಾವಣೆಯನ್ನುಂಟು ಮಾಡುವದರಿಂದ ನಾವು ಯೇಸು ಕ್ರಿಸ್ತನ ಪಾದಗಳಿಗೆ ಅಡ್ಡಬಿದ್ದು ಆತನನ್ನು ಕರ್ತನೆಂದು ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ (10:9-10). ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡುವದು ಮತ್ತು ಆತನಿಗೆ ನಮ್ಮನ್ನು ಒಪ್ಪಿಸುವದು ಎರಡೂ ಒಟ್ಟಾಗಿ ಸಂಭವಿಸುತ್ತದೆ. **6**

**1:6** *"ಕರೆಯಲ್ಪಟ್ಟವರು"*– 8:28-30 ನೋಡಿರಿ. ಪೌಲನ ಬಳಕೆಯಲ್ಲಿ ಇದರ ಅರ್ಥ ಸಹಜ ಆಹ್ವಾನಕ್ಕಿಂತ ಹೆಚ್ಚಿನದ್ದಾಗಿದೆ. ವಿಶ್ವಾಸಿಗಳೆಲ್ಲರೂ ದೇವರು ತನ್ನ ಮಗನಿಗೆ

ಕೊಟ್ಟಿರುವ ಉಡುಗೊರೆಯಾಗಿದ್ದಾರೆ, ಆದ್ದರಿಂದ ಅವರೆಲ್ಲರೂ ಆತನವರಾಗಿದ್ದಾರೆ. ಯೋಹಾನ 6:37; 17:6 ನೋಡಿರಿ. ಅವರು ನಂಬುವ ಮೊದಲು ಏನಾಗಿದ್ದರು ಎಂಬದು ದೇವರಿಗೆ ಗೊತ್ತಿದೆ ಮತ್ತು ಸುವಾರ್ತೆ ಸಾರೋಣದ ಮೂಲಕ ಕ್ರಿಸ್ತನ ಕಡೆಗೆ ಬರುವಂತೆ ಆತನು ಅವರನ್ನು ಕರೆಯುತ್ತಾನೆ, ಹಾಗೆ ಆತನ ಕಡೆಗೆ ಬಂದವರು ಆತನಲ್ಲಿ ನಂಬಿಕೆಯನ್ನಿಡುತ್ತಾರೆ ಹಾಗೂ ಆತನನ್ನು ತಮ್ಮ ಕರ್ತನನ್ನಾಗಿ ಹಾಗೂ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುತ್ತಾರೆ. **7**

**1:7** ವಿಶ್ವಾಸಿಗಳೆಲ್ಲರೂ ದೇವರ ವಿಶೇಷ ಪ್ರೀತಿಗೆ ಪಾತ್ರರಾಗಿದ್ದಾರೆ (ಯೋಹಾನ 13:1; 14:21,23; 1 ಯೋಹಾನ 3:1; ಯೆರೆ 31:3). "ದೇವಜನರು" ಎಂದರೆ ಅಕ್ಷರಾರ್ಥವಾಗಿ "ಪರಿಶುದ್ಧರು", ಮತ್ತು ಕ್ರಿಸ್ತನಲ್ಲಿರುವ ವಿಶ್ವಾಸಿಗಳೆಲ್ಲರೂ ಪರಿಶುದ್ಧರಾಗಿದ್ದಾರೆ. ಯೋಹಾನ 17:17-19 ನೋಡಿರಿ. ಸತ್ಯವೇದದ ಪ್ರಕಾರ "ದೇವಜನರು" ವಿಶಿಷ್ಟವಾದ ಪರಿಶುದ್ಧತೆ ಅಥವಾ ಸಮರ್ಪಣೆ ಅಥವಾ ಯಶಸ್ವೀ ವಿಶ್ವಾಸಿಗಳಲ್ಲ ಬದಲಾಗಿ ಯಾವುದೇ ವಿಶಿಷ್ಟತೆಗಳಿಲ್ಲದ ವಿಶ್ವಾಸಿಗಳಾಗಿದ್ದಾರೆ. ಅವರು ಪರಿಶುದ್ಧರಾಗಿ ಜೀವಿಸಬೇಕು ಯಾಕಂದರೆ ಅವರು ಪರಿಶುದ್ಧ ಜನರಾಗಿದ್ದಾರೆ ಮತ್ತು ಪರಿಶುದ್ಧನಾದ ಯೇಸು ಕ್ರಿಸ್ತನಿಗೆ ಸೇರಿದವರಾಗಿದ್ದಾರೆ. "ಕೃಪೆ" ಮತ್ತು "ಸಮಾಧಾನ" ಯೇಸು ಕ್ರಿಸ್ತನ ಸುವಾರ್ತೆಯ ಅತ್ಯಂತ ಪ್ರಾಮುಖ್ಯವಾದ ಎರಡು ಪದಗಳಾಗಿವೆ. ಪೌಲನು ಹೊಸ ಒಡಂಬಡಿಕೆಯಲ್ಲಿ ತಾನು ಬರೆದಿರುವ ಪ್ರತಿಯೊಂದು ಪತ್ರಿಕೆಯ ಪೀಠಿಕೆಯಲ್ಲಿ ಈ ಪದಗಳನ್ನು ಉಪಯೋಗಿಸಿದ್ದಾನೆ. ಕೃಪೆ ವಿಶ್ವಾಸಿಗಳನ್ನು ರಕ್ಷಿಸುತ್ತದೆ ಮತ್ತು ಅವರನ್ನು ಸುರಕ್ಷಿತವಾಗಿರಿಸುತ್ತದೆ ಹಾಗೂ ಪರಿಶುದ್ಧತೆ, ಉಪಯುಕ್ತತೆ ಮತ್ತು ದೈವೀಕತೆಗೆ ಅವಶ್ಯವಾಗಿರುವವುಗಳನ್ನು ಒದಗಿಸುತ್ತದೆ. ಯೋಹಾನ 1:14 ನೋಟ್ ನೋಡಿರಿ. ನಮ್ಮಿಂದ ದೇವರ ಕೃಪೆಗೆ ಅರ್ಹರಾಗಲು ಎಂದಿಗೂ ಆಗುವದಿಲ್ಲ. ಕೃಪೆ ಎಂದರೆ, ಅದನ್ನೆಂದಿಗೂ ಸಂಪಾದಿಸಿಕೊಳ್ಳಲು ಆಗದಿರುವವರಿಗೆ ಅಂದರೆ ಅದಕ್ಕೆ ಅರ್ಹರಲ್ಲದವರಿಗೆ ದೇವರು ತೋರಿಸುವ ದಯೆಯಾಗಿದೆ. ಇಲ್ಲಿ ಸಮಾಧಾನ ಎಂದರೆ ಹೃದಯದ ವಿಶ್ರಾಂತಿ, ಯೇಸು ಕ್ರಿಸ್ತನು ಕೊಡುವ ಮನಸ್ಸಮಾಧಾನ (ಮತ್ತಾಯ 11:28-30; ಯೋಹಾನ 14:27; 16:33). ಇದು ದೇವರೊಂದಿಗೆ ಸರಿಯಾದ ಸಂಬಂಧವುಳ್ಳವರಾಗಿರುವದರ ಫಲಿತಾಂಶವಾಗಿದೆ. ತಂದೆಯಾದ ದೇವರ ಹಾಗೆ ಕರ್ತನಾದ ಯೇಸು ಕ್ರಿಸ್ತನು ಕೃಪೆ ಮತ್ತು ಸಮಾಧಾನದ ಮೂಲ ಎಂಬದನ್ನು ಮನವರಿಕೆ ಮಾಡಿಕೊಳ್ಳಿರಿ. ಇದು ಸತ್ಯವಾಗಿದೆ ಯಾಕಂದರೆ ಆತನು ದೇವಸ್ವಭಾವವನ್ನು ಹಂಚಿಕೊಳ್ಳುವವನಾಗಿದ್ದಾನೆ. ಫಿಲಿಪ್ಪಿ 2:6; ಲೂಕ 2:11ರಲ್ಲಿ ಕೊಡಲಾಗಿರುವ ವಚನಭಾಗಗಳನ್ನು ನೋಡಿರಿ. **8-9**

**1:8-9** ಪೌಲನು ಸಹಜವಾಗಿ ವಿಶ್ವಾಸಿಗಳ ವಿಷಯದಲ್ಲಿ ದೇವರಿಗೆ ಕೃತಜ್ಞತೆ ಹೇಳುತ್ತಿದ್ದನು – 1 ಕೊರಿಂಥ 1:4; ಫಿಲಿಪ್ಪಿ 1:3; ಕೊಲೊ 1:3; 1 ಥೆಸ 2:13; 2 ತಿಮೊ 1:3. ವಿಶ್ವಾಸಿಗಳು ಎಲ್ಲೇ ಇದ್ದರೂ ಆತನು ಅವರಿಗಾಗಿ ಪ್ರಾಮಾಣಿಕವಾಗಿ ನಂಬಿಗಸ್ತಿಕೆಯಿಂದ ಪ್ರಾರ್ಥನೆ

ಮಾಡುತ್ತಿದ್ದನು – ಎಫೆ 1:16; 3:16; ಫಿಲಿಪ್ಪಿ 1:4,9; ಕೊಲೊ 1:3,9; 2:1; 1 ಥೆಸ 1:2; 3:10; 5:23; 2 ತಿಮೊ 1:3. ಆತನು ಎಲ್ಲಾ ಸಭೆಗಳ ಬಗ್ಗೆ ಚಿಂತಿಸುತ್ತಿದ್ದನು (2 ಕೊರಿಂಥ 11:28-29), ಮತ್ತು ಅವನಿಗೆ ಪ್ರಾರ್ಥನೆ ಹಾಗೂ ಅದರ ಶಕ್ತಿಯ ಪ್ರಾಮುಖ್ಯತೆ ಚೆನ್ನಾಗಿ ಗೊತ್ತಿತ್ತು (ಲೂಕ 18:1; ಯಾಕೋಬ 5:16 ಹೋಲಿಸಿ ನೋಡಿರಿ). **9**

**1:9** *"ನಿಮ್ಮ ಬಳಿಗೆ ಬರುವದಕ್ಕೆ"*– 15:23-24; ಅಪೊ 19:21. **10**

**1:10** *"ನನ್ನ ಆತ್ಮದಲ್ಲಿ"*– ಯೋಹಾನ 4:24ರೊಂದಿಗೆ ಹೋಲಿಸಿ ನೋಡಿರಿ. ದೇವರನ್ನು ಕೇವಲ ಶರೀರ ಅಥವಾ ಕೇವಲ ಮನಸ್ಸಿನ ಮೂಲಕ ಮಾತ್ರವೇ ಸೇವಿಸಲು ಪ್ರಯತ್ನಿಸುವಂಥ ಕಾರ್ಯವಿದೆ. **11**

**1:11** *"ಪಾರಮಾರ್ಥಿಕ ವರ"*– 12:6-8; 1 ಕೊರಿಂಥ 12:4-11. **12**

**1:12** ಆತನು ಪ್ರಸಿದ್ಧ ಅಪೊಸ್ತಲನಾಗಿದ್ದರೂ ಸಾಧಾರಣ ವಿಶ್ವಾಸಿಗಳಿಂದ ಸಹಾಯ ಹೊಂದುವ ಮತ್ತು ಧೈರ್ಯಗೊಳ್ಳುವ ಅವಶ್ಯಕತೆಯಿಲ್ಲ ಎಂದು ಗರ್ವಪಡಲಿಲ್ಲ. **13**

**1:13** *"ಸಫಲ"*– ಮತ್ತಾಯ 9:37-38; ಯೋಹಾನ 4:35-38. ಇತರೆ ಸ್ಥಳಗಳಲ್ಲಿ ಪೌಲನ ಸೇವೆಯು ಸಫಲವಾದದ್ದನ್ನು ತಿಳಿಯಲು ಅಪೊ 13:43; 14:21-23; 16:40; 17:4,12,34; 18:8; 19:17-20 ನೋಡಿರಿ.

*"ಇತರ ಜನಗಳು"*– ಯೆಹೂದ್ಯರಲ್ಲದ ಇತರ ಜನರು. **14**

**1:14** ಆತನು ತನ್ನನ್ನು ಎಲ್ಲಾ ರೀತಿಯ ಜನರಿಗೆ ಸಾಲಗಾರನೆಂದು ಪರಿಗಣಿಸಿಕೊಂಡನು – ಅವರಿಗೆ ಸುವಾರ್ತೆ ಕೇಳುವ ಅವಕಾಶ ಕಲ್ಪಿಸಬೇಕೆಂಬದನ್ನು ಆತನು ಬಲ್ಲವನಾಗಿದ್ದನು. ಅಪೊ 20:26-27 ನೋಡಿರಿ. ಯೇಸು ಕ್ರಿಸ್ತನು ತನ್ನ ಜವಾಬ್ದಾರಿಕೆಯನ್ನು ಅವನಿಗೆ ಒಪ್ಪಿಸಿದ್ದನು (ಅಪೊ 26:16-18; 1 ಕೊರಿಂಥ 9:16-17), ಆತನು ತನ್ನ ಎಲ್ಲಾ ಶಿಷ್ಯರು ಮತ್ತು ಇಡೀ ಸಭೆಗೂ ಹೀಗೆಯೇ ಜವಾಬ್ದಾರಿಕೆಯನ್ನು ಕೊಟ್ಟಿದ್ದಾನೆ (ಮತ್ತಾಯ 28:18-20; ಮಾರ್ಕ 16:15).

*"ಇತರ ಜನಗಳು"*– ಅಕ್ಷರಾರ್ಥವಾಗಿ "ಅನಾಗರೀಕರು". ಗ್ರೀಕರು ತಮ್ಮನ್ನು ಅತ್ಯಂತ ಜ್ಞಾನವಂತರು ಮತ್ತು ಎಲ್ಲಾ ದೇಶಗಳಲ್ಲಿ ತಾವೇ ಹೆಚ್ಚು ಸಂಸ್ಕಾರವಂತರೆಂದು ಅಂದುಕೊಂಡಿದ್ದರು. ಗ್ರೀಕ್ ಮಾತನಾಡದ ಸ್ಥಳೀಯ ಸಾಮಾನ್ಯ ಜನರನ್ನು ಸೂಚಿಸಲು ಅವರು "ಅನಾಗರೀಕರು" ಎಂಬ ಪದವನ್ನು ಉಪಯೋಗಿಸುತ್ತಿದ್ದರೆ ಹೊರತು ಹಾಗೇ ಸುಮ್ಮನೇ ಅನಾಗರೀಕರು ಎಂದು ಹೇಳುತ್ತಿರಲಿಲ್ಲ. ಆದ್ದರಿಂದ ಇಲ್ಲಿ "ಇತರ ಜನಗಳು" ಎಂಬ ಪದ ಗ್ರೀಕ್‌ನ ಸರಿಯಾದ ಅರ್ಥವನ್ನು ಕೊಡುತ್ತದೆ. **15**

**1:15** ಎಲ್ಲಾ ಜನರ ವಿಷಯದಲ್ಲಿ ತನ್ನ ಜವಾಬ್ದಾರಿಕೆಯನ್ನು ಅರಿತುಕೊಂಡದ್ದು ಮಾತ್ರವಲ್ಲ ಬದಲಾಗಿ ಅದನ್ನು ನೆರವೇರಿಸಲು ಸಹ ಆತನು ಆಸಕ್ತಿಯಿಂದ ಮುಂದಾದನು. ಶ್ರಮೆಗಳು, ಕಷ್ಟಗಳು, ಪ್ರಾಣ ತೆಗೆಯುವ ಬೆದರಿಕೆ ಆತನನ್ನು ಅಲುಗಾಡಿಸಲು ಆಗಲಿಲ್ಲ

(ಅಪೊ 20:24; 21:13). **16**
**1:16** ಸುವಾರ್ತೆ ಸಾರಬೇಕೆಂಬ ಆತನ ಆಸಕ್ತಿಗೆ ಇಲ್ಲಿ ಕಾರಣವನ್ನು ಕೊಡಲಾಗಿದೆ. ಸುವಾರ್ತೆಯು ದುರ್ಬಲವಾದದ್ದು ಮತ್ತು ಪ್ರಯೋಜನವಿಲ್ಲದ್ದು ಎಂಬದಾಗಿ ಯೋಚಿಸುತ್ತಾ ಅದರ ವಿಷಯದಲ್ಲಿ ಅವನು ನಾಚಿಕೊಳ್ಳುವವನಾಗಿರಲಿಲ್ಲ. ಸುವಾರ್ತೆ ರಕ್ಷಣೆ ಹೊಂದುವ ಏಕೈಕ ಮಾರ್ಗ, ಮಾನವರನ್ನು ಕ್ಷಮಿಸಿ, ಬದಲಾಯಿಸಿ ಕಡೆಯಲ್ಲಿ ಪರಲೋಕಕ್ಕೆ ನಡೆಸುವ ದೇವರ ಶಕ್ತಿ ಎಂಬದನ್ನು ಆತನು ಬಲ್ಲವನಾಗಿದ್ದನು. ಪೌಲನು ಅನೇಕ ಪತ್ರಿಕೆಗಳನ್ನು ಬರೆದಿದ್ದಾನೆ ಆದರೆ ಇದರಲ್ಲಿ ರಕ್ಷಣೆ ಎಂದರೆ ಏನು ಎಂಬದನ್ನು ಯುಕ್ತವಾಗಿ ತೋರಿಸಿದ್ದಾನೆ. ಇದರಲ್ಲಿ ನೀತಿವಂತರೆಂಬ ನಿರ್ಣಯ (3:24), ದೇವರೊಂದಿಗೆ ಸಮಾಧಾನ (5:1), ಹೊಸದಾದ ಪವಿತ್ರ ಜೀವನ (ಅಧ್ಯಾಯಗಳು 6-8) ಮತ್ತು ಪ್ರಭಾವಗಳು (ಕ್ರಮೇಣವಾಗಿ ಯೇಸು ಕ್ರಿಸ್ತನಂತಾಗುವದು – 8:29-30) ಒಳಗೊಂಡಿವೆ. ಇವೆಲ್ಲವುಗಳನ್ನು ಸಾಧಿಸುವ ಶಕ್ತಿಯಿರುವದು ಸುವಾರ್ತೆಗೆ ಮಾತ್ರವೇ ಆಗಿದೆ (ಅಪೊ 4:12 ಸಹ ನೋಡಿರಿ). (ಕರ್ತನಾದ ಯೇಸು ಕ್ರಿಸ್ತನು ಮತ್ತು ಉಳಿದ ಅಪೊಸ್ತಲರ ಹಾಗೆ) ರಕ್ಷಣೆಯು ನಂಬಿಕೆಯಿಂದ ದೊರೆಯುತ್ತದೆ ಎಂದು ಇಲ್ಲಿ ಪೌಲನೂ ಹೇಳಿದ್ದಾನೆ – 3:22,25,28; 4:5; 5:1; 10:9-10; ಗಲಾ 2:16; ಎಫೆ 2:8-9; ಯೋಹಾನ 1:12; 3:16,36.
*"ಮೊದಲು ಯೆಹೂದ್ಯರಿಗೆ"*– ಮತ್ತಾಯ 10:5-6; 15:24; ಲೂಕ 24:47; ಅಪೊ 1:8; 3:26; 13:46. **17**
**1:17** *"ನೀತಿ"*– ಈ ಪದವು ರೋಮಾ ಪತ್ರಿಕೆಯ ಮುಖ್ಯ ಪದವಾಗಿದ್ದು, 39 ಸಲ ಉಪಯೋಗಿಸಲ್ಪಟ್ಟಿದೆ. ಜನರು ತನ್ನ ದೃಷ್ಟಿಯಲ್ಲಿ ಹೇಗೆ ನೀತಿವಂತರಾಗುವರು, ಆತನು ಅವರನ್ನು ನೀತಿವಂತರೆಂದು ಹೇಗೆ ಪರಿಗಣಿಸುವನು, ತನ್ನೊಂದಿಗೆ ಹೇಗೆ ಸರಿಪಡಿಸಿಕೊಳ್ಳುವನು ಎಂಬದನ್ನು ಸುವಾರ್ತೆಯು ಪ್ರಕಟಪಡಿಸುತ್ತದೆ ಎಂದು ಇಲ್ಲಿ ಪೌಲನು ತಿಳಿಸುತ್ತಿದ್ದಾನೆ. ಇದು ಸಂಪೂರ್ಣವಾಗಿ ನಂಬಿಕೆಯ ಕಾರ್ಯವಾಗಿದೆ. 3:28; 4:3-5 ನೋಡಿರಿ. ಪೌಲನು ರಕ್ಷಣೆಯು ನಂಬಿಕೆಯಿಂದ ದೊರೆಯುತ್ತದೆ ಎಂದು ಹೇಳುವಾಗ ಪಶ್ಚಾತ್ತಾಪಪಡುವಿಕೆಯನ್ನು ತಿರಸ್ಕರಿಸುತ್ತಿಲ್ಲ. ಪಶ್ಚಾತ್ತಾಪಪಡುವಿಕೆಯು ಯೇಸು ಕ್ರಿಸ್ತನಲ್ಲಿರುವ ನಿಜವಾದ ನಂಬಿಕೆಯ ಭಾಗವಾಗಿದೆ (2:4-5; ಮತ್ತಾಯ 3:2; ಮಾರ್ಕ 1:15; ಲೂಕ 13:3-5; ಅಪೊ 17:30 ನೋಡಿರಿ). ಪಶ್ಚಾತ್ತಾಪವಿಲ್ಲದೆ ನಿಜವಾದ ನಂಬಿಕೆ ಅಸಾಧ್ಯವಾಗಿದೆ. ಆದ್ದರಿಂದಲೇ ದೇವರ ಒಳ್ಳೇತನವು ಮಾನವರನ್ನು ಪಶ್ಚಾತ್ತಾಪಕ್ಕೆ ನಡೆಸುತ್ತದೆ (2:4) ಮತ್ತು ನಂಬಿಕೆಗೆ ನಡೆಸುತ್ತದೆ. ಪಶ್ಚಾತ್ತಾಪವು ನಂಬಿಕೆಗಿಂತ ಮೊದಲು ಉಂಟಾಗುತ್ತದೆ ಆದರೂ ಅದು ನಂಬಿಕೆಯೊಂದಿಗೆ ಆಳವಾಗಿ ನೆಲೆಯಾಗಿರುವದರಿಂದ ಅದನ್ನು ನಂಬಿಕೆಯ ಮೊದಲ ಹಂತ ಎಂದು ಕರೆಯಬಹುದು. ಅದು "ವಿಧೇಯತ್ವವೆಂಬ ನಂಬಿಕೆಯ" ಭಾಗವಾಗಿದೆ (1:5). ನಂಬಿಕೆಯು ಒಂದುವೇಳೆ ಮೊದಲ ಹಂತವನ್ನೇ ಒಳಗೊಂಡಿಲ್ಲವಾದರೆ ಅದು ತನ್ನ ಹೆಸರಿಗೆ

ತಕ್ಕ ಹಾಗಿರುವದೆಂದು ಊಹಿಸಿಕೊಳ್ಳಲು ನಮ್ಮಿಂದ ಆಗುತ್ತದೆಯೇ?

*"ಪ್ರಕಟಿಸುವಂಥದಾಗಿದೆ"*– ದೇವರ ಪ್ರಕಟನೆಯಿಲ್ಲದೆ ಹೋದರೆ ಈ ನೀತಿಯ ಬಗ್ಗೆ ತಿಳಿದುಕೊಳ್ಳಲು ಮಾನವರಿಂದ ಆಗುವದಿಲ್ಲ.

*"ಶಾಸ್ತ್ರೋಕ್ತಿಯ ಪ್ರಕಾರ"*– ನೀತಿವಂತಿಕೆ ಮತ್ತು ನಂಬಿಕೆಯ ಬಗ್ಗೆ ತಾನು ಮಾಡುತ್ತಿರುವ ಬೋಧನೆ ಹಳೆಯ ಒಡಂಬಡಿಕೆಯೊಂದಿಗೆ ಸಾಮರಸ್ಯವುಳ್ಳದ್ದಾಗಿದೆ ಎಂಬದನ್ನು ಪೌಲನು ಇಲ್ಲಿ ತೋರಿಸುತ್ತಿದ್ದಾನೆ. ಆತನು ಹಬಕ್ಕೂಕ 2:4 ಸೂಚಿಸುತ್ತಿದ್ದಾನೆ. ಆ ವಾಕ್ಯವನ್ನು ಹೊಸ ಒಡಂಬಡಿಕೆಯಲ್ಲಿ ಮೂರು ಸಲ ಬರೆಯಲಾಗಿದೆ – ಇಲ್ಲಿ, ಗಲಾ 3:11 ಮತ್ತು ಇಬ್ರಿ 10:38. **18**

**1:18** *"ಕೋಪ"*– ಇಲ್ಲಿ ದೇವರ ಮತ್ತೊಂದು ಪ್ರಕಟನೆಯನ್ನು ನೋಡಬಹುದು. ಸಂಖ್ಯಾ 25:3; ಧರ್ಮೋ 4:25; ಕೀರ್ತನೆ 90:7-11; ಮತ್ತಾಯ 3:7; ಯೋಹಾನ 3:36; ಎಫೆ 5:6ರಲ್ಲಿ ದೇವರ ಕೋಪದ ಬಗ್ಗೆ ಕೊಡಲಾಗಿರುವ ನೋಟ್ಸ್ ನೋಡಿರಿ.

*"ಪರಲೋಕದಿಂದ ತೋರಿಬರುತ್ತದೆ"*– ಈ ಬೋಧನೆ ಮಾನವರ ಸಂಶೋಧನೆಯಲ್ಲ. ಇದು ದೇವರು ತನ್ನ ಪ್ರೀತಿಯ ನಿಮಿತ್ತ ಕೊಡುವ ಪ್ರತಿಕ್ರಿಯೆಯಾಗಿದೆ (5:8). ನಿಜವಾಗಿ ಹೇಳುವದಾದರೆ, ದೇವರಿಗೆ ಕೋಪ ಬರಲು ಕಾರಣ ಆತನ ಪ್ರೀತಿಯಾಗಿದೆ. ಆತನು ಮಾನವರನ್ನು ಪ್ರೀತಿಸುವವನಾಗಿದ್ದಾನೆ ಆದ್ದರಿಂದ ಮಾನವರನ್ನು ಹಾಳುಮಾಡುವ ದುಷ್ಟತನದ ಮೇಲೆ ಕೋಪಿಸಿಕೊಳ್ಳುತ್ತಾನೆ. ಆತನು ನೀತಿವಂತಿಕೆಯನ್ನು ಪ್ರೀತಿಸುತ್ತಾನೆ ಆದ್ದರಿಂದಲೇ ನೀತಿವಂತಿಕೆಯನ್ನು ವಿರೋಧಿಸುವವರ ಮೇಲೆ ಕೋಪಿಸಿಕೊಳ್ಳುತ್ತಾನೆ.

*"ಅಣಗಿಸುವದು"*– ಅಥವಾ "ಹಿಡಿದಿಟ್ಟುಕೊಳ್ಳುವದು", "ನಿಗ್ರಹಿಸುವದು", "ಅಡ್ಡಿಪಡಿಸುವದು" - ಪಾಪದಲ್ಲಿರುವ ಜನರು ಈ ಕಾರ್ಯಗಳನ್ನು ಮಾಡುತ್ತಾರೆ ಯಾಕಂದರೆ ಅವರಿಗೆ ದೇವರ ಸತ್ಯ ಬೇಡ. ಅವರು ತಮ್ಮನ್ನು ದೇವರು ಹಾಗೂ ಪಶ್ಚಾತ್ತಾಪದ ಕಡೆಗೆ ನಡೆಸುವ ದೇವರ ಹಾಗೂ ತಮ್ಮ ಕುರಿತಾದ ನಿಜವಾದ ದೃಷ್ಟಿಕೋನವನ್ನು ಅಣಗಿಸುತ್ತಾರೆ. ಅವರು ತಮಗೆ ಮತ್ತು ದೇವರ ಹಾಗೂ ಆತನ ಸತ್ಯದ ಬಗ್ಗೆ ತಮಗಿರುವ ಸುಳ್ಳು ದೃಷ್ಟಿಕೊನಗಳಿಗೆ ಆದ್ಯತೆ ಕೊಡುತ್ತಾರೆ ಮತ್ತು ಬೆಳಕಿಗೆ ಬದಲಾಗಿ ಕತ್ತಲೆಯನ್ನು ಪ್ರೀತಿಸುತ್ತಾರೆ. ಇದು ಅವರ ದೊಡ್ಡ ಪಾಪ ಮತ್ತು ದೊಡ್ಡ ಅಪಾಯವಾಗಿದೆ (ಯೋಹಾನ 3:18-21; 2 ಥೆಸ 2:10-12 ಹೋಲಿಸಿ ನೋಡಿರಿ). ಈ ವಾಕ್ಯದಿಂದ 3:20ರ ತನಕ ಪೌಲನು ಒಂದು ಪ್ರಾಮುಖ್ಯವಾದ ವಿಷಯಕ್ಕೆ ಆದ್ಯತೆ ನೀಡಿದ್ದಾನೆ – ಜನರ ಸಾರ್ವಜನಿಕ ಪಾಪಮಯ ಸ್ವಭಾವ ಮತ್ತು ಯೇಸು ಕ್ರಿಸ್ತನ ಸುವಾರ್ತೆಯ ಮಹದಾದ ಅವಶ್ಯಕತೆ. ಎಲ್ಲರೂ ಪಾಪಿಗಳಾಗಿದ್ದಾರೆ, ತಮಗೆ ಪಾಪದ ಅರಿವನ್ನು ಹುಟ್ಟಿಸುವ ಸತ್ಯವನ್ನು ಎಲ್ಲರೂ ಅಣಗಿಸಿದ್ದಾರೆ, ಎಲ್ಲರೂ ದೇವರ ಕೋಪಕ್ಕೆ ಅರ್ಹರಾಗಿದ್ದಾರೆ – 3:9,19,23. ಎಫೆ 2:3 ಹೋಲಿಸಿರಿ. **19-20**

**1:19-20** ಜನರು ಒಟ್ಟಾಗಿ ಅಮಾಯಕತನದಿಂದ ಪಾಪ ಮಾಡುವದಿಲ್ಲ. ದೇವರು ಅದ್ಭುತವಾದ ಜೀವಿಯನ್ನು ಉಂಟುಮಾಡಿದ್ದಾನೆ ಎಂಬದನ್ನು ಸೃಷ್ಟಿಯು ಪ್ರಕಟಿಸುತ್ತದೆ. ಕೀರ್ತನೆ 19:1-4; ಯೆಶಾಯ 40:21-26; ಅಪೊ 14:15-17 ಹೋಲಿಸಿ ನೋಡಿರಿ. ಆದರೆ ಜನರು ಈ ಸತ್ಯಕ್ಕೆ ತಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಾರೆ (ಮತ್ತು ತಿರಸ್ಕರಿಸುತ್ತಾರೆ – ಕೀರ್ತನೆ 14:1), ಹಾಗೂ ಮನಃಪೂರ್ವಕವಾಗಿ ಪಾಪ ಮಾಡುತ್ತಾರೆ. ಈ ವಿಷಯದಿಂದಲೇ ಅವರಿಗೆ ಕಾರಣ ಹೇಳಲು ಯಾವುದೇ ಅವಕಾಶವಿಲ್ಲ. ಒಂದುವೇಳೆ ದೇವರು ಬೇರೆ ಯಾವುದೇ ಪ್ರಕಟನೆ ಕೊಡದಿದ್ದರೂ, ಸತ್ಯವೇದವೇ ಇಲ್ಲದೆ ಹೋಗಿದ್ದರೂ, ಯೇಸು ಕ್ರಿಸ್ತನು ಬಾರದೇ ಹೋಗಿದ್ದರೂ, ಜನರು ತಮ್ಮ ಪಾಪಗಳಿಗೆ ಕಾರಣ ಕೊಡಲು ಯಾವುದೇ ಆಸ್ಪದವಿಲ್ಲ. ಸೃಷ್ಟಿಯ ಮೂಲಕ ದೇವರು ಮತ್ತು ಆತನ ಶಕ್ತಿಯನ್ನು "ಸ್ಪಷ್ಟವಾಗಿ ನೋಡಬಹುದಾಗಿದೆ", ಜನರು ಸೃಷ್ಟಿಕರ್ತನಿಗಾಗಿ ತವಕಿಸಬೇಕು, ಆತನನ್ನು ಆರಾಧಿಸಬೇಕು ಹಾಗೂ ಆತನನ್ನು ಸೇವಿಸಬೇಕು (ಅಪೊ 17:26-27). ಆದರೆ ಅವರು ಇದನ್ನು ಮಾಡುವದಿಲ್ಲ ಯಾಕಂದರೆ ಅವರಿಂದ ಆಗುವದಿಲ್ಲ. ಅವರು ತಮ್ಮ ಪಾಪಗಳನ್ನು ಪ್ರೀತಿಸುತ್ತಾರೆ ಮತ್ತು ಅವುಗಳ ಹಿಂದೆ ಹೋಗುತ್ತಾರೆ. ಅವರು ತಮ್ಮ ಸ್ವಂತ ಮಾರ್ಗಗಳನ್ನು ಪ್ರೀತಿಸುತ್ತಾರೆ ಮತ್ತು ಅವರನ್ನು ಉನ್ನತವಾದ, ಉತ್ತಮವಾದ, ಪರಿಶುದ್ಧವಾದ ಮಾರ್ಗಗಳಿಗೆ ನಡೆಸುವ ದೇವರನ್ನು ನಿರ್ಲಕ್ಷಿಸುತ್ತಾರೆ. **21-23**

**1:21-23** ಪೌಲನು ಇಲ್ಲಿ ಮಾನವ ಕುಲದ ಚರಿತ್ರೆಯ ಬಗ್ಗೆ ಮಾತನಾಡುತ್ತಾ ವಿಗ್ರಹಾರಾಧನೆಯು ಹೇಗೆ ಪ್ರಾರಂಭವಾಯಿತು ಎಂದು ತಿಳಿಸುತ್ತಿದ್ದಾನೆ. ಆದಿಯಲ್ಲಿ ಜನರಿಗೆ ಒಬ್ಬನೇ ನಿಜ ದೇವರ ಪರಿಚಯ ಮಾತ್ರವೇ ಇತ್ತು, ಆತನು ಇಡೀ ವಿಶ್ವದ ಸೃಷ್ಟಿಕರ್ತನಾಗಿದ್ದಾನೆ. ಆದರೆ ಅವರು ಈ ಮಹದಾದ ಸೌಭಾಗ್ಯದ ವಿಷಯದಲ್ಲಿ ಸಂತೋಷಿಸಲಿಲ್ಲ (ವ. 28). ತಮ್ಮ ಸೃಷ್ಟಿಯ ಮುಖ್ಯ ಉದ್ದೇಶವಾದ ದೇವರಿಗೆ ಘನ ಮಾನ ಮಹಿಮೆಯನ್ನುಂಟು ಮಾಡುವ ಕಾರ್ಯವನ್ನು ನೆರವೇರಿಸಲಿಲ್ಲ (ಯೆಶಾಯ 43:7; 1 ಕೊರಿಂಥ 10:31; ಪ್ರಕ 4:11). ಕೃತಜ್ಞತೆಯ ವಿಷಯದಲ್ಲಿ ಯಾಜಕ 7:12-13; ಕೀರ್ತನೆ 7:17; 50:14-15; 56:12; 1 ಥೆಸ 5:18. ದೇವರ ಬಗ್ಗೆ ತಮಗಿರುವ ತಿಳುವಳಿಕೆಯ ವಿಷಯದಲ್ಲಿ ಕೃತಜ್ಞತೆಯುಳ್ಳವರಾಗಿರುವ ಬದಲು, ಅವರು ವಿಚಾರ ಮಾಡಲು ಮತ್ತು ತತ್ವಗಳು ಹಾಗೂ ಧಾರ್ಮಿಕ ಪದ್ಧತಿಗಳ ಸಂಶೋಧನೆ ಮಾಡಲು ಪ್ರಾರಂಭಿಸಿದರು. ಇವುಗಳು ಹೃದಯದ ಅಂಧಕಾರ (ಎಫೆ 4:18), ಅಹಂಕಾರ ಮತ್ತು ವಿಗ್ರಹಾರಾಧನೆಗೆ ನಡೆಸಿದವು. 23 ಮತ್ತು 25ನೇ ವಚನವು ವಿಗ್ರಹಾರಾಧನೆ ಎಂದರೆ ಏನು ಎಂಬದನ್ನು ನಮಗೆ ತೋರಿಸುತ್ತವೆ. ಹಾಗೆಯೇ ವಿಮೋ 20:4-6; ಕೀರ್ತನೆ 115:2-8; ಯೆಶಾಯ 40:18-26; 44:12-20 ನೋಡಿರಿ. (ದೇವರಾದುಕೊಂಡ ಇಸ್ರಾಯೇಲ್ ಜನಾಂಗ – ಎಲ್ಲಾ ಜನಾಂಗಗಳಲ್ಲಿ ದೇವರ ಪ್ರಕಟನೆಯನ್ನು ಸ್ಪಷ್ಟವಾಗಿ ಪಡೆದುಕೊಂಡ ಜನಾಂಗ - ಲೋಕದಲ್ಲಿರುವ ಪ್ರತಿಯೊಂದು

ಜನಾಂಗದ ಹಾಗೆ ಈ ವಿಷಯದಲ್ಲಿ ದೋಷಕ್ಕೊಳಗಾಯಿತು – ಯೆರೆ 2:11-12 ನೋಡಿರಿ).
**22**

**1:22** ದೇವರ ದೃಷ್ಟಿಯಲ್ಲಿ ಮಾನವನ ಜ್ಞಾನ ಮತ್ತು ಬರಿದಾಗಿದೆ ಮತ್ತು ವ್ಯರ್ಥವಾದದ್ದಾಗಿದೆ. 1 ಕೊರಿಂಥ 1:18-25; 2:7-8 ನೋಡಿರಿ. ತಮ್ಮನ್ನು ರಕ್ಷಣೆಗೆ ನಡೆಸುತ್ತದೆ ಎಂದು ಕೆಲವರು ಅಂದುಕೊಂಡಿರುವ ಜ್ಞಾನವು ವಿಶ್ವದ ಸೃಷ್ಟಿಕರ್ತನ ದೃಷ್ಟಿಯಲ್ಲಿ ಸಂಪೂರ್ಣವಾಗಿ ಮೂರ್ಖತನವಾಗಿದೆ. **23**

**1:23** ಯೆರೆ 2:11-13; ಹೋಶೇಯ 4:7-8 ಹೋಲಿಸಿ ನೋಡಿರಿ. **24**

**1:24** ವಚನ 26,28. ದೇವರು ಮಾನವರ ಪಾಪಕ್ಕೆ ಅವರಿಗೆ ನೀಡಿದ ಶಿಕ್ಷೆಗಳಲ್ಲಿ ಒಂದು ಅವರನ್ನು ಹೆಚ್ಚಿನ ಪಾಪಕ್ಕೆ ಮತ್ತು ಎಲ್ಲಾ ಪಾಪಗಳಿಗೆ ಎದುರಾಗುವ ನ್ಯಾಯತೀರ್ಪಿಗೆ ಒಪ್ಪಿಸಿದನು. ಮಾನವರು ಮಾಡುವ ಪಾಪಗಳಿಗೇ ಅವರನ್ನು ಒಪ್ಪಿಸಿಬಿಡುವದು ಅತ್ಯಂತ ಘೋರವಾದ ಶಿಕ್ಷೆಯಾಗಿದೆ ಮತ್ತು ಸಂಪೂರ್ಣವಾಗಿ ನೀತಿಯುಳ್ಳದ್ದಾಗಿದೆ. ಧರ್ಮೋ 32:19-22; ನ್ಯಾಯ 2:10-15 ಹೋಲಿಸಿ ನೋಡಿರಿ. **25**

**1:25** ನಿಜವಾದ ದೇವರ ತಿಳುವಳಿಕೆ ಅವರ ಪಾಪಕ್ಕೆ ಅಡಚಣೆಯಾಗಿತ್ತು. ಆದ್ದರಿಂದ ಅವರು ಅದನ್ನು ತಿರಸ್ಕರಿಸಿದರು ಮತ್ತು ಸುಳ್ಳಿನ ಆಲೋಚನೆಗಳು ಹಾಗೂ ಸುಳ್ಳು ಬೋಧನೆಗಳನ್ನು ತಮ್ಮ ಮಾರ್ಗದರ್ಶಕವನ್ನಾಗಿ ಮಾಡಿಕೊಂಡರು. ಆ ಸುಳ್ಳುಗಳಲ್ಲಿ ಘೋರವಾದ ಸುಳ್ಳು ಏನೆಂದರೆ ದೇವರು ತಾನು ಸೃಷ್ಟಿಸಿರುವ ಸೃಷ್ಟಿಯಂತೆಯೇ ಇದ್ದಾನೆ ಅಥವಾ ಮಾನವರು ಮಾಡುವ ವಿಗ್ರಹಗಳಂತಿದ್ದಾನೆ ಮತ್ತು ದೇವರ ಸೃಷ್ಟಿಯನ್ನು ಆರಾಧಿಸಬೇಕೆಂಬ ಸುಳ್ಳು (ಸೂರ್ಯ, ಚಂದ್ರ, ನಕ್ಷತ್ರಗಳು, ಪ್ರಾಣಿಗಳು, ಇತ್ಯಾದಿ), ಅಥವಾ ದೇವರನ್ನು ಆರಾಧಿಸುವ ರೀತಿಯಲ್ಲಿಯೇ ವಿಗ್ರಹಗಳನ್ನು ಅಥವಾ "ದೇವರುಗಳನ್ನು" ಆರಾಧಿಸುವದಾಗಿದೆ. ನಿಜವಾದ ದೇವರು ಅಂಥ ಆರಾಧನೆಯನ್ನು ಎಂದಿಗೂ ಅಂಗೀಕರಿಸುವದಿಲ್ಲ – ವಿಮೋ 20:3-6; 1 ಅರಸು 18:21; 2 ಅರಸು 17:14-18; ಕೀರ್ತನೆ 78:56-59; ಜ್ಞಾನೋ 1:29-31; ಯೆರೆ 2:11-13; ಮತ್ತಾಯ 4:10; ಪ್ರಕ 9:20-21; 21:8. **26-27**

**1:26-27** ಸಲಿಂಗ ಕಾಮವು ಪಾಪವಾಗಿದ್ದು ದೇವರು ತನ್ನ ವಾಕ್ಯಗಳಲ್ಲಿ ಬಹಳವಾಗಿ ಖಂಡಿಸಿದ್ದಾನೆ. ಆದಿ 19:4-5; ಯಾಜಕ 18:22; 20:13; 1 ಕೊರಿಂಥ 6:9; 1 ತಿಮೊ 1:10; ಯೂದ 7 ನೋಡಿರಿ. ರೋಮಾ ಪತ್ರಿಕೆಯಲ್ಲಿ ಪೌಲನು ಹೇಳುವದೇನೆಂದರೆ ಸಲಿಂಗ ಕಾಮಕ್ಕೆ ಕಾರಣ ಜನರು ದೇವರನ್ನು ತಿರಸ್ಕರಿಸಿದ್ದರಿಂದ ಆತನು ಅವರನ್ನು ಅವರ ಅವಿಧೇಯ ಹೃದಯದ ತುಚ್ಛ ನಡತೆಗೆ ಒಪ್ಪಿಸುವ ಮೂಲಕ ಶಿಕ್ಷಿಸಿದ್ದೇ ಆಗಿದೆ. ಇತ್ತೀಚೆಗಿನ ದಿನಗಳಲ್ಲಿಯೂ, ಲೋಕದ ಕೆಲವು ಭಾಗಗಳಲ್ಲಿ, ಇಂಥ ಪಾಪಮಯ ಸ್ವಭಾವವನ್ನು ಜೀವನದ ಅವಿಭಾಜ್ಯ ಅಂಗವಾಗಿ ಅಂಗೀಕರಿಸಿಕೊಳ್ಳಲಾಗಿದೆ ಮತ್ತು ಪುರುಷರು ಪುರುಷರ ಸಂಗಡ, ಸ್ತ್ರೀಯರು ಸ್ತ್ರೀಯರ ಸಂಗಡ ಸಾರ್ವಜನಿಕವಾಗಿ ಲೈಂಗಿಕ ಸಂಬಂಧವುಳ್ಳವರಾಗಿ

ಜೀವಿಸುತ್ತಿದ್ದಾರೆ. ಆದರೆ ಮಾನವನ ದೃಷ್ಟಿಕೋನ ಮತ್ತು ದೇವರ ದೃಷ್ಟಿಕೋನ ಅತ್ಯಂತ ವಿಭಿನ್ನವಾದವುಗಳಾಗಿವೆ. ಮನುಷ್ಯ ಮತ್ತು ಪ್ರಾಣಿಗಳ ನಡುವಿನ ಅನೈಸರ್ಗಿಕ ಲೈಂಗಿಕತೆ ಹಾಗೂ ಸಲಿಂಗ ಕಾಮವನ್ನು ದೇವರು ಸಮ್ಮತಿಸುವದಿಲ್ಲ ಮತ್ತು ಎಲ್ಲಾ ಪಾಪಗಳಂತೆ ಇದನ್ನೂ ಆತನು ಶಿಕ್ಷಿಸುತ್ತಾನೆ (ಪ್ರಕ 21:8) – ಆದರೆ ಪಾಪಿಯು ಪಶ್ಚಾತ್ತಾಪಪಟ್ಟು, ನಂಬಿಕೆಯಿಂದ ಆತನ ಕಡೆಗೆ ತಿರುಗಿಕೊಂಡು, ಹಳೆಯ ಪಾಪ ಸ್ವಭಾವವನ್ನು ತ್ಯಜಿಸಿದರೆ ಕ್ಷಮಾಪಣೆ ಹೊಂದುತ್ತಾನೆ. ಈ ಅಭ್ಯಾಸಗಳು ಎಲ್ಲಾ ಪಾಪಗಳಲ್ಲಿ ಅತ್ಯಂತ ಘೋರವಾದವುಗಳೆಂದು ಹೇಳುತ್ತಿಲ್ಲ ಬದಲಾಗಿ ಮಾನವರು ತಮ್ಮ ಸಹಜ ಸ್ಥಿತಿಯಿಂದ ಎಂಥಾ ಕೀಳು ಮಟ್ಟಕ್ಕೆ ಇಳಿದಿದ್ದಾರೆ ಎಂದು ಹೇಳುತ್ತಿದ್ದಾನೆ. ಇವುಗಳು ದೇವರು ದ್ವೇಷಿಸುವ ಘೋರವಾದ ಪಾಪಗಳ ಪ್ರತಿನಿಧಿಗಳಾಗಿವೆ (29-32ರಲ್ಲಿ ಮತ್ತು ಸತ್ಯವೇದದ ಇತರೆ ಭಾಗಗಳಲ್ಲಿ ಕೊಡಲಾಗಿರುವ ಪಾಪಗಳು). **28**

**1:28** ಭಯಂಕರವಾದ (ಆದರೂ ಸತ್ಯವಾದ) ಮಾತುಗಳನ್ನು ಎಚ್ಚರಿಕೆಯಿಂದ ಗಮನಿಸಿರಿ. ದೇವರು ತನ್ನ ಜನರಿಗೆ ನೀಡಿದ ಶ್ರೇಷ್ಠವಾದ ನಿಕ್ಷೇಪ ತಿಳುವಳಿಕೆಯಾಗಿದೆ, ಅದು ಇಡೀ ಲೋಕಕ್ಕಿಂತ ಘನವದದ್ದಾಗಿದೆ (ಕೀರ್ತನೆ 19:10; 119:72; ಜ್ಞಾನೋ 2:1-5; ಯೆರೆ 9:23-24 ಹೋಲಿಸಿ ನೋಡಿರಿ). ಮಾನವರು ಈ ನಿಕ್ಷೇಪವನ್ನು ಪ್ರಯೋಜನವಿಲ್ಲದ್ದೆಂದು ಪರಿಗಣಿಸಿದ್ದಾರೆ. ಅವರು ಅದಕ್ಕೆ ತಕ್ಕ ಬೆಲೆಯನ್ನು ಕೊಟ್ಟಿದ್ದಾರೆ. ಅವರು ಇಷ್ಟಪಟ್ಟ ಮತ್ತು ಆದುಕೊಂಡ ಅನಿಷ್ಟಭಾವಕ್ಕೇ ದೇವರು ಅವರನ್ನು ಒಪ್ಪಿಸಿದನು. **29-32**

**1:29-32** ಈಗ ಪೌಲನು ಮಾನವನ ಸದ್ಯದ ಸ್ಥಿತಿಯ ಬಗ್ಗೆ ಮಾತನಾಡುತ್ತಿದ್ದಾನೆ. ಜನರ ಪಾಪಗಳ ಬಗ್ಗೆ ಕೊಡಲಾಗಿರುವ ಈ ವಿವರಣೆಯನ್ನು ಯಾರೂ ಅನಾವಶ್ಯಕವಾಗಿ ವಿಸ್ತರಿಸಲಾಗಿದೆ ಎಂದು ಯೋಚಿಸಬಾರದು. ಇಲ್ಲಿ ಹೇಳಲಾಗಿರುವ ಪ್ರತಿಯೊಂದು ಪಾಪದ ವಿಷಯದಲ್ಲಿಯೂ ಪ್ರತಿಯೊಬ್ಬ ವ್ಯಕ್ತಿ ಅಪರಾಧಿಯಲ್ಲ ಆದರೆ ಪಾಪದ ಬೀಜಗಳು ನಮ್ಮೆಲ್ಲರಲ್ಲಿವೆ ಮತ್ತು ಹುದುವಾಗಿ ಈ ವಾಕ್ಯಗಳು ಹೇಳುವಂತೆಯೇ ಜನರು ಜೀವಿಸುತ್ತಿದ್ದಾರೆ. 3:9-19; ಆದಿ 8:21; ಕೀರ್ತನೆ 51:5; ಯೆರೆ 17:9; ಮತ್ತಾಯ 7:11; 15:19-20; ಎಫೆ 2:1-3; 4:17-19 ನೋಡಿರಿ. **30**

**1:30** *"ದೇವರನ್ನು ದ್ವೇಷಿಸುವವರು"*– ಇದು ಯಾವ ವಿಧದಲ್ಲಿಯೂ ಅತಿಶಯೋಕ್ತಿಯಲ್ಲ. 8:7; ಯೋಹಾನ 7:7; 15:18,24 ನೋಡಿರಿ. **32**

**1:32** ಇದು ಜನರ ಅನಿಷ್ಟಭಾವಕ್ಕೆ ದೊಡ್ಡ ಉದಾಹರಣೆಯಾಗಿದೆ. ಅವರಲ್ಲಿ ಒಳ್ಳೇದರ ಮತ್ತು ಕೆಟ್ಟದರ ತಿಳುವಳಿಕೆ ಕೊಂಚ ಮಟ್ಟಿಗೆ ಇದ್ದರೂ, ದೇವರು ಪಾಪಕ್ಕೆ ನ್ಯಾಯಬದ್ಧವಾಗಿಯೇ ಮರಣವನ್ನು ಶಿಕ್ಷೆಯಾಗಿ ನೇಮಿಸಿದ್ದಾನೆ ಎಂಬದನ್ನು ತಿಳಿದಿದ್ದರೂ (5:12; ಆದಿ 2:17; ವಿಮೋ 21:36; ಇಬ್ರಿ 2:15), ಪಾಪ ಮಾಡುವದನ್ನು ನಿಲ್ಲಿಸುತ್ತಿಲ್ಲ. ಅವರು ತಾವೇ ಪಾಪ ಮಾರ್ಗಗಳಿಗೆ ಒಳಗಾಗುವದು ಮಾತ್ರವಲ್ಲ ಇತರರ

ಅನಿಷ್ಟಭಾವಗಳಲ್ಲಿಯೂ ಸಂತೋಷಿಸುವವರಾಗಿದ್ದಾರೆ. ಇವುಗಳನ್ನು ಮಾಡುವವರಿಗಿಂತ ನಾವು ನಮ್ಮ ಸ್ವಭಾವದಲ್ಲಿ ಉತ್ತಮರಾಗಿದ್ದೇವೆಯೇ? ಇಲ್ಲ. 3:9; ಎಫೆ 2:3 ನೋಡಿರಿ. ಇಂಥ ಜನರಿಗೆ ಸುವಾರ್ತೆಯಿಂದ ಪ್ರಯೋಜನವಿದೆಯೇ? ಹೌದು, ಅದ್ಭುತವಾದ ಕಾರ್ಯಗಳು ನಡೆಯುತ್ತವೆ. ವ.16 ನೋಡಿರಿ.

# 2[1]

**2:1** ಇತರರಲ್ಲಿ ದೋಷವೆಣಿಸುವ ಮೂಲಕ ಅವರಲ್ಲಿ ಒಳ್ಳೇದರ ಮತ್ತು ಕೆಟ್ಟದರ ತಿಳುವಳಿಕೆಯಿದೆ ಎಂದು ತೋರಿಸಿರಿ. ಇದನ್ನು ಯಾರು ತಾನೇ ಮಾಡುವದಿಲ್ಲ ಹೇಳಿ? ಆದರೆ ಒಂದುವೇಳೆ ಇತರರಲ್ಲಿ ಯಾವುದಾದರು ದೋಷವಿರುವದಾದರೆ ನಮ್ಮಲ್ಲಿಯೂ ದೋಷವಿರುತ್ತದೆ ಮತ್ತು ಅವರನ್ನು ಟೀಕೆ ಮಾಡುವ ನಾವು ನಮ್ಮನ್ನೇ ಟೀಕೇ ಮಾಡಿಕೊಳ್ಳುವವರಾಗಿದ್ದೇವೆ. **2**

**2:2** ಇಲ್ಲಿಂದ 16ನೇ ವಚನದ ತನಕ ಪೌಲನು ದೇವರ ನ್ಯಾಯತೀರ್ಪಿನ ಏಳು ತತ್ವಗಳನ್ನು ನಮಗೆ ತಿಳಿಸಿದ್ದಾನೆ – ಅದು ಜನರೇನಾಲೋಚಿಸುತ್ತಾರೆ ಎಂಬದರ ಮೇಲೆ ಆಧಾರವಾಗಿರುವದಿಲ್ಲ ಬದಲಾಗಿ ಕಾರ್ಯಗಳ ನಿಜ ಸ್ಥಿತಿಯ ಮೇಲೆ ಆಧಾರವಾಗಿರುತ್ತದೆ (ವ.2). ಅದು ನೀತಿಯ ನ್ಯಾಯತೀರ್ಪಾಗಿರುತ್ತದೆ - ಪರಿಪೂರ್ಣವಾದ ನೀತಿಯ ತತ್ವಗಳ ಮೇಲೆ ಆಧಾರವಾಗಿರುತ್ತದೆ (ವ. 5). ಅದು ನಿಜವಾಗಿಯೂ ಮಾನವರು ಏನು ಮಾಡಿದ್ದಾರೆ ಎಂಬದರ ಮೇಲೆ ಆಧಾರವಾಗಿರುತ್ತದೆ (ವ. 6). ಅದರಲ್ಲಿ ಯಾವುದೇ ಪಕ್ಷಪಾತ ಇರುವದಿಲ್ಲ – ಒಬ್ಬ ವ್ಯಕ್ತಿಯು ಯೆಹೂದ್ಯನಾಗಿದ್ದಾನೆಯೇ ಅಥವಾ ಅನ್ಯನಾಗಿದ್ದಾನೆಯೇ, ಕಪ್ಪಾಗಿದ್ದಾನೆಯೇ ಅಥವಾ ಬಿಳುಪಾಗಿದ್ದಾನೆಯೇ, ಐಶ್ವರ್ಯವಂತನೇ ಅಥವಾ ಬಡವನೇ ಎಂಬದರ ಮೇಲೆ ಆಧಾರವಾಗಿರುವದಿಲ್ಲ (ವ. 11). ಅದು ಪೌಲನು ತಿಳಿಸಿದ ಸುವಾರ್ತೆಯಲ್ಲಿ ಪ್ರಕಟಿಸಿರುವ ಪ್ರಕಾರವೇ ಇರುತ್ತದೆ (ವ. 16). ಅದು ಮಾನವರ ರಹಸ್ಯ ಕಾರ್ಯಗಳನ್ನು ಬೈಲಿಗೆ ತರುತ್ತದೆ (ವ. 16). ಅದು ಯೇಸು ಕ್ರಿಸ್ತನ ಮೂಲಕ ನಡೆಯುತ್ತದೆ (ವ. 16). **3**

**2:3** ಇತರರ ವಿಷಯದಲ್ಲಿ ತೀರ್ಪು ಮಾಡುವಾಗ, ತಾವು ಯಾರ ವಿಷಯದಲ್ಲಿ ತೀರ್ಪು ಮಾಡುತ್ತಿದ್ದೇವೋ ಅವರಿಗಿಂತ ಉತ್ತಮರೆಂದು ಯೋಚಿಸುತ್ತಾರೆ ಮತ್ತು ಅವರ ವಿಷಯದಲ್ಲಿ ತೀರ್ಪು ಮಾಡಲು ತಾವು ಅರ್ಹರೆಂದು ಯೋಚಿಸುತ್ತಾರೆ. ಈ ಆಲೋಚನೆಯು ತಪ್ಪು ಮತ್ತು ಅಪಾಯಕಾರಿಯಾಗಿದೆ. ಲೋಕದ ನೀತಿಯುಳ್ಳ ನ್ಯಾಯಾಧಿಪತಿಯ ಎದುರು ಎಲ್ಲರೂ ನಿಲ್ಲಬೇಕು – ಅಪೊ 17:31; 2 ಕೊರಿಂಥ 5:10; ಪ್ರಕ 20:11-12. **4**

**2:4** ದೇವರ ದಯೆಯ ವಿಷಯದಲ್ಲಿ ಮಾನವರು ತಮ್ಮ ಸಮಾಧಾನವನ್ನು ತೋರಿಸುವದು ಹೇಗೆ? ಅವಿಧೇಯತೆ ಮತ್ತು ಪಾಪದಲ್ಲಿ ಮುಂದುವರೆಯುತ್ತಾ, ಆತನ ಸುವಾರ್ತೆ ಮತ್ತು ಆತನ ಕುಮಾರನನ್ನು ತಿರಸ್ಕರಿಸುವ ಮೂಲಕವೇ? ಮತ್ತಾಯ 22:1-6; ಲೂಕ 14:16-24;

ಇಬ್ರಿ 2:3 ಹೋಲಿಸಿ ನೋಡಿರಿ. ವಿಮೋ 34:6-7ರಲ್ಲಿ ದೇವರ ಸ್ವಭಾವದ ನೋಟ್ ನೋಡಿರಿ.

*"ಪಶ್ಚಾತ್ತಾಪ"*– ಮತ್ತಾಯ 3:2,8; ಲೂಕ 13:1-5. **5**

**2:5** *"ಕೋಪ"*– 1:18. ಯೇಸು ಕ್ರಿಸ್ತನ ಸುವಾರ್ತೆಯನ್ನು ನಿರಾಕರಿಸುವ ಜನರು ಏನು ಮಾಡುತ್ತಿದ್ದಾರೆ ಎಂಬದನ್ನು ನೋಡಿರಿ. ಅವರು ಮಾಡುವ ಪ್ರತಿಯೊಂದು ಪಾಪ ಅವರಿಗೆ ವಿರುದ್ಧವಾಗಿ ದೇವರ ಕೋಪವನ್ನು ಕೂಡಿಸುತ್ತಿದೆ. ದೇವರು ನೇಮಿಸಿರುವ ದಿನದಲ್ಲಿ ಆ ಕೋಪವನ್ನು ಸುರಿಸಲಾಗುತ್ತದೆ. **6**

- **2:6** ಕೀರ್ತನೆ 62:12; ಜ್ಞಾನೋ 24:12; ಗಲಾ 6:7-8; ಪ್ರಕ 22:12. **7**

**2:7** ರಕ್ಷಣೆ ಕ್ರಿಯೆಗಳ ಮೂಲಕ ದೊರೆಯುತ್ತದೆಯೆಂದು ಪೌಲನು ಕಲಿಸುತ್ತಿಲ್ಲ. ಆ ಈ ರೀತಿಯಾಗಿ ಕಲಿಸುವದೂ ಇಲ್ಲ. 3:28; 4:5; ಗಲಾ 2:16; ಎಫೆ 2:8-9; ತೀತ 3:5 ನೋಡಿರಿ. ಇಲ್ಲಿ ಆತನು ರಕ್ಷಣೆಯ ಮಾರ್ಗವನ್ನು ಸೂಚಿಸುತ್ತಿಲ್ಲ ಬದಲಾಗಿ ದೇವರ ನ್ಯಾಯತೀರ್ಪಿನ ತತ್ವವನ್ನು ಸೂಚಿಸುತ್ತಿದ್ದಾನೆ. ಮಾನವರೆಲ್ಲರೂ ನಿಜವಾಗಿ ಮಾಡಿರುವ (ಅಥವಾ ಮಾಡದಿರುವ) ಕಾರ್ಯಗಳ ಆಧಾರದ ಮೇರೆಗೆ ನ್ಯಾಯತೀರ್ಪು ಮಾಡುತ್ತಾನೆ. ಮತ್ತಾಯ 25:31-46 (ವ 35,36ರ ನೋಟ್) ನೋಡಿರಿ. ದೇವರು ತನ್ನ ಕೃಪೆಯಿಂದ ರಕ್ಷಿಸುವವರನ್ನೆಲ್ಲಾ ತನ್ನ ಶಕ್ತಿಯ ಮೂಲಕ ಬದಲಾಯಿಸುತ್ತಾನೆ. ಅವರು ನೂತನ ಸೃಷ್ಟಿಗಳಾಗುತ್ತಾರೆ, ದೇವರ ಮಕ್ಕಳಾಗುತ್ತಾರೆ (2 ಕೊರಿಂಥ 5:17; ಯೋಹಾನ 3:3-8). ನಿಜವಾದ ಸಂಗತಿಯು ಇದಾಗಿರುವದರಿಂದ, ಅವರು ಒಳ್ಳೆಯದನ್ನು ಮಾಡುತ್ತಾರೆ ಮತ್ತು ದೇವರು ಕೊಡುವ ಘನಮಾನಗಳನ್ನು ಎದುರುನೋಡುತ್ತಾರೆ. ದೇವರು ಅಂಥವರಿಗೆ ತನ್ನೊಂದಿಗೆ ಪೂರ್ಣವಾದ ನಿತ್ಯಜೀವದ ಅನುಭವವನ್ನು ಕೊಡುತ್ತಾನೆ – ಇದು ಅವರು ಯೇಸು ಕ್ರಿಸ್ತನನ್ನು ಮೊದಲು ನಂಬಿದಾಗ ಪ್ರಾರಂಭವಾದ ಜೀವಿತವಾಗಿದೆ (ಯೋಹಾನ 3:36; 5:24). ಒಳ್ಳೇಯ ಕಾರ್ಯಗಳನ್ನು ಮಾಡಿ, ದೇವರಿಗಾಗಿ ತವಕಪಡುವದರಿಂದ ಈ ಬಹುಮಾನ ದೊರೆಯುವದಿಲ್ಲ. ದೇವರು ಅವರಲ್ಲಿ ಮಾಡಿರುವ ಕಾರ್ಯದ ಫಲಿತಾಂಶ ಇದಾಗಿದೆ. ಯೇಸು ಕ್ರಿಸ್ತನನ್ನು ನಂಬಿ ಈ ವಾಕ್ಯ ಹೇಳುವದನ್ನು ನಂಬದಿರುವವರು ತಮ್ಮನ್ನು ಮೋಸಮಾಡಿಕೊಳ್ಳುತ್ತಾರೆ ಮತ್ತು ದೇವರ ರಕ್ಷಣೆಯ ಅನುಭವವಿಲ್ಲದವರಾಗಿದ್ದಾರೆ. ಮತ್ತಾಯ 5:1; 7:24-27; ಯಾಕೋಬ 2:14-19,26 ನೋಟ್ಸ್ ನೋಡಿರಿ. **8**

**2:8** *"ಸ್ವೇಚ್ಛೆಯುಳ್ಳವರು"*– ಜನರಲ್ಲಿ ಎರಡು, ಕೇವಲ ಎರಡು ವರ್ಗಗಳು ಮಾತ್ರವೇ ಅವೆ: ಸತ್ಯವನ್ನನುಸರಿಸುವವರು ಮತ್ತು ನಿಜವಾದ ದೇವರು ಮಾತ್ರವೇ ಕೊಡುವವುಗಳನ್ನು ಎದುರುನೋಡುವವರು (ಮತ್ತಾಯ 6:33), ಮತ್ತು ಸತ್ಯವನ್ನು ನಿರಾಕರಿಸುವವರು ಮತ್ತು ಅವರ ಎದುರುನೋಡುವಿಕೆಯೆಲ್ಲವೂ ಸ್ವೇಚ್ಛೆಯುಳ್ಳದ್ದಾಗಿರುತ್ತದೆ - ಸ್ವಾರ್ಥ ಬಯಕೆಗಳು, ಕುಟುಂಬ, ಪ್ರಖ್ಯಾತಿ, ಹಣ, ಅಧಿಕಾರ ಇತ್ಯಾದಿ. ಎರಡನೇ ವರ್ಗದ ಜನರು

ದೇವರ ಕೋಪಕ್ಕೆ ಗುರಿಯಾಗುವರು – ವ 18; ಯೋಹಾನ 3:36; ಎಫೆ 5:6; 2 ಥೆಸ 1:5-10.
**9-10**

**2:9-10** *"ಯೆಹೂದ್ಯರಿಗೆ ಮೊದಲು"*–ಎಂಬದು ಸತ್ಯವಾಗಿದೆ ಯಾಕಂದರೆ ದೇವರ ವಾಕ್ಯ ಮತ್ತು ಯೇಸು ಕ್ರಿಸ್ತನ ಸುವಾರ್ತೆ ಮೊದಲು ಯೆಹೂದ್ಯರಿಗೆ ದೊರಕಿತು – 1:16. **11**

**2:11** ದೇವರು ಒಬ್ಬನನ್ನೂ ಬಿಡುವದಿಲ್ಲ ಯಾಕಂದರೆ ಅವನು ಯೆಹೂದ್ಯನಾಗಿರುತ್ತಾನೆ ಅಥವಾ ಕ್ರೈಸ್ತನಾಗಿರುತ್ತಾನೆ ಮತ್ತು ತಾನು ದೇವಜನ ಎಂದು ಹೇಳಿಕೊಳ್ಳುತ್ತಾನೆ. **12**

**2:12** ಆತನು "ಧರ್ಮಶಾಸ್ತ್ರ" ಎಂದು ಹೇಳುತ್ತಿರುವದು, ದೇವರು ಮೋಶೆಯ ಮೂಲಕ ನೀಡಿದ ಧರ್ಮಶಾಸ್ತ್ರವಾಗಿದೆ. ವಿಮೋಚನಕಾಂಡ ಅಧ್ಯಾಯ 20 ನೋಡಿರಿ. ಒಂದುವೇಳೆ ದೇವರ ಪ್ರಕಟನೆ ಧರ್ಮಶಾಸ್ತ್ರದಲ್ಲಿ ಇಲ್ಲವಾದರೆ ಜನರು ಯಾಕೆ ನಾಶವಾಗಬೇಕು? ಯಾಕಂದರೆ ಅವರು ಬೇಕೆಂದೇ ಪಾಪಮಾಡುವವರಾಗಿದ್ದಾರೆ ಮತ್ತು ಸೃಷ್ಟಿಯಲ್ಲಿಯೇ ದೇವರ ಪ್ರಕಟನೆ ಅವರಿಗೆ ದೊರತಿದೆ ಹಾಗೂ ದೇವರು ಅವರಿಗೆ ಕೊಟ್ಟ ಬೆಳಕನ್ನು ಅವರು ತಿರಸ್ಕರಿಸಿದ್ದಾರೆ – 1:18-20,28. **13**

**2:13** ಒಬ್ಬ ವ್ಯಕ್ತಿ ದೇವರ ಧರ್ಮಶಾಸ್ತ್ರ ಹೇಳುವದನ್ನು ಕೇಳಿದರೆ ಮಾತ್ರ ಸಾಲದು – ಆತನು ಸಂಪೂರ್ಣವಾಗಿ ಅದಕ್ಕನುಸಾರ ಜೀವಿಸಬೇಕು, ಆಗ ಮಾತ್ರವೇ ಅವನು ತನ್ನ ಕಾರ್ಯಗಳ ಆಧಾರದ ಮೇರೆಗೆ ನೀತಿವಂತನೆಂದು ಕರೆಯಲ್ಪಡಲು ಸಾಧ್ಯವಾಗುತ್ತದೆ. ಕರ್ತನಾದ ಯೇಸು ಕ್ರಿಸ್ತನನ್ನು ಬಿಟ್ಟರೆ ಯಾವ ವ್ಯಕ್ತಿಯೂ ಈ ಕಾರ್ಯವನ್ನು ಪರಿಪೂರ್ಣವಾಗಿ ಮಾಡಿಲ್ಲ – 3:9,19,23; ಯಾಕೋಬ 2:10; ವಿಮೋ 19:21-25. **14-15**

**2:14-15** ದೇವರು ಮೋಶೆಗೆ ಕೊಟ್ಟ ಧರ್ಮಶಾಸ್ತ್ರವನ್ನು ಕೇಳಿಸಿಕೊಳ್ಳದಿರುವವರಿಗೂ ಸರಿ ಮತ್ತು ತಪ್ಪಿನ ತಿಳುವಳಿಕೆ ಇರುತ್ತದೆ. ದೇವರು ಅದನ್ನು ಅವರ ಅಂತರ್ಯದೊಳಗೆ ಇರಿಸಿದ್ದಾನೆ. **15**

**2:15** *"ಮನಸ್ಸು"*– ಅಪೊ 23:1 ನೋಟ್. **16**

**- 2:16** ಅಪೊ 17:31. **17**

**2:17** ಧಾರ್ಮಿಕನು ಮತ್ತು ತನ್ನನ್ನು ನೀತಿವಂತನೆಂದು ಅಂದುಕೊಳ್ಳುವ ಯೆಹೂದ್ಯನು ಇತರರ ವಿಷಯದಲ್ಲಿ ತೀರ್ಪುಮಾಡುವದಕ್ಕೆ ಉತ್ತಮವಾದ ಉದಾಹರಣೆಯಾಗಿದ್ದಾನೆ – ವ 1; ಲೂಕ 18:9-12. ಮೋಶೆಯ ಧರ್ಮಶಾಸ್ತ್ರದಂತೆ ನಡೆಯುವದರಿಂದ ತಾವು ರಕ್ಷಣೆ ಹೊಂದಬಹುದು ಎಂಬದಾಗಿ ಅವರು ಅಂದುಕೊಂಡಿದ್ದರು (ಯೋಹಾನ 5:39,45) ಮತ್ತು ತಾವು ಮಾತ್ರವೇ ದೇವಜನರೆಂದು ಹೊಗಳಿಕೊಳ್ಳುತ್ತಿದ್ದರು – ಯೋಹಾನ 8:41. **18-23**

**2:18-23** ತಮಗೆ ಧರ್ಮಶಾಸ್ತ್ರ ಕೊಡಲ್ಪಟ್ಟಿದ್ದರಿಂದ ನಾವು ಇತರರಿಗೆ ಸತ್ಯವನ್ನು ಕಲಿಸಬೇಕೆಂದು ಯೆಹೂದ್ಯರು ಅಂದುಕೊಂಡಿದ್ದರು. ಆದರೆ ಇತರರಿಗೆ ಕಲಿಸುತ್ತಿದ್ದ ಅವರಿಗೆ ತಮಗೆ ಕಲಿಸಿಕೊಳ್ಳುವದನ್ನು ನಿರ್ಲಕ್ಷಿಸಿದರು ಮತ್ತು ತಾವು ಕಲಿಸುತ್ತಿದ್ದ ಧರ್ಮಶಾಸ್ತ್ರವನ್ನು

ತಾವೇ ಉಲ್ಲಂಘಿಸುತ್ತಿದ್ದರು. ಇದೇ ಪ್ರಕಾರ ಇಂದು ಅನೇಕ ಕ್ರೈಸ್ತರಿಗೆ ಕರ್ತನಾದ ಯೇಸು ಕ್ರಿಸ್ತನ ಬೋಧನೆಗಳು ಗೊತ್ತಿವೆ, ಅವರು ಅವುಗಳನ್ನು ಇತರರಿಗೆ ಕಲಿಸುತ್ತಾರೆ ಆದರೆ ಅವರು ಮಾತ್ರ ಅವುಗಳಿಗೆ ವಿಧೇಯರಾಗುವದಿಲ್ಲ. ("ಧರ್ಮಶಾಸ್ತ್ರದ ಉಲ್ಲಂಘನೆ") ಎಲ್ಲಾ ರೀತಿಯ ಪಾಪ ದೇವರಿಗೆ ಅಗೌರವ ತರುತ್ತದೆ ಎಂಬದನ್ನು ಗಮನಿಸಿರಿ. ಕೀರ್ತನೆ 51:4 ಹೋಲಿಸಿ ನೋಡಿರಿ. **24**

**2:24** ಯೆಹೂದ್ಯರ ವಿಫಲತೆಯನ್ನು ಪ್ರಕಟಪಡಿಸುವ ಹಳೆ ಒಡಂಬಡಿಕೆಯ ವಾಕ್ಯವನ್ನು ಸೂಚಿಸುವ ಮೂಲಕ ಪೌಲನು ತನ್ನ ಆರೋಪವನ್ನು ಸಾಬೀತುಪಡಿಸುತ್ತಿದ್ದಾನೆ – ಯೆಶಾಯ 52:5; ಯೆಹೆಜ್ಕೇಲ 36:22. ದೇವಜನರೆಂದು ಹೇಳಿಕೊಂಡು ದುಷ್ಟರಾಗಿ ಜೀವಿಸುವ ಮೂಲಕ ಆತನ ನಾಮಕ್ಕೆ ಅಗೌರವ ತರುವದಕ್ಕಿಂತ ದೇವರನ್ನು (ಅಥವಾ ಕ್ರಿಸ್ತನನ್ನು) ತಿಳಿದಿದ್ದೇನೆ ಎಂದು ಹೇಳದಿರುವದೇ ಉತ್ತಮವಾದ ಕಾರ್ಯವಾಗಿದೆ. **25**

**2:25** ದೇವರು ಯೆಹೂದ್ಯರೊಂದಿಗೆ ಮಾಡಿಕೊಂಡ ಒಡಂಬಡಿಕೆಗೆ ಸುನ್ನತಿಯು ಮುದ್ರೆಯಾಗಿತ್ತು. ಆದಿ 17:9-14 ನೋಟ್ ನೋಡಿರಿ. ಬಹುತೇಕ ಯೆಹೂದ್ಯರು ಶಾರೀರಿಕವಾದ ಈ ಗುರುತಿನ ನಿಮಿತ್ತ ಧರ್ಮಶಾಸ್ತ್ರಕ್ಕೆ ಅವಿಧೇಯರಾದರೂ ಪರವಾಗಿಲ್ಲ ಯಾಕಂದರೆ ತಾವು ದೇವಜನ ಎಂಬದಾಗಿ ಅಂದುಕೊಂಡಿದ್ದರು. ಪೌಲನು ಹೇಳುತ್ತಿರುವದೇನೆಂದರೆ ಧರ್ಮಶಾಸ್ತ್ರವನ್ನು ಪಾಲಿಸುವದು ಮತ್ತು ಒಬ್ಬ ವ್ಯಕ್ತಿಯ ಆಂತರಿಕ ಸ್ಥಿತಿ, ದೇಹದ ಗುರುತಿಗಿಂತ ಹೆಚ್ಚು ಪ್ರಾಮುಖ್ಯವಾದದ್ದಾಗಿದೆ. ಮತ್ತಾಯ 3:9; 23:25-28; ಯೋಹಾನ 8:33-41 ಹೋಲಿಸಿ ನೋಡಿರಿ. ಸುನ್ನತಿಯ ವಿಷಯದಲ್ಲಿ ಪೌಲನು ಹೇಳಿರುವ ಮಾತುಗಳು ದೀಕ್ಷಾಸ್ನಾನ ಅಥವಾ ಮಾನವರು ಇತರರ ವಿಷಯದಲ್ಲಿ ನಡೆಸುವ ಸಮಾರಂಭಗಳಿಗೆ ಸಮಾನವಾಗಿ ಅನ್ವಯವಾಗುತ್ತವೆ. **29**

**2:29** *"ಹೃದಯದಲ್ಲಿ ಆಗುವ ಸುನ್ನತಿ"*– ಯೆರೆ 4:4. ಒಬ್ಬ ವ್ಯಕ್ತಿ ಆಂತರ್ಯದಲ್ಲಿ ಕ್ರೈಸ್ತನಾಗಿದ್ದರೆ ಮಾತ್ರವೇ ನಿಜವಾದ ಕ್ರೈಸ್ತನಾಗಿದ್ದಾನೆ, ದೀಕ್ಷಾಸ್ನಾನವು ಹೃದಯದಲ್ಲಿ ದೇವರಾತ್ಮನು ಮಾಡುವ ಕಾರ್ಯದ ಗುರುತಾಗಿದೆ – ಮತ್ತಾಯ 3:6; ಮಾರ್ಕ 16:16; ಅಪೊ 2:38. ಆಂತರ್ಯದಲ್ಲಿ ಬದಲಾವಣೆಯಾಗದೆ ಹೋದರೆ ಇದಕ್ಕೆ ಯಾವುದೇ ಬೆಲೆಯಿಲ್ಲ. ಆಂತರ್ಯದಲ್ಲಿ ದೇವಜನರಾಗಿರುವವರು ಮಾನವನ ಸಮ್ಮತಿಯನ್ನಲ್ಲ ಬದಲಾಗಿ ದೇವರ ಸಮ್ಮತಿಯನ್ನು ಎದುರುನೋಡುವವರಾಗಿರುತ್ತಾರೆ. ಯೋಹಾನ 5:44; 12:43 ಹೋಲಿಸಿ ನೋಡಿರಿ.

# 3 1

**3:1** ಈ ಪ್ರಶ್ನೆ ಉದ್ಭವಿಸಲು ಕಾರಣವೇನೆಂದರೆ ಯೆಹೂದ್ಯನು ಇತರರಿಗಿಂತ ಉತ್ತಮನಲ್ಲ, ಅವನು ತನ್ನ ಧರ್ಮ ಮತ್ತು ಆಚರಣೆಗಳಿಂದ ರಕ್ಷಣೆ ಹೊಂದಿಲ್ಲ, ಯೆಹೂದ್ಯರಲ್ಲದ

ಪಾಪಿಗಳ ವಿಷಯದಲ್ಲಿ ತೀರ್ಪು ಮಾಡುವ ಪ್ರಕಾರವೇ ದೇವರು ಯೆಹೂದ್ಯನಿಗೂ ತೀರ್ಪು ಮಾಡುತ್ತಾನೆ ಎಂದು ಪೌಲನು ಹೇಳಿದ್ದಾನೆ. ಹೀಗಿರುವಾಗ ದೇವರು ಯೆಹೂದ್ಯರನ್ನು ಇತರೆ ಜನರಿಂದ ಬೇರ್ಪಡಿಸಿ ಅವರಿಗೆ ವಿಶೇಷವಾದ ಧರ್ಮಶಾಸ್ತ್ರ ಹಾಗೂ ಆಚರಣೆಗಳನ್ನು ಕೊಟ್ಟಿರುವದರಿಂದ ಉಪಯೋಗವೇನು? **2**

**3:2** 9:4-5 ನೋಡಿರಿ. ಆಗಿನ ಕಾಲದಲ್ಲಿ ಇತರೆ ಜನರಿಗಿಂತ ಹೆಚ್ಚಾಗಿ ದೇವರ ಸತ್ಯವನ್ನು ಕೇಳಿಸಿಕೊಳ್ಳುವ ಮತ್ತು ನಂಬುವ ಹಾಗೂ ಒಬ್ಬನೇ ನಿಜ ದೇವರನ್ನು ಸೇವಿಸುವ ಅದ್ಭುತವಾದ ಅವಕಾಶವು ಯೆಹೂದ್ಯರಿಗೆ ಕೊಡಲಾಗಿತ್ತು. ಇದು ಯೆಹೂದ್ಯರಾಗಿದ್ದವರ ದೊಡ್ಡ ವಿಶೇಷತೆಯಾಗಿತ್ತು. **3**

**3:3** ಯೆಹೂದ್ಯರು ತಮಗೆ ದೊರೆತ ಅವಕಾಶವನ್ನು ಉಪಯೋಗಿಸಿಕೊಳ್ಳದೆ ಅವಿಧೇಯರು ಮತ್ತು ಅಪನಂಬಿಕೆಯುಳ್ಳವರಾಗಿದ್ದರಲ್ಲಿ ದೇವರ ತಪ್ಪು ಏನೂ ಇಲ್ಲ. ಆತನು ನಂಬಿಗಸ್ತನಾಗಿದ್ದಾನೆ (2 ತಿಮೊ 2:13). ಆತನು ಇಸ್ರಾಯೇಲ್ ಜನಾಂಗದವರಿಗೆ ಮಾಡಿದ ಎಲ್ಲಾ ವಾಗ್ದಾನಗಳನ್ನು ಖಂಡಿತವಾಗಿಯೂ ನೆರವೇರಿಸುತ್ತಾನೆ (ಅಧ್ಯಾಯ 11). **4**

**- 3:4** ಕೀರ್ತನೆ 51:4. **5-7**

**3:5-7** ತಮ್ಮ ಅಪನಂಬಿಕೆ ಮತ್ತು ದುಷ್ಟ ಮಾರ್ಗಗಳಿಂದ ದೇವರ ನಂಬಿಗಸ್ತಿಕೆ ಹಾಗೂ ನೀತಿವಂತಿಕೆ ಹೆಚ್ಚು ಪ್ರಭಾವವಾಗುವಂತೆ ಮಾಡಿವೆ ಎಂಬದಾಗಿ ಹೇಳುವ ಧೈರ್ಯ ಮಾಡಿದರು. ಇಲ್ಲಿ ಅವರು ಹೇಳಿರುವದೇನೆಂದರೆ ನಾವು ದೇವರಿಗೆ ಉಪಕಾರ ಮಾಡುತ್ತಿದ್ದೇವೆ, ಆದ್ದರಿಂದ ಆತನು ನಮ್ಮ ವಿಷಯವಾಗಿ ತೀರ್ಪು ಮಾಡಬಾರದು! **8**

**3:8** ಮೇಲಿನ ಆಲೋಚನೆಯು ಪೌಲನ ಬೋಧನೆಯ ಭಾಗವಾಗಿದೆ ಎಂದು ಹೇಳುವ ಮೂಲಕ ಕೆಲವರು ಆತನ ಮೇಲೆ ಆರೋಪ ಮಾಡಿದರು. ಅವರು ತಮ್ಮ ಅಪರಾಧಿ ಭಾವನೆಯನ್ನು ಕಡಿಮೆಮಾಡಿಕೊಳ್ಳಲು ಮತ್ತು ಪೌಲನು ಬರೆದಿರುವ ನ್ಯಾಯತೀರ್ಪಿನ ಮಾತುಗಳಿಗೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ದೇವರು ನ್ಯಾಯಬದ್ಧವಾಗಿಯೇ ಅಂಥವರನ್ನು ನರಕಕ್ಕೆ ಕಳುಹಿಸುತ್ತಿದ್ದಾನೆ ಎಂದು ಪೌಲನು ಹೇಳಿದ್ದಾನೆ. **9**

**3:9** ಪೌಲನ ಮಾತಿನ ಅರ್ಥವೇನೆಂದರೆ: ಯೆಹೂದ್ಯರು ತಮಗಿರುವ ಎಲ್ಲಾ ಸೌಕರ್ಯಗಳು, ಅನುಕೂಲತೆಗಳು ಮತ್ತು ದೇವರು ಕೊಟ್ಟಿರುವ ಧರ್ಮಶಾಸ್ತ್ರ ಹಾಗೂ ವಿಧಿಗಳ ನಿಮಿತ್ತ ಇವುಗಳಿಲ್ಲದಿರುವ ಜನರಿಗಿಂತ ಉತ್ತಮರಾಗಿದ್ದಾರೆಯೇ? ಇದರ ಉತ್ತರ ಖಂಡಿತವಾಗಿಯೂ – ಇಲ್ಲ. ಈಗ, "ಕ್ರೈಸ್ತರಾದ ನಾವು ಸ್ವಾಭಾವಿಕವಾಗಿ ಇತರರಿಗಿಂತ ಉತ್ತಮರಾಗಿದ್ದೇವೆಯೇ?" ಎಂದು ಕೇಳಬಹುದು, ಇದರ ಉತ್ತರ ಖಂಡಿತವಾಗಿಯೂ – ಇಲ್ಲ ಎಂಬದಾಗಿದೆ. ಯೆಹೂದ್ಯರಾಗಲಿ, ಗ್ರೀಕರಾಗಲಿ, ಯಾವುದೇ ಧರ್ಮ ಅಥವಾ ರಾಷ್ಟ್ರ ಅಥವಾ ಜಾತಿಗೆ ಸೇರಿದವರಾದರೂ ಎಲ್ಲರೂ ಪಾಪಿಗಳಾಗಿದ್ದಾರೆ. ಐಶ್ವರ್ಯವಂತರು ಮತ್ತು ಬಡವರು, ವಿದ್ಯಾವಂತರು ಮತ್ತು ಅವಿದ್ಯಾವಂತರು, ಜ್ಞಾನಿಗಳು ಮತ್ತು ಅಜ್ಞಾನಿಗಳು, ತಮ್ಮ

ಧರ್ಮದ ಕಾರ್ಯಗಳನ್ನು ಆಚರಿಸುವವರು ಮತ್ತು ಆಚರಿಸದವರು ಎಲ್ಲರೂ ಪಾಪಿಗಳಾಗಿದ್ದಾರೆ. ತಮ್ಮನ್ನು ಇತರರಿಗಿಂತ ಉತ್ತಮರೆಂದು ಅಂದುಕೊಳ್ಳುವ ಅನೇಕ ಜನರಿದ್ದಾರೆ (ಯೆಶಾಯ 65:5; ಲೂಕ 18:9 ನೋಡಿರಿ) ಮತ್ತು ಅವರು ತಮ್ಮ ಹೃದಯಗಳಲ್ಲಿ ಪೌಲನ ಪ್ರಶ್ನೆಗೆ "ಹೌದು" ಎಂದು ಉತ್ತರಿಸುವವರಾಗಿದ್ದಾರೆ. ಅಂಥ ಜನರು ತಾವು ಏನಾಗಿದ್ದೇವೆ ಮತ್ತು ತಮಗೆ ಏನು ಬೇಕಾಗಿದೆ ಎಂಬದರ ಬಗ್ಗೆ ದೇವರು ಕೊಟ್ಟಿರುವ ಜ್ಞಾನಪ್ರಕಾಶವನ್ನು ಇನ್ನೂ ಪಡೆಯದವರಾಗಿದ್ದಾರೆ. **10-18**

**3:10-18** ಈಗ ಪೌಲನು ತನ್ನ ಬೋಧನೆಯು ಹಳೆಯ ಒಡಂಬಡಿಕೆಯಲ್ಲಿ ದೇವರು ಕೊಟ್ಟಿರುವ ಪ್ರಕಟನೆಯೊಂದಿಗೆ ಸಾಮರಸ್ಯವುಳ್ಳದ್ದಾಗಿದೆ ಎಂದು ನಿರೂಪಿಸಿದ್ದಾನೆ. ಅವನು ಯಾವ ರೀತಿ ಪ್ರಾರಂಭಿಸಿದ್ದಾನೆ ಎಂಬದನ್ನು ಗಮನಿಸಿರಿ – "ಇದು ಶಾಸ್ತ್ರದಲ್ಲಿ ಬರೆದಿರುವ". ಸತ್ಯವೇದದಲ್ಲಿ ಏನು ಬರೆದದೆ ಎಂಬದು ನಮಗೆ ಎಲ್ಲವುಗಳಿಗಿಂತ ಹೆಚ್ಚು ಪ್ರಾಮುಖ್ಯವಾದ ಸಂಗತಿಯಾಗಿರಬೇಕು – 4:3 **10-12**

- **3:10-12** ಕೀರ್ತನೆ 14:1-3; 53:1-3; ಪ್ರಸಂಗಿ 7:20 ನೋಡಿರಿ. **13**
- **3:13** ಕೀರ್ತನೆ 5:9; 140:3. **14**
- **3:14** ಕೀರ್ತನೆ 10:7. **15-17**
- **3:15-17** ಯೆಶಾಯ 59:7-8. **18**
- **3:18** ಕೀರ್ತನೆ 36:1.

*"ದೇವರ ಭಯ"*– ಆದಿ 20:11; ಯೋಬ 28:28; ಕೀರ್ತನೆ 34:11-14; 86:11; 111:10; ಜ್ಞಾನೋ 1:7; 1 ಪೇತ್ರ 1:17; 2:17; ಪ್ರಕ 15:4; 19:5 ನೋಟ್ಸ್ ನೋಡಿರಿ. ಮೇಲೆ ತಿಳಿಸಲಾಗಿರುವ ಎಲ್ಲಾ ದುಷ್ಟತನಗಳಿಗೆ ಇದುವೇ ಮೂಲ ಕಾರಣವಾಗಿದೆ. ದೇವರ ಭಯ ಇಲ್ಲದೆ ಹೋದರೆ ಜನರು ದುಷ್ಟತನವನ್ನು ಬಿಡಲು ಆಗುವದಿಲ್ಲ. ಮೇಲೆ ತಿಳಿಸಲಾಗಿರುವ ಪ್ರತಿಯೊಂದು ಪಾಪವನ್ನು ಪ್ರತಿಯೊಬ್ಬ ವ್ಯಕ್ತಿಯು ಅಭ್ಯಾಸಿಸುತ್ತಾನೆ ಎಂದು ಪೌಲನು ಹೇಳುತ್ತಿಲ್ಲ, ಬದಲಾಗಿ ಮಾನವರು ಸಹಜವಾಗಿಯೇ ಇವುಗಳನ್ನು ಮಾಡುತ್ತಾರೆ ಮತ್ತು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಪಾಪದ ಸ್ವಭಾವವಿರುತ್ತದೆ ಹಾಗೂ ಎಲ್ಲದಕ್ಕಿಂತ ಅವಶ್ಯವಾಗಿರುವ ಒಂದು ಕಾರ್ಯದ - ನೀತಿವಂತಿಕೆಯ ಕೊರತೆಯುಳ್ಳವರಾಗಿದ್ದಾರೆ. **19**

**3:19** *"ಧರ್ಮಶಾಸ್ತ್ರ"*– ಎಂದರೆ ಇಡೀ ಹಳೆಯ ಒಡಂಬಡಿಕೆ, ಅದರಿಂದಲೇ ಆತನು ಮೇಲಿನ ವಚನಗಳನ್ನು ಆರಿಸಿಕೊಂಡಿದ್ದಾನೆ, ದೇವರು ಸೀನಾಯ್ ಬೆಟ್ಟದ ಮೇಲೆ ಮೋಶೆಗೆ ಈ ಧರ್ಮಶಾಸ್ತ್ರವನ್ನು ಪ್ರಕಟಪಡಿಸಿದನು. ಯೆಹೂದ್ಯರು "ಧರ್ಮಶಾಸ್ತ್ರದ" –ಅಧೀನದಲ್ಲಿದ್ದರು. ಈಗ ಪೌಲನು 1:18ರಲ್ಲಿ ಹೇಳಿರುವ ಕಾರ್ಯವನ್ನು ತಾನೇ ಮಾಡಿದ್ದಾನೆ - ಲೋಕದಲ್ಲಿರುವ ಪ್ರತಿಯೊಬ್ಬ ವ್ಯಕ್ತಿ ಪಾಪಿಯಾಗಿದ್ದಾನೆ, ದೇವರ ಎದುರಿನಲ್ಲಿ ಅಪರಾಧಿಯಾಗಿದ್ದಾನೆ ಮತ್ತು ಯೇಸು ಕ್ರಿಸ್ತನ ಸುವಾರ್ತೆ ಪ್ರತಿಯೊಬ್ಬನಿಗೆ

ಅವಶ್ಯವಾಗಿದೆ ಎಂದು ತೋರಿಸಿದ್ದಾನೆ. ಸೃಷ್ಟಿ (1:18-20), ಮಾನವನ ಚರಿತ್ರೆ (1:21-28), ಮಾನವನ ಸದ್ಯದ ಪರಿಸ್ಥಿತಿ (1:29-32), ಮನಸ್ಸಾಕ್ಷಿ (2:15), ಮತ್ತು ದೇವರು ಹಳೆಯ ಒಡಂಬಡಿಕೆಯಲ್ಲಿ ತಿಳಿಸಿರುವ ಸತ್ಯ (3:10-18) ಇವೆಲ್ಲವೂ ಭೂಲೋಕದಲ್ಲಿರುವ ಪ್ರತಿಯೊಬ್ಬ ವ್ಯಕ್ತಿ ಪಾಪಿಯೆಂದು ಪ್ರಕಟಪಡಿಸುತ್ತವೆ. ಎಲ್ಲರೂ ಘೋರವಾದ ಅಪರಾಧಿಗಳಾಗಿದ್ದಾರೆ, ತಮ್ಮ ಪಾಪಗಳಿಗೆ ತಾವೇ ಜವಾಬ್ದಾರರಾಗಿದ್ದಾರೆ ಮತ್ತು ದೇವರ ಕೋಪಕ್ಕೆ ಅರ್ಹರಾಗಿದ್ದಾರೆ. ಮತ್ತು ಯಾರೊಬ್ಬರೂ ದೇವರ ಮುಂದೆ ಯಾವ ಕಾರಣಗಳನ್ನೂ ಕೊಡಬಾರದು ಅಥವಾ ತಾನು ಇತರರಿಗಿಂತ ಉತ್ತಮನೆಂದು ಯೋಚಿಸಬಾರದು. ಇದನ್ನು ತಿಳಿದವರು ಧನ್ಯರು ಅಂದರೆ ತಮ್ಮ ಬಾಯ ಮೇಲೆ ಬೆರಳನ್ನಿಟ್ಟುಕೊಂಡು, ದೇವರೆದುರಿನಲ್ಲಿ ಸಮರ್ಥಿಸಿಕೊಳ್ಳಲು ಯೋಚಿಸದೆ ಆತನಿಗೆ ಮರೆಮಾಡಲು ಪ್ರಯತ್ನಿಸದವರು – ರಕ್ಷಣೆಗೆ ಹತ್ತಿರವಾಗಿರುತ್ತಾರೆ. ದೇವರು ಅವರಿಗೆ ಕೆಲವು ಅದ್ಭುತವಾದ ವಿಷಯಗಳನ್ನು ಹೇಳುತ್ತಾನೆ. ಯೇಸು ಕ್ರಿಸ್ತನು ಲೂಕ 18:9-14ರಲ್ಲಿ ಹೇಳಿದ ಸಾಮ್ಯವು ಪೌಲನು ಇಲ್ಲಿ ವ್ಯಕ್ತಪಡಿಸಿರುವ ಸತ್ಯದ ಸಣ್ಣ ವ್ಯಾಖ್ಯಾನವಾಗಿದೆ. ನಾವು ಇತರರಿಗಿಂತ ಉತ್ತಮರೆಂದು ಯೋಚಿಸುವ ಜನರು ದೇವರ ದೃಷ್ಟಿಯಲ್ಲಿ ನಾವೇನಾಗಿದ್ದೇವೆ ಎಂಬದನ್ನು ಅರ್ಥಮಾಡಿಕೊಳ್ಳಬೇಕು. ನಾವೇನಾಗಿದ್ದೇವೆ ಎಂಬದನ್ನು ಅರ್ಥಮಾಡಿಕೊಂಡವರು ರಕ್ಷಣೆಯ ಆಶೀರ್ವದಿಸಲ್ಪಟ್ಟ ಸತ್ಯಗಳೆಡೆಗೆ ಸಾಗಬಹುದು. **20**

**3:20** *“ನೀತಿವಂತರೆಂಬ ನಿರ್ಣಯ”*– ಇದರ ಅರ್ಥ ಮುಗ್ಧರೆಂದು ಘೋಷಿಸುವದು, ನೀತಿವಂತರೆಂದು ಎಣಿಸುವದು. ಇದು ರೋಮಾ ಪತ್ರಿಕೆಯ ಅತ್ಯಂತ ಪ್ರಾಮುಖ್ಯವಾದ ಬೋಧನೆಯಾಗಿದೆ. ನಿಜವಾಗಿ ಹೇಳುವದಾದರೆ ಇದು ಯೇಸು ಕ್ರಿಸ್ತನ ಸುವಾರ್ತೆಯ ಪ್ರಮುಖ ವಿಷಯವಾಗಿದೆ. ಮುಂದಿನ ಕೆಲವು ವಚನಗಳನ್ನು ಪೌಲನು ಇದನ್ನು ಸ್ಪಷ್ಟವಾಗಿ ವಿವರಿಸಿದ್ದಾನೆ.

*“ಧರ್ಮಶಾಸ್ತ್ರ”*– ಮೋಶೆಯ ಮೂಲಕ ಇಸ್ರಾಯೇಲ್ಯರಿಗೆ ಕೊಟ್ಟ ನೇಮ ನಿಷ್ಠೆಗಳು ಮತ್ತು ಆಜ್ಞೆಗಳು. ನೇಮ ನಿಷ್ಠೆಗಳನ್ನು ಆಚರಿಸುವದರಿಂದ ಯಾರೂ ರಕ್ಷಣೆ ಹೊಂದುವದಿಲ್ಲ ಯಾಕಂದರೆ ಅವುಗಳನ್ನು ಪೂರ್ತಿಯಾಗಿ ಆಚರಿಸಲು ಯಾರಿಂದಲೂ ಆಗುವದಿಲ್ಲ. ಪಾಪದ ಸ್ವಭಾವವಿರುವ ಜನರಿಂದ ಪವಿತ್ರವಾಗಿರುವ ತತ್ವಗಳನ್ನು ನಿಜವಾಗಿಯೂ ಆಚರಿಸಲು ಆಗುವದಿಲ್ಲ. ಒಂದನ್ನು ಉಲ್ಲಂಘಿಸುವದು ಇಡೀ ಧರ್ಮಶಾಸ್ತ್ರವನ್ನು ಉಲ್ಲಂಘಿಸುವ ಅಪರಾಧಕ್ಕೆ ಸಮಾನವಾಗಿದೆ (ಯಾಕೋಬ 2:10). **21**

**3:21** *“ಈಗಲಾದರೋ”*– (ವ 21) – ಎಫೆ 2:4; ತೀತ 3:4 ಹೋಲಿಸಿ ನೋಡಿರಿ. ಈ ವಾಕ್ಯವು ಪ್ರಾಮುಖ್ಯವಾದ ತಿರುವನ್ನು ಸೂಚಿಸುತ್ತದೆ. ಜನರೆಲ್ಲರ ವಿಫಲತೆ ಮತ್ತು ಪಾಪವನ್ನು ತೋರಿಸಿದ ನಂತರ, ಎದುರಾಗುವ ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ತೋರಿಸಿದ್ದಾನೆ. ಮಾನವನಿಗೆ ಬೇಕಾಗಿರುವ ನೀತಿವಂತಿಕೆಯಾಗಿದೆ ಮತ್ತು ಅದನ್ನು ಯಾವ

ರೀತಿ ಹೊಂದಬಹುದೆಂಬದಕ್ಕೆ ದೇವರು ಪ್ರಕಟನೆ ಕೊಟ್ಟಿದ್ದಾನೆ. ಈ ಪತ್ರಿಕೆಯಲ್ಲಿ ನೀತಿವಂತಿಕೆ ಎಂದರೆ, ಸರ್ವಲೋಕದ ಒಡೆಯನಾಗಿರುವ ಪರಿಶುದ್ಧ ಮತ್ತು ನೀತಿವಂತನಾದ ದೇವರ ಎದುರಿನಲ್ಲಿ ಎಲ್ಲಾ ಜನರು ಸಮಾಧಾನದಿಂದ ನಿಂತುಕೊಳ್ಳಬೇಕೆಂಬದಾಗಿದೆ. ಈ ನೀತಿವಂತಿಕೆಯು ತನ್ನಲ್ಲಿರುವ ಯಾವ ಕಾರ್ಯಗಳಲ್ಲಿಯೂ ದೋಷವಿಲ್ಲದ್ದಾಗಿದೆ, ಇದನ್ನು ದೇವರು ತಾನೇ ಸಮ್ಮತಿಸಿದ್ದಾನೆ ಮತ್ತು ಅಂಗೀಕರಿಸಿದ್ದಾನೆ. ಈ ನೀತಿವಂತಿಕೆಯನ್ನು ಕರ್ತನಾದ ಯೇಸು ಕ್ರಿಸ್ತನು ಭೂಲೋಕದಲ್ಲಿದ್ದ ಸಮಯದಲ್ಲಿ ವ್ಯಕ್ತಪಡಿಸಿದನು ಮತ್ತು ದೇವರು ಮತ್ತಾಯ 3:17ರಲ್ಲಿ ಬರೆಯಲ್ಪಟ್ಟಿರುವ ಮಾತುಗಳನ್ನು ಹೇಳುವಂತೆ ಮಾಡಿತು. ಪೌಲನು ಇಲ್ಲಿ ನೀತಿವಂತಿಕೆಯಿಂದ ಉಂಟಾಗುವ ಕಾರ್ಯಗಳನ್ನು ಪ್ರಕಟಪಡಿಸಿದ್ದಾನೆ. ಈ ನೀತಿವಂತಿಕೆಯು ಸ್ವಾಭಾವಿಕವಾಗಿ ಮಾನವನಲ್ಲಿರದ ನೀತಿವಂತಿಕೆಯಾಗಿದೆ (ವ 23). ಈ ನೀತಿವಂತಿಕೆಯು ದೇವರಿಂದ ಬರುವ ನೀತಿವಂತಿಕೆಯಗಿದೆ (ವ 21) – ಆದ್ದರಿಂದ ಇದು ಖಂಡಿತವಾಗಿಯೂ ದೋಷವಿಲ್ಲದ್ದು ಮತ್ತು ಪರಿಪೂರ್ಣತೆಯುಳ್ಳದ್ದಾಗಿರುತ್ತದೆ. ಇದು "ಧರ್ಮಶಾಸ್ತ್ರದ ಭಾಗವಾಗಿದೆ" (ವ 21) – ಅಂದರೆ, ಧರ್ಮಶಾಸ್ತ್ರದಲ್ಲಿರುವ ದೇವರ ಆಜ್ಞೆಗಳನ್ನು ಪಾಲಿಸಲು ಪ್ರಯತ್ನಿಸುವದು ಇದನ್ನು ಪಡೆದುಕೊಳ್ಳುವ ಮಾರ್ಗವಲ್ಲವಾಗಿದೆ. ಅನೇಕರು ಈ ಮಾರ್ಗದ ಮೂಲಕ ಇದನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾರೆ (10:1-5 ನೋಡಿರಿ), ಇದು ಕೇವಲ ಕಷ್ಟಕರವಾದದ್ದು ಮಾತ್ರವಲ್ಲ ಬದಲಾಗಿ ಅಸಾಧ್ಯವಾದದ್ದಾಗಿದೆ. ಈ ನೀತಿವಂತಿಕೆಯ ಬಗ್ಗೆ ಧರ್ಮಶಾಸ್ತ್ರ ಮತ್ತು ಪ್ರವಾದಿಗಳು (ಹಳೆಯ ಒಡಂಬಡಿಕೆ) ಮಾತನಾಡಿದ್ದಾನೆ (ವ 21) – ಇದು ಅಪರಿಚಿತವಾಗಿರುವ, ಹೊಸ ಕಾರ್ಯವಲ್ಲ (ಆದಿ 15:6; ಹಬಕ್ಕೂಕ 2:4). ಇದು ಅರ್ಹತೆಯಿಲ್ಲದ ಪಾಪಿಗಳಿಗೆ ದೇವರು ಕೊಟ್ಟಿರುವ ಕೃಪೆಯ ವರವಾಗಿದೆ – ಅಂಗೀಕರಿಸಿಕೊಳ್ಳುವ ಮನಸ್ಸಿರುವವರೆಲ್ಲರಿಗೆ ದೇವರು ಈ ನೀತಿವಂತಿಕೆಯನ್ನು ಉಚಿತವಾಗಿ ಕೊಡುತ್ತಾನೆ (ವ 22,24). ಇದನ್ನು ನಂಬಿಕೆಯಿಂದ ಮಾತ್ರವೇ ಪಡೆದುಕೊಳ್ಳಬಹುದಾಗಿದೆ (ವ 22,25; 1:16-17) – ಆದ್ದರಿಂದ ಇದನ್ನು ನಾವು ನಮ್ಮ ಸ್ವಂತ ಕಾರ್ಯಗಳ ಮೂಲಕ ಪಡೆದುಕೊಳ್ಳಲು ಪ್ರಯತ್ನಿಸಬಾರದು ಬದಲಾಗಿ ದೇವರ ಕಡೆಗೆ ತಿರುಗಿಕೊಂಡು ಇದಕ್ಕಾಗಿ ಆತನಲ್ಲಿ ಭರವಸೆಯನ್ನಿಡಬೇಕು. ನಿಜವಾಗಿ ನೋಡುವದಾದರೆ ಈ ನೀತಿವಂತಿಕೆಯು ಪರಿಪೂರ್ಣ ನೀತಿವಂತನಾಗಿರುವ ಯೇಸು ಕ್ರಿಸ್ತನೇ ಆಗಿದ್ದಾನೆ (1 ಕೊರಿಂಥ 1:29; 2 ಕೊರಿಂಥ 5:21; ಯೆರೆ 23:6). ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡಿರುವವರು ದೇವರಿಂದ ಬರುವ ನೀತಿವಂತಿಕೆಯನ್ನು ಹೊಂದಿರುತ್ತಾರೆ ಮತ್ತು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡಿರದವರು ನೀತಿವಂತಿಕೆಯಿಲ್ಲದವರಾಗಿರುತ್ತಾರೆ. ನಾವು ನಂಬಿಕೆಯಿಂದ ಮಾತ್ರವೇ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳಲು ಸಾಧ್ಯ (ಯೋಹಾನ 1:12; 3:16,36). ನೀತಿವಂತಿಕೆಯನ್ನು ಸತ್ಯವೇದದಲ್ಲಿ ಕೆಲವೊಮ್ಮೆ ದೇವರು ತನ್ನ ಜನರಿಗೆ ಕೊಡುವ ಶುಭ್ರವಾದ ವಸ್ತ್ರಗಳಿಗೆ ಹೋಲಿಸಲಾಗಿದೆ. ಯೆಶಾಯ 61:10; ಜೆಕರ್ಯ 3:3-5;

ಮತ್ತಾಯ 22:11-12 ನೋಡಿರಿ. ಯೆಶಾಯ 64:6 ನಮಗೆ ಇದು ಎಷ್ಟು ಅವಶ್ಯವಾಗಿದೆ ಎಂದು ತಿಳಿಸುತ್ತದೆ. ನಾವು ಯೇಸು ಕ್ರಿಸ್ತನಲ್ಲಿ ಭರವಸೆಯನ್ನಿಡುವಾಗ, ದೇವರು ದೋಷವಿಲ್ಲದ ಯೇಸು ಕ್ರಿಸ್ತನ ನೀತಿವಂತಿಕೆಯಿಂದ ನಮ್ಮನ್ನು ಹೊದಿಸುತ್ತಾನೆ. ಜನರನ್ನು ನೀತಿವಂತರೆಂದು ಎಣಿಸುವ ಈ ವಿಧಾನವು ಕರ್ತನಾದ ಯೇಸು ಕ್ರಿಸ್ತನ ಮರಣದ ಮೇಲೆ ಆಧಾರವಾಗಿದೆ (ವ 24,25). ನೀತಿಯುಳ್ಳ ನ್ಯಾಯಾಧಿಪತಿಯಾಗಿರುವ ದೇವರು, ಪಾಪಿಗಳ ಪಾಪಗಳೆಲ್ಲವೂ ಪರಿಹಾರವಾಗುವ ತನಕ ಅವರನ್ನು ನೀತಿವಂತರೆಂದು ಎಣಿಸುವದಿಲ್ಲ. ದೇವರ ಸ್ವಂತ ಧರ್ಮಶಾಸ್ತ್ರವು ನಮ್ಮನ್ನು ಅಪರಾಧಿಗಳೆಂದು ಹೇಳುತ್ತದೆ ಮತ್ತು ಶಿಕ್ಷೆ ವಿಧಿಸುತ್ತದೆ ಹಾಗೂ ದೇವರು ತನ್ನ ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ನಡೆದುಕೊಳ್ಳುವದಿಲ್ಲ. ಹೀಗಿರುವಾಗ ಆತನು ನಮ್ಮನ್ನು ಹೇಗೆ ಕ್ಷಮಿಸುತ್ತಾನೆ, ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಹೇಗೆ ಅನುಮತಿಸುತ್ತಾನೆ ಮತ್ತು ನಮ್ಮನ್ನು ನೀತಿವಂತರೆಂದು ಹೇಗೆ ಎಣಿಸುತ್ತಾನೆ? ಆತನು ಈ ಎಲ್ಲಾ ಕಾರ್ಯಗಳನ್ನು ಮಾಡುತ್ತಾನೆ ಯಾಕಂದರೆ ಕರ್ತನಾದ ಯೇಸು ಕ್ರಿಸ್ತನು ನಮ್ಮ ಸ್ಥಾನವನ್ನು ತೆಗೆದುಕೊಂಡಿದ್ದಾನೆ ಮತ್ತು ನಮಗಾಗ ಬೇಕಿದ್ದ ಶಿಕ್ಷೆಯನ್ನು ತಾನೇ ಅನುಭವಿಸಿದ್ದಾನೆ. ಆತನು ಇಡೀ ಲೋಕದ ಪಾಪ ಪರಿಹಾರಕ್ಕಾಗಿ ತನ್ನ ಸ್ವಂತ ರಕ್ತವನ್ನು ಯಜ್ಞವಾಗಿ ಅರ್ಪಿಸಿದನು (ವ 25; ಯೋಹಾನ 1:29; ಮತ್ತಾಯ 26:27-28; 1 ಯೋಹಾನ 2:2; ಯೆಶಾಯ 53:5-6,10). ತನ್ನಲ್ಲಿ ಭರವಸೆಯನ್ನಿಡುವವರ ಪಾಪಗಳನ್ನು ಪರಿಹರಿಸುವ ಮೂಲಕ ಆತನು ದೇವರ ಕೋಪವನ್ನು ಶಮನಪಡಿಸಿದನು (ವ 25). ನಂಬಿಕೆಯಿಂದ ಯೇಸು ಕ್ರಿಸ್ತನ ನೀತಿವಂತಿಕೆಯನ್ನು ಪಡೆದುಕೊಳ್ಳುವದೊಂದೇ ಪರಲೋಕಕ್ಕೆ ಹೋಗುವ ಹಾಗೂ ದೇವರ ಪ್ರಸನ್ನತೆಯಲ್ಲಿ ಶಾಶ್ವತವಾಗಿ ಸಂತೋಷ ಮತ್ತು ಸಮಾಧಾನದಿಂದ ಜೀವಿಸುವ ಮಾರ್ಗವಾಗಿದೆ. **23**

**3:23** ಎಲ್ಲಾ ಜನರಿಗೆ ನೀತಿವಂತಿಕೆಯನ್ನು ಒದಗಿಸುವ ಸಲುವಾಗಿ ದೇವರು ಅಂಥ ಅದ್ಭುತವಾದ ಮತ್ತು ಅಮೂಲ್ಯವಾದ ಕಾರ್ಯ್ ಮಾಡಿದ್ದಾನೆ ಯಾಕಂದರೆ ಎಲ್ಲರಿಗೂ ಅದರ ಅವಶ್ಯಕತೆ ಬಹಳ ಪ್ರಾಮುಖ್ಯವಾಗಿತ್ತು. ಕೆಲವರು ಇತರರಿಗಿಂತ ಹೆಚ್ಚು ಘೋರವ ಪಾಪಿಗಳಾಗಿರುತ್ತಾರೆ, ಆದರೂ ಎಲ್ಲರೂ ಪಾಪಿಗಳೇ, ಎಲ್ಲರೂ ದೇವರ ಬೇಡಿಕೆಗಳ ವಿಷಯದಲ್ಲಿ ಕೊರತೆಯುಳ್ಳವರೇ, ಆದ್ದರಿಂದಲೇ ದೇವರು "ಹೆಚ್ಚು ಕಡಿಮೆ ಏನೂ ಇಲ್ಲ" ಎಂದು ಹೇಳಿದ್ದಾನೆ (ವ 9,22). ಒಬ್ಬ ವ್ಯಕ್ತಿಯು ಗುಂಡಿಯೊಳಗಿರಬಹುದು, ಮತ್ತೊಬ್ಬನು ಬೆಟ್ಟದ ಮೇಲಿರಬಹುದು ಆದರೆ ಯಾರಿಂದಲೂ ಮೇಲಕ್ಕೆ ಹೋಗಲು ಮತ್ತು ನಕ್ಷತ್ರಗಳನ್ನು ಮುಟ್ಟಲು ಆಗುವದಿಲ್ಲ. **24**

**3:24** *"ನೀತಿವಂತರೆಂದು ನಿರ್ಣಯ ಹೊಂದುವದು"*– ಮೂಲ ವಚನಭಾಗದಲ್ಲಿ ಇಲ್ಲ ಮತ್ತು ಯಾರು ಬೇಕಾದರು ಈ ವಚನಭಾಗವನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಬಹುದು ಅಥವಾ "ಆದರೆ" ಎಂಬ ಪದವನ್ನು ಸೇರಿಸಬಹುದು. ಯಾವುದೇ ಪರಿಸ್ಥಿತಿಯಲ್ಲಾದರೂ

ನೀತಿವಂತರಾಗುವದರ ಬಗ್ಗೆ ಮುಂದಿನ ವಾಕ್ಯವು ಸ್ಪಷ್ಟೀಕರಣ ಕೊಡುತ್ತದೆ – ಅದೇನೆಂದರೆ "ಕೃಪೆಯಿಂದಲೇ ಕ್ರಿಸ್ತಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು." ಬೇರೆ ಮಾತುಗಳಲ್ಲಿ ನೀತಿವಂತರೆಂದರೆ – ದೇವರ ನಿಯಮದ ಆಲಯದಲ್ಲಿ "ನೀತಿವಂತರೆಂದು ಘೋಷಿಸಲ್ಪಡುವದು" –ಸಂಪೂರ್ಣವಾಗಿ ದೇವರ ಕೃಪೆಯ ಮೇಲೆ ಆಧಾರವಾಗಿರುತ್ತದೆ.

*"ವಿಮೋಚನೆ"*– ಮತ್ತಾಯ 20:28; ಎಫೆ 1:7; 1 ಪೇತ್ರ 1:18-19; ಕೀರ್ತನೆ 78:35.
**25-26**

**3:25-26** ಇವುಗಳು ರೋಮಾ ಪತ್ರಿಕೆಯಲ್ಲಿರುವ ಪ್ರಮುಖ ಪದಗಳಾಗಿವೆ ಮತ್ತು ಇಡೀ ಸತ್ಯವೇದದಲ್ಲಿಯೇ ಪ್ರಮುಖ ಪದಗಳಾಗಿವೆ. ಯೇಸು ಕ್ರಿಸ್ತನು ಈ ಲೋಕಕ್ಕೆ ಬಂದು ತನ್ನನ್ನು ಯಜ್ಞವಾಗಿ ಅರ್ಪಿಸುವ ಮೂಲಕ ಪಾಪಗಳನ್ನು ಪರಿಹರಿಸಿದ ನಂತರ, ಪಶ್ಚಾತ್ತಪಪಟ್ಟು ತನ್ನಲ್ಲಿ ಭರವಸೆಯಿಟ್ಟವರನ್ನು ದೇವರು ಕ್ಷಮಿಸಿದನು. ಆತನು ಅವರನ್ನು ನರಕಕ್ಕೆ ಕಳುಹಿಸಲಿಲ್ಲ ಯಾಕಂದರೆ ನಂತರದಲ್ಲಿ ಯೇಸು ಕ್ರಿಸ್ತನ ಮೂಲಕ ಇದನ್ನು ಮಾಡಬಹುದೆಂಬದನ್ನು ಬಲ್ಲವನಾಗಿದ್ದನು. **25**

**3:25** *"ಸಮಾಧಾನಪಡಿಸುವಿಕೆ"*– ಅಂದರೆ ಪಾಪವನ್ನು ಪರಿಹರಿಸುವ ಮೂಲಕ ದೇವರ ಕೋಪವನ್ನು ಶಾಂತಪಡಿಸುವ ಯಜ್ಞ ಎಂಬದು ಇದರ ಅರ್ಥವಾಗಿದೆ. ಪಾಪವು ದೇವರಿಗೆ ಕೋಪ ಬರುವಂತೆ ಮಾಡುತ್ತದೆ (1:18). ಯೇಸು ಕ್ರಿಸ್ತನ ಯಜ್ಞದ ಮೂಲಕ ಪಾಪವನ್ನು ಪರಿಹರಿಸಿದ ನಂತರ, ದೇವ ಕೋಪ ಸಮಾಧಾನವಾಯಿತು, ಶಾಂತವಾಯಿತು ಮತ್ತು ನಂಬಿಕೆಯಿಂದ ತನ್ನಲ್ಲಿ ಭರವಸೆಯನ್ನಿಡುವ ಪಾಪಿಯನ್ನು ಆತನು ನ್ಯಾಯವಾಗಿ ಕ್ಷಮಿಸುತ್ತಾನೆ. **27**

**3:27** ಎಫೆ 2:8-10. ಒಂದುವೇಳೆ ಕ್ರಿಯೆಗಳ ಮೂಲಕ ರಕ್ಷಣೆಯನ್ನು ಸಾಧಿಸಿಕೊಳ್ಳುವ ಅವಕಾಶವಿದ್ದಿದ್ದರೆ, ಪರಲೋಕವು ತಮ್ಮನ್ನು ಕೊಚ್ಚಿಕೊಳ್ಳುವ, ತಮ್ಮಲ್ಲಿಯೇ ಹೆಚ್ಚಳಪಡುವ ಜನರಿಂದ ತುಂಬಿಹೋಗಿರುತ್ತಿತ್ತು (2:17; ಲೂಕ 18:11-12 ಹೋಲಿಸಿ ನೋಡಿರಿ). ಆದರೆ ಆತನ ಚಿತ್ತದನುಸಾರವಾಗಿ ನಡೆದುಕೊಳ್ಳುವವರು ದೇವರನ್ನು ಮಾತ್ರವೇ ಹೊಗಳುವವರಾಗಿರುತ್ತಾರೆ (1 ಕೊರಿಂಥ 1:29-31; ಎಫೆ 1:6,12; ಪ್ರಕ 7:9-10). **28**

- **3:28** 1:16-17; 5:1; 10:10; ಗಲಾ 2:16; 3:24; 5:4 ನೋಡಿರಿ. **29-30**

**3:29-30** ನಿಜವಾದ ದೇವರು ಒಬ್ಬನೇ, ಆದ್ದರಿಂದ ಯೆಹೂದ್ಯರು ದೇವರು ನಮ್ಮನ್ನು ಒಂದು ರೀತಿ ಮತ್ತು ಅನ್ಯರನ್ನು ಬೇರೊಂದು ರೀತಿ ರಕ್ಷಿಸುತ್ತಾನೆ ಎಂದು ನಿರೀಕ್ಷಿಸಬಾರದು. ದೇವರು ಪ್ರತಿಯೊಬ್ಬರನ್ನು ನಿರ್ದಿಷ್ಟವಾಗಿರುವ ಒಂದು ಮಾರ್ಗದ ಮೂಲಕ ರಕ್ಷಸುತ್ತಾನೆ, ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವದೇ ಆ ಮಾರ್ಗವಾಗಿದೆ. **31**

**3:31** ಮತ್ತಾಯ 5:17-18 ಹೋಲಿಸಿ ನೋಡಿರಿ. ಧರ್ಮಶಾಸ್ತ್ರ ಪಾಲನೆಯು ಯಾರನ್ನೂ ಅವರ ಪಾಪದಿಂದ ರಕ್ಷಿಸಲಾಗುವದಿಲ್ಲ ಎಂಬದಾಗಿ ಹೇಳುವದು ಧರ್ಮಶಾಸ್ತ್ರದ

ದೋಷವಲ್ಲ. ಬದಲಾಗಿ ಧರ್ಮಶಾಸ್ತ್ರವನ್ನು ಸರಿಯಾದ ಸ್ಥಳದಲ್ಲಿ ಉಪಯೋಗಿಸುವಾಗ ಅದು ಪಾಪವನ್ನು ಪ್ರಕಟಪಡಿಸುತ್ತದೆ ಹಾಗೂ ಖಂಡಿಸುತ್ತದೆ.

*"ಎಂದಿಗೂ ಇಲ್ಲ"*– ಕೆಜೆವಿ ಆವೃತ್ತಿಯಲ್ಲಿ "ದೇವರು ನಿರಾಕರಿಸುತ್ತಾನೆ ಎಂಬದಾಗಿ ಬರೆಯಲ್ಪಟ್ಟಿದೆ ಆದರೆ ಇಲ್ಲಿ ಗ್ರೀಕ್ ಭಾಷೆಯಲ್ಲಿ "ದೇವರು" ಅಥವಾ "ನಿರಾಕರಿಸುತ್ತಾನೆ" ಎಂಬ ಪದಗಳಿಗೆ ಯಾವ ಪದವನ್ನೂ ಕೊಟ್ಟಿಲ್ಲ ಬದಲಾಗಿ ಬಲವಾದ ನಕಾರಾತ್ಮಕ ಪದವನ್ನು ಅಂದರೆ "ಎಂದಿಗೂ ಇಲ್ಲ" ಎಂಬ ಪದವನ್ನು ಕೊಡಲಾಗಿದೆ.

# 41

**4:1** *"ಏನು"*– ಅಬ್ರಹಾಮನ ವಂಶದವರಾದ ಎಲ್ಲಾ ಯೆಹೂದ್ಯರ ಹಾಗೆ ಪೌಲನು ಹುಟ್ಟು ಯೆಹೂದ್ಯನ ರೀತಿಯಲ್ಲಿ ಮಾತನಾಡುತ್ತಿದ್ದಾನೆ (ಆದಿಕಾಂಡ 12 ರಿಂದ 25). ಯೆಹೂದ್ಯರು ತಮ್ಮ ಈ ಸಂಬಂಧದ ವಿಷಯದಲ್ಲಿ ಹೆಮ್ಮೆಪಡುವವರಾಗಿದ್ದರು ಮತ್ತು ಬಹುತೇಕರು ತಾವು ಶಾರೀರಿಕವಾಗಿ ಅಬ್ರಹಾಮನ ಸಂತತಿಯವರಾದ್ದರಿಂದ ದೇವರ ಮಕ್ಕಳಾಗಿದ್ದೇವೆ ಎಂಬದಾಗಿ ಅಂದುಕೊಂಡಿದ್ದರು (ಮತ್ತಾಯ 3:9; ಯೋಹಾನ 8:33,39). ಧರ್ಮಶಾಸ್ತ್ರದ ಆಜ್ಞೆಗಳು ಮತ್ತು ವಿಧಿಗಳನ್ನು ಕಾಪಾಡಿಕೊಳ್ಳುವದರ ಮೇಲೆ ರಕ್ಷಣೆಯು ಆಧಾರವಾಗಿದೆ ಎಂಬದಾಗಿ ಬಹುತೇಕ ಜನ ಅಂದುಕೊಂಡಿದ್ದರು ಹಾಗೂ ಪೌಲನು ಹೋಗುವ ಕಡೆಯಲ್ಲೆಲ್ಲಾ ಅವನನ್ನು ವಿರೋಧಿಸುತ್ತಿದ್ದರು (ಅಪೊ 9:23; 13:45; 14:5,19; 15:1; 17:5; 21:11; 2 ಕೊರಿಂಥ 11:24; 1 ಥೆಸ 2:14-16). ಇಲ್ಲಿ ಪೌಲನು ಅಬ್ರಹಾಮನ ವಿಷಯವನ್ನು ಯಾಕೆ ಪ್ರಸ್ತಾಪಿಸಿದ್ದಾನೆ? ನಂಬಿಕೆಯಿಂದ ನೀತಿವಂತರಾಗುತ್ತೇವೆ ಎಂಬ ತನ್ನ ಬೋಧನೆಯು ಹಳೆಯ ಒಡಂಬಡಿಕೆಗನುಸಾರವಾಗಿದೆ ಎಂಬದನ್ನು ನಿರೂಪಿಸಲು ಅಬ್ರಹಾಮನು ಮೂಲಪಿತೃ ಎಂಬದಾಗಿ ಹೇಳಿದ್ದಾನೆ. **2**

**4:2** 3:27 ನೋಡಿರಿ. **3**

**4:3** ಆದಿ 15:6. ಅಲ್ಲಿರುವ ನೋಟ್ ನೋಡಿರಿ. ಈ ಒಂದು ಅಂಶದಿಂದ ಪೌಲನು ತನ್ನ ಬೋಧನೆಯನ್ನು ಸಾಬೀತುಪಡಿಸಿದ್ದಾನೆ. ನಾವು ಸತ್ಯವನ್ನು ತಿಳಿದುಕೊಳ್ಳಲು ಬಯಸುವಾಗ "ಸತ್ಯವೇದ ಏನು ಹೇಳುತ್ತದೆ" ಎಂಬದು ಪ್ರಮುಖ ಪ್ರಶ್ನೆಯಾಗುತ್ತದೆ. **4**

**4:4** ಒಂದುವೇಳೆ ದೇವರು ಮಾನವರನ್ನು ಧಾರ್ಮಿಕ ಕಾರ್ಯಗಳ ಮೇರೆಗೆ ರಕ್ಷಿಸುವದಾದರೆ, ಅದರ ಅರ್ಥ ಅವರು ರಕ್ಷಣೆ ಸಂಪಾದಿಸಿಕೊಂಡಿದ್ದಾರೆ ಮತ್ತು ಹೆಚ್ಚಳಪಡಲು ಅವಕಾಶ ದೊರೆಯುತ್ತದೆ ಎಂಬದಾಗಿರುತ್ತದೆ. **5**

**4:5** *"ಪುಣ್ಯಕ್ರಿಯೆಗಳನ್ನು ಮಾಡದವನಾಗಿರದೆ"*– ಅಂದರೆ ರಕ್ಷಣೆ ಪಡೆದುಕೊಳ್ಳಲು ಕ್ರಿಯೆಗಳನ್ನು ಮಾಡದವನು. ರಕ್ಷಣೆ ಮತ್ತು ದೇವರು ಕೊಡುವ ನೀತಿವಂತಿಕೆಯನ್ನು ಹೊಂದಿಕೊಳ್ಳುವ ಏಕೈಕ ಮಾರ್ಗ, ನಂಬಿಕೆಯಿಂದ ಅದನ್ನು ದೇವರು ಕೊಡುವ

ಕೊಡುಗೆಯಾಗಿ ತೆಗೆದುಕೊಳ್ಳುವದಾಗಿದೆ (3:21-28; 6:23; 11:6). ಮಾನವರು ಸ್ವಾಭಾವಿಕ ಆಲೋಚಿಸುವದಕ್ಕೆ ಇದು ಖಂಡಿತವಾಗಿಯೂ ವಿರುದ್ಧವಾದದ್ದಾಗಿದೆ. ಜನರು ತಾವು ಮಾಡುವ ಕಾರ್ಯಗಳ ನಿಮಿತ್ತ ತಮ್ಮನ್ನು ನೀತಿವಂತರೆಂದುಕೊಳ್ಳಲು ಬಯಸುತ್ತಾರೆ ಮತ್ತು ತಾವು ಕರೆಯುವ ಯೋಗ್ಯತಾ ಕಾರ್ಯಗಳ ಮೂಲಕ ರಕ್ಷಣೆಯನ್ನು ಸಂಪಾದಿಸಿಕೊಳ್ಳಬಹುದೆಂದು ಯೋಚಿಸುತ್ತಾರೆ. ರಕ್ಷಣೆ ಹೊಂದಲು ನಾವು "ಕ್ರಿಯೆಗಳನ್ನು" ಮಾಡಬೇಕೆಂದು ಜನರು ಹೇಳುತ್ತಾರೆ. ಆದರೆ ದೇವರು ಹೇಳುವದು ರಕ್ಷಣೆ ಹೊಂದಲು "ಯಾವ ಕ್ರಿಯೆಗಳನ್ನೂ ಮಾಡಬೇಡಿರಿ." ದೇವರು ಯಾರನ್ನು ನೀತಿವಂತರೆಂದು ನಿರ್ಣಯಿಸುತ್ತಾನೆ ಎಂಬದನ್ನು ಗಮನಿಸಿರಿ – "ಪಾಪಾತ್ಮರನ್ನು." ದೇವರ ದೃಷ್ಟಿಯಲ್ಲಿ ಪಾಪವಿಲ್ಲದವನು ಒಬ್ಬನೂ ಇಲ್ಲ – 3:9-19; ಮತ್ತಾಯ 7:11. ಆದರೆ ಯಾರೂ ತೀರಾ ಕೆಟ್ಟವರಲ್ಲವಾದರೂ ಜನರು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟು ಪಶ್ಚಾತ್ತಾಪಪಡುವದಾದರೆ ದೇವರು ಅವರನ್ನು ರಕ್ಷಿಸುತ್ತಾನೆ. ಪೌಲನು (ಅಪೊ 8:3; 9:1-5), ಮತ್ತು ಶಿಲುಬೆಯ ಮೇಲಿದ್ದ ಕಳ್ಳನ ಬಗ್ಗೆ ಆಲೋಚಿಸಿರಿ (ಲೂಕ 23:39-43). ಹಾಗೆಯೇ ಯೆಶಾಯ 55:7; 1 ಕೊರಿಂಥ 6:9-11 ನೋಡಿರಿ. **6-8**

**4:6-8** ಇಸ್ರಾಯೇಲ್ಯರ ಪ್ರಸಿದ್ಧ ಅರಸನಾದ ದಾವೀದನು, ಅಬ್ರಹಾಮನ ವಿಷಯದಲ್ಲಿ ಹೇಳಿರುವದನ್ನು ಒಪ್ಪಿಕೊಂಡನು. ಕೀರ್ತನೆ 32:1-2 ನೋಡಿರಿ. ದೇವರು ಜನರನ್ನು ಕ್ಷಮಿಸುತ್ತಾನೆ ಮತ್ತು ಅವರಿಗೂ ಕ್ಷಮಿಸುವ ವರವನ್ನು ಕೊಡಲು ಬಯಸುತ್ತಾನೆ ಕಾರಣ ಅವರು ಒಳ್ಳೆಯವರು ಅಥವಾ ಅರ್ಹರು ಎಂಬದಾಗಿಯಲ್ಲ ಬದಲಾಗಿ ಆತನು ಕೃಪೆಯುಳ್ಳವನಾಗಿದ್ದಾನೆ (ಕೀರ್ತನೆ 86:5; ಮೀಕ 7:18-19; ಮತ್ತಾಯ 9:5-7; 12:31; ಅಪೊ 13:38; ಎಫೆ 1:7). ಇಲ್ಲಿ ನೀತಿವಂತರೆಂಬ ನಿರ್ಣಯವೆಂದರೆ ಏನೆಂದು ನೋಡಬಹುದು – ಈಗಿನಿಂದ ದೇವರು ನೀತಿವಂತರೆಂದು ನಿರ್ಣಯಿಸಲ್ಪಟ್ಟವರ ಪಾಪಗಳನ್ನು ಅವರ ವಿರುದ್ಧವಾಗಿ ಎಣಿಸುವದಿಲ್ಲ (8:33-34). ಇದಕ್ಕೆ ಕಾರಣ ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿರುವ ತ್ಯಾಗ ಅವರ ಭವಿಷ್ಯದ ಪಾಪಗಳನ್ನು ಪರಿಹರಿಸಿದೆ ಮತ್ತು ಅವರು ಆತನೊಂದಿಗೆ ಶಾಶ್ವತವಾಗಿ ಐಕ್ಯಗೊಂಡಿದ್ದಾರೆ. ಯೇಸು ಕ್ರಿಸ್ತನ ಪರಿಪೂರ್ಣವಾದ ನೀತಿವಂತಿಕೆಯು ಅವರೊಳಗೆ ನೆಲೆಯಾಗುತ್ತದೆ, ಆದ್ದರಿಂದ ಅವರ ಮತ್ತು ಆತನ ನೀತಿವಂತಿಕೆಯು ಏಕರೀತಿಯದ್ದಾಗಿರುತ್ತದೆ. ಆತನ ನೀತಿವಂತಿಕೆಯಲ್ಲಿ ಯಾವ ದೋಷವಾಗಲಿ ಅಥವಾ ಕಲೆಯಾಗಲಿ ಇಲ್ಲ ಮತ್ತು ಎಂದಿಗು ಸಿಗುವದೂ ಇಲ್ಲ. ಆದ್ದರಿಂದ ಆತನಲ್ಲಿ ಅವರಿಗಿರುವ ನೀತಿವಂತಿಕೆಯಲ್ಲಿ ಯಾವ ದೋಷ ಅಥವಾ ಕಲೆ ಈಗ ಮಾತ್ರವಲ್ಲ, ಬದಲಾಗಿ ಎಂದೆಂದಿಗೂ ಸಿಗುವದಿಲ್ಲ. ಶಿರಸ್ಸು (ಎಫೆ 1:22-23) ನೀತಿಯುಳ್ಳದ್ದಾಗಿರುವ ಹಾಗೆಯೇ, ನಿಜವಾದ ವಿಶ್ವಾಸಿಗಳಿಂದ ಕೂಡಿರುವ ದೇಹವು ನೀತಿಯುಳ್ಳದ್ದಾಗಿರುವದು. "ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ" ಪದಗಳನ್ನು ಗಮನಿಸಿರಿ. "ಇಲ್ಲ" ಎಂಬದಾಗಿ

ಭಾಷಾಂತರ ಮಾಡಲಾಗಿರುವ ಗ್ರೀಕ್ ಪದವನ್ನು "ಎಂದಿಗೂ ಇಲ್ಲ" ಎಂಬದಾಗಿಯೂ ಭಾಷಾಂತರ ಮಾಡಬಹುದಾಗಿದೆ. ಇದು ವಿಶ್ವಾಸಿಗಳಿಗೆ ದೇವರ ಎದುರಿನಲ್ಲಿರುವ ಅದ್ಭುತವಾದ ಸ್ಥಾನವಾಗಿದೆ. ಅವರಿಗೆ (ಪಾಪದ ಸಂಬಳವಾಗಿರುವ) ನಿತ್ಯ ಮರಣ ಮತ್ತು ನರಕದ ಶಿಕ್ಷೆ ಎದುರಾಗುವದಿಲ್ಲ. (ಆದರೆ ಅವರ ತಂದೆಯಾಗಿ, ಅವರು ತಪ್ಪು ಮಾಡುವಾಗ ಆತನು ಅವರನ್ನು ಶಿಕ್ಷಿಸುತ್ತಾನೆ ಮತ್ತು ಕ್ರಮಶಿಕ್ಷಣಕ್ಕೊಳಪಡಿಸುತ್ತಾನೆ – ಇಬ್ರಿ 12:5-11). ಆದರೆ ದೇವರು ವಿಶ್ವಾಸಿಯ ಪಾಪವನ್ನು ಅವನ ಲೆಕ್ಕಕ್ಕೆ ಎಣಿಸದೆ ಹೋದರೆ, ಅವನು ಪುನಃ ಪಾಪ ಮಾಡಲು ಪ್ರೋತ್ಸಾಹಪಡಿಸಿದಂತಾಗುವದಿಲ್ಲವೇ? ಇಲ್ಲ. ದೇವರನ್ನು ಪ್ರೀತಿಸಲು ಮತ್ತು ದೇವರಿಗಾಗಿ ಜೀವಿಸಲು ಅವನನ್ನು ಪ್ರೋತ್ಸಾಹಪಡಿಸುತ್ತದೆ. 6ನೇ ಅಧ್ಯಾಯದ ನೋಟ್ಸ್ ನೋಡುವದಾದರೆ ಪಾಪ ಮಾಡುವ ವಿಶ್ವಾಸಿಗಳಿಗೆ ದೇವರು ತೋರಿಸುವ ಕೃಪೆಯ ಫಲಿತಾಂಶಗಳ ಬಗ್ಗೆ ಪೌಲನು ಹೇಳಿರುವ ವಿಷಯಗಳನ್ನು ತಿಳಿಯಬಹುದು. **9**

**4:9** *"ಸುನ್ನತಿ"*– ಅಂದರೆ ಅಬ್ರಹಾಮನ ಸಂತತಿಯವರಾದ, ಯೆಹೂದ್ಯರ ಬಗ್ಗೆ ಆತನು ಮಾತನಾಡುತ್ತಿದ್ದಾನೆ.

*"ಸುನ್ನತಿಯಿಲ್ಲದವರು"*– ಯೆಹೂದ್ಯರಲ್ಲದವರು ಅಂದರೆ ಅನ್ಯಜನರು. **10-12**

**4:10-12** ಇಲ್ಲಿ ಯೆಹೂದ್ಯರ ಅಹಂಕಾರಕ್ಕೆ ವಾಕ್ಯದ ಮೂಲಕ ದೊಡ್ಡ ಆಘಾತ ನೀಡಿರುವದನ್ನು ನೋಡಬಹುದು. ಅಬ್ರಹಾಮನು ಸುನ್ನತಿ ಮಾಡಿಸಿಕೊಳ್ಳುವ ಮೊದಲೇ ದೇವರು ಅವನನ್ನು ನೀತಿವಂತನನ್ನಾಗಿ ಮಾಡಿದನು – ಅಂದರೆ ಆಗ ಅವನಿನ್ನೂ ಅನ್ಯನಾಗಿಯೇ ಇದ್ದನು! ಆದಿಕಾಂಡ 15ನೇ ಅಧ್ಯಾಯದಲ್ಲಿ ದೇವರು ಅಬ್ರಹಾಮನನ್ನು ನೀತಿವಂತನನ್ನಾಗಿ ಮಾಡಿದನು. ಆದರೆ ಅಬ್ರಹಾಮನು 17ನೇ ಅಧ್ಯಾಯದ ನಂತರ, ತಾನು ನೀತಿವಂತನೆಂದು ಎಣಿಸಲ್ಪಟ್ಟ ಬಳಿಕ ಸುನ್ನತಿ ಮಾಡಿಸಿಕೊಂಡನು. ಸುನ್ನತಿಯ ಸಂಸ್ಕಾರ ಮತ್ತು ಅಬ್ರಹಾಮನ ರಕ್ಷಣೆಗೆ ಯಾವುದೇ ಸಂಬಂಧವಿಲ್ಲ ಎಂಬದನ್ನು ತೋರಿಸಲು ದೇವರು ಕಾರ್ಯಗಳನ್ನು ಈ ರೀತಿ ಏರ್ಪಡಿಸಿದನು. ಅಬ್ರಹಾಮನು ನಂಬಿಕೆಯಿಂದ ನೀತಿವಂತನೆಂದು ನಿರ್ಣಯಿಸಲ್ಪಟ್ಟನು, ಅಬ್ರಹಾಮನನ್ನು ಹಿಂಬಾಲಿಸುವವರು ಯೆಹೂದ್ಯರಾಗಲಿ ಅಥವಾ ಅನ್ಯರಾಗಲಿ, ಇದೇ ರೀತಿ ನೀತಿವಂತರೆಂದು ಎಣಿಸಲ್ಪಡಬೇಕು. ಅಬ್ರಹಾಮನು ಒಬ್ಬನೇ ನಿಜವಾದ ದೇವರಲ್ಲಿ ನಂಬಿಕೆಯಿಡುವವರೆಲ್ಲರಿಗೆ "ಮೂಲಪಿತೃ" ಆಗಿದ್ದಾನೆ. ಇದರ ಅರ್ಥ ದೇವರು ಜನರಿಗೆ ಯಾವ ರೀತಿ ನೀತಿವಂತಿಕೆಯನ್ನು ಕೊಡುತ್ತಾನೆ ಎಂಬದು ಮೊದಲು ತೋರಿಸಲಾಯಿತು. ಸುನ್ನತಿಯು ಅಬ್ರಹಾಮನು ಮೊದಲೇ ಪಡೆದಿದ್ದ ಕಾರ್ಯಕ್ಕೆ ದೊರೆತ ಸಹಿ ಮತ್ತು ಮುದ್ರೆಯಾಗಿತ್ತು. (ಇದೇ ವಿಷಯವನ್ನು ಇಂದು ದೀಕ್ಷಾಸ್ನಾನದ ವಿಷಯದಲ್ಲಿಯೂ ಹೇಳಬಹುದಾಗಿದೆ. ಇದು ಕೇವಲ ಗುರುತಾಗಿದೆ ಮತ್ತು ದೇವರು ನಂಬಿಕೆಯ ಮೂಲಕ ಕೊಡುವ ರಕ್ಷಣೆ ಮತ್ತು ನೀತಿವಂತಿಕೆಯನ್ನು ಹೊಂದದವನಿಗೆ ಇದು ಪ್ರಯೋಜನವಿಲ್ಲದ್ದಾಗಿದೆ.) **13-15**

**4:13-15** ದೇವರು ಮೋಶೆಗೆ ಕೊಟ್ಟ ಧರ್ಮಶಾಸ್ತ್ರದ ಹೊರತಾಗಿಯೇ ಅಬ್ರಹಾಮನನ್ನು ನೀತಿವಂತನೆಂದು ಎಣಿಸಿದನು (ಆದರೆ ರಕ್ಷಣೆ ಹೊಂದನು ಧರ್ಮಶಾಸ್ತ್ರದಂತೆ ಜೀವಿಸಬೇಕೆಂದು ಯೆಹೂದ್ಯರು ಜನರಿಗೆ ಕಲಿಸುತ್ತಿದ್ದರು) ಎಂಬದನ್ನು ಪೌಲನು ಮತ್ತಷ್ಟು ವಿವರಿಸುತ್ತಿದ್ದಾನೆ. ದೇವರು ಅಬ್ರಹಾಮನನ್ನು ನೀತಿವಂತನೆಂದು ನಿರ್ಣಯಿಸಿದ ನೂರಾರು ವರ್ಷಗಳ ನಂತರವೇ ಧರ್ಮಶಾಸ್ತ್ರವನ್ನು ಕೊಟ್ಟನು (ಗಲಾ 3:16-18). **13**

**4:13** ದೇವರು ಅಬ್ರಹಾಮನಿಗೆ ಕಾನಾನ್ ದೇಶವನ್ನು ವಾಗ್ದಾನ ಮಾಡಿದನು (ಆದಿ 15:7,18). ಇದಕ್ಕೆ ಕಾರಣ ಅಬ್ರಹಾಮನು ದೇವರನ್ನು ನಂಬಿದನು. ದೇವರು ಧರ್ಮಶಾಸ್ತ್ರವನ್ನು ಕೊಡುವದಕ್ಕಿಂತ ಮೊದಲೇ ಈ ವಾಗ್ದಾನ ಮಾಡಿದನು. ಇದಲ್ಲದೇ ಇಡೀ ಲೋಕವು ಅಬ್ರಹಾಮನ ಮೂಲಕ ಆಶೀರ್ವಾದ ಹೊಂದುವದು ಎಂಬದಾಗಿಯೂ ಆತನು ವಾಗ್ದಾನ ಮಾಡಿದನು – ಆದಿ 12:1-3. ಅಬ್ರಹಾಮನ ಸಂತತಿಯವನಾದ ಮೆಸ್ಸೀಯನ (ಕ್ರಿಸ್ತನ) ಮೂಲಕ ಆಶೀರ್ವಾದ ದೊರೆಯುವದಾಗಿತ್ತು (ಕೀರ್ತನೆ 2; 72:5-11; ಮತ್ತಾಯ 1:1 ನೋಡಿರಿ). ಮೆಸ್ಸೀಯನು (ಮತ್ತು ಆತನೊಂದಿಗೆ ಆತನಲ್ಲಿ ನಂಬಿಕೆಯನ್ನಿಡುವವರೆಲ್ಲರು) ಇಡೀ ಲೋಕದ ಬಾಧ್ಯಸ್ಥರಾಗಿದ್ದಾರೆ (8:17; ಇಬ್ರಿ 1:2). **14**

**4:14** ದೇವರ ಧರ್ಮಶಾಸ್ತ್ರದ ಪಾಲನೆಯಿಂದ ಒಂದುವೇಳೆ ಜನರು ದೇವರ ಬಾಧ್ಯಸ್ಥರಾಗುವದಾದರೆ, ಆಗ ದೇವರ ವಾಗ್ದಾನಗಳಲ್ಲಿನ ನಂಬಿಕೆ ಮತ್ತು ವಾಗ್ದಾನಗಳೇ ಸಂಪೂರ್ಣವಾಗಿ ಅನಾವಶ್ಯವಾಗುತ್ತವೆ. ಆದರೆ ದೇವರ ಧರ್ಮಶಾಸ್ತ್ರ ಪೂರ್ತಿಯಾಗಿ ಪಾಲನೆ ಮಾಡಲು ಜನರಿಂದ ಆಗುವದಿಲ್ಲ, ಆದ್ದರಿಂದ ಕ್ರಿಯೆಗಳ ಮೂಲಕ ರಕ್ಷಣೆ ಹೊಂದಬಹುದೆಂಬ ಆಲೋಚನೆಯು ನಿರರ್ಥಕವಾಗಿದೆ. **15**

**4:15** ದೇವರ ಧರ್ಮಶಾಸ್ತ್ರ ಪಾಲನೆಯಿಂದ ನೀತಿವಂತರಾಗಲು ಪ್ರಯತ್ನಿಸುವವರು ತಮ್ಮನ್ನು ಹೆಚ್ಚಾಗಿ ದೇವರ ಕೋಪಕ್ಕೆ ಗುರಿಮಾಡಿಕೊಳ್ಳುತ್ತಾರೆ. ಯಾಕಂದರೆ ಧರ್ಮಶಾಸ್ತ್ರ ಪಾಲನೆಗಿಂತ ಅವರು ಅದನ್ನು ಹೆಚ್ಚಾಗಿ ಉಲ್ಲಂಘಿಸುತ್ತಾರೆ ಮತ್ತು ಧರ್ಮಶಾಸ್ತ್ರ ಪಾಲಿಸದೆ ಅಪರಾಧಿಗಳಾಗುವದರಿಂದ ಅವರ ಅಪರಾಧಗಳು ಅಧಿಕವಾಗುತ್ತವೆ (5:20; 7:7-11; ಗಲಾ 3:10 ಹೋಲಿಸಿ ನೋಡಿರಿ). ರಕ್ಷಣೆ ಹೊಂದಲು ಮೋಶೆಯ ಧರ್ಮಶಾಸ್ತ್ರ ಪಾಲನೆ ಮಾಡುವದು ಅವಶ್ಯವಾಗಿದ್ದರೆ, ಆಗ ಯಾರೂ ರಕ್ಷಣೆ ಹೊಂದುತ್ತಿರಲಿಲ್ಲ. ಯೆಹೂದ್ಯರು ಧರ್ಮಶಾಸ್ತ್ರ ಪಾಲನೆ ಮಾಡಲಿಲ್ಲ ಮತ್ತು ಅನ್ಯರಿಗೆ ಪಾಲನೆ ಮಾಡಲು ಧರ್ಮಶಾಸ್ತ್ರವೇ ಇರಲಿಲ್ಲ. **16**

**4:16** ರಕ್ಷಣೆಯ ವಾಗ್ದಾನ (ಮತ್ತು ಅದರೊಂದಿಗೆ ದೊರೆಯುವ ಸ್ವಾಸ್ಥ್ಯ) ಧರ್ಮಶಾಸ್ತ್ರ ಪಾಲನೆಗೆ ಸಂಬಂಧವಿಲ್ಲದ್ದಾಗಿದೆಯಾದರೂ, ಯೆಹೂದ್ಯರಾಗಲಿ ಅನ್ಯರಾಗಲಿ ಎಲ್ಲರೂ ಸಮಾನ ರೀತಿಯಲ್ಲಿ ನಂಬಿಕೆಯುಳ್ಳವರಾಗಿರಬೇಕೆಂದು ಬಯಸುತ್ತದೆ. ನಂಬಿಕೆಯೊಂದನ್ನೇ

ರಕ್ಷಣೆಯ ಮಾರ್ಗವನ್ನಾಗಿ ದೇವರು ಯಾಕೆ ನೇಮಿಸಿದ್ದಾನೆ ಎಂಬದನ್ನು ಈ ವಾಕ್ಯದಲ್ಲಿ ಗಮನಿಸಿರಿ – ಯಾಕಂದರೆ ಆತನು ರಕ್ಷಣೆಯನ್ನು ಕೆಲಸಕ್ಕೆ ಸಂಬಳವನ್ನಾಗಿಯಲ್ಲ ಬದಲಾಗಿ ವರವಾಗಿ ಕೊಡಲು ನಿಶ್ಚಯಿಸಿಕೊಂಡಿದ್ದಾನೆ. **17**

**4:17** ಆದಿ 17:5. ಅಬ್ರಹಾಮನು ನಂಬುವವರೆಲ್ಲರಿಗೆ ಆತ್ಮೀಕ "ತಂದೆಯಾಗಿದ್ದಾನೆ" (ವ. 11). ಈ ವಾಕ್ಯದ ಕಡೆಯ ಭಾಗದಲ್ಲಿ ಪೌಲನು ಅಬ್ರಹಾಮನ ನಂಬಿಕೆಯ ಗುಣಲಕ್ಷಣವನ್ನು ವಿವರಿಸಲು ಪ್ರಾರಂಭಿಸಿದ್ದಾನೆ. ಅವನ ನಂಬಿಕೆಯು ಎಲ್ಲಾ ಕಾರ್ಯಗಳನ್ನು ಮಾಡಲು ಮತ್ತು ತಾನೇನು ಮಾಡುವನೆಂಬದನ್ನು ಮುಂದಾಗಿಯೇ ಪ್ರಕಟಪಡಿಸಲು ಸಮರ್ಥನಾದ ಸರ್ವಶಕ್ತ ಹಾಗೂ ಸರ್ವಜ್ಞಾನಿಯಾದ ಸೃಷ್ಟಿಕರ್ತನಲ್ಲಿತ್ತು.

*"ಸತ್ತವರನ್ನು ಬದುಕಿಸುವವನು"*– ಇಬ್ರಿ 11:19,35 ನೋಡಿರಿ. **18-21**

**4:18-21** ಅಬ್ರಹಾಮನ ನಂಬಿಕೆಯು ಯಾವ ರೀತಿಯದ್ದಾಗಿತ್ತು? ಮಾನುಷಿಕವಾಗಿ ಯೋಚಿಸುವದಾದರೆ ದೇವರ ವಾಗ್ದಾನ ನೆರವೇರಲು ಯಾವ ನಿರೀಕ್ಷೆ ಇಲ್ಲದಿರುವಾಗಲೂ ಅವನು ದೇವರನ್ನು ನಂಬಿದನು (ವ 18; ಆದಿ 15:4-5). ದೇವರು ವಾಗ್ದಾನ ಮಾಡಿದ ಕಾರ್ಯ ಅಸಾಧ್ಯವೆಂದು ತೋರಿದ್ದಾಗ್ಯೂ ಅವನು ದೇವರನ್ನು ನಂಬಿದನು (ವ 19). ಸಾರಳು ಅಬ್ರಹಾಮನಿಗೆ ಮಗನನ್ನು ಹೆರುವಳು ಎಂದು ದೇವರು ಹೇಳಿದಾಗ ಅಬ್ರಹಾಮನಿಗೆ ಸುಮಾರು ನೂರು ವರ್ಷವಾಗಿತ್ತು ಮತ್ತು ಸಾರಳಿಗೆ ತೊಂಭತ್ತು ವರ್ಷವಾಗಿತ್ತು – ಆದಿ 17:1,15,16. ಅವನು ತನ್ನ ಸ್ವಂತ ಸಾಮರ್ಥವನ್ನಲ್ಲ ಬದಲಾಗಿ ದೇವರನ್ನು ನಂಬಿದನು. ಅವನು ಸರಳವಾಗಿ ದೇವರನ್ನು ನಂಬಿದನು ಯಾಕಂದರೆ ವಾಗ್ದಾನ ಮಾಡಿದಾತನು ದೇವರಾಗಿದ್ದನು ಮತ್ತು ದೇವರು ತಾನು ಹೇಳಿದಂತೆ ಮಾಡಲು ಶಕ್ತನಾಗಿದ್ದಾನೆ ಹಾಗೂ ಖಂಡಿತವಾಗಿಯೂ ಮಾಡುವನು ಎಂಬ ದೃಢತೆಯುಳ್ಳವನಾಗಿದ್ದನು. ದೇವರು ತಾನು ಹೇಳಿದ್ದನ್ನು ಮಾಡುವದಾಗಿ ಕೇವಲ ಮಾತುಗಳ ಮೂಲಕ ತಿಳಿಸಿದನೇ ಹೊರತು ಅದಕ್ಕೆ ಯಾವುದೇ ಸಾಕ್ಷಿ ಹಾಗೂ ಗುರುತನ್ನು ಕೊಡಲಿಲ್ಲ. ಮತ್ತು ಅಬ್ರಹಾಮನು ಅದನ್ನು ನಂಬಿದನು (ವ 20,21) ಯಾಕಂದರೆ ಅವನು ನಿಜವಾಗಿಯೂ ದೇವರನ್ನು ನಂಬಿದನು ಮತ್ತು ದೇವರು ಸತ್ಯವಂತನು ಎಂಬ ಭರವಸೆಯುಳ್ಳವನಾಗಿದ್ದನು. ಇದು ಅಬ್ರಹಾಮನ ನಂಬಿಕೆ ಮತ್ತು ನಿಜವಾದ ನಂಬಿಕೆಯ ವಿಶೇಷವಾದ ಗುಣಲಕ್ಷಣವಾಗಿದೆ. **22**

**4:22** ವಚನ 3. **23-24**

**4:23-24** ರಕ್ಷಣೆ ಹೊಂದಿ ಲೋಕಕ್ಕೆ ಬಾಧ್ಯನಾಗಬೇಕಾದರೆ (ವ 13) ನಮ್ಮ ನಂಬಿಕೆಯು ಅಬ್ರಹಾಮನಂತಹ ನಂಬಿಕೆಯಾಗಿರಬೇಕು. ಜನರಂದುಕೊಳ್ಳುವ ಪ್ರಾಕರ ಯಾವುದೋ ದೇವರು ಅಥವಾ ದೇವತೆಯನ್ನು ನಂಬಿದರೆ ಸಾಲದು. ಕರ್ತನಾದ ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರನ್ನು ನಾವು ನಂಬಬೇಕು (ವ 24; 10:9) ಯಾಕಂದರೆ ಆತನೊಬ್ಬನೇ ನಿಜವಾದ ದೇವರಾಗಿದ್ದಾನೆ. ಇದಲ್ಲದೆ ದೇವರು ಒಬ್ಬನೇ ಆತನು

ಸರ್ವಶಕ್ತನು ಎಂಬದಾಗಿ ಮಾತ್ರವೇ ನಂಬಿದರೆ ಸಾಲದು (ಯಾಕೋಬ 2:19 ನೋಡಿರಿ). ಆತನು ನಮಗಾಗಿ ಮಾಡಿರುವ ವಾಗ್ದಾನಗಳನ್ನು ನಾವು ನಂಬಬೇಕು, ಆತನಲ್ಲಿ ಮತ್ತು ಆತನ ವಾಕ್ಯಗಳಲ್ಲಿ ನಾವು ಭರವಸೆಯನ್ನಿಡಬೇಕು (ಇಬ್ರಿ 11:6. ಆತನು ತನ್ನ ಕುಮಾರನ ಮೂಲಕ ಕೊಟ್ಟಿರುವ ಕೆಲವು ವಾಗ್ದಾನಗಳ ಬಗ್ಗೆ ಆಲೋಚಿಸಿರಿ – ಯೋಹಾನ 3:16; 4:14; 5:24; 6:37; 7:38; 11:25-26; ಪ್ರಕ 3:20; ಮತ್ತಾಯ 11:28). ನಾವು ಆತನನ್ನು ನಂಬುವಾಗ ಅಬ್ರಹಾಮನನ್ನು ನೀತಿವನೆಂದು ಎಣಿಸಿದ ಹಾಗೆಯೇ ಆತನು ನಮ್ಮನ್ನು ನೀತಿವಂತರೆಂದು ಎಣಿಸುತ್ತಾನೆ. **25**

**4:25** ವಿಶ್ವಾಸಿಗಳ ರಕ್ಷಣೆಯು ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನವೆಂಬ ಅಡಿಪಾಯದ ಮೇಲೆ ನೆಲೆಯಾಗಿದೆ (1 ಕೊರಿಂಥ 15:1-4). ಯೇಸು ಕ್ರಿಸ್ತನು ಪಾಪಿಗಳ ಸ್ಥಾನದಲ್ಲಿ, ಅವರಿಗಾಗ ಬೇಕಿದ್ದ ಮರಣವನ್ನು ತಾನು ಅನುಭವಿಸಿದನು. ದೇವರು ಕ್ರಿಸ್ತನ ಯಜ್ಞವನ್ನು ಅಂಗೀಕರಿಸಿದನು, ನಮ್ಮ ಪಾಪಗಳನ್ನು ಪರಿಹರಿಸಿದನು, ನಮ್ಮನ್ನು ಕ್ಷಮಿಸಿದನು ಎಂಬದಕ್ಕೆ ಆತನ ಪುನರುತ್ಥಾನವು ಸಾಕ್ಷಿಯಾಗಿದೆ. ಯೇಸು ಕ್ರಿಸ್ತನು ಸತ್ತವರೊಳಗಿಂದ ಎದ್ದಿರುವದರಿಂದ ವಿಶ್ವಾಸಿಗಳಾದ ನಾವು ನೀತಿವಂತರೆಂದು ಎಣಿಸಲ್ಪಟ್ಟಿದ್ದೇವೆ, ಪಾಪದಿಂದ ಬಿಡುಗಡೆ ಹೊಂದಿದ್ದೇವೆ ಮತ್ತು ದೇವರೆದುರಿನಲ್ಲಿ ನೀತಿಯುಳ್ಳವರಾಗಿದ್ದೇವೆ ಎಂಬದನ್ನು ನೋಡಬಹುದಾಗಿದೆ ಹಾಗೂ ನೋಡಬೇಕಾಗಿದೆ. ದೇವರ ಎದುರಿನಲ್ಲಿ ಆತನೇ ನಮ್ಮ ನೀತಿಯಾಗಿದ್ದಾನೆ – 1 ಕೊರಿಂಥ 1:30-31.

# 5 1

**5:1** ಎಲ್ಲರೂ ಪಾಪಿಗಳಾಗಿದ್ದೇವೆ ಮತ್ತು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವದೊಂದೇ ರಕ್ಷಣೆ ಮಾರ್ಗವೆಂದು ಪೌಲನು ನಮಗೆ ತೋರಿಸಿದ್ದಾನೆ. ಈ ಅಧ್ಯಾಯದಲ್ಲಿ ದೇವರು ನೀತಿವಂತರನ್ನಾಗಿ ಎಣಿಸಿರುವವರ ಬಗ್ಗೆ ಇನ್ನೂ ಹೆಚ್ಚಿನ ವಿಷಯಗಳನ್ನು ಹೇಳಿದ್ದಾನೆ. ವಿಶ್ವಾಸಿಗಳ ರಕ್ಷಣೆಯು ಖಂಡಿತ ಎಂಬದೇ ಅವನ ಧ್ಯೇಯವಾಗಿದೆ. ಅವರೆಲ್ಲರೂ ಹೊಸ ಅವಸ್ಥೆಯೊಳಗೆ ಪ್ರವೇಶಿಸಿದ್ದಾರೆ ಮತ್ತು ಪೌಲನು ಕೆಳಗಿನ ಸಂಗತಿಗಳನ್ನು ಅವರ ವಿಷಯದಲ್ಲಿ ಹೇಳಿದಾನೆ. ಅವರು ದೇವರೊಂದಿಗೆ ಸಮಾಧಾನದಿಂದಿರುವರು (ವ 1) ಅವರಿಗೆ ಸತತವಾಗಿ ದೇವರ ಪ್ರಸನ್ನತೆಗೆ ಹೋಗುವ ಅವಕಾಶವಿರುತ್ತದೆ (ವ 2) ಅವರಿಗೆ ನಿರೀಕ್ಷೆ ಇರುತ್ತದೆ (ವ 2) ಅವರಿಗೆ ಶ್ರಮೆಗಳಲ್ಲಿ ಸಂತೋಷದಿಂದ ಜೀವಿಸುವ ಸಾಮರ್ಥ್ಯವಿರುತ್ತದೆ (ವ 3) ಅವರಿಗೆ ಶ್ರಮೆಗಳು ನಿರೀಕ್ಷೆ ಹೆಚ್ಚಿಸುತ್ತವೆ ಎಂಬದು ಗೊತ್ತಿರುತ್ತದೆ (ವ 4) ಅವರಿಗೆ ಪವಿತ್ರಾತ್ಮನ ವರವಿರುತ್ತದೆ (ವ 5) ಅವರಿಗೆ ದೇವರ ಪ್ರೀತಿಯ ತಿಳುವಳಿಕೆಯಿರುತ್ತದೆ (ವ 5-8) ಅವರಿಗೆ ಸಂಪೂರ್ಣವಾದ ಭದ್ರತೆಯಿರುತ್ತದೆ (ವ 9,10) ಅವರಿಗೆ ದೇವರಲ್ಲಿ ಸಂತೋಷವಿರುತ್ತದೆ (ವ 11) ಅವರಿಗೆ

ದೇವರೊಂದಿಗಿನ ಹೊಸ ಸಂಬಂಧದಿಂದ ನಿತ್ಯಜೀವ ದೊರೆಯುತ್ತದೆ (ವ 12-21) ಯಾಕಂದರೆ ಅವರು ಅಣಗಿಸಲಾಗದ ಕೃಪೆಯ ರಂಗದೊಳಗೆ ಪ್ರವೇಶಿಸಿದ್ದಾರೆ. ಯಾಕಂದರೆ ದೇವರು ವಿಶ್ವಾಸಿಗಳನ್ನು ನೀತಿವಂತರೆಂದು ಎಣಿಸುವದರಿಂದ ಅವರು ಆತನೊಂದಿಗೆ ಸಮಾಧಾನದಲ್ಲಿರುತ್ತಾರೆ. ಕೊಲೊ 1:20; ಎಫೆ 2:14-17; 2 ಕೊರಿಂಥ 5:18-21; ಯೆಶಾಯ 32:17; 53:5 ಹೋಲಿಸಿ ನೋಡಿರಿ. ಇಲ್ಲಿ ಸಮಾಧಾನ ಎಂದರೆ ದೇವರು ಮತ್ತು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟವರ ನಡುವೆಯ ಸಂಧಾನವಾಗಿದೆ. **2**

**5:2** *"ಪ್ರವೇಶ"*– ವಿಶ್ವಾಸಿಗಳು ಯಾವ ಸಮಯದಲ್ಲಾದರೂ ದೇವರ ಪ್ರಸನ್ನತೆಗೆ ಹೋಗಬಹುದು (ಎಫೆ 2:18; 3:12; ಇಬ್ರಿ 10:19-22). ದೇವರ ಪ್ರಸನ್ನತೆಯೊಳಗೆ ಪ್ರವೇಶಿಸುವ ಅವಕಾಶವು ನಮಗೆ ಕರ್ತನಾದ ಯೇಸು ಕ್ರಿಸ್ತನ ಮೂಲಕ ಮಾತ್ರವೇ ದೊರೆಯುತ್ತದೆ ಎಂಬದನ್ನು ಗಮನಿಸಿರಿ (1 ತಿಮೊ 2:5; ಯೋಹಾನ 14:6,13,14 ನೋಡಿರಿ).

*"ಕೃಪೆ"*– 1:7; 4:16; ಯೋಹಾನ 1:14,16; 2 ಕೊರಿಂಥ 8:9; ಇಬ್ರಿ 4:16; ಮತ್ತಾಯ 7:9-11.

*"ನಿರೀಕ್ಷೆ"*– ನಂಬಿಕೆಯಿಂದ ದೇವರು ವಿಶ್ವಾಸಿಗಳನ್ನು ನೀತಿವಂತರೆಂದು ಎಣಿಸಿರುವದರಿಂದ ಸದಾಕಾಲವೂ ಆತನೊಂದಿಗೆ ಮಹಿಮೆಯಲ್ಲಿ ಜೀವಿಸುವೆವು ಎಂಬ ವಿಶ್ವಾಸದೊಂದಿಗೆ ಅವರು ಉಲ್ಲಾಸಿಸಬಹುದಾಗಿದೆ (ಯೋಹಾನ 17:24; 1 ಥೆಸ 2:12; ಪ್ರಕ 21:2-4; 22:3-5). "ಮಹಿಮೆ" ಇಲ್ಲಿ ವಿಶ್ವಾಸಿಗಳ ಅಂತಿಮ ರಕ್ಷಣೆಯನ್ನು ಸೂಚಿಸುತ್ತದೆ (8:17-22,30). ಮತ್ತೊಂದು ಪದ "ನಿರೀಕ್ಷೆಗೆ" 8:24-25 ರ ನೋಟ್ಸ್ ನೋಡಿರಿ. **3-4**

**5:3-4** ಇಲ್ಲಿ ಪ್ರಶ್ನೆ ಉದ್ಭವಿಸುತ್ತದೆ: ವಿಶ್ವಾಸಿಗಳಿಗೆ ದೇವರೊಂದಿಗಿರುವ ಸಮಾಧಾನವನ್ನು ಕಸಿದುಕೊಳ್ಳಲು ಮತ್ತು ಪರಲೋಕಕ್ಕೆ ಹೋಗುವೆವೆಂಬ ನಿರೀಕ್ಷೆಯನ್ನು ಹಾಳು ಮಾಡಲು ಶ್ರಮೆಗಳು ಹಾಗೂ ಕಷ್ಟಗಳಿಗೆ ಸಾಧ್ಯವೇ? ಪೌಲನು ಅತ್ಯಂತ ಪ್ರಾಧಾನ್ಯತೆಯೊಂದಿಗೆ, "ಇಲ್ಲ" ಎಂದು ಹೇಳಿದ್ದಾನೆ. ಶ್ರಮೆಗಳು ನಿಜವಾಗಿಯೂ ವಿಶ್ವಾಸಿಗಳ ನಿರೀಕ್ಷೆಯನ್ನು ಹೆಚ್ಚಿಸುತ್ತವೆ. ಆದ್ದರಿಂದ ಕಷ್ಟಗಳು ತಮಗೆ ಹಿತವನ್ನೇ ಮಾಡುತ್ತಿವೆ ಎಂದು ತಿಳಿದು ಅವರು ಸಂತೋಷಿಸಬಹುದಾಗಿದೆ. ಶ್ರಮೆಗಳನ್ನು ನಿರೀಕ್ಷೆಗೆ ಬದಲಾಯಿಸುವ ಕ್ರಮೇಣವಾದ ವಿಧಾನವನ್ನು ವಿಶ್ವಾಸಿಗಳು ಅನುಭವದಿಂದ ಕಲಿತುಕೊಳ್ಳುತ್ತಾರೆ. ನಂಬಿಕೆಯ ಜೀವಿತದಲ್ಲಿ ಇದು ಹಂತ ಹಂತವಾಗಿ ಬರುತ್ತದೆ. ಶ್ರಮೆಗಳು ತಾಳ್ಮೆ ಮತ್ತು ನಿರೀಕ್ಷಣವನ್ನು ಹುಟ್ಟಿಸುತ್ತದೆ. ಕಷ್ಟಗಳು ಮತ್ತು ಹಿಂಸೆಗಳನ್ನು ಸಹಿಸಿಕೊಳ್ಳಲು ದೇವರು ನಮ್ಮನ್ನು ಬಲಪಡಿಸುತ್ತಾನೆ, ಆದ್ದರಿಂದ ನಾವು ಶ್ರಮೆಗಳನ್ನು ಎದುರಿಸಬಹುದು ಹಾಗೂ ಅಪನಂಬಿಕೆಯಿಂದ ಹಿಂಜಾರಬಾರದೆಂದು ವಿಶ್ವಾಸಿಗಳು ಕಲಿತುಕೊಳ್ಳುತ್ತಾರೆ (ಇಬ್ರಿ 10:35-39). ದೇವರು ಘೋರವಾದ ಪರಿಸ್ಥಿತಿಗಳಲ್ಲಿಯೂ ನಮ್ಮೊಂದಿಗಿರುತ್ತಾನೆ ಮತ್ತು

ನಂಬಿಕೆಯಲ್ಲಿ ಮುಂದುವರೆಸಿಕೊಂಡು ಹೋಗುವನು ಎಂಬದನ್ನು ಕಲಿತುಕೊಳ್ಳುತ್ತಾರೆ (8:35-37; ಯೋಹಾನ 10:27-28; 1 ಪೇತ್ರ 1:5-7). ತಾಳ್ಮೆಯು ಅನುಭವ ಸಿದ್ಧಿಯನ್ನು ಹುಟ್ಟಿಸುತ್ತದೆ. ಕಷ್ಟಗಳು ಹಾಗೂ ಸಮಸ್ಯೆಗಳನ್ನು ಸಹಿಸಿಕೊಳ್ಳುವದು ವಿಶ್ವಾಸಿಗಳನ್ನು ಉತ್ತಮರನ್ನಾಗಿ, ಬಲಿಷ್ಠರನ್ನಾಗಿ ಮತ್ತು ಭವಿಷ್ಯದಲ್ಲಿ ಅಂಥ ಕಾರ್ಯಗಳನ್ನು ಎದುರಿಸಲು ಶಕ್ತರನ್ನಾಗಿ ಮಾಡುತ್ತದೆ. ಮತ್ತು ಈ ವಿಧಾನದ ಮೂಲಕ ಅವರು ಪ್ರಾರಂಭದಲ್ಲಿ ನಂಬಿದಾಗ ಅವರಲ್ಲಿದ್ದ ನಿರೀಕ್ಷೆಯು ಹೆಚ್ಚಾಗುತ್ತದೆ ಮತ್ತು ಇನ್ನಷ್ಟು ಬಲಗೊಳ್ಳುತ್ತದೆ. **4**

**5:4** *"ತಾಳ್ಮೆಯಿಂದ ಅನುಭವಸಿದ್ಧಿ"*– ಗ್ರೀಕ್‌ನಲ್ಲಿ ಇದು ಒಂದೇ ಪದವಾಗಿದೆ, ಆದರೆ ಈ ಎರಡೂ ಅರ್ಥಗಳನ್ನು ಒಳಗೊಂಡಿದೆ. **5-11**

**5:5-11** ವಿಶ್ವಾಸಿಗಳ ನಿರೀಕ್ಷೆಯು ದೇವರ ಪ್ರೀತಿಯ ಮೇಲೆ ಆಧಾರವಾಗಿದೆ ಎಂಬದನ್ನು ಈ ವಾಕ್ಯಗಳು ತೋರಿಸುತ್ತವೆ. ಮತ್ತು ಇದು ಅತ್ಯಂತ ಸದೃಢವಾದ ಅಡಿಪಾಯವಾಗಿದೆ. ಧ್ಯೇಯವು ಅಂತಿಮ ರಕ್ಷಣೆಯ ದೃಢತೆಯಾಗಿದೆ. ಪೌಲನ ವಾದವೇನೆಂದರೆ: ನಾವು ದೇವರಿಗೆ ವೈರಿಗಳಾಗಿದ್ದಾಗ ಆತನು ನಮ್ಮ ಮೇಲಿರುವ ತನ್ನ ಅಗಾಧವಾದ ಪ್ರೀತಿಯನ್ನು ವ್ಯಕ್ತಪಡಿಸಿದನು. ಈಗ ನಾವು ಆತನ ಸ್ನೇಹಿತರಾಗಿರುವದರಿಂದ ಆ ಪ್ರೀತಿಯು ನಮ್ಮನ್ನು ಕಡೆಯ ತನಕ ಕಾಯುವದಿಲ್ಲವೇ? 8:35-39 ಹೋಲಿಸಿ ನೋಡಿರಿ. **5**

**5:5** ದೇವರು ವಿಶ್ವಾಸಿಗಳಿಗೆ ಅಂತಿಮ ರಕ್ಷಣೆಯ ನಿರೀಕ್ಷೆಯನ್ನು ಯಾಕೆ ಕೊಟ್ಟಿಲ್ಲ ಎಂದರೆ ಕಡೆಯಲ್ಲಿ ನಿರಾಸೆಗೊಳಿಸಬಾರದು ಎಂಬ ಕಾರಣಕ್ಕಾಗಿಯಾಗಿದೆ. ಅವರು ಯಾವ ಕಾರಣಕ್ಕಾಗಿ ನಿರೀಕ್ಷೆಯುಳ್ಳವರಾಗಿರಬೇಕೋ ಅದನ್ನು ಆತನು ಅವರಿಗೆ ಕೊಡುವನು ಎಂಬದು ವಿಶ್ವಾಸಿಗಳಿಗೆ ತಿಳಿದಿರುವದು. ಈ ಭರವಸೆಯು ದೇವರ ಪ್ರೀತಿಯ ತಿಳುವಳಿಕೆಯಲ್ಲಿ ಅಡಕವಾಗಿದೆ ಅದನ್ನು ಪವಿತ್ರಾತ್ಮನೇ ಅವರ ಹೃದಯಗಳಲ್ಲಿ ಸುರಿಸಿದ್ದಾನೆ.

*"ಸುರಿಯುವದು"*– ಅಪಾರವಾದ ಧಾರಾಳತನವನ್ನು ಸೂಚಿಸುತ್ತದೆ. ದೇವರ ಪ್ರೀತಿಯ ಈ ತಿಳುವಳಿಕೆಯು ವಿಶ್ವಾಸಿಗಳು ಆತನನ್ನು ಪ್ರೀತಿಸುವಂತೆ ಮಾಡುತ್ತವೆ (1 ಯೋಹಾನ 4:9-10,19). ಮತ್ತು ಪವಿತ್ರಾತ್ಮನು ವಿಶ್ವಾಸಿಗಳಲ್ಲಿ ದೇವರ ಪ್ರೀತಿಯನ್ನು ನೆಲೆಗೊಳಿಸುತ್ತಾನೆ ಮತ್ತು ದೇವರನ್ನು ಹಾಗೂ ಒಬ್ಬರನ್ನೊಬ್ಬರು ಪ್ರೀತಿಸುವಂತೆ ಬಲಪಡಿಸುತ್ತಾನೆ. ಮತ್ತು ದೇವರು ಯಾರನ್ನು ನೀತಿವಂತರೆಂದು ಎಣಿಸುತ್ತಾನೋ ಅವರಿಗೆ ಪವಿತ್ರಾತ್ಮನನ್ನು ಕೊಡುತ್ತಾನೆ (ಗಲಾ 3:1-3,14). **6-8**

**5:6-8** ನಾವು ವಿಶ್ವಾಸಿಗಳಾಗುವ ಮೊದಲು ನಮ್ಮ ಸ್ಥಿತಿಯನ್ನು ವಿವರಿಸಲು ಪೌಲನು ಉಪಯೋಗಿಸಿರುವ ಪದಗಳನ್ನು ಗಮನಿಸಿರಿ – "ಅಶಕ್ತರು", "ಭಕ್ತಿಹೀನರು", ಮತ್ತು "ಪಾಪಿಗಳು". 10ನೇ ವಚನದಲ್ಲಿ ಮತ್ತೊಂದು ಪದವನ್ನು ಸೇರಿಸಿದ್ದಾನೆ – "ವೈರಿಗಳು". ಬೇರೆ ಮಾತುಗಳಲ್ಲಿ ಹೇಳುವದಾದರೆ ಪೂರ್ವದಿಂದಲೇ ನಾವು ಕೆಟ್ಟವರು (3:23; ಆದಿ 8:21; ಯೆರೆ 17:9; ಮತ್ತಾಯ 7:11). ಒಬ್ಬನೇ ನಿಜವಾದ ದೇವರು ನಮಗಿರಲಿಲ್ಲ ಮತ್ತು ನಾವು

ನಿಜವಾಗಿಯೂ ಆತನನ್ನು ಬಯಸಲಿಲ್ಲ, ಯಾಕಂದರೆ ನಾವು ಆತನಿಗೆ ವಿರುದ್ಧವಾಗಿ ಪಾಪ ಮಾಡುತ್ತಲೇ ಇದ್ದೆವು. ಈ ಕಾರಣದಿಂದ ನಾವು ಆತನಿಗೆ ವೈರಿಗಳಾಗಿ, ಆತನಿಗೆ ವಿರುದ್ಧವಾಗಿ ಎಲ್ಲಾ ಪಾಪಗಳನ್ನು ಮಾಡುತ್ತಿದ್ದೆವು (ಕೀರ್ತನೆ 51:5). ದೇವರಿಗೆ ವಿರುದ್ಧವಾಗಿರುವ ಕಾರ್ಯಗಳ ಪಕ್ಷ ಹಿಡಿಯುವದೆಂದರೆ ಆತನಿಗೆ ವೈರಿಗಳಾಗುವದಾಗಿದೆ (ಯಾಕೋಬ 4:4 ಹೋಲಿಸಿ ನೋಡಿರಿ). ನಮ್ಮನ್ನು ನಾವು ಉತ್ತಮರನ್ನಾಗಿ ಮಾಡಿಕೊಳ್ಳಲು, ಪಾಪ ಮಾಡುವದನ್ನು ನಿಲ್ಲಿಸಲು ಮತ್ತು ದೇವರಿಗೆ ಸ್ನೇಹಿತರಾಗಲು ನಾವು ಬಲವಿಲ್ಲದವರಾಗಿದ್ದೆವು. ಈ ಕಾರ್ಯಗಳು ನಮಗೆ ಕೇವಲ ಕಷ್ಟಕರ ಮಾತ್ರವಲ್ಲ ಬದಲಾಗಿ ಅಸಾಧ್ಯವಾದವುಗಳಾಗಿದ್ದವು. ಇದರಿಂದ ನಾವು ಕೆಲವೊಮ್ಮೆ ಮಾನವನು ರಕ್ಷಣೆ ಹೊಂದಲು ಕಲಿಸುವ ಕೆಲವು ಪ್ರಸಿದ್ಧ ವಿಧಾನಗಳ ಅಸಾಧ್ಯತೆಯನ್ನು ಗಮನಿಸಬಹುದು ಅವು ಯಾವುವೆಂದರೆ – ಜ್ಞಾನ ಅಥವಾ ಕರ್ಮ ಅಥವಾ ಭಕ್ತಿ (ಜ್ಞಾನ ಮತ್ತು ತಿಳುವಳಿಕೆ, ಒಬ್ಬನ ಧರ್ಮದ ಪಾಲನೆ ಮತ್ತು ಒಳ್ಳೆಯ ಕಾರ್ಯಗಳು ಅಥವಾ ಆರಾಧನೆ). ಆದರೆ ಇವುಗಳನ್ನು ಮಾಡಲು ನಮ್ಮಿಂದ ಆಗಲಿಲ್ಲ ಬದಲಾಗಿ ದೇವರೇ ಮಾಡಿದನು. ಯೇಸು ಕ್ರಿಸ್ತನು ಬಂದು ನಮ್ಮ ಸ್ಥಾನದಲ್ಲಿ ತಾನೇ ಪ್ರಾಣ ಕೊಟ್ಟನು ಮತ್ತು ನಮ್ಮ ಪಾಪವನ್ನು ಪರಿಹರಿಸಿದನು. ನಂತರ, ನಾವು ನಂಬಿದಾಗ, ಯೇಸು ಕ್ರಿಸ್ತನು ಸುರಿಸಿದ ರಕ್ತದ ನಿಮಿತ್ತ ನಮ್ಮನ್ನು ನೀತಿವಂತರೆಂದು ಎಣಿಸಿದನು (ವ 9). ನಮ್ಮನ್ನು ತನ್ನ ಸ್ನೇಹಿತರನ್ನಾಗಿ ಮಾಡಿದನು (ವ. 10). ನಮ್ಮ ಇಡಿ ಅನುಭವ ಮತ್ತು ಹೊರನೋಟವನ್ನೇ ಬದಲಾಯಿಸಿದನು (ವ 14). ತನ್ನ ಆತ್ಮವನ್ನು ನಮ್ಮಲ್ಲಿ ನೆಲೆಗೊಳಿಸುವ ಮೂಲಕ ನಮ್ಮನ್ನು ಹೊಸಬರನ್ನಾಗಿ ಮಾಡಿದನು (ವ 5). **9-10**

**5:9-10** ಈ ಮಾತುಗಳು ಕ್ರಿಸ್ತನ ಮರಣದ ಮೂಲಕ ದೇವರು ತೋರಿದ ಪ್ರೀತಿಯ ಮೇಲೆ ಆಧಾರವಾಗಿವೆ ಮತ್ತು ನಮಗೆ ಇದನ್ನು ಕಲಿಸುತ್ತವೆ: ವಿಶ್ವಾಸಿಗಳು ಅಪನಂಬಿಕೆಯುಳ್ಳವರು ಮತ್ತು ವೈರಿಗಳಾಗಿದ್ದಾಗ ಕ್ರಿಸ್ತನು ಅವರಿಗಾಗಿ ಪ್ರಾಣ ಕೊಟ್ಟನು ಹಾಗೂ ಅವರು ನಂಬಿದಾಗ ಅವರನ್ನು ನೀತಿವಂತರೆಂದು ಎಣಿಸಿದನು ಮತ್ತು ಅವರನ್ನು ತನ್ನ ಸ್ನೇಹಿತರನ್ನಾಗಿ ಮಾಡಿಕೊಂಡನು. ಇದು ಅತ್ಯಂತ ನಿಶ್ಚಯವಾದದ್ದಾಗಿದೆಯಾದರೂ ಆತನು ಅವರನ್ನು ರಕ್ಷಣೆಯಲ್ಲು ಮುಂದುವರೆಸುವನು ಹಾಗೂ ಅವರಿಗಾಗಿ ಪ್ರಾಣ ಕೊಡುವಾಗ ಪ್ರಾರಂಭಿಸಿದ ಕಾರ್ಯವನ್ನು ಪೂರ್ಣಗೊಳಿಸುವನು ಎಂಬದೂ ನಿಶ್ಚಯವಾಗಿದೆ. **9**

**5:9** *"ದೇವರ ಕೋಪ"*– ತಮ್ಮ ಪಾಪಗಳಲ್ಲಿಯೇ ಮುಂದುವರೆಯುವವರೆಲ್ಲರ ಮೇಲೆ ಬರುವ ದೇವರ ಪವಿತ್ರವಾದ ಕೋಪವನ್ನು ಸೂಚಿಸುತ್ತದೆ (2:5,8; ಎಫೆ 5:5-6; ಕೊಲೊ 3:6; ಪ್ರಕ 6:16-17). ಕರ್ತನಾದ ಯೇಸು ಕ್ರಿಸ್ತನು ವಿಶ್ವಾಸಿಗಳನ್ನು ಇದರಿಂದ ಬಿಡಿಸುತ್ತಾನೆ (1 ಥೆಸ 1:10; 5:9). ಆತನ "ಜೀವದ ಮೂಲಕ" –ಅವರು ರಕ್ಷಣೆ ಹೊಂದುತ್ತಾರೆ (ವ 10. ಯೋಹಾನ 11:25; 14:19 ನೋಡಿರಿ). ವಿಶ್ವಾಸಿಗಳು ಆತನ ಜೀವಿತಕ್ಕೆ ಐಕ್ಯವಾಗಿದ್ದಾರೆ

(ಯೋಹಾನ 17:21,23; ಕೊಲೊ 3:3-4). ಆತನು ಅವರಿಗಾಗಿ ಮಧ್ಯಸ್ಥಿಕೆ ಮಾಡಲು ಶಾಶ್ವತವಾಗಿ ಜೀವಿಸುವವನಾಗಿದ್ದೇನೆ (8:34; ಇಬ್ರಿ 7:25). ಒಂದುವೇಳೆ ಅವರು ಪಾಪ ಮಾಡಿದರೆ, ಅವರನ್ನು ರಕ್ಷಿಸಲು ಆತನು ಮುಂದಾಗುತ್ತಾನೆ (1 ಯೋಹಾನ 2:1). ಆದ್ದರಿಂದ ಅವರು ಅಂತ್ಯದ ತನಕ ಸುರಕ್ಷಿತರಾಗಿರುತ್ತಾರೆ. ಆದರೆ ನಮಗೆದುರಾಗುವ ಪ್ರಶ್ನೆಯೇನೆಂದರೆ, "ಒಂದುವೇಳೆ ಅವರ ನಂಬಿಕೆ ವಿಫಲಗೊಂಡರೆ ಏನಾಗುತ್ತದೆ? ಕ್ರಿಸ್ತನು ಅವರಿಗಾಗಿ ಮಾಡಿರುವ ಮತ್ತು ಮಾಡುವ ಕಾರ್ಯಗಳ ನಡುವೆಯೂ ಅವರು ನಾಶವಾಗುವದಿಲ್ಲವೇ?" ಇದಕ್ಕೆ ಉತ್ತರವೇನೆಂದರೆ ಅವರಲ್ಲಿ ನಂಬಿಕೆಯನ್ನು ಹುಟ್ಟಿಸಿರುವ ದೇವರು, ಅವರು ಅದರಲ್ಲಿಯೇ ಮುಂದುವರೆಯುವಂತೆ ಮಾಡುತ್ತಾನೆ. ಲೂಕ 22:31-32; ಫಿಲಿಪ್ಪಿ 1:6,29; ಇಬ್ರಿ 10:39 ನೋಡಿರಿ. ವಿಶ್ವಾಸಿಗಳನ್ನು ಕಾಯಲು ಮತ್ತು ಕಾಪಾಡಲು ಎಲ್ಲವನ್ನೂ ಮಾಡುವ ದೇವರು ಪ್ರಾಮುಖ್ಯವಾದ ಈ ಹಂತದಲ್ಲಿ ವಿಫಲನಾಗುವನು ಎಂಬದಾಗಿ ಯೋಚಿಸುವದು ಯುಕ್ತವಾದದ್ದು ಅಥವಾ ಸತ್ಯವೇದಾನುಸಾರವಾದದ್ದಾಗಿದೆಯೇ? **11**

**5:11** ಇವೆಲ್ಲವೂ ಇದನ್ನು ಅರ್ಥಮಾಡಿಕೊಂಡವರಿಗೆ ಸಂತೋಷಿಸುವ ಸಂಗತಿಗಳಾಗಿವೆ. ಇದನ್ನು ನಮ್ಮನ್ನು ಪುನಃ 2ನೇ ವಚನಕ್ಕೆ ನಡೆಸುತ್ತದೆ.

*"ಸಂಧಾನ"*– 2 ಕೊರಿಂಥ 5:18 ನೋಡಿರಿ. **12-21**

**5:12-21** ಇಲ್ಲಿ ಮೂಲಪಿತೃವಾದ ಆದಾಮನು ಮತ್ತು ಇಡೀ ಮಾನವ ಕುಲದ ಪ್ರತಿನಿಧಿ ಮತ್ತು ದೇವರು ಯಾರನ್ನೆಲ್ಲಾ ನೀತಿವಂತರೆಂದು ಎಣಿಸಿದ್ದಾನೋ ಅವರ ಪ್ರತಿನಿಧಿಯಾಗಿರುವ ಅವರ ಶಿರಸ್ಸಾಗಿರುವ ಕ್ರಿಸ್ತನ ನಡುವೆ ವ್ಯತ್ಯಾಸವನ್ನು ತಿಳಿಸಲಾಗಿದೆ. ಆದಾಮನ ಮೂಲಕ ಮಾನವ ಕುಲದವರಲ್ಲಿ ಪಾಪ ಮತ್ತು ಮರಣ ಉಂಟಾದವು. ಯೇಸು ಕ್ರಿಸ್ತನ ಮೂಲಕ ನೀತಿ ಮತ್ತು ಜೀವ ಉಂಟಾದವು. ಇಲ್ಲಿ ಪೌಲನ ಉದ್ದೇಶವೇನೆಂದರೆ ಕ್ರಿಸ್ತನ ಮೂಲಕ ದೊರೆಯುವ ಜೀವವು ಆದಾಮನಿಂದ ದೊರೆಯುವ ಮರಣಕ್ಕಿಂತಲೂ ಹೆಚ್ಚು ನಿಶ್ಚಯವಾದದ್ದಾಗಿದೆ ಮತ್ತು ಪಾಪ ಹಾಗೂ ಮರಣಕ್ಕೆ ಗುರಿಯಾದ ಆದಾಮನಿಂದ ಎದುರಾದ ದುಷ್ಪರಿಣಾಮಗಳನ್ನು ಜಯಿಸಲು ದೇವರು ಕ್ರಿಸ್ತನಲ್ಲಿ ಮಾಡಿರುವ ಮಹತ್ಕಾರ್ಯಗಳನ್ನು ಹೆಚ್ಚಾಗಿ ಪ್ರಕಟಪಡಿಸುವದಾಗಿದೆ. **12**

**5:12** ಆದಾಮನು ಪಾಪ ಮಾಡಿ ಪಾಪಿಯಾದ್ದರಿಂದ ಎಲ್ಲಾ ಮಾನವರು ಪಾಪಿಗಳಾಗಿದ್ದಾರೆ – ಆದಿ 2:17; 3:1-19. ಅವನು ತನ್ನ ಸಾರೂಪ್ಯದ ಮಕ್ಕಳಿಗೆ ಜನ್ಮ ನೀಡಿದನು (ಆದಿ 4:1) ಮತ್ತು ಅವರಿಗೆ ಅವರ ಸಾರೂಪ್ಯದಲ್ಲಿಯೇ ಮಕ್ಕಳು ಹುಟ್ಟಿದರು, ಹೀಗೆ ಪಾಪವು ಅಂಟುರೋಗದ ಹಾಗೆ ಒಂದು ಸಂತತಿಯಿಂದ ಮತ್ತೊಂದು ಸಂತತಿಗೆ ವರ್ಗಾವಣೆಯಾಯಿತು (ಆದಿ 8:21; ಕೀರ್ತನೆ 51:5; 58:3; ಯೆರೆ 17:9). ಮತ್ತು ಪಾಪದ ಈ ಕಾಯಿಲೆಯೂ ಮರಣವನ್ನುಂಟು ಮಾಡುತ್ತದೆ – 6:23. ಆದಾಮನಿಂದ ಮಾನವರೆಲ್ಲರೂ ಪಾಪಿಗಳಾದರು. ಇಷ್ಟು ಮಾತ್ರವಲ್ಲ, ಮಾನವರೆಲ್ಲರೂ ಆದಾಮನಲ್ಲಿ ಪಾಪ ಮಾಡಿದರು

ಎಂದು ನಾವು ಹೇಳಬಹುದು ಯಾಕಂದರೆ ಅವನು ಪಾಪ ಮಾಡಿದಾಗ ಮಾನವರೆಲ್ಲರೂ ಅವನಲ್ಲಿದ್ದರು (ಇಬ್ರಿ 7:9-10ರೊಂದಿಗೆ ಹೋಲಿಸಿ ನೋಡಿರಿ). ಅವನು ಮಾಡಿದ್ದನ್ನೇ ಅವರೆಲ್ಲರೂ ಅವನಲ್ಲಿ ಮಾಡಿದರು. ಭೂಲೋಕದಲ್ಲಿ ಒಬ್ಬನೇ ವ್ಯಕ್ತಿಯಾಗಿದ್ದರೂ ಆ ಸಮಯದಲ್ಲಿ ಅವನು ಇಡೀ ಮಾನವಕುಲವಾಗಿದ್ದನು. **13**

**5:13** *"ಧರ್ಮಶಾಸ್ತ್ರ"*– ಇಲ್ಲಿ ಉಪಯೋಗಿಸಲ್ಪಟ್ಟಿರುವದರ ಅರ್ಥವೇನೆಂದರೆ ದೇವರು ಮೋಶೆಯ ಮೂಲಕ ಕೊಟ್ಟ ಆಜ್ಞೆಗಳು. ಪೌಲನ ಮಾತಿನ ಅರ್ಥ ಒಂದುವೇಳೆ ಇದಾಗಿರಬಹುದು: ದೇವರು ಧರ್ಮಶಾಸ್ತ್ರವನ್ನು ಕೊಡುವ ಮೊದಲೇ ಜನರು ಪಾಪ ಮಾಡಿದರು, ಆದರೆ ಅವರ ಮರಣಕ್ಕೆ ಕಾರಣ ಅವರ ಸ್ವಂತ ಪಾಪವಾಗಿರಲಿಲ್ಲ. ಆದಾಮನಿಂದ ಮೋಶೆಯ ತನಕ ಮರಣದ ಆಳ್ವಿಕೆ ಯಾಕೆ ನಡೆಯುತ್ತಿತ್ತು? ಯಾಕಂದರೆ ಆದಾಮನು ಪಾಪ ಮಾಡಿದನು. ಆದಾಮನನ್ನು "ಬರಬೇಕಾದ ಒಬ್ಬಾತನಿಗೆ ಸೂಚಕಪುರುಷನು" ಎಂದು ಕರೆಯಲಾಗಿದೆ. ಆತನು ಯೇಸು ಕ್ರಿಸ್ತನಾಗಿದ್ದಾನೆ (ಯೇಸು ಕ್ರಿಸ್ತನನ್ನು 1 ಕೊರಿಂಥ 15:45ರಲ್ಲಿ "ಕಡೆಯ ಆದಾಮನು" –ಎಂದು ಕರೆಯಲಾಗಿದೆ). ಆದಾಮನು ಯೇಸು ಕ್ರಿಸ್ತನಿಗೆ ಯಾವ ರೀತಿಯಲ್ಲಿ ಸೂಚಕಪುರುಷನಾಗಿದ್ದಾನೆ? ತನ್ನ ಪಾಪದಲ್ಲಿಯಲ್ಲ ಯಾಕಂದರೆ ಯೇಸು ಕ್ರಿಸ್ತನು ಪಾಪವನ್ನೇ ಮಾಡಲಿಲ್ಲ (2 ಕೊರಿಂಥ 5:21; ಇಬ್ರಿ 4:15; 7:26; 1 ಪೇತ್ರ 2:22). ಇಲ್ಲಿ ಆದಾಮನು ಒಂದೇ ಒಂದು ವಿಷಯದಲ್ಲಿ ಮಾತ್ರವೇ ಯೇಸು ಕ್ರಿಸ್ತನಿಗೆ ಸೂಚಕಪುರುಷನಾಗಿದ್ದಾನೆ – ಅವನ ಅವಿಧೇಯತೆಯ ಕಾರ್ಯ ಕೋಟ್ಯಂತರ ಜನರ ಮೇಲೆ ಪ್ರಭಾವ ಬೀರಿದ ಹಾಗೆಯೇ, ಯೇಸು ಕ್ರಿಸ್ತನ ವಿಧೇಯತೆಯ ಕಾರ್ಯ ಕೋಟ್ಯಂತರ ಜನರ ಮೇಲೆ ಪ್ರಭಾವ ಬೀರಿದೆ; ಆದಾಮನಲ್ಲಿರುವವರೆಲ್ಲರೂ ಅವನ ನಿಮಿತ್ತ ಸಾಯುವರು (ವ 15), ಆದರೆ ಕ್ರಿಸ್ತನಲ್ಲಿರುವವರು ಆತನ ನಿಮಿತ್ತ ಬದುಕುವರು (ವ 18,19). **15**

**5:15** *"ವರ"*– ವ 17; 6:23; ಎಫೆ 2:8-9.

*"ಎಲ್ಲಾ"*– ಅಂದರೆ ಆದಾಮನ ಸಂತತಿಯವರು. ಏದೇನ್ ತೋಟದಲ್ಲಿ ಆದಾಮನು ಮಾಡಿದ ಪಾಪದ ನಿಮಿತ್ತ ಅವರೆಲ್ಲರೂ ಸಾಯುವರು. ಇದು ನಿಶ್ಚಯ. ಆದರೆ ಯೇಸು ಕ್ರಿಸ್ತನು ಮಾಡಿರುವ ಕಾರ್ಯದಿಂದ ಮಾನವರೆಲ್ಲರಿಗೆ ದೇವರ ಕೃಪೆ ದೊರೆಯುವದು ಇನ್ನೂ ನಿಶ್ಚಯವಾಗಿದೆ. ಇದರ ಅರ್ಥ ಎಲ್ಲರೂ ರಕ್ಷಣೆ ಹೊಂದಿದ್ದಾರೆ ಎಂಬದಾಗಿಯಲ್ಲ ಬದಲಾಗಿ ದೇವರ ಕೃಪಾದಾನವನ್ನು ಎಲ್ಲರಿಗೂ ಕೊಡಲಾಗಿದೆ ಮತ್ತು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವವರು ಮಾತ್ರವೇ ರಕ್ಷಣೆ ಹೊಂದುವರು ಎಂಬದಾಗಿದೆ. **16**

**5:16** *"ನಿರ್ಣಯ" ಎಂಬದು ದೇವರ ನಿರ್ಣಯವಾಗಿದ್ದು "ನೀನು ಸತ್ತೇ ಹೋಗುವಿ"*–(ಆದಿ 2:17) ಎಂದು ಹೇಳಿದೆ ಮತ್ತು ಈ ನಿರ್ಣಯವು ಎಲ್ಲಾ ಮಾನವರ ಮೇಲೆ ಬಂದಿತು ಯಾಕಂದರೆ ಅವರ ಮೂಲಪಿತೃವಾದ ಆದಾಮನು ಪಾಪ ಮಾಡಿದನು. ಮತ್ತೊಂದು

ಕಡೆಯಲ್ಲಿ ದೇವರ ವರವು, ತಪ್ಪಿಸಿಕೊಳ್ಳುವ ಮಾರ್ಗವನ್ನು ಸೂಚಿಸುತ್ತದೆ, ಕೇವಲ ಆದಾಮನ ಪಾಪದಿಂದ ಮಾತ್ರವಲ್ಲ ಬದಲಾಗಿ ಚರಿತ್ರೆಯಾದ್ಯಂತ ಮಾಡಲಾಗಿರುವ ಅಸಂಖ್ಯವಾಗಿರುವ ಪಾಪಗಳಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡುತ್ತದೆ. ಆದಾಮನ ಪಾಪ ಜನರಿಗೆ ಶಿಕ್ಷೆಯ ನಿರ್ಣಯವನ್ನು ಬರಮಾಡಿತು ಆದರೆ ದೇವರ ಕೃಪೆ ಶಿಕ್ಷೆಯನ್ನು ವಜಾಗೊಳಿಸುತ್ತದೆ ಮತ್ತು ಅವರು ನಂಬಿವಾಗ ಅವರನ್ನು ನೀತಿವಂತರನ್ನಾಗಿ ಮಾಡುತ್ತದೆ (3:22-24). **17**

**5:17** *"ಮರಣವು ಆಳ್ವಿಕೆ ಮಾಡಿತು"*– ವ 14,21. ಮಾನವರೆಲ್ಲರೂ ಮರಣಕ್ಕೆ ಗುರಿಯಾಗಿದ್ದರು. ಕ್ರೂರವಾದ ಯಜಮಾನನು ಎಲ್ಲವನ್ನೂ ಕಸಿದುಕೊಂಡಿದ್ದನು. ಇಬ್ರಿ 2:15ರೊಂದಿಗೆ ಹೋಲಿಸಿರಿ. ಆದರೆ ದೇವರು ಕ್ರಿಸ್ತನ ಮೂಲಕ ಮರಣದಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡಿದ್ದಾನೆ. ಯಾರೆಲ್ಲಾ ಆ ಮಾರ್ಗದಲ್ಲಿದ್ದಾರೋ ಅವರೆಲ್ಲರೂ "ಜೀವದಲ್ಲಿ ಆಳ್ವಿಕೆ ಮಾಡುತ್ತಾರೆ". ಮರಣದ ಅಧಿಪತಿಗೆ ಒಳಗಾಗುವ ಬದಲು ಅವರು ನಿತ್ಯಜೀವ ಪಡೆಯುತ್ತಾರೆ ಮತ್ತು ಕ್ರಿಸ್ತನಲ್ಲಿ ತಾವೇ ಅರಸರಾಗುತ್ತಾರೆ (ಯೋಹಾನ 5:24; 11:25-26; ಎಫೆ 2:6; ಪ್ರಕ 3:21; 22:5). ಆತನಲ್ಲಿ ಜಯಹೊಂದಿದವರು ಜಯಶಾಲಿಗಳಾಗುತ್ತಾರೆ (8:37 ಹೋಲಿಸಿ ನೋಡಿರಿ). **18**

**5:18** *"ನಿರ್ಣಯ"*– ವ 16.

*"ಒಬ್ಬನ ಸತ್ಕಾರ್ಯ"*– ಪಾಪಿಗಳಿಗಾಗಿ ತನ್ನನ್ನು ಯಜ್ಞವಾಗಿ ಅರ್ಪಿಸಿಕೊಳ್ಳಲು ಯೇಸು ಕ್ರಿಸ್ತನು ತನ್ನ ನೀತಿಯಿಂದ ಪ್ರತಿಷ್ಠೆಪಡಿಸಿಕೊಂಡದ್ದನ್ನು ಇದು ಸೂಚಿಸುತ್ತದೆ.

*"ಎಲ್ಲಾ ಜನರು"*– ದೇವರು ಎಲ್ಲಾ ಜನರಿಗೆ ನಿತ್ಯಜೀವ ದೊರೆಯುವ ಸೌಕರ್ಯವನ್ನು ಏರ್ಪಡಿಸಿದ್ದಾನೆ, ಆದರೆ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವವರು ಮಾತ್ರವೇ ಜೀವವನ್ನು ಹೊಂದುತ್ತಾರೆ (1 ಯೋಹಾನ 5:11-12; ಯೋಹಾನ 3:36; 7:37-38). ನೀತಿವಂತರೆಂಬ ನಿರ್ಣಯ ಮತ್ತು ನಿತ್ಯಜೀವದ ನಡುವೆಯಿರುವ ಹತ್ತಿರದ ಸಂಬಂಧವನ್ನು ಗಮನಿಸಿರಿ. ಒಂದನ್ನು ಬಿಟ್ಟು ಇನ್ನೊಂದನ್ನು ಪಡೆಯಲು ಆಗುವದಿಲ್ಲ. **19**

**5:19** *"ಅವಿಧೇಯತೆ"*– ಆದಿ 3:6.

*"ವಿಧೇಯತೆ"*– ಫಿಲಿಪ್ಪಿ 2:8. 12-19 ವಚನಗಳಲ್ಲಿರುವ ವ್ಯತ್ಯಾಸವು ಅತ್ಯಂತ ಸರಳವಾದದ್ದಾಗಿದೆ. ಆದಾಮ ಮತ್ತು ಯೇಸು ಕ್ರಿಸ್ತನು ಜನರು ಹೊಂದುವ ಕಾರ್ಯಗಳಿಗೆ ಮೂಲ ಸಂಪನ್ಮೂಲಗಳಾಗಿದ್ದಾರೆ. ಆದಾಮನು ಪಾಪ, ಮರಣ ಮತ್ತು ನ್ಯಾಯತೀರ್ಪಿಗೆ ಮೂಲ ಕಾರಣನಾಗಿದ್ದಾನೆ; ಯೇಸು ಕ್ರಿಸ್ತನು ನೀತಿವಂತಿಕೆ, ಜೀವ ಮತ್ತು ನ್ಯಾಯತೀರ್ಪನ್ನು ತೆಗೆದುಹಾಕಿ, ವಿಶ್ವಾಸಿಗಳನ್ನು ದೇವರಿಗೆ ಮೆಚ್ಚಿಕೆಯಾಗುವವರ ಹಾಗೆ ಮಾಡುವ ಕೃಪೆಗೆ ಮೂಲ ಕಾರಣನಾಗಿದ್ದಾನೆ. **20**

**5:20** *"ಧರ್ಮಶಾಸ್ತ್ರ"*– ವ 13-14. ಯಾಕಂದರೆ ಇಲ್ಲಿರುವ ಆಜ್ಞೆಗಳನ್ನು ಉಲ್ಲಂಘಿಸಿದರೆ

ಅಪರಾಧಗಳು ಹೆಚ್ಚಾಗುತ್ತವೆ. ಆಜ್ಞೆಗಳೇ ಇಲ್ಲವೆಂದರೆ ಆಜ್ಞೆಗಳನ್ನು ಉಲ್ಲಂಘಿಸುವ ಪ್ರಶ್ನೆಯೇ ಬರುವದಿಲ್ಲ (4:15). ಪೌಲನು 7:7-12ರಲ್ಲಿ ದೇವರ ಆಜ್ಞೆಗಳು ಹೇಗೆ ಪಾಪವನ್ನು ಹೆಚ್ಚಿಸುತ್ತವೆ ಎಂಬದನ್ನು ತೋರಿಸಿದ್ದಾನೆ. ಪಾಪವು ಅಭಿವೃದ್ಧಿಯಾಗಬೇಕೆಂಬ ಉದ್ದೇಶದಿಂದ ದೇವರು ಧರ್ಮಶಾಸ್ತ್ರವನ್ನು ಕೊಡಲಿಲ್ಲ (ಧರ್ಮಶಾಸ್ತ್ರವಿಲ್ಲದೆಯೇ ಪಾಪವು ಅಭಿವೃದ್ಧಿಯಾಗಿತ್ತು – ಆದಿ 6:5,11; 8:21) ಬದಲಾಗಿ ಮಾನವರು ತಮಗೆ ಕೃಪೆಯ ಅವಶ್ಯಕತೆಯಿದೆ ಎಂಬದನ್ನು ತಿಳಿದುಕೊಳ್ಳಬೇಕು ಮತ್ತು ಆತನ ಕೃಪೆಯು ಘನಮಾನ ಮಹಿಮೆಗಳೊಂದಿಗೆ ಪ್ರಕಟವಾಗಬೇಕೆಂದು ಕೊಟ್ಟನು. **21**

**5:21** *"ಪಾಪವು ಮರಣವನ್ನುಂಟು ಮಾಡುತ್ತಾ ಅಧಿಕಾರ ನಡೆಸಿತು"*– ವ 14,17. ಮರಣವು ಅಧಿಕಾರ ನಡೆಸಲು ಏಕೈಕ ಕಾರಣ ಪಾಪ. ಪಾಪವು ದೊಡ್ಡ ವಂಚಕವಾಗಿದ್ದು ತನಗೊಳಗಾಗುವವರಿಗೆ ಮರಣದ ಸಂಬಳವನ್ನು ಕೊಡುತ್ತದೆ (6:23; ಯೋಹಾನ 8:34). ದೇವರ ಕೃಪೆ ಪಾಪ ಮತ್ತು ಮರಣಕ್ಕಿಂತ ಹೆಚ್ಚು ಶಕ್ತವಾಗಿದೆ. ಅದು ಪಾಪವನ್ನು ನಾಶಮಾಡುತ್ತದೆ, ಮಾನವರನ್ನು ನೀತಿವಂತರನ್ನಾಗಿ ಮಾಡುತ್ತದೆ ಮತ್ತು ಅವರನ್ನು ನಿತ್ಯಜೀವಕ್ಕೆ ನಡೆಸುತ್ತದೆ (6:23; ತೀತ 3:3-7). ಕರ್ತನಾದ ಯೇಸು ಕ್ರಿಸ್ತನ ಮೂಲಕ ಕೃಪೆ ಅಧಿಕಾರ ನಡೆಸುತ್ತದೆ (ಇಬ್ರಿ 4:16)! ಆತನಲ್ಲಿ ಭರವಸೆಯನ್ನಿಡುವವರೆಲ್ಲರ ಪಾಪಗಳನ್ನೆಲ್ಲಾ ಕ್ಷಮಿಸುತ್ತದೆ, ಪಾಪ ಮತ್ತು ಮರಣದ ಪಾಶದಿಂದ ಬಿಡುಗಡೆಗೊಳಿಸುತ್ತದೆ ಹಾಗೂ ಅವರಿಗಾಗ ಬೇಕಿದ್ದ ಶಿಕ್ಷೆಯನ್ನೆಲ್ಲಾ ಸಂಪೂರ್ಣವಾಗಿ ವಜಾಗೊಳಿಸುತ್ತದೆ (6:14; 8:1). ಇಲ್ಲಿ ಇಬ್ಬರು ಯಜಮಾನರನ್ನು ನೋಡಬಹುದು – ಆದಾಮನಿಂದ ಬಂದ ಪಾಪ (ವ 12) ಮತ್ತು ಯೇಸು ಕ್ರಿಸ್ತನಿಂದ ದೊರಕುವ ಕೃಪೆ (ವ 17; ಯೋಹಾನ 1:16-17). ಯಾವ ಯಜಮಾನನನ್ನು ಸೇವಿಸಬೇಕೆಂಬದನ್ನು ನಾವೆಲ್ಲರೂ ಆಯ್ಕೆ ಮಾಡಿಕೊಳ್ಳಬೇಕು.

# 6[1]

**6:1** ಪೌಲನು ಹೇಳಿರುವದೇನೆಂದರೆ ಪಾಪವು ಹೆಚ್ಚಾಗುವಲ್ಲಿ ಕೃಪೆಯು ಇನ್ನೂ ಅಧಿಕವಾಗಿ ಹೆಚ್ಚಾಗುತ್ತದೆ (5:20). ಪಾಪದಲ್ಲಿರುವ ಕೆಲವು ವ್ಯಕ್ತಿಗಳು ಪೌಲನ ಬೋಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ, ಈ ವಚನದ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು "ಪಾಪದಿಂದ ಒಳ್ಳೆಯ ಫಲಿತಾಂಶಗಳು ವ್ಯಕ್ತವಾಗುತ್ತವೆ – ಇದು ಖಂಡಿತವಾಗಿಯೂ ದೇವರ ಕೃಪೆ ಹೆಚ್ಚಾಗುವಂತೆ ಮಾಡುತ್ತದೆ. ಅದ್ದರಿಂದ ನಾವು ಬೇಕಾದಷ್ಟು ಪಾಪ ಮಾಡೋಣ ಮತ್ತು ಕೃಪೆ ನಮ್ಮೆಲ್ಲರನ್ನು ಕ್ಷಮಿಸುತ್ತದೆ ಎಂದು ನಿರೀಕ್ಷಿಸೋಣ" ಎಂಬದಾಗಿ ಹೇಳುತ್ತಾರೆ. ಅಂಥ ಪ್ರಶ್ನೆಗಳು ಎಷ್ಟು ಬುದ್ಧಿಹೀನವಾಗಿವೆ ಮತ್ತು ಅಸಮಂಜಸವಾಗಿವೆ ಎಂಬದನ್ನು ಪೌಲನು ಈ ಅಧ್ಯಾಯದಲ್ಲಿ ತೋರಿಸಿದ್ದಾನೆ ಹಾಗೂ ಯೇಸು ಕ್ರಿಸ್ತನ ಸುವಾರ್ತೆಯನ್ನು ಅರ್ಥಮಾಡಿಕೊಂಡಿರುವ ವಿಶ್ವಾಸಿಗೆ ಸಲಹೆಗಳನ್ನು ಕೊಟ್ಟಿದ್ದಾನೆ. ಆತನು ಎರಡು ಸಲ

“ನಿಮಗೆ ಗೊತ್ತಿಲ್ಲವೋ, ತಿಳಿಯದೋ” ಎಂಬ ಪದಗಳನ್ನು ಬಳಸಿದ್ದಾನೆ (ವ 3,16) ಮತ್ತು “ತಿಳಿದಿದ್ದೇವೆ, ತಿಳಿದಿದೆ” (ವ 6,9) ಎಂಬ ಪದಗಳನ್ನು ಎರಡು ಸಲ ಬಳಸಿದ್ದಾನೆ. ವಿಶ್ವಾಸಿಗಳು ಪರಿಶುದ್ಧರಾಗಿ ಜೀವಿಸಬೇಕೆಂಬ ಸಲುವಾಗಿ ದೇವರು ಅವರನ್ನು ನೀತಿವಂತರೆಂದು ಎಣಿಸುತ್ತಾನೆ ಎಂಬದನ್ನು ಪೌಲನು ಬಲ್ಲವನಾಗಿದ್ದನು. ಅಥವಾ ತನ್ನ ಮಾತುಗಳಲ್ಲಿ “ಹೊಸಬರಾಗಿ ನಡೆದುಕೊಳ್ಳಬೇಕು” (ವ 4) ಎಂದು ಹೇಳಿದ್ದಾನೆ. ಆತನು ಈ ಧ್ಯೇಯವನ್ನು 8ನೇ ಅಧ್ಯಾಯದ ಕಡೆಯ ತನಕ ಮುಂದುವರೆಸಿದ್ದಾನೆ. ಯೋಹಾನ 17:17-19ರಲ್ಲಿ ಶುದ್ಧೀಕರಣದ ಬಗ್ಗೆ ಕೊಡಲಾಗಿರುವ ನೋಟ್ಸ್ ನೋಡಿರಿ. **2**

**6:2** *“ಎಂದಿಗೂ ಇರಬಾರದು”*– 3:30. 1 ನೇ ವಚನದಲ್ಲಿರುವ ಪ್ರಶ್ನೆಗೆ ವಿಶ್ವಾಸಿಗೆ ಸಿಗಬಹುದಾದ ಏಕೈಕ ಉತ್ತರ ಇದುವೇ ಆಗಿದೆ. ಯಾಕೆ? ಯಾಕಂದರೆ ವಿಶ್ವಾಸಿಗಳು “ಪಾಪದ ಪಾಲಿಗೆ ಸತ್ತವರಾಗಿದ್ದಾರೆ”. ಯಾವಾಗ ಮತ್ತು ಹೇಗೆ ಈ ಮರಣವು ಸಂಭವಿಸಿತು? 6,8 ವಚನಗಳು ಉತ್ತರ ಕೊಡುತ್ತವೆ – “ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿದೆ”, “ಕ್ರಿಸ್ತನೊಂದಿಗೆ ಸತ್ತಿದ್ದೇವೆ”. ವಿಶ್ವಾಸಿಗಳು ಕ್ರಿಸ್ತನಿಗೆ ಐಕ್ಯರಾಗಿದ್ದಾರೆ (ವ 5). ಯೇಸು ಕ್ರಿಸ್ತನು ತನ್ನ ಮರಣ ಮತ್ತು ಪುನರುತ್ಥಾನದಲ್ಲಿ ವಿಶ್ವಾಸಿಗಳ ಇಡೀ ದೇಹಕ್ಕೆ ಪ್ರತಿನಿಧಿ ಹಾಗೂ ಶಿರಸ್ಸಾಗಿದ್ದಾನೆ. ದೇವರು ತನಗಾದ ಕಾರ್ಯವನ್ನು ಅವರಿಗೇ ಆದಂತೆ ಎಣಿಸುತ್ತಾನೆ. ಆತನು ಅವರಿಗೆ ಬದಲೀ ವ್ಯಕ್ತಿಯಾಗಿದ್ದನು, ಅವರ ಪ್ರತಿನಿಧಿಯಾಗಿದ್ದನು. ದೇವರ ದೃಷ್ಟಿಯಲ್ಲಿ, ವಿಶ್ವಾಸಿಗಳು ತಮ್ಮ ಪಾಪಗಳಲ್ಲಿ ಏನಾಗಿದ್ದರೋ ಅವೆಲ್ಲವೂ ಶಿಲುಬೆಗೇರಿಸಲ್ಪಟ್ಟಿದೆ ಹಾಗೂ ಮೃತಪಟ್ಟಿದೆ. **3-4**

**6:3-4** ಪೌಲನು ಇಲ್ಲಿ ಯಾವ “ದೀಕ್ಷಾಸ್ನಾನದ” ಬಗ್ಗೆ ಮಾತನಾಡುತ್ತಿದ್ದಾನೆ? “ದೀಕ್ಷಾಸ್ನಾನ” ಎಂಬ ಪದವನ್ನು ಗ್ರೀಕ್ ಭಾಷೆಯಿಂದ ಆರಿಸಿಕೊಳ್ಳಲಾಗಿದೆ. ಇಲ್ಲಿ ನಾವು “ದೀಕ್ಷಾಸ್ನಾನ ಹೊಂದಿದರು” ಮತ್ತು “ದೀಕ್ಷಾಸ್ನಾನ” ಎಂಬ ಪದಗಳಿಗೆ ಬದಲಾಗಿ ಗ್ರೀಕ್ ಪದವನ್ನೇ ಭಾಷಾಂತರ ಮಾಡುವದಾದರೆ ಈ ವಚನಗಳು ಈ ರೀತಿಯಾಗಿರುತ್ತವೆ – “ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ನೀರಿನೊಳಗೆ ಮುಳುಗಿಸಲ್ಪಟ್ಟ ನಾವೆಲ್ಲರೂ ಆತನ ಮರಣದಲ್ಲಿ ಪಾಲುದಾರರಾಗುವದಕ್ಕೆ ನೀರಿನಲ್ಲಿ ಮುಳುಗಿಸಲ್ಪಟ್ಟೆವು. ಹೀಗಿರಲಾಗಿ ನಾವು ನೀರಿನೊಳಗೆ ಮುಳುಗಿಸಲ್ಪಟ್ಟಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು.” “ಮುಳುಗಿಸಲ್ಪಟ್ಟೆವು” ಎಂದರೆ ನೀರಿನೊಳಗೆಯಲ್ಲ ಬದಲಾಗಿ ಕ್ರಿಸ್ತನಲ್ಲಿ ಮುಳುಗಿಸಲ್ಪಟ್ಟಿದ್ದೇವೆ ಎಂಬದಾಗಿದೆ. ಇದು ಯೇಸು ಕ್ರಿಸ್ತನೊಂದಿಗೆ ಐಕ್ಯತೆ, ಆತನೊಂದಿಗೆ ವಿಶೇಷವಾದ ಸಂಬಂಧದಲ್ಲಿ ಸೇರುವದು ಮತ್ತು ಪವಿತ್ರಾತ್ಮನ ಮೂಲಕ ಆತನ ದೇಹದ ಸದಸ್ಯರನ್ನಾಗಿ ಮಾಡಲ್ಪಡುವದನ್ನು ಸೂಚಿಸುತ್ತದೆ (1 ಕೊರಿಂಥ 12:12-13; ಯೋಹಾನ 17:21,23). ದೀಕ್ಷಾಸ್ನಾನ ಹೊಂದಿದಾರು ಮತ್ತು ದೀಕ್ಷಾಸ್ನಾನ ಎಂಬ ಗ್ರೀಕ್ ಪದಗಳನ್ನು ಹೊಸ ಒಡಂಬಡಿಕೆಯ ಇತರೆ ಸ್ಥಳಗಳಲ್ಲಿ ಆಲಂಕಾರಿಕ ಅರ್ಥದಲ್ಲಿ ಉಪಯೋಗಿಸಲಾಗಿದೆ.

ಲೂಕ 12:50; 1 ಕೊರಿಂಥ 10:2 ನೋಡಿರಿ. ನೀರಿನ ದೀಕ್ಷಾಸ್ನಾನವು ಆತ್ಮೀಕ ವಾಸ್ತವಗಳ ಸಂಕೇತವಾಗಿದ್ದು ಪೌಲನು ಇಲ್ಲಿ ಅದರ ಬಗ್ಗೆ ಮಾತನಾಡಿದ್ದಾನೆ. ನೀರಿನೊಳಗೆ ಇಳಿಯುವದು ಯೇಸು ಕ್ರಿಸ್ತನೊಂದಿಗೆ ಸಾಯುವದು ಮತ್ತು ಹೂಣಲ್ಪಡುವದರ ಬಗ್ಗೆ ಮಾತನಾಡುತ್ತದೆ. ನೀರಿನಿಂದ ಮೇಲಕ್ಕೆ ಬರುವದು ಯೇಸು ಕ್ರಿಸ್ತನೊಂದಿಗೆ ಪುನರುತ್ಥಾನಗೊಳ್ಳುವದರ ಬಗ್ಗೆ ಮಾತನಾಡುತ್ತದೆ. ಮತ್ತಾಯ 3:6; 28:19; ಮಾರ್ಕ 16:16; ಅಪೊ 2:38 ವಾಕ್ಯಗಳಲ್ಲಿ ನೀರಿನ ದೀಕ್ಷಾಸ್ನಾನದ ನೋಟ್ಸ್ ನೋಡಿರಿ ಹಾಗೂ ಅಪೊ 1:5 ರಲ್ಲಿ ಆತ್ಮನ ದೀಕ್ಷಾಸ್ನಾನದ ನೋಟ್ಸ್ ನೋಡಿರಿ. ದೇವರು ನಮಗೋಸ್ಕರ ಕ್ರಿಸ್ತನಲ್ಲಿ ಈ ಎಲ್ಲಾ ಕಾರ್ಯಗಳನ್ನು ಮಾಡಲು ಪ್ರಮುಖ ಕಾರಣವೇನೆಂದರೆ “ನಾವು ಹೊಸಬರಾಗಿ ನಡೆದುಕೊಳ್ಳಬೇಕು”, ಪುನರುತ್ಥಾನದ ಜೀವವನ್ನು ಹೊಂದಬೇಕು, ಅಂದರೆ ಪಾಪ ಹಾಗೂ ಮರಣದ ಪಾಶದಿಂದ ಬಿಡುಗಡೆ ಹೊಂದಿದ ಜೀವಿತವನ್ನು ಜೀವಿಸಬೇಕು. 2 ಕೊರಿಂಥ 5:17; ತೀತ 2:11-14 ನೋಡಿರಿ. **5**

**6:5** *“ಐಕ್ಯತೆ”*– ಇಲ್ಲಿ ಪ್ರಮುಖವಾದ ಪದವಾಗಿದೆ. ವಿಶ್ವಾಸಿಗಳು ಕ್ರಿಸ್ತನಲ್ಲಿದ್ದಾರೆ (8:1; ಯೋಹಾನ 15:4; ಎಫೆ 1:3-4; ಫಿಲಿಪ್ಪಿ 1:1; ಕೊಲೊ 1:2) ಮತ್ತು ಕ್ರಿಸ್ತನಲ್ಲಿ ಒಂದಾಗಿದ್ದಾರೆ (12:5; 1 ಕೊರಿಂಥ 6:15,17; 12:13. ಯೋಹಾನ 17:21-23ರಲ್ಲಿ ನೋಟ್ಸ್ ನೋಡಿರಿ). ಆತನ ಮರಣ ಅವರ ಮರಣವಾಗಿರುವಂತೆಯೇ, ಆತನ ಪುನರುತ್ಥಾನವು ಅವರ ಪುನರುತ್ಥಾನವಾಗಿದೆ (ಎಫೆ 2:6; ಕೊಲೊ 2:12; 3:1). **6**

**6:6** *“ನಮ್ಮ ಪೂರ್ವಸ್ವಭಾವ”*– ಅಕ್ಷರಾರ್ಥವಾಗಿ ನಮ್ಮ ಹಳೆಯ ಮನುಷ್ಯ. ಈ ಭಾವನೆಯ ಅರ್ಥ ವಿಶ್ವಾಸಿಗಳಾಗುವ ಮೊದಲು ನಾವು ಹೇಗಿದ್ದೆವು ಮತ್ತು ಕ್ರಿಸ್ತನಲ್ಲಿ ಹೊಸಬರಾಗಿದ್ದೇವೆ ಎಂಬದಾಗಿದೆ. “ಶಿಲುಬೆಗೆ ಹಾಕಲ್ಪಡುವದು” –ಇದನ್ನು ನಾವಾಗಿಯೇ ಮಾಡಲು ಆಗುವದಿಲ್ಲ. ಯೇಸು ಕ್ರಿಸ್ತನನ್ನು ಕ್ರಿ.ಶ 30ರಲ್ಲಿ ಶಿಲುಬೆಗೆ ಹಾಕಿದಾಗ ನಾವು ಆತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟೆವು (ವ 2; ಗಲಾ 2:20). **7**

**6:7** ದೇವರ ಎಣಿಕೆಯಲ್ಲಿ ವಿಶ್ವಾಸಿಗಳಾದ ನಾವು ಆದಾಮನಲ್ಲಿ ಪಾಪ ಮಾಡಿದ್ದೇವೆ ಮತ್ತು ಕ್ರಿಸ್ತನಲ್ಲಿ ಮೃತಪಟ್ಟಿದ್ದೇವೆ (2 ಕೊರಿಂಥ 5:14; ಕೊಲೊ 3:3). ಆದಾಮನ ಪಾಪದ ನಿಮಿತ್ತ ನಮ್ಮ ಮೇಲೆ ಶಿಕ್ಷೆ ಬಂದಿತು (5:16,18). ಯೇಸು ಕ್ರಿಸ್ತನ ಮರಣದ ಮೂಲಕ ಅದರಿಂದ ಬಿಡುಗಡೆ ದೊರೆಯಿತು. ಆತನೊಂದಿಗೆ ಸಾಯುವಾಗ ನಾವು ಪಾಪದಿಂದ “ಸ್ವತಂತ್ರರಾಗುತ್ತೇವೆ”, ಪಾಪದೊಂದಿಗಿರುವ ಸಂಬಂಧ ಮುರಿಯಲ್ಪಡುತ್ತದೆ ಮತ್ತು ದೇವರು ನಮ್ಮ ಪಾಪಗಳನ್ನು ಎಂದಿಗೂ ತನ್ನ ಎಣಿಕೆಯಲ್ಲಿ ಇಟ್ಟುಕೊಳ್ಳುವದಿಲ್ಲ (4:7-8). ಯೇಸು ಕ್ರಿಸ್ತನ ಶ್ರಮೆಗಳು ಮತ್ತು ಮರಣದ ಮೂಲಕ ನಮ್ಮ ಪಾಪಗಳೆಲ್ಲವೂ ಪರಿಹಾರವಾಗಿವೆ. ಮೇಲೆ ಹೇಳಿರುವ ವಿಷಯಗಳೆಲ್ಲವೂ ವಾಸ್ತವಗಳಾಗಿದ್ದು ಪ್ರತಿಯೊಬ್ಬ ವಿಶ್ವಾಸಿಯ ವಿಷಯದಲ್ಲಿಯೂ ಸತ್ಯವಾಗಿವೆಯೇ ಹೊರತು ಇವು ಕೆಲವರಿಗೆ ಮಾತ್ರ

ಅನ್ವಯಿಸುವದಿಲ್ಲ. **8**

**6:8** ವಚನ 4. ವಿಶ್ವಾಸಿಗಳು ಈಗ ದೇವರು ತಮಗೆ ಕೊಟ್ಟಿರುವ ಹೊಸ ಆತ್ಮೀಕ ಜೀವಿತವನ್ನು ಕ್ರಿಸ್ತನೊಂದಿಗೆ ಜೀವಿಸುತ್ತಿದ್ದಾರೆ (ಯೋಹಾನ 5:24; 14:23), ಮತ್ತು ಅವರು ಆತನೊಂದಿಗೆ ಸದಾಕಾಲವೂ ಜೀವಿಸುತ್ತಾರೆ (1 ಥೆಸ 4:17). **9-10**

**6:9-10** ಪಾಪದ ಫಲಿತಾಂಶ ಮರಣ (5:12; 6:23). ಯೇಸು ಕ್ರಿಸ್ತನು ವಿಶ್ವಾಸಿಗಳ ಪಾಪ ಪರಿಹಾರಕ್ಕಾಗಿ ಅವರ ಸ್ಥಾನದಲ್ಲಿ ತನ್ನ ಪ್ರಾಣ ಕೊಟ್ಟನು (3:25; ಯೋಹಾನ 1:29; 1 ಕೊರಿಂಥ 15:3). ಇದನ್ನು ಆತನು ಎಲ್ಲಾ ಕಾಲಗಳಿಗೂ ಅನ್ವಯವಾಗುವ ಹಾಗೆ ಒಂದೇ ಸಲ ಮಾಡಿದನು (ಇಬ್ರಿ 10:10,14; ಯೋಹಾನ 19:30). ಈಗ ಆತನು ಸದಾಕಾಲವೂ ಜೀವಿಸುವಾತನಾಗಿದ್ದಾನೆ (ಪ್ರಕ 1:18). ಆತನು ದೇವರಿಗಾಗಿ, ತಂದೆಯಾದ ದೇವರನ್ನು ಮೆಚ್ಚಿಸಲು ಮತ್ತು ಆತನ ಚಿತ್ತವನ್ನು ನೆರವೇರಿಸಲು (ಯೋಹಾನ 8:29) ಜೀವಿಸುತ್ತಾನೆಯೇ ಹೊರತು ತನಗಾಗಿ ಮತ್ತು ಪಾಪಕ್ಕಾಗಿ ಜೀವಿಸುವದಿಲ್ಲ. **11**

**6:11** ಮೇಲಿನ ವಿಷಯದಲ್ಲಿ ವಿಶ್ವಾಸಿಗಳು ಕ್ರಿಸ್ತನ ಹಾಗಿರಬೇಕು ಮತ್ತು ಆತನಂತೆಯೇ ದೇವರಿಗಾಗಿ ಜೀವಿಸಬೇಕು. ಆತನ ಹಾಗೆಯೇ ಅವರ ಮೇಲೆ "ಮರಣಕ್ಕೆ ಇನ್ನು ಯಾವುದೇ ಅಧಿಕಾರವಿಲ್ಲ" (ಯೋಹಾನ 11:25-26). ದೇವರಂತೆಯೇ ಅವರು ಕಾರ್ಯಗಳನ್ನು ಎಣಿಸಬೇಕು – ಕ್ರಿಸ್ತನು ಸತ್ತಾಗ ನಾವು ಸತ್ತಿದ್ದೇವೆ ಮತ್ತು ಆತನಲ್ಲಿ ಹೊಸ ಜೀವವನ್ನು ಹೊಂದಿದ್ದೇವೆ. **12**

**6:12** ವಿಶ್ವಾಸಿಗಳ "ಮೃತ ದೇಹದಲ್ಲಿ" ಪಾಪವು ಇಲ್ಲ ಎಂಬದಾಗಿ ಪೌಲನು ಹೇಳುತ್ತಿಲ್ಲ (ಇನ್ನೂ ಇದೆ ಎಂಬದು ಅವನಿಗೆ ಗೊತ್ತು – 7:18,25; ಗಲಾ 5:17; ಎಫೆ 4:22; 1 ಯೋಹಾನ 1:8). ಪಾಪವು "ಆಳ್ವಿಕೆ" ಮಾಡಲು ಅವಕಾಶ ಕೊಡಬಾರದೆಂದು ಅವನು ಹೇಳುತ್ತಿದ್ದಾನೆ (5:21). ಪಾಪವು ವಿಶ್ವಾಸಿಗಳ ಮೇಲೆ ಇನ್ನೆಂದಿಗೂ ದೊರೆತನ ಮಾಡಬಾರದು (ವ 14; ಯೋಹಾನ 8:31-36). **13**

**6:13** ದೇವರು ವಿಶ್ವಾಸಿಗಳನ್ನು "ಮರಣದಿಂದ ಜೀವಕ್ಕೆ ಸೇರಿಸಿದ್ದಾನೆ" (ಯೋಹಾನ 5:24). ಈಗ ಅವರು ತಮ್ಮ ಹಳೆಯ ಯಜಮಾನನಾದ ಪಾಪದ ಕಡೆಗೆ ತಿರುಗಿಕೊಳ್ಳಬಾರದು ಮತ್ತು ತಮ್ಮ ಕೈಗಳು, ಪಾದಗಳು, ಕಣ್ಣುಗಳು, ಕಿವಿಗಳು ಮತ್ತು ಬಾಯಿಯನ್ನು ಅದನ್ನು ಒಪ್ಪಿಸಬಾರದು. ಅವರಿಗೆ ಈಗ ಹೊಸ ಯಜಮಾನನಿದ್ದಾನೆ, ಆತನು ಒಬ್ಬನೇ ನಿಜವಾದ, ಜೀವಿಸುವ ದೇವರಾಗಿದ್ದಾನೆ ಆದ್ದರಿಂದ ಅವರು ತಮ್ಮನ್ನು ಹಾಗೂ ತಮಗಿರುವದನ್ನು ಸಂಪೂರ್ಣವಾಗಿ ಆತನಿಗೆ ಒಪ್ಪಿಸಬೇಕು (12:1). ಪಾಪವಾಗಲಿ ಅಥವಾ ಅವರಾಗಲಿ ಅವರಿಗೆ ಯಜಮಾನರಾಗಿರಬಾರದು ಬದಲಾಗಿ ದೇವರು ಮಾತ್ರವೇ ಅವರಿಗೆ ಯಜಮಾನನಾಗಿರಬೇಕು. ಒಂದುವೇಳೆ ವಿಶ್ವಾಸಿಗಳು ಇಲ್ಲಿ ವಿಫಲರಾದರೆ ಪಾಪವು ತಮ್ಮನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತದೆ ಮತ್ತು ಆಳ್ವಿಕೆ ಮಾಡಲು ಮುಂದಾಗುತ್ತದೆ

ಎಂಬದನ್ನು ತಿಳಿದುಕೊಳ್ಳುತ್ತಾರೆ. **14**

**6:14** ಪಾಪದಿಂದ ತೊಂದರೆಗೊಳಪಟ್ಟಿರುವ ಮತ್ತು ಯಾತನೆಗೊಳಪಟ್ಟಿರುವ ವಿಶ್ವಾಸಿಗಳಿಗೆ ಸಮಧುರವಾದ ಸತ್ಯವನ್ನು ಇಲ್ಲಿ ತಿಳಿಸಲಾಗಿದೆ. ಧರ್ಮಶಾಸ್ತ್ರ ಪಾಲನೆಯ ಪ್ರಯತ್ನ ಅಥವಾ "ಒಳ್ಳೆಯ ಕಾರ್ಯಗಳಿಂದ" ಪಾಪವನ್ನು ಜಯಿಸಬಹುದು ಎಂಬದಾಗಿ ಆಲೋಚನೆ ಮಾಡಬೇಡಿರಿ. ಪಾಪದ ದಬ್ಬಾಳಿಕೆಯಿಂದ ಹೊರಬರಲು ದೇವರ ಕೃಪೆಯೊಂದೇ ನಮ್ಮನ್ನು ಬಲಪಡಿಸುವದಾಗಿದೆ-ಕೃಪೆ ನಮ್ಮನ್ನು ಕ್ಷಮಾಪಣೆ ಹಾಗೂ ನಿತ್ಯಜೀವಕ್ಕೆ ನಡೆಸುತ್ತದೆ, ಪವಿತ್ರಾತ್ಮನನ್ನು ಅನುಗ್ರಹಿಸುತ್ತದೆ ಮತ್ತು ಪಾಪದ ವಿರುದ್ಧ ಮಾಡುವ ಹೋರಾಟವನ್ನು ಜಯಿಸಲು ಬಲ ಶಕ್ತಿಯನ್ನು ಒದಗಿಸುತ್ತದೆ.

*"ಧರ್ಮಶಾಸ್ತ್ರಕ್ಕೆ ಅಧೀನರಲ್ಲ"*– 7:1-4 ಹೋಲಿಸಿ ನೋಡಿರಿ.

*"ಕೃಪೆಗೆ ಅಧೀನರು"*– 5:21 - ಸುಮಧುರ ಮತ್ತು ಅಧಿಕಾರವುಳ್ಳ ಯಜಮಾನನು! **15**

**6:15** ವಚನ 1. ಈ ಪ್ರಶ್ನೆ ಉದ್ಭವಿಸಲು ಕಾರಣ, ನಿಯಮಗಳನ್ನು ಸೃಷ್ಟಿಸಿ ಜಾರಿಗೆ ತರುವಾಗ ಮಾತ್ರವೇ ಪಾಪವನ್ನು ಪರಿಹರಿಸಲು ಸಾಧ್ಯ ಎಂಬದು ಜನರ ಹುದುವಾದ ಭಾವನೆಯಾಗಿದೆ. ಅಂಥ ಜನರು ಕೃಪೆಯ ವಿಷಯದಲ್ಲಿ ಪೌಲನ ಬೋಧನೆಯನ್ನು ಅರ್ಥಮಾಡಿಕೊಳ್ಳದೆ ಹೋದರೆ, ಆತನು ಪಾಪ ಮಾಡಲು ವಿಶ್ವಾಸಿಗಳಿಗೆ ಪರವಾನಗಿ ಕೊಡುತ್ತಿದ್ದಾನೆ ಎಂದು ಹೇಳುತ್ತಾರೆ. ಇದು ಸಂಪೂರ್ಣ ತಪ್ಪು ತಿಳುವಳಿಕೆಯಾಗಿದೆ. ನಿಜವಾಗಿ ಹೇಳುವದಾದರೆ ಪೌಲನು ಪಾಪದಿಂದ ದೂರವಿರುವ ಮಾರ್ಗವನ್ನು ಬೋಧಿಸುತ್ತಿದ್ದಾನೆ. ಸುವಾರ್ತೆಯು ರಕ್ಷಣೆ ಹೊಂದಲು ಸಹಾಯ ಮಾಡುವ ದೇವರ ಬಲವಾಗಿದೆ (1:16). ಅದು ಜನರನ್ನು ನಿಜವಾದ ಸೇವಕರನ್ನಾಗಿ ಮಾಡುತ್ತದೆ. **16**

**6:16** ನಾವು "ಸ್ವತಂತ್ರರಾಗಿ" ಪಾಪ ಮಾಡಬಹುದು ಎಂದು ಜನರು ಯೋಚಿಸುತ್ತಾರೆ. ನಿಜವಾಗಿ ಹೇಳುವದಾದರೆ ಅವರು ಪಾಪದಲ್ಲಿ ಮುಂದುವರೆಯುವಾಗ ತಮಗೆ ಯಾವುದೇ ಸ್ವಾತಂತ್ರ್ಯವಿಲ್ಲ ಮತ್ತು ತಾವು ಪಾಪಕ್ಕೆ ದಾಸರಾಗಿದ್ದೇವೆ ಎಂಬದು ಅವರಿಗೆ ಮನವರಿಕೆಯಾಗುತ್ತದೆ (ಯೋಹಾನ 8:34; 2 ಪೇತ್ರ 2:19). ಅವರು ಪಾಪಕ್ಕೆ ಒಳಗಾಗುವಾಗ, ಪಾಪವು ಅವರ ಮೇಲೆ ಅಧಿಕಾರ ನಡೆಸುತ್ತದೆ, ಅವರನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುತ್ತದೆ ಹಾಗೂ ಮತ್ತೆಮತ್ತೆ ಪಾಪ ಮಾಡುವಂತೆ ಅವರನ್ನು ಪ್ರೋತ್ಸಾಹಪಡಿಸುತ್ತದೆ. ಈ ಮಾರ್ಗವು ಮರಣದಲ್ಲಿ ಕೊನೆಗೊಳ್ಳುತ್ತದೆ. ನಮಗೆ ಅವಕಾಶವಿರುವ ಒಂದೇ ಒಂದು ಮಾರ್ಗವಿದೆ. ಅದು ದೇವರಿಗೆ ವಿಧೇಯರಾಗಿ ನಡೆದುಕೊಳ್ಳುವ ಮಾರ್ಗ, ಇದರ ಅರ್ಥ ಪಾಪವನ್ನು ನಿರಾಕರಿಸುವದು ಮತ್ತು ಅದರ ಪಾಲಿಗೆ ಸತ್ತವರೆಂದು ಎಣಿಸಿಕೊಳ್ಳುವದು. ಈ ಮಾರ್ಗವು ನೀತಿಯ ಕಡೆಗೆ ನಡೆಸುತ್ತದೆ. ಈ ಎರಡು ಮಾರ್ಗಗಳ ನಡುವೆ ಮಧ್ಯದಲ್ಲಿ ನೆಲೆಯಾವುದೂ ಇಲ್ಲ. ಮತ್ತಾಯ 7:13-14 ಹೋಲಿಸಿ ನೋಡಿರಿ.

*"ದಾಸರು"*– ಕೆಜೆವಿ ಆವೃತ್ತಿಯಲ್ಲಿ "ಸೇವಕರು" ಎಂದು ಹೇಳಲಾಗಿದೆ. ಇದುವೇ ಗ್ರೀಕ್

ಪದದ ಸೂಕ್ತವಾದ ಭಾಷಾಂತರವಾಗಿದೆ ಇದರ ಅರ್ಥ ಸೇವಕರು ಅಥವಾ ದಾಸರು, ಆದರೆ ದಾಸರು ಎಂಬದೇ ಸೂಕ್ತವಾದ ಭಾಷಾಂತರವೆನಿಸುತ್ತದೆ ಮತ್ತು ಮೂಲ ಗ್ರೀಕ್ ಪದಕ್ಕೆ ಸರಿಯಾದ ಅರ್ಥವನ್ನು ಕೊಡುತ್ತದೆ. **17-18**

**6:17-18** ವಿಶ್ವಾಸಿಗಳಿಗೆ ಸ್ವಾತಂತ್ರ್ಯವು ಹೇಗೆ ದೊರೆಯುವದೆಂದು ನೋಡಿರಿ. ಅವರಿಗೆ ಅದು ಸುವಾರ್ತೆಗೆ ವಿಧೇಯರಾಗುವದು ಮತ್ತು ಯೇಸು ಕ್ರಿಸ್ತನ ಬೋಧನೆಗಳಾಗಿವೆ. "ಮನಃಪೂರ್ವಕವಾಗಿ ಅಧೀನರಾದದ್ದು" ಪದವನ್ನು ಗಮನಿಸಿರಿ. ತಮ್ಮ ಪಾಪಗಳನ್ನು ಬಿಡುವಂತೆ ಮತ್ತು ದೇವರ ಸೇವಕರಾಗುವಂತೆ ಅವರಿಗೆ ಒತ್ತಾಯಪಡಿಸಲಿಲ್ಲ. ಅವರು ಮನಃಪೂರ್ವಕವಾಗಿಯೇ ಅದನ್ನು ಮಾಡಿದರು. **18**

**6:18** *"ನೀತಿಗೆ ದಾಸರು"*– ಇದು ಒತ್ತಾಯಪೂರ್ವಕವಾದ ಬಂಧನವಲ್ಲ ಬದಲಾಗಿ ಕೃಪೆಯುಳ್ಳ ಯಾಜಮಾನನ ಚಿತ್ತದಂತೆ ನಡೆಯಲು ಮನಃಪೂರ್ವಕವಾಗಿ ಸಂತೋಷದಿಂದ ಒಪ್ಪಿಸಿಕೊಡುವದಾಗಿದೆ. **19**

**6:19** ವಚನ 13.

*"ಒಪ್ಪಿಸಿಕೊಡುವದು" ಅಥವಾ "ಅರ್ಪಿಸುವದು"*– ವ 13; 12:1-2. ಇದರ ಫಲಿತಾಂಶ ಪರಿಶುದ್ಧವಾದ ಜೀವಿತವಾಗಿದೆ.

*"ದಾಸರು"*– ವಿಶ್ವಾಸಿಗಳು ತಮ್ಮ ಯಜಮಾನನಿಗೆ ಅಧೀನರಾಗಿರುವರು (ವ 18). ಆದರೆ ಅವರು ಮನಃಪೂರ್ವಕವಾಗಿ ಈ ಸತ್ಯದನುಸಾರವಾಗಿಯೇ ಜೀವಿಸಬೇಕು. ತಮ್ಮ ಆಲೋಚನೆಗಳಲ್ಲಿ, ಉದ್ದೇಶಗಳಲ್ಲಿ ಮತ್ತು ಕ್ರಿಯೆಗಳಲ್ಲಿ ಅವರು ನೀತಿವಂತಿಕೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಬಾರದು. ಈ "ದಾಸತ್ವವು" ಅವರನ್ನು ಲೋಕದಲ್ಲಿಯೇ ಅತ್ಯಂತ ಸಂತೋಷಕರವಾದ ಸ್ಥಿತಿಗೆ ನಡೆಸುತ್ತದೆ, ದೇವರ ಸೇವೆ ಮಾಡುವ ಸ್ವಾತಂತ್ರ್ಯ ಕೊಡುತ್ತದೆ ಮತ್ತು ತಾವು ಸೇವಿಸುವ ದೇವರಿಂದ ಘನವಾದ ಆಶೀರ್ವಾದಗಳನ್ನು ಪಡೆಯುವಂತೆ ಮಾಡುತ್ತದೆ (ಮತ್ತಾಯ 5:6,10; 6:33 ಹೋಲಿಸಿ ನೋಡಿರಿ). ಅಂಥ ಜನರಿಗೆ ಒಳ್ಳೆಯ ಕಾರ್ಯಗಳನ್ನು ಮಾಡಲು ಧರ್ಮಶಾಸ್ತ್ರದ ಒತ್ತಾಯ ಬೇಕಿರುವದಿಲ್ಲ. ಅವರು ಪೂರ್ಣಹೃದಯದಿಂದ ಒಳ್ಳೆಯದನ್ನು ಮಾಡಲು ಬಯಸುತ್ತಾರೆ. ಕ್ರಿಸ್ತನಲ್ಲಿ ನಿಜವಾದ ನಂಬಿಕೆಯನ್ನಿಡುವದರಿಂದ ದೊರೆಯುವ ಪ್ರಯೋಜನಗಳು ಇವುಗಳೇ ಆಗಿವೆ. ಇದರ ಅರ್ಥ ವಿಶ್ವಾಸಿಗಳಿಗೆ ಪಾಪ ಮಾಡುವ ಶೋಧನೆ ಎದುರಾಗುವದೇ ಇಲ್ಲ ಅಥವಾ ಅವರು ಬಿದ್ದು ಹೋಗುವದೇ ಇಲ್ಲ ಎಂಬದಾಗಿಯಲ್ಲ (ಈ ವಾಕ್ಯದಲ್ಲಿರುವ "ಬಲಹೀನತೆ" ಪದವನ್ನು ಗಮನಿಸಿರಿ. 7:18 ಹೋಲಿಸಿ ನೋಡಿರಿ). ಇದರ ಅರ್ಥ ಅವರ ಜೀವಿತದ ಎಲ್ಲಾ ಕಾರ್ಯಗಳು ನೀತಿಯ ನಿಯಂತ್ರಣದಲ್ಲಿರಬೇಕು. **20**

**6:20** ಒಬ್ಬ ವ್ಯಕ್ತಿಗೆ ಇಬ್ಬರು ಯಜಮಾನರು ಇರಲು ಆಗುವದಿಲ್ಲ, ಪಾಪ ಮತ್ತು ನೀತಿವಂತಿಕೆ (ಮತ್ತಾಯ 6:24ರೊಂದಿಗೆ ಹೋಲಿಸಿರಿ). ಪಾಪದ ದಾಸರು ಮಾನವರು ಹೇಳುವ

ನೀತಿಯ ಕಾರ್ಯಗಳನ್ನು ಎಂದಿಗೂ ಮಾಡುವದಿಲ್ಲ ಅಥವಾ ಭಕ್ತಿಯುಳ್ಳವರಾಗಿರಲು ಆಗುವದಿಲ್ಲ (ಅವರು ಅತ್ಯಂತ ಭಕ್ತಿಯುಳ್ಳವರಾಗಿರಬಹುದು) ಎಂದು ಪೌಲನು ಹೇಳುತ್ತಿಲ್ಲ. ದೇವರ ದೃಷ್ಟಿಗೆ ಪಾಪಿಗಳ "ಭಕ್ತಿಯ ಕಾರ್ಯಗಳು" ಪಾಪದ ಕಲೆಯಿಂದ ತುಂಬಿದವುಗಳಾಗಿವೆ (ಯೆಶಾಯ 64:6) ಮತ್ತು ಅವುಗಳನ್ನು ಪಾಪದ ಸೇವೆಯಲ್ಲಿ ಮಾಡಿದವುಗಳಾಗಿರುತ್ತವೆ. **21**

**6:21** ರೋಮಾಪುರದಲ್ಲಿದ್ದ ವಿಶ್ವಾಸಿಗಳು ನಿಜವಾಗಿಯೂ ಪಶ್ಚಾತ್ತಾಪಪಟ್ಟಿದ್ದರು ಮತ್ತು ದೇವರಿಗೆ ಒಪ್ಪಿಸಿಕೊಟ್ಟಿದ್ದರು, ಆದ್ದರಿಂದ ಅವರಿಗೆ ತಮ್ಮ ಹಿಂದಿನ ಮಾರ್ಗಗಳ ವಿಷಯದಲ್ಲಿ ನಾಚಿಕೆಯಿರಲಿಲ್ಲ. ಒಂದುವೇಳೆ ಒಬ್ಬ ವ್ಯಕ್ತಿ ನಾನು ಕ್ರಿಸ್ತನಲ್ಲಿ ವಿಶ್ವಾಸಿಯಾಗಿದ್ದೇನೆ ಎಂದು ಹೇಳಿದರೆ ಮತ್ತು ತನ್ನ ಹಿಂದಿನ ಮಾರ್ಗಗಳ ವಿಷಯದಲ್ಲಿ ನಾಚಿಕೆಯಿಲ್ಲದವನಾಗಿದ್ದರೆ ಏನೋ ದೊಡ್ಡ ಸಮಸ್ಯೆಯಿರುತ್ತದೆ ಹಾಗೂ ಅವನು ಬಹುಬೇಗನೇ ತನ್ನ ಹಿಂದಿನ ಮಾರ್ಗಗಳ ಕಡೆಗೆ ವಾಲುತ್ತಾನೆ (2 ಪೇತ್ರ 2:22). ಮತ್ತು ಯಾರಿಗೇ ಆದರೂ ಅವರ ಪಾಪದ ಜೀವಿತ, ಅವರು ಏನೇ ಹೇಳಿದರೂ ಮರಣದ ಮೂಲಕ ಅಂತ್ಯಗೊಳ್ಳುತ್ತದೆ. **22**

**6:22** ಪರಿಶುದ್ಧತೆ ಮತ್ತು ನಿತ್ಯಜೀವ ಹೊಂದಲು ಏಕೈಕ ಮಾರ್ಗ ದೇವರಿಗೆ "ದಾಸರಾಗುವದು", ವಿಮೋಚಿಸಲ್ಪಟ್ಟ ದೇವರ ಸ್ವಾಸ್ಥ್ಯ ವಾಗುವದು, ದೇವರ ಸ್ವರಕ್ಕೆ ವಿಧೇಯರಾಗಲು ಸಿದ್ಧರಾಗಿರುವದೇ ಆಗಿದೆ. ಇದುವೇ ಆತ್ಮೀಕ ಸ್ವಾತಂತ್ರ್ಯ ದ ಮಾರ್ಗವೂ ಆಗಿದೆ (ಗಲಾ 5:1,13; ಯೋಹಾನ 8:36), ಮನಃಪೂರಕವಾಗಿ ಮತ್ತು ಉಲ್ಲಾಸಕರವಾಗಿ ದೇವರ ಸೇವೆಮಾಡಲು ಸ್ವಾತಂತ್ರ್ಯ ಇರುತ್ತದೆ. **23**

**6:23** 16-22ರ ವ್ಯತ್ಯಾಸವು, ಈಗಲೂ ಪಾಪದ ದಾಸತ್ವ ಮತ್ತು ದೇವರ ದಾಸತ್ವದ ನಡುವೆಯಿರುವದಾಗಿದೆ. ಪಾಪವು ತನ್ನ ದಾಸರಿಗೆ "ಸಂಬಳ" ಕೊಡುತ್ತದೆ – ಅದುವೇ ಮರಣ. ಈ ಮರಣವು ದೇವರಿಂದ ನಿತ್ಯವಾದ ಬೇರ್ಪಡುವಿಕೆಯಾಗಿದೆ (ಪ್ರಕ 21:8; 2 ಥೆಸ 1:8-9; ಮತ್ತಾಯ 25:41). ಪಾಪದ ದಾಸರು ತಾವು ಯಾವುದಕ್ಕೆ ಅರ್ಹರೋ ಅದನ್ನು ತಪ್ಪದೇ ಪಡೆಯುತ್ತಾರೆ ಮತ್ತು ತಮ್ಮ ಸ್ವಭಾವದ ಮೂಲಕ ಸಂಪಾದಿಸಿಕೊಳ್ಳುತ್ತಾರೆ. ಅದರೆ ದೇವರು ತನ್ನ "ದಾಸರಿಗೆ" ಸಂಬಳವನ್ನಲ್ಲ ಬದಲಾಗಿ ವರ ಕೊಡುತ್ತಾನೆ – ಅದುವೇ ನಿತ್ಯಜೀವ. ಇದಕ್ಕೆ ಅವರು ಅರ್ಹರಲ್ಲ ಮತ್ತು ಇದನ್ನು ಸಂಪಾದಿಸಿಕೊಳ್ಳಲು ಅವರಿಂದ ಅಗುವದಿಲ್ಲ (4:4-5; 5:17; ಲೂಕ 17:10; ಎಫೆ 2:8-9; ಯೋಹಾನ 3:16; 4:14 ನೋಡಿರಿ). ಒಬ್ಬನು ದೇವರಿಗೆ ಹೇಗೆ "ದಾಸನಾಗುತ್ತಾನೆ?" ಪಶ್ಚಾತ್ತಾಪಪಟ್ಟು, ಕ್ರಿಸ್ತನಲ್ಲಿ ಭರವಸೆಯನ್ನಿಟ್ಟರೆ ಮಾತ್ರ ಸಾಧ್ಯವಾಗುತ್ತದೆ. ವಿಶ್ವಾಸಿಗಳೆಲ್ಲರೂ ದೇವರು ಖರೀದಿಸಿರುವ ಸ್ವಾಸ್ಥ್ಯವಾಗಿದ್ದಾರೆ ಮತ್ತು ಆತನ ಸೇವೆ ಮಾಡುವ ಮನಸ್ಸುಳ್ಳವರಾಗಿರುತ್ತಾರೆ. ಅವರು ನಿತ್ಯಜೀವ ಪಡೆಯಲು ಆತನ ಸೇವೆ ಮಾಡುವದಿಲ್ಲ ಬದಲಾಗಿ ಅವರಿಗೆ ನಿತ್ಯಜೀವ ಇರುವದರಿಂದ ಆತನ ಸೇವೆ

ಮಾಡುತ್ತಾರೆ.

# 7 1

**7:1** ದೇವರು ಮೋಶೆಗೆ ಕೊಟ್ಟ ಧರ್ಮಶಾಸ್ತ್ರಕ್ಕೆ ಈಗಾಗಲೇ ಮೃತಪಟ್ಟಿರುವವರ ಮೇಲೆ ಯಾವ ಅಧಿಕಾರವೂ ಇಲ್ಲ. ಮತ್ತು ಪೌಲನು ಹೇಳಿರುವದೇನೆಂದರೆ ವಿಶ್ವಾಸಿಗಳು ಕ್ರಿಸ್ತನಲ್ಲಿ ಮೃತಪಟ್ಟಿದ್ದಾರೆ (6:6-8). ಈ ಕಾರಣದಿಂದ ಅವರು ಧರ್ಮಶಾಸ್ತ್ರಕ್ಕೆ ಅಧೀನರಲ್ಲ (6:14) ಮತ್ತು ಧರ್ಮಶಾಸ್ತ್ರವು ಅವರಿಗೆ ವಿರುದ್ಧವಾಗಿ ತೀರ್ಪು ಕೊಡಲು ಆಗುವದಿಲ್ಲ ಆದ್ದರಿಂದ ಅವರು ಸುರಕ್ಷಿತರಾಗಿದ್ದಾರೆ. **2**

**7:2** ಆದಿ 2:24; ಮತ್ತಾಯ 19:3-9. ಮೋಶೆಯ ಧರ್ಮಶಾಸ್ತ್ರವು ಗಂಡನಿಗೆ ವಿಚ್ಛೇದನ ಕೊಡುವ ಅಧಿಕಾರವನ್ನು ಹೆಂಡತಿಗೆ ಕೊಟ್ಟಿಲ್ಲ. **3-4**

**7:3-4** ಒಬ್ಬ ಸ್ತ್ರೀ ತನ್ನ ಮೊದಲ ಗಂಡ ಮೃತಪಟ್ಟರೆ ಇನ್ನೊಂದು ಮದುವೆ ಮಾಡಿಕೊಳ್ಳಬಹುದು. ಪೌಲನ ಅಳವಡಿಸುವಿಕೆಯಲ್ಲಿ ಮೊದಲನೆಯ ಗಂಡ ಯಾರು? ಕೆಲವು ವ್ಯಾಖ್ಯಾನಕಾರರು ಹೇಳುವದೇನೆಂದರೆ ಆತನು ಕ್ರಿಸ್ತನಾಗಿದ್ದು ತನ್ನ ಮರಣದ ಮೊದಲು ಧರ್ಮಶಾಸ್ತ್ರದ ಅಧೀನದಲ್ಲಿರುವವನಾಗಿದ್ದಾನೆ (ಗಲಾ 4:4). ಆದರೂ ಬಹುತೇಕ ಜನ ಹೇಳುವದೇನೆಂದರೆ ಗಂಡ ಎಂದರೆ ದೇವರು ಮೋಶೆಯ ಮೂಲಕ ಕೊಟ್ಟಿರುವ ಧರ್ಮಶಾಸ್ತ್ರ ಮತ್ತು ಯೇಸು ಕ್ರಿಸ್ತನು ಪ್ರಾಣ ಕೊಟ್ಟಾಗ ವಿಶ್ವಾಸಿಗಳ ಪಾಲಿಗೆ ಆ ಧರ್ಮಶಾಸ್ತ್ರವು ಸತ್ತು ಹೋಯಿತು. ಆದರೆ ಮೊದಲನೆಯ ಗಂಡ ಧರ್ಮಶಾಸ್ತ್ರವಾಗಿರಲಿ ಅಥವಾ ಯೇಸು ಕ್ರಿಸ್ತನು ಧರ್ಮಶಾಸ್ತ್ರಕ್ಕೆ ಅಧೀನನಾಗಿರಲಿ, ಪೌಲನು ಹೇಳುವ ಪ್ರಮುಖ ಅಂಶ ಒಂದೇ ಆಗಿದೆ – ಕ್ರಿಸ್ತನು ಸತ್ತಾಗ ವಿಶ್ವಾಸಿಗಳೂ ಸತ್ತುಹೋದರು (6:6-8). ಮತ್ತು ಮೃತಪಟ್ಟವರಾಗಿ ಧರ್ಮಶಾಸ್ತ್ರದ ಅಧಿಕಾರದಿಂದ ಅವರು ಸ್ವತಂತ್ರರಾಗಿದ್ದಾರೆ, ಆತ್ಮೀಕ "ಗಂಡನನ್ನು" ಪಡೆಯಲು ಸ್ವತಂತ್ರರಾಗಿದ್ದಾರೆ, ದೇವರೊಂದಿಗೆ ಹೊಸ ಸಂಬಂಧವುಳ್ಳವರಾಗಿರಲು ಸ್ವತಂತ್ರರಾಗಿದ್ದಾರೆ. ಕರ್ತನಾದ ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಹಾಗೂ ಕರ್ತನನ್ನಾಗಿ ಅಂಗೀಕರಿಸಿಕೊಳ್ಳುವ ಮೂಲಕ ಆತನ "ಮದಲಗಿತ್ತಿಯಾಗುತ್ತಾರೆ". ಮತ್ತಾಯ 22:2; ಯೋಹಾನ 3:29; 2 ಕೊರಿಂಥ 11:2; ಎಫೆ 5:25-33; ಪ್ರಕ 19:7 ನೋಡಿರಿ. ಯೇಸು ಕ್ರಿಸ್ತನು ಮತ್ತು ವಿಶ್ವಾಸಿಗಳ ಈ ಅನ್ಯೋನ್ಯತೆಯ ಉದ್ದೇಶವನ್ನು ಗಮನಿಸಿರಿ – ದೇವರಿಗೆ "ಆತ್ಮೀಕ ಫಲ". ಯೋಹಾನ 15:1-8. **5**

**7:5** ಧರ್ಮಶಾಸ್ತ್ರವು ದುರಾಶೆಗಳಿಗೆ "ಪ್ರೇರಣೆ" ಕೊಡುತ್ತಿತ್ತು. ವ 7-9; 3:20; 4:15; 5:20 ನೋಡಿರಿ. ಯಾವುದನ್ನಾದರೂ ಮಾಡಬಾರದೆಂಬ ಆಜ್ಞೆಯು ಪಾಪ ಸ್ವಭಾವವನ್ನು ಮಾಡುವಂತೆ ಮಾಡುತ್ತದೆ. ನಿಷಿದ್ಧ ಫಲವು ಸಿಹಿಯಾಗಿ ತೋರುತ್ತದೆ. ಆದರೆ ಅವೆಲ್ಲವುಗಳ ಫಲಿತಾಂಶ ಮರಣವಾಗಿದೆ (6:16,21,23).

*"ಶರೀರಭಾವ"*– ಪೌಲನು ಇಲ್ಲಿ ಉಪಯೋಗಿಸಿರುವ ಗ್ರೀಕ್ ಪದ (ಸಾರ್ಕ್ಸಿನಿಂದ ಸಾರ್ಕಿ) ಕೊಡುವ ಅರ್ಥವೇನೆಂದರೆ ಜನ ಸ್ವಾಭಾವಿಕವಾಗಿ ಏನಾಗಿದ್ದಾರೆ – ಅವಿಧೇಯರು ಮತ್ತು ಪಾಪಿಗಳಾಗಿದ್ದಾರೆ ಹಾಗೂ ತನ್ನ ದುರಾಶೆಗಳಿಗೆ ಒಳಗಾಗಿದ್ದಾರೆ. ಅವಿಧೇಯನಾಗಿರುವ ಮಾನವನು ತನ್ನ ಪ್ರಾಣ, ಆತ್ಮ ಮತ್ತು ಶರೀರದಲ್ಲಿ ಹೇಗಿದ್ದಾನೆಂಬದನ್ನು ಇದು ಸೂಚಿಸುತ್ತದೆ. 1:18-32; 3:9-19; ಆದಿ 8:21; ಯೆರೆ 17:9; ಮತ್ತಾಯ 7:11; 15:19; ಎಫೆ 2:1-3; 4:17-19; ತೀತ 3:3. **6**

**7:6** ಮೋಶೆಯ ಧರ್ಮಶಾಸ್ತ್ರವು ನಮ್ಮನ್ನು "ವಶಮಾಡಿಕೊಂಡಿತ್ತು". ಈ ವಾಕ್ಯದಲ್ಲಿ ಪೌಲನು ಧರ್ಮಶಾಸ್ತ್ರದ ಅಧಿಕಾರದ ಮತ್ತು ಕೃಪೆಯ ಅಧೀನದಲ್ಲಿ ಸೇವೆಮಾಡುವದು ಹಾಗೂ ದೇವರಾತ್ಮನಿಂದ ದೊರೆಯುವ ಸ್ವಾತಂತ್ರ್ಯದ ನಡುವೆಯಿರುವ ವ್ಯತ್ಯಾಸವನ್ನು ತಿಳಿಸುತ್ತಿದ್ದಾನೆ (2 ಕೊರಿಂಥ 3:6,17 ಸಹ ನೋಡಿರಿ). 8ನೇ ಅಧ್ಯಾಯದಲ್ಲಿ ಪೌಲನು ದೇವರಾತ್ಮನ ಹೊಸ ಮಾರ್ಗದ ಬಗ್ಗೆ ಹೆಚ್ಚಿನದಾಗಿ ಮಾತನಾಡಿದ್ದಾನೆ. ಆತನು ಅದನ್ನು ಹೊಸ ಮಾರ್ಗ ಎಂದು ಕರೆದಿರುವದು ಯಾಕಂದರೆ ಯೇಸು ಕ್ರಿಸ್ತನ ಪುನರುತ್ಥಾನದ ನಂತರ ದೇವರು ತನ್ನ ಆತ್ಮವನ್ನು ಹೊಸ ರೀತಿಯಲ್ಲಿ ಅನುಗ್ರಹಿಸಿದನು (ಯೋಹಾನ 7:38; 14:16-17; ಅಪೊ 1:4; 2:4). **7**

**7:7** ಈ ಪ್ರಶ್ನೆ ಉದ್ಭವಿಸಲು ಕಾರಣವೇನೆಂದರೆ, ಧರ್ಮಶಾಸ್ತ್ರವು ಪಾಪದ ಬಯಕೆಗಳನ್ನು ಹುಟ್ಟಿಸುತ್ತದೆ ಎಂದು ಪೌಲನು ಹೇಳಿದ್ದಾನೆ (ವ 5). ಒಂದುವೇಳೆ ಅದು ಹಾಗೆ ಮಾಡುವದಾದರೆ, ಅದರಲ್ಲಿಯೇ ಪಾಪ ಇದೆಯಲ್ಲವೇ? ಇಲ್ಲ. ಧರ್ಮಶಾಸ್ತ್ರವು ಪರಿಶುದ್ಧವಾದದ್ದು, ನೀತಿಯುಳ್ಳದ್ದು ಮತ್ತು ಒಳ್ಳೆಯದಾಗಿದೆ (ವ 12), ಆದರೆ ಜನರು ಸ್ವಾಭಾವಿಕವಾಗಿ ಅಪರಿಶುದ್ಧರು, ಅನೀತಿವಂತರು ಮತ್ತು ಕೆಟ್ಟವರಾಗಿದ್ದಾರೆ (3:9-19). ಧರ್ಮಶಾಸ್ತ್ರವೇ ಇದನ್ನು ಪ್ರಕಟಪಡಿಸುತ್ತದೆ. ಜನರು ಧರ್ಮಶಾಸ್ತ್ರ ಉಲ್ಲಂಘನೆ ಮಾಡಲು ಮುಂದಾಗುವದರಲ್ಲಿ ಧರ್ಮಶಾಸ್ತ್ರದ ತಪ್ಪೇನೂ ಇಲ್ಲ. ಅದು ಸಂಪೂರ್ಣವಾಗಿ ಜನರ ತಪ್ಪಾಗಿದೆ. ಇದರಲ್ಲಿ ಮತ್ತು ಮುಂದಿನ ವಚನದಲ್ಲಿ ಪೌಲನು ಇದು ತನ್ನ ಸ್ವಂತ ಅನುಭವದಲ್ಲಿ ಹೇಗೆ ಕಾರ್ಯಸಾಧಕವಾಯಿತು ಎಂಬದನ್ನು ತೋರಿಸಿದ್ದಾನೆ. ಪೌಲನಿಗೆ ತನ್ನ ವಿಷಯದಲ್ಲಿದ್ದ ಒಳ್ಳೆಯ ದೃಷ್ಟಿಕೋನಗಳನ್ನು ಹಾಳು ಮಾಡಿದ ಆಜ್ಞೆಯು ಬಯಸುವದಕ್ಕೆ ವಿರುದ್ಧವಾದದ್ದಾಗಿತ್ತು. ವಿಮೋ 20:17 ನೋಡಿರಿ. ಪೌಲನು ಬಾಹ್ಯವಾಗಿ ಧರ್ಮಶಾಸ್ತ್ರದ ಉಲ್ಲಂಘನೆಯಿಂದ ದೂರ ಉಳಿದಿರಬಹುದು ಆದರೆ ಅವನ ಆಂತರ್ಯದ ಬಯಕೆಗಳಲ್ಲಿದ್ದು ನಿಯಂತ್ರಣಕ್ಕೆ ಮೀರಿದ್ದಾಗಿದೆ ಎಂಬದನ್ನು ತಿಳಿದುಕೊಂಡನು. ನಿಜವಾಗಿ ಹೇಳುವದಾದರೆ, ಬಯಸಬಾರದೆಂಬ ಆಜ್ಞೆಯೇ ದುರಾಶೆಗಳನ್ನು ಪ್ರೇರೇಪಿಸುತ್ತದೆ ಮತ್ತು ಅವುಗಳನ್ನು ಬಲಗೊಳಿಸುತ್ತದೆ. ಮಾನವರ ಹೃದಯವು ಪಾಪಮಯವಾದ ಬಯಕೆಗಳಿಂದ ತುಂಬಿದೆ ಮತ್ತು ದೇವರ ಧರ್ಮಶಾಸ್ತ್ರವು ಅವುಗಳಿಗೆ "ಎಂದಿಗೂ ಇಲ್ಲ" ಎಂದು ದೃಢವಾಗಿ ಹೇಳುತ್ತದೆ. ಆದರೆ

ಈ ಬಯಕೆಗಳು ಮತ್ತಷ್ಟು ದೃಢವಾಗುವಂತೆ ಇವುಗಳು ಮಾಡುತ್ತವೆ. ದೇವರ ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ಪ್ರತಿರೋಧವೊಡ್ಡುವದು "ಶರೀರದಾಶೆಯ" ಪ್ರಮುಖ ಭಾಗವಾಗಿದೆ (8:7). **8**

**7:8** ಧರ್ಮಶಾಸ್ತ್ರವು ಆಶಿರಬಾರದೆಂದು ಆಜ್ಞಾಪಿಸುತ್ತಿದೆ ಎಂಬದನ್ನು ಅವನು ಸ್ಪಷ್ಟವಾಗಿ ಮತ್ತು ಪೂರ್ತಿಯಾಗಿ ಅರ್ಥಮಾಡಿಕೊಳ್ಳುವ ತನಕ ತನ್ನಲ್ಲಿ ಪಾಪ ಇರುವದನ್ನು ಪೌಲನು ಅರ್ಥಮಾಡಿಕೊಳ್ಳಲಿಲ್ಲ. ಪಾಪವು ಸಂಪೂರ್ಣವಾಗಿ ನಿಷ್ಕ್ರಿಯವಾಗಿರುವಂತೆ ತೋರುತ್ತಿತ್ತು. ಅವನು ತನ್ನ ಹೃದಯ ಉತ್ತಮವಾಗಿದೆ ಎಂಬದಾಗಿ ಅಂದುಕೊಂಡಿದ್ದನು ಆದರೆ ಬಹುಬೇಗನೇ ಅದು ವಿಷ ಸರ್ಪಗಳ ಗೂಡು ಎಂಬದನ್ನು ಮನವರಿಕೆ ಮಾಡಿಕೊಂಡನು. **9**

**7:9** ಪೌಲನು ಹಳೆ ಒಡಂಬಡಿಕೆಗನುಸಾರ ಜನಿಸಿದ ಯೆಹೂದ್ಯನಾಗಿದ್ದನು ಮತ್ತು ಅವನು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ತನಕ ಒಮ್ಮೆಯಾದರೂ ಧರ್ಮಶಾಸ್ತ್ರಕ್ಕೆ ಒಳಗಾಗದೆ ಇರಲಿಲ್ಲ. ಇಲ್ಲಿ ಅವನ ಮಾತುಗಳ ಅರ್ಥವೇನೆಂದರೆ ತಾನು ಆತ್ಮೀಕವಾಗಿ ಜೀವಂತವಾಗಿದ್ದೇನೆ ಎಂಬದಾಗಿ ಅವನು ಅಂದುಕೊಳ್ಳುತ್ತಿದ್ದ ಸಮಯವಿತ್ತು ಯಾಕಂದರೆ ಅವನು ಆಗ ಧರ್ಮಶಾಸ್ತ್ರದ ಅರ್ಥ ಹಾಗೂ ಅದು ಅವನ ಆಂತರಿಕ ಬಯಕೆಗಳನ್ನು ಹೇಗೆ ದೂಷಿಸುತ್ತದೆ ಎಂಬದನ್ನು ತಿಳಿದುಕೊಂಡಿರಲಿಲ್ಲ. ಆಶಿರಬಾರದೆಂಬ ಆಜ್ಞೆಯನ್ನು ಅವನು ನಿಜವಾಗಿ ಅರ್ಥಮಾಡಿಕೊಂಡಾಗ, ಅವನಿಗೆ ಅವನ ಪಾಪದ ಅರಿವಾಯಿತು ಮತ್ತು ನಾನು ಪಾಪದ ಸತ್ತಿದ್ದೇನೆ ಹಾಗು ನಾನಂದುಕೊಂಡ ಪ್ರಕಾರ ಆತ್ಮೀಕವಾಗಿ ಬದುಕಿಲ್ಲ ಎಂಬದನ್ನು ತಿಳಿದುಕೊಂಡನು. "ನಾನು ಮೃತಪಟ್ಟಿದ್ದೇನೆ" ಎಂಬದಾಗಿ ಆಂತರಿಕ ಅನುಭವವು ಮಾತನಾಡುತ್ತದೆ ಅದು ಮರಣಕ್ಕೆ ಸಮಾನವಾಗಿದೆ. **10**

**7:10** ದೇವರು ಧರ್ಮಶಾಸ್ತ್ರವನ್ನು ಕೊಡಲು ಒಂದು ಪ್ರಮುಖ ಕಾರಣ ತನ್ನ ಜನರ ನಡುವೆ ಒಳ್ಳೆಯ, ನ್ಯಾಯವಾದ ಮತ್ತು ನೈತಿಕತೆಯ ಜೀವವನ್ನು ನೆಲೆಗೊಳಿಸುವದಕ್ಕಾಗಿಯಾಗಿತ್ತು. ಪೌಲನಿಗೆ ಅದು ಮರಣವನ್ನುಂಟು ಮಾಡಿತು. ಅಂದರೆ, ಧರ್ಮಶಾಸ್ತ್ರದ ಮೂಲಕ ಅವನು ತನ್ನ ಪಾಪವನ್ನು ಮನವರಿಕೆ ಮಾಡಿಕೊಂಡನು ಮತ್ತು ಪಾಪವು ಕೊಡುವ ಸಂಬಳ ಮರಣ ಎಂಬದನ್ನು ಅವನು ತಿಳಿದುಕೊಂಡಿದ್ದನು. **11**

**7:11** ಪಾಪದ ವಂಚಿಸುವ ಸ್ವಭಾವವನ್ನು ನೋಡಿರಿ. ಇಬ್ರಿ 3:13ರೊಂದಿಗೆ ಹೋಲಿಸಿರಿ. ಅದು ಧರ್ಮಶಾಸ್ತ್ರದ ಮೂಲಕ ಪೌಲನಿಗೆ ಜೀವವನ್ನು ವಾಗ್ದಾನ ಮಾಡಿತಾದರೂ ಅದರಿಂದ ಅವನಿಗೆ ಮರಣ ಪ್ರಾಪ್ತವಾಯಿತು. **12**

**7:12** ವಚನ 7. **13**

**7:13** ಧರ್ಮಶಾಸ್ತ್ರದಲ್ಲಿ ಯಾವ ದೋಷವೂ ಇಲ್ಲ. ಮಾನವನಲ್ಲಿರುವ ಎಲ್ಲಾ ಸಮಸ್ಯೆಗಳಿಗೆ ಕಾರಣ ಅವನೊಳಗಿರುವ ಪಾಪದ ಸ್ವಭಾವವಾಗಿದೆ. ಪಾಪ ಎಂದರೆ ಏನು ಎಂಬದನ್ನು ತೋರಿಸಲು ದೇವರು ಧರ್ಮಶಾಸ್ತ್ರವನ್ನು ಉಪಯೋಗಿಸುತ್ತಾನೆ.

ಅವಿಧೇಯತ್ವಕ್ಕೆ ಒಳಗಾಗಿರುವ ಮಾನವ ಸ್ವಭಾವವು ಧರ್ಮಶಾಸ್ತ್ರಕ್ಕೆ ವಿಧೇಯವಾಗುವದಿಲ್ಲ, ವಿಧೇಯವಾಗಲು ಆಗುವದೂ ಇಲ್ಲ ಮತ್ತು ಮುರಿಯಲ್ಪಟ್ಟಿರುವ ದೇವರ ಪವಿತ್ರವಾದ ಆಜ್ಞೆಗಳು ಪಾಪದ ಘೋರವಾಗಿರುವ ಪಾಪಮಯ ಸ್ವಭಾವವನ್ನು ಪ್ರಕಟಪಡಿಸುತ್ತದೆ. **14**

**7:14** 7-13 ವಚನಗಳಲ್ಲಿ ತನ್ನ ಹಿಂದಿನ ಅನುಭವಗಳನ್ನು ವಿವರಿಸುತ್ತಾ ಪೌಲನು ಭೂತಕಾಲವನ್ನು ಉಪಯೋಗಿಸಿದ್ದಾನೆ. 14-25 ವಚನಗಳಲ್ಲಿ ಆತನು ವರ್ತಮಾನಕಾಲಕ್ಕೆ ಬದಲಾಗಿದ್ದಾನೆ. ಈ ಬದಲಾವಣೆಯು ಖಂಡಿತವಾಗಿಯೂ ಪ್ರಾಮುಖ್ಯವಾಗಿದೆ. ಪೌಲನು ಯೇಸು ಕ್ರಿಸ್ತನ ನೂತನ ಸೃಷ್ಟಿಯಾದ ಬಳಿಕವೂ ತನ್ನಲ್ಲಿ ಏನಾಗಿದ್ದನು ಎಂಬದನ್ನು ಪೌಲನು ಈ ವಚನಗಳಲ್ಲಿ ವಿವರಿಸುತ್ತಿದ್ದಾನೆ ಎಂಬದು ಈ ನೋಟ್ಸ್‌ಗಳ ಗ್ರಂಥಕರ್ತನಿಗೆ ಸ್ಪಷ್ಟವಾಗಿರುವಂತೆ ತೋರುತ್ತದೆ. ಆತನು ಈ ಹನ್ನೆರೆಡು ವಚನಗಳಲ್ಲಿ ಸುಮಾರು ನಲವತ್ತು ಸಾರಿ "ನಾನು", "ನನ್ನ", "ನಾನೇ" ಎಂಬ ಪದಗಳನ್ನು ಉಪಯೋಗಿಸಿದ್ದಾನೆ ಮತ್ತು ಕಡೆಯಲ್ಲಿ ಒಮ್ಮೆ ಮಾತ್ರ ಯೇಸು ಕ್ರಿಸ್ತನನ್ನು ಸೂಚಿಸಿದ್ದಾನೆ ಹಾಗೂ ದೇವರಾತ್ಮನ ಬಗ್ಗೆ ಏನೂ ಹೇಳಿಲ್ಲ. ಪ್ರಾರಂಭದಿಂದ ವರ್ತಮಾನವನ್ನೇ ಉಪಯೋಗಿಸಿದ ನಂತರ, 25ನೇ ವಚನದಲ್ಲಿ ಯೇಸು ಕ್ರಿಸ್ತನ ಮೂಲಕ ದೇವರಿಗೆ ಕೃತಜ್ಞತೆ ಸಲ್ಲಿಸಿದ್ದಾನೆ ಮತ್ತು ಕಾರ್ಯಗಳು ತನ್ನಲ್ಲಿ ಹೇಗೆ ನಡೆದಿವೆ ಎಂಬದನ್ನು ಸಾರಾಂಶವಾಗಿ ಹೇಳಿದ್ದಾನೆ. ವಿಶ್ವಾಸಿಯಾಗಿ ಅವನು ಯಾವ ರೀತಿಯಿದ್ದನು ಎಂಬದನ್ನು ಹಿಂದಿನ ವಚನಗಳಲ್ಲಿ ಅವನು ವಿವರಿಸುತ್ತಿದ್ದನು ಎಂಬದಕ್ಕೆ ಇದು ನಿಖರವಾದ ಸೂಚನೆಯಾಗಿದೆ. 14ನೇ ವಚನದಲ್ಲಿ ತಾನು "ದೇಹಧರ್ಮಕ್ಕೆ" ಒಳಪಟ್ಟವನು ಮತ್ತು "ಪಾಪ ಸ್ವಾಧೀನದಲ್ಲಿರುವವನು" ಎಂದು ಹೇಳುವಾಗ ತಾನು ಸ್ವಾಭಾವಿಕವಾಗಿ ಹೇಗಿದ್ದೇನೆಂದು ಹೇಳುತ್ತಿದ್ದಾನೆಯೇ ಹೊರತು ಕ್ರಿಸ್ತನು ತನ್ನನ್ನು ಏನು ಮಾಡಿದ್ದಾನೆಂದು ಹೇಳಿಲ್ಲ. ದೇವರ ಆತ್ಮೀಕ ಧರ್ಮಶಾಸ್ತ್ರವು ಅವನು ತನ್ನ ವೈಯಕ್ತಿಕ ಪಾಪಗಳಲ್ಲಿ ಏನಾಗಿದ್ದಾನೆಂದು ಹೇಳುತ್ತಿದೆ. ಪೌಲನು ಈ ವಾಕ್ಯದಲ್ಲಿ ಏನು ಹೇಳುತ್ತಿದ್ದಾನೆ ಎಂಬದನ್ನು ಪ್ರಬುದ್ಧನಾದ ವ್ಯಕ್ತಿಯಿಂದಲ್ಲದೆ ಬೇರೆ ಯಾರಿಂದ ಹೇಳಲು ಸಾಧ್ಯ? ಯೇಸು ಕ್ರಿಸ್ತನ ಬಗ್ಗೆ ಗೊತ್ತಿಲ್ಲದಿರುವವರು ಮೂರ್ಖ ಕಾರ್ಯಗಳ ಬಗ್ಗೆ ಪಶ್ಚಾತ್ತಾಪಪಡಬಹುದು ಅಥವಾ ತಾವು ಯಾವುದೋ ಬೇಡವಾದ ಕಾರ್ಯದಲ್ಲಿ ಸಿಕ್ಕಿಕೊಂಡಿರುವದಾಗಿ ಹೇಳಬಹುದು ಆದರೆ ನಾವು ದೇವರಾತ್ಮನ ಮೂಲಕ ಜಾಗೃತರಾಗದೆ ಹೋದರೆ ಪಾಪದ ಕುರಿತು ನಮಗೆ ಆಳವಾದ ಅರಿವು ಇರುವದಿಲ್ಲ ಮತ್ತು ಪೌಲನು 14-25 ವಚನಗಳಲ್ಲಿ ದುಃಖಿಸುತ್ತಿರುವ ಹಾಗೆ ಪಾಪದ ವಿಷಯದಲ್ಲಿ ನಮಗೆ ಯಾವ ದುಃಖವೂ ಇರುವದಿಲ್ಲ. ಈ ವಚನಗಳಲ್ಲಿರುವ ವ್ಯಕ್ತಿಯು ತಾನು ಆತ್ಮದಲ್ಲಿ ಬಡವನಾಗಿರುವದನ್ನು ಪ್ರಕಟಿಸುತ್ತಿದ್ದಾನೆ ಮತ್ತು ಪಾಪದ ಬಗ್ಗೆ ದುಃಖಿಸುತ್ತಿದ್ದಾನೆ, ಆದ್ದರಿಂದ ಪರಲೋಕ ರಾಜ್ಯವು ಅವನದ್ದಾಗಿದೆ. ಮತ್ತಾಯ 5:3-4 ನೋಡಿರಿ. ಪೌಲನು ಯೇಸು ಕ್ರಿಸ್ತನನ್ನು ದಮಸ್ಕದ ದಾರಿಯಲ್ಲಿ ಸಂಧಿಸುವ ಮೊದಲು

ಇದು ಸತ್ಯವಾಗಿರಲಿಲ್ಲ. ಈ ವಚನಗಳಲ್ಲಿ ಪಾಪ ಸ್ವಭಾವಕ್ಕೆ ವಿರುದ್ಧವಾಗಿ ನಡೆಯುತ್ತಿರುವ ಹೋರಾಟವನ್ನು ರಕ್ಷಣೆ ಹೊಂದಿರದ ಜನರಲ್ಲಿ ನೋಡಲು ಆಗುವದಿಲ್ಲ. ಅವಿಶ್ವಾಸಿಗಳು ಕೂಡ ತಮ್ಮೊಳಗಿರುವ ತಮಗಿಷ್ಟವಿಲ್ಲದ ಒಂದೆರೆಡು ಕಾರ್ಯಗಳ ನಿಮಿತ್ತ ಹೋರಾಟದಲ್ಲಿರುತ್ತಾರೆ ಎಂಬದು ಸಹ ಸತ್ಯವಾಗಿದೆ. ಮತ್ತು ಅವರು ತಮ್ಮ ಎಲ್ಲಾ ಬಯಕೆಗಳ ಮೇಲೆ ನಿಯಂತ್ರಣ ಸಾಧಿಸಲು ಮತ್ತು ಯಾವುದರ ಬಂಧನದಲ್ಲಿಯೂ ಇಲ್ಲದಿರಲು ಬಯಸುತ್ತಿರಬಹುದು. ಆದರೆ ಇದು ಅವರ ಪಾಪಮಯ ಸ್ವಭಾವವು ಇನ್ನೊಂದಕ್ಕೆ ವಿರುದ್ಧವಾಗಿ ಹೋರಾಡುತ್ತಿರುವ ಕೇವಲ ಒಂದು ಸಂಗತಿಯಾಗಿರಬಹುದು. ಅವರ ಉದ್ದೇಶ ಕ್ರಿಸ್ತನಲ್ಲಿ ಆತ್ಮೀಕ ಜೀವಿತ ಜೀವಿಸುವದು ಅಥವಾ ದೇವರನ್ನು ಘನಪಡಿಸುವದಲ್ಲ ಬದಲಾಗಿ ತಮ್ಮನ್ನು ಘನಪಡಿಸಿಕೊಳ್ಳುವದು ಅಥವಾ ಯಾವದಾದರು ರೀತಿ ತಮ್ಮನ್ನು ತೃಪ್ತಿಪಡಿಸಿಕೊಳ್ಳುವದು ಅಥವಾ ಸ್ವಾರ್ಥದ ಬಯಕೆಯಾಗಿರಬಹುದು. ಇಲ್ಲಿ ಪೌಲನು ಪ್ರಕಟಪಡಿಸುವದೇನೆಂದರೆ ಅವರ ಕಷ್ಟ ಆತ್ಮೀಕ ಕಷ್ಟವಲ್ಲವಾಗಿದೆ. **15-24**

**7:15-24** ಪೌಲನನ್ನು ಇಷ್ಟಪಡುವ ವಿಶ್ವಾಸಿಗಳು ತಮ್ಮ ಪಾಪ ಸ್ವಭಾವದ ಅಧಿಕಾರಕ್ಕೆ ಎಚ್ಚರಗೊಳ್ಳುವರು, ಮತ್ತು ಇದೇ ಆರೋಪವನ್ನು ಮಾಡುವರು (ಇವುಗಳ ಬರಹಗಾರನು ಸಹ ಖಂಡಿತವಾಗಿಯೂ ಇದೇ ಮನಸ್ಥಿತಿಯುಳ್ಳವನಾಗಿರಬೇಕು) – ಅವರು ಒಳ್ಳೆಯವರಾಗಿರಲು ಮತ್ತು ಒಳ್ಳೆಯದನ್ನು ಮಾತ್ರವೇ ಮಾಡಲು ಬಯಸುತ್ತಾರೆ ಆದರೂ ಅವರಲ್ಲಿ ಅವರೊಳಗೆ ಏನೂ ಕೆಟ್ಟದ್ದಿರುವದು ಅವರಿಗೆ ಗೊತ್ತಾಗುತ್ತದೆ. ಅವರಿಗೆ ಪವಿತ್ರವಾದ ಬಯಕೆಗಳಿರುತ್ತವೆ ಆದರೆ ತಮ್ಮ ಸ್ವಭಾವದಲ್ಲಿ ಅಪರಿಶುದ್ಧತೆಯಿರುವದನ್ನು ತಿಳಿದುಕೊಳ್ಳುತ್ತಾರೆ ಅದು ಅವರು ತಮ್ಮ ಪವಿತ್ರವಾದ ಬಯಕೆಗನುಸಾರ ನಡೆದುಕೊಳ್ಳಲು ಮಾಡುವ ಪ್ರಯತ್ನಗಳಿಗೆ ಅಡ್ಡಿಪಡಿಸುತ್ತದೆ. ಪೌಲನು ಹೇಳುವದೇನೆಂದರೆ ಪಾಪವು ನನ್ನನ್ನು ತನ್ನ ಬಂಧನದಲ್ಲಿರಿಸಿಕೊಳ್ಳಲು ಘೋರವಾದ ರೀತಿಯಲ್ಲಿ ವರ್ತಿಸಿತು. ಆತನು ತಾನಂದುಕೊಂಡ ರೀತಿ ಜೀವಿಸಲು ಅಥವಾ ಮಾಡಬೇಕೆಂಬದನ್ನೆಲ್ಲಾ ಮಾಡಲು ಬಯಸಿದನು ಹಾಗೂ ಆತನು ಮಾಡಿದ ಕೆಲವು ಕಾರ್ಯಗಳನ್ನು ಎಂದಿಗೂ ಮಾಡಬಾರದೆಂದುಕೊಂಡಿದ್ದನು. ಕರ್ತನಾದ ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿದ ಮಾತುಗಳು ಸತ್ಯವಾಗಿವೆಯೆಂದು ಅವನು ತಿಳಿದುಕೊಂಡನು: "ನೀವು ಕೆಟ್ಟವರು" (ಮತ್ತಾಯ 7:11) ಮತ್ತು ಈ ಪದವನ್ನು ವಿವರಿಸಲು ಆತನು ಬೇರೆ ಯಾವ ಪದವನ್ನೂ ಬಳಕೆಮಾಡಲಿಲ್ಲ. **15**

**7:15** *"ಅಸಹ್ಯವಾದದ್ದನ್ನು ಮಾಡುತ್ತೇನೆ"*– ಪೌಲನು 1 ಕೊರಿಂಥ 6:9-10 ಮತ್ತು ಇತರೆ ಭಾಗಗಳಲ್ಲಿ ಹೇಳಿರುವ ಪಾಪಗಳನ್ನು ಮಾಡುತ್ತಿದ್ದನು ಎಂಬದಾಗಿ ನಾವು ಊಹಿಸಿಕೊಳ್ಳಬಾರದು. ಅಂಥ ಕಾರ್ಯಗಳಲ್ಲಿ ಭಾಗಿಯಾಗುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ ಎಂಬದಾಗಿ ಪೌಲನೇ ಹೇಳಿದ್ದಾನೆ. ಈ ವಚನಗಳಲ್ಲಿ ಪೌಲನು ಯಾವ ವಿಷಯಗಳಲ್ಲಿ ಹೋರಾಡುತ್ತಿದ್ದನು ಎಂಬದನ್ನು ಸ್ಪಷ್ಟವಾಗಿ ಹೇಳಿಲ್ಲ, ಆದರೆ ಈ

ಅಧ್ಯಾಯದ ಪ್ರಾರಂಭದಲ್ಲಿ ಅವನು ಶರೀರದಾಶೆಗಳಿಗೆ ಆದ್ಯತೆ ನೀಡಿದ್ದಾನೆ – ಧರ್ಮಶಾಸ್ತ್ರವು ಪ್ರೇರೇಪಿಸುವ ಆಸೆ ಮತ್ತು ಅವನ ಹಳೆಯ ಸ್ವಭಾವದ ಭ್ರಷ್ಟತೆಯನ್ನು ಪ್ರಕಟಪಡಿಸಿದ ಆಶೆ – ವ 7-8. ಅವನ ಸ್ವಭಾವದಿಂದಲೇ ಸತತವಾಗಿ ತಪ್ಪು ಮಾಡುವ ಕಾರ್ಯಗಳಿಗೆ ಆಗುತ್ತಿದ್ದ ಪ್ರಚೋದನೆಯು ಆ ಸ್ವಭಾವವು ಎಂಥದೆಂಬದನ್ನು ತೋರಿಸಲು ಮತ್ತು 24ನೇ ವಚನದ ಘೋರತನವನ್ನು ತೋರಿಸಲು ಪೌಲನಿಗೆ ಸಾಕಾಗಿತ್ತು. ದೇವರ ಗುಣಮಟ್ಟ (ಮತ್ತು ದೇವರ ಅಪೊಸ್ತಲನಾದ ಪೌಲನ ಗುಣಮಟ್ಟ) ಹೊರಗಿನ ನಡವಳಿಕೆ ಮತ್ತು ಒಳಗಿನ ಆಲೋಚನೆಗಳು, ಉದ್ದೇಶಗಳು ಹಾಗೂ ಬಯಕೆಗಳಲ್ಲಿ ಪರಿಶುದ್ಧವಾಗಿದ್ದವು ಮತ್ತು ನೀತಿಯುಳ್ಳವುಗಳಾಗಿದ್ದವು (2 ಕೊರಿಂಥ 7:1; ಮತ್ತಾಯ 6:4-8). ಈ ಸಂಪೂರ್ಣತೆಗಿಂತ ಕಡಿಮೆಯಾದದ್ದು ಯಾವುದೇ ಇದ್ದರೂ ಪೌಲನಿಗೆ ಇಷ್ಟವಾಗುತ್ತಿರಲಿಲ್ಲ ಆದ್ದರಿಂದ ಒಂದುವೇಳೆ ಅವನಲ್ಲಿ ಅಂಥದ್ದೇನಾದರೂ ಕಂಡು ಬಂದರೆ ಅವನು ಅದನ್ನು "ಅಸಹ್ಯವಾದದ್ದು" ಎಂಬದಾಗಿ ಹೇಳುತ್ತಿದ್ದನು. ಪೌಲನು ಯಾವ ರೀತಿಯ ಆಂತರಿಕ ಹೋರಾಟ ಎದುರಿಸಿದರೂ ದೇವರು ಮತ್ತು ಮನುಷ್ಯರ ನಡುವೆ ತನ್ನ ಮನಸ್ಸಾಕ್ಷಿ ಶುದ್ಧವಾಗಿರುವ ಹಾಗೆಯೇ ಪೌಲನು ಜೀವಿಸಿದನು ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು – ಅಪೊ 24:16; 2 ಕೊರಿಂಥ 1:12 ನೋಡಿರಿ. ಅಂದರೆ ಅವನು ಮನಃಪೂರ್ವಕವಾಗಿ ಮತ್ತು ಬೇಕೆಂದು ಯಾವ ಪಾಪವನ್ನೂ ಮಾಡಲಿಲ್ಲ. **17**

**7:17** ಪೌಲನು ತನ್ನೊಳಗೆ ಪಾಪವೆಂಬ ವೈರಿ ವಾಸ ಮಾಡುತ್ತಿದ್ದಾನೆ ಮತ್ತು ಅವನು ತನಗಿಂತ ಬಲಿಷ್ಠನಾಗಿದ್ದಾನೆ ಎಂಬ ವಾಸ್ತವವನ್ನು ಎದುರಿಸುತ್ತಿದ್ದನು. ". . . ಮಾಡುವವನು ಇನ್ನು ನಾನಲ್ಲ, ನನ್ನಲ್ಲಿ ನೆಲೆಗೊಂಡಿರುವ ಪಾಪವೇ ಅದನ್ನು ಮಾಡುತ್ತದೆ" (ಹಾಗೆಯೇ ವ 20). ಅವನು ತನ್ನನ್ನು ಮತ್ತು ತನ್ನಲ್ಲಿರುವ ಪಾಪದ ಸ್ವಭಾವವನ್ನು ಹೇಗೆ ಬೇರೆಯಾಗಿ ವಿವರಿಸಿದ್ದಾನೆ ಎಂಬದನ್ನು ಗಮನಿಸಿರಿ. ಅವನು ಯೇಸು ಕ್ರಿಸ್ತನಲ್ಲಿ ಹೊಸ ಸ್ವಭಾವವನ್ನು ಹೊಂದುವ ಮೊದಲು ಹಳೆಯ ಸ್ವಭಾವವುಳ್ಳವನಾಗಿದ್ದನು ಮತ್ತು ಅದಕ್ಕಿಂತ ಹೆಚ್ಚಿನದು ಏನೂ ಇಲ್ಲ (ಇದು ನಮ್ಮೆಲ್ಲರ ವಿಷಯದಲ್ಲಿಯೂ ಸತ್ಯವಾಗಿದೆ). ಆದರೆ "ನಾನಲ್ಲ" ಎಂಬ ಪದ ಸಮಗ್ರವಾದ ಬದಲಾವಣೆಯನ್ನು ಸೂಚಿಸುತ್ತದೆ, ಆ ಬದಲಾವಣೆಯ ಬಗ್ಗೆ ಅವನು 4ನೇ ವಚನದಲ್ಲಿ ಮಾತನಾಡಿದ್ದಾನೆ. ಯೇಸು ಕ್ರಿಸ್ತನು ಅವನಿಗಾಗಿ ಮೃತಪಟ್ಟಾಗ, ದೇವರ ದೃಷ್ಟಿಯಲ್ಲಿ ಅದು ಪೌಲನು ಮೃತಪಡುವದಕ್ಕೆ ಸಮಾನವಾಗಿತ್ತು ಮತ್ತು ಪೌಲನು ಏನಾಗಿದ್ದನೋ ಅವೆಲ್ಲವೂ ಮೃತಪಟ್ಟವು (6:3-7; ಗಲಾ 5:24; ಕೊಲೊ 3:3), ಮತ್ತು ಇವೆಲ್ಲವುಗಳನ್ನು ದೇವರೇ ಮಾಡಿದ್ದಾನೆಂಬದನ್ನು ತಿಳಿಯಲು ಕಲಿತುಕೊಂಡನು. ಅವನಿಗೆ (ಮತ್ತು ಎಲ್ಲಾ ವಿಶ್ವಾಸಿಗಳ ವಿಷಯದಲ್ಲಿ ಇದು ಸತ್ಯವಾಗಿದೆ) ಪಾಪ ಸ್ವಭಾವದೊಂದಿಗೆ ಯಾವುದೇ ಸಂಬಂಧವಿಲ್ಲವದನಾಗಿದ್ದನು ಯಾಕಂದರೆ ಯೇಸು ಕ್ರಿಸ್ತನ ಮರಣದೊಂದಿಗೆ ಅದು ಮೃತಪಟ್ಟಿದೆ, ಮತ್ತು ಅವನು ಹೊಸ ಮನುಷ್ಯನಾಗಿ ಯೇಸು ಕ್ರಿಸ್ತನಲ್ಲಿ

ಜೀವಂತವಾಗಿದ್ದಾನೆ (ಕೊಲೊ 2:11-12 ಹೋಲಿಸಿ ನೋಡಿರಿ). ಆದ್ದರಿಂದ ಅವನು ತನ್ನ ಪಾಪ ಸ್ವಭಾವವನ್ನು ಅಥವಾ ಅದರ ಭಾಗವನ್ನು ಘನಪಡಿಸಲು ನಿರಾಕರಿಸಿ - "ಇನ್ನು ನಾನಲ್ಲ" ಎಂದು ಹೇಳಿದನು. ಪಾಪವು ಅವನೊಳಗೆ ಜೀವಿಸುತ್ತಿತ್ತು (ಇದನ್ನು ನಾವು 1 ಯೋಹಾನ 1:8 ಮತ್ತು ಸತ್ಯವೇದದ ಇತರೆ ವಚನಭಾಗಗಳಲ್ಲಿ ನೋಡಬಹುದಾಗಿದೆ) ಆದರೆ ಪೌಲನು ಈಗ ಅನ್ಯನ ಹಾಗೆ ಅದನ್ನು ತಿರಸ್ಕರಿಸಿದನು ಮತ್ತು ವಿರೋಧಿಸಿದನು. ಬೇಡವಾಗಿರುವ ಈ ದುಷ್ಟ ಶಕ್ತಿ (ದುರಾತ್ಮ ಅಥವಾ ದುರಾತ್ಮಕಾರ್ಯವಲ್ಲ ಬದಲಾಗಿ ಅವನ ಹಳೆಯ ಸ್ವಭಾವ), ಅವನಲ್ಲವಾದರೂ, ಕೆಟ್ಟ ಬಯಕೆಗಳು, ಕೆಟ್ಟ ಉದ್ದೇಶಗಳು ಮತ್ತು ಕೆಟ್ಟ ಕಾರ್ಯಗಳನ್ನು ಸೃಷ್ಟಿಸಿದವು. ಆದರೆ ಯೇಸು ಕ್ರಿಸ್ತನಲ್ಲಿ ನೂತನ ವ್ಯಕ್ತಿಯಾಗಿರುವ ಪೌಲನು, ದೇವರಾತ್ಮನ ಮೂಲಕ ನೂತನ ಸೃಷ್ಟಿಯಾಗಿ, ಅಂಥ ಕಾರ್ಯಗಳನ್ನು ಮಾಡಬೇಕೆಂದು ಬಯಸಲಿಲ್ಲ ಹಾಗೂ ಮಾಡಲೂ ಇಲ್ಲ. ಅವುಗಳನ್ನು ಮಾಡಿದ್ದು ಹಳೆಯ ವ್ಯಕ್ತಿಯಾಗಿರುವ ಪಾಪ, ತನ್ನ ಮರಣದ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ನಿರಾಕರಿಸಿದ ಹಳೆಯ ವ್ಯಕ್ತಿ, ಅವನು ಯಾವಾಗಲೂ ಪೌಲನನ್ನು ತನ್ನ ಮಾರ್ಗದನುಸಾರವಾಗಿ ನಡೆಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಅಸಹ್ಯವಾದದ್ದನ್ನು "ನಾನಲ್ಲವಾದ್ದರಿಂದ" ನಾನು (ಅಂದರೆ ಯೇಸು ಕ್ರಿಸ್ತನಲ್ಲಿ ನೂತನ ವ್ಯಕ್ತಿ) ಅವುಗಳನ್ನು ಮಾಡಿದ್ದಕ್ಕೆ ಯಾವ ಆರೋಪಕ್ಕೂ ಒಳಗಾಗುವದಿಲ್ಲ (4:8 ನೋಡಿ ಅರ್ಥಮಾಡಿಕೊಳ್ಳಿರಿ). ಆದ್ದರಿಂದಲೇ ಯೇಸು ಕ್ರಿಸ್ತನಲ್ಲಿರುವವರಿಗೆ ಮರಣ ಮತ್ತು ನರಕಕ್ಕೆ ಪಾತ್ರರು ಎಂಬ ಅಪರಾಧ ನಿರ್ಣಯವು ಇಲ್ಲವೇ ಇಲ್ಲ (8:1), ಮತ್ತು ಅವರು ರಕ್ಷಣೆಯನ್ನೂ ಕಳೆದುಕೊಳ್ಳುವದಿಲ್ಲ ಯಾಕಂದರೆ ಇಲ್ಲಿಯ ತನಕ ಮಾಡಿದ ಕಾರ್ಯಗಳೆಲ್ಲವೂ ಅವಿಧೇಯನಾದ ಹಳೆಯ ವ್ಯಕ್ತಿ ಮಾಡಿದವುಗಳಾಗಿವೆ. ಆ "ಹಳೆಯ ವ್ಯಕ್ತಿ" ಈಗಾಗಲೇ ಅಪರಾಧಿಯೆಂದು ನಿರ್ಣಯಿಸಲ್ಪಟ್ಟಿದ್ದಾನೆ, ಶಿಲುಬೆಗೇರಿಸಲ್ಪಟ್ಟಿದ್ದಾನೆ ಮತ್ತು ದೇವರ ದೃಷ್ಟಿಯಲ್ಲಿ ಸತ್ತವನೆಂದು ಎಣಿಸಲ್ಪಟ್ಟಿದ್ದಾನೆ. ಪೌಲನು ದೇವರಲ್ಲಿ ಭಯಭಕ್ತಿಯುಳ್ಳ ಪರಿಶುದ್ಧನಾಗಿದ್ದನು, ಅವನು ತನ್ನ ಕೆಟ್ಟ ಕಾರ್ಯಗಳಿಗೆ ಯಾವ ಸಮಜಾಯಿಷಿ ಕೊಡಲು ಬಯಸಲಿಲ್ಲ – ಅವನು ನಮಗೆ ಸೂಚನೆಗಳನ್ನು ಕೊಡುವ ಸಲುವಾಗಿ ದೇವ ಪ್ರೇರಣೆಯಿಂದ ಬರೆದಿದ್ದಾನೆ ಮತ್ತು ದೇವರು ನೋಡುವ ಪ್ರಕಾರ ವಿಷಯಗಳನ್ನು ಬರೆದಿದ್ದಾನೆ ಹಾಗೂ ತಾನು ಅರ್ಥಮಾಡಿಕೊಂಡಂತೆ ತಿಳಿಸಿದ್ದಾನೆ. ಅವನು ತನ್ನ ಪಾಪ ಕೃತ್ಯಗಳ ಪರವಹಿಸಲಿಲ್ಲ, ಬದಲಾಗಿ ಅದನ್ನು ಧಿಕ್ಕರಿಸಿದನು ಮತ್ತು ಅದರ ಪ್ರಭಾವ ಹಾಗೂ ಪ್ರಸನ್ನತೆಯಿಂದ ಸಂಪೂರ್ಣವಾಗಿ ದೂರ ಉಳಿಯಲು ಬಯಸಿದನು. ಮತ್ತು ಅವನು ತನ್ನ ಕ್ರಿಯೆಗಳಲ್ಲಿ ತನ ಜವಾಬ್ದಾರಿಕೆಗಳನ್ನು ಎಂದಿಗೂ ನಿರಾಕರಿಸಲಿಲ್ಲ. ಬೇರೆ ಭಾಗಗಳಲ್ಲಿ ತಾನು ಬರೆದ ಸತ್ಯ ಅವನಿಗೆ ಚೆನ್ನಾಗಿ ಗೊತ್ತಿತ್ತು – "ಯಾಕಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು

ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿಂಥ 5:10). **18**

**7:18** ಇಲ್ಲಿ ದೇವರು ಪೌಲನಿಗೆ ಮಾನವನ ಶರೀರದ ಬಗ್ಗೆ ಕಲಿಸಿದ ಸತ್ಯವನ್ನು ನಾವು ನೋಡಬಹುದು ("ಸಾರ್ಕ್ಸ್" – ವ 5). ಈ ಸ್ವಭಾವವನ್ನು ಪ್ರತಿಯೊಬ್ಬರು ಆದಾಮನಿಂದ ಹೊಂದಿದ್ದಾರೆ (ಆದರೂ ಅದರಲ್ಲಿರುವ ಕೆಲವು ಕಾರ್ಯಗಳನ್ನು ಜನರು ಒಳ್ಳೆಯ ಗುಣಗಳೆಂದು ಕರೆಯುತ್ತಾರೆ – ಆದರೆ ತಮ್ಮ ಪಾಪಮಯ ಸ್ವಭಾವಗದ ಪ್ರಭಾವಗಳಿಗೆ ಒಳಗಾಗಿರುವ ಜನರು ಆತ್ಮೀಕತೆ ಅಥವಾ ದೇವರ ದೃಷ್ಟಿಯಲ್ಲಿ ಒಳ್ಳೆಯದೆಂದರೆ ಏನು ಎಂಬದನ್ನು ಗುರುತಿಸಲು ಆಗದವರಾಗಿದ್ದಾರೆ. ಲೂಕ 16:15ರೊಂದಿಗೆ ಹೋಲಿಸಿ ನೋಡಿರಿ). ಇಲ್ಲಿ ಪೌಲನು "ಶರೀರದಿಚ್ಛೆ" ಎಂದರೆ ಏನು ಎಂಬದನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ. ಅವನು ಬರೆದಿರುವ ವಿಷಯಗಳು ಯೇಸು ಕ್ರಿಸ್ತನ ಮಾತುಗಳೊಂದಿಗೆ ಸಮಂಜಸವಾಗಿವೆ. "ಶರೀರದಾಸೆಗಳನ್ನು" ಸಂಪೂರ್ಣವಾಗಿ ಬಿಟ್ಟುಬಿಡಬೇಕೆಂದು ಯೇಸು ಕ್ರಿಸ್ತನು ಹೇಳಿದ್ದಾನೆ – ಯಾಕಂದರೆ ಅದು ಮರಣಕ್ಕೆ ಪಾತ್ರವಾಗಿದೆ (ಮತ್ತಾಯ 10:38; ಲೂಕ 9:23 – ಈ ವಾಕ್ಯಗಳಲ್ಲಿ "ಅನುದಿನ" ಎಂಬ ಪದವನ್ನು ಗಮನಿಸಿರಿ. ಶರೀರದಾಸೆಗಳಿಗೆ ಅನುದಿನ ಸಾಯುವ ಮನೋಭಾವವು ವಿಶ್ವಾಸಿಗಳು ತಮ್ಮನ್ನು ಅನುದಿನ ನೂತನಪಡಿಸಿಕೊಳ್ಳಲು ಸಹಾಯ ಮಾಡುತ್ತದೆ ಅಥವಾ ಶರೀರದಾಸೆಗಳು ನಮ್ಮೊಳಗೆ ಬಲಗೊಳ್ಳುತ್ತಾ, ನಮ್ಮಮೇಳೆ ದೊರೆತನ ನಡೆಸಲು ಮುಂದಾಗುತ್ತವೆ). ಪೌಲನ ವಿಷಯದಲ್ಲಿಯೇ ಅವನ ಒಳ್ಳೆಯ ಬಯಕೆ ಮತ್ತು ಕೆಟ್ಟ ಫಲಿತಾಂಶಗಳ ನಡುವೆಯಿರುವ ವ್ಯತ್ಯಾಸವನ್ನು ಗಮನಿಸಿರಿ. ವಿಶ್ವಾಸಿಗಳೆಲ್ಲರೂ ಇದನ್ನು ಅರಿಕೆಮಾಡಿಕೊಳ್ಳುವದರ ಹಿಂದೆ ಯಾವ ಕಾರಣವೂ ಇಲ್ಲವೇ? ತನ್ನ ಪಾಪ ಸ್ವಭಾವಕ್ಕೆ ವಿರುದ್ಧವಾಗಿ ಮಾಡಿದ ಹೋರಾಟದಲ್ಲಿ, ತನಗೆ ಜಯ ದೊರಕಿಸಿಕೊಡುವಂಥದ್ದು ತನ್ನಲ್ಲಿ ಏನೂ ಇಲ್ಲ ಎಂಬದನ್ನು ಪೌಲನು ಮನವರಿಕೆ ಮಾಡಿಕೊಂಡನು ಎಂಬದು ಸ್ಪಷ್ಟವಾಗಿ ಗೊತ್ತಾಗುವ ಸಂಗತಿಯಾಗಿದೆ. ತನ್ನ ಪಾಪಸ್ವಭಾವವನ್ನು ಅಳಿಸಲು ಮತ್ತು ಅದರ ಮೇಲೆ ಜಯಗಳಿಸಲು ತನ್ನಲ್ಲಿರದ ಸಂಪನ್ಮೂಲಗಳನ್ನು ಅವನು ಕಂಡುಕೊಳ್ಳಬೇಕಾಯಿತು. **19-20**

**7:19-20** 15 ಮತ್ತು 17ನೇ ವಚನಗಳಲ್ಲಿ ತಾನು ಹೇಳಿರುವದನ್ನೇ ಪುನಃ ಬೇರೆ ಪದಗಳ ಮೂಲಕ ಹೇಳುತ್ತಾ, ಅದರ ಸತ್ಯವನ್ನು ತಿಳಿಯಪಡಿಸಿದ್ದಾನೆ. **21**

**7:21** "*ನಿಯಮ*"– ಇಲ್ಲಿ ಆತನು ಇದನ್ನು ಸ್ವಾಭಾವಿಕವಾದ ಶಕ್ತಿಯುಳ್ಳ ನಿಯಮ ಎಂದು ಹೇಳಿದ್ದಾನೆ. ಇದು ಕೇವಲ ಆಗಾಗ ಸಂಭವಿಸುವ ಕಾರ್ಯವಲ್ಲ ಬದಲಾಗಿ ತನ್ನ ಜೀವಿತದಲ್ಲಿ ಕ್ರಮೇಣವಾಗಿ ದುರ್ಬಲಗೊಳ್ಳುತ್ತಿದೆ ಹಾಗೂ ನಶಿಸುತ್ತಿದೆ ಎಂಬದನ್ನು ಪೌಲನು ತಿಳಿದುಕೊಂಡನು. ಅವನು ಯಾವಾಗಲೂ ಒಳ್ಳೆಯ ಕಾರ್ಯಗಳನ್ನು ಮತ್ತು ಒಳ್ಳೆಯ ಕಾರ್ಯಗಳನ್ನು ಮಾತ್ರವೇ ಮಾಡಲು ಬಯಸಿದನು (ಯೇಸು ಕ್ರಿಸ್ತನಲ್ಲಿ ವಿಶ್ವಾಸಿಯ ನೂತನ

ಸ್ವಭಾವವು ಹೀಗೆಯೇ ಇರುತ್ತದೆ) ಆದರೆ ಅವನು ಯಾವಾಗಲೂ ತಾನು ಮಾಡಬೇಕೆಂದು ಬಯಸಿದ ಒಳ್ಳೆಯ ಕಾರ್ಯಗಳಲ್ಲಿ, ತನ್ನೊಳಗಿರುವ ದುಷ್ಟತನವು ಅವನನ್ನು ವಿರೋಧಿಸಲು ಹಾಗೂ ತನ್ನ ಕಡೆಗೆ ತಿರುಗಿಸಿಕೊಳ್ಳಲು ಪ್ರಯತ್ನಿಸುವದನ್ನು ಗಮನಿಸಿದನು. **22**

**7:22** ರಕ್ಷಣೆ ಹೊಂದಿರದ ವ್ಯಕ್ತಿ, ಅವಿಶ್ವಾಸಿ ಇದನ್ನು ಸತ್ಯವಾಗಿ ಹೇಳುವ ಸಾಧ್ಯತೆಗಳು ಅತ್ಯಂತ ಕಷ್ಟಸಾಧ್ಯವಾದವುಗಳಾಗಿವೆಯಲ್ಲವೇ? ರಕ್ಷಣೆ ಹೊಂದಿರದ ಜನರ ಹೃದಯ (ಒಳಮನಸ್ಸು) ಹೇಗಿರುವದೆಂದು ಸತ್ಯವೇದವು ಪ್ರಕಟಪಡಿಸುತ್ತದೆ ಮತ್ತು ಅದು ಖಂಡಿತವಾಗಿಯೂ ದೇವರ ಧರ್ಮಶಾಸ್ತ್ರದ ವಿಷಯದಲ್ಲಿ ಸಂತೋಷಿಸುವದಿಲ್ಲ – ಆದಿ 8:21; ಯೆರೆ 19:9; ಮತ್ತಾಯ 15:19. ಅಪರಾಧ ಮತ್ತು ಪಾಪಗಳಲ್ಲಿ ಸತ್ತಿರುವ ಜನರು (ಎಫೆ 2:1-3) ದೇವರ ಧರ್ಮಶಾಸ್ತ್ರದ ಹಾಗೆ ನಿಜವಾಗಿಯೂ ಪರಿಶುದ್ಧವಾಗಿರುವ ಯಾವುದರ ವಿಷಯದಲ್ಲಿಯೂ ಆಂತರಿಕವಾಗಿ ಸಂತೋಷಿಸುವದಿಲ್ಲ. ಇಲ್ಲಿ ಪೌಲನು ಖಂಡಿತವಾಗಿಯೂ ಹೇಳುವದೇನೆಂದರೆ ನೂತನ ಸೃಷ್ಟಿಯಾಗುವ ಸಮಯದಲ್ಲಿ ಹೊಂದಿಕೊಂಡ ನೂತನವಾದ ಒಳ ಸ್ವಭಾವದಲ್ಲಿ, ತಾನು ನಿಜವಾಗಿಯೂ ಕ್ರಿಸ್ತನಲ್ಲಿದ್ದೇನೆ, ಎಂಬದಾಗಿ ಹೇಳುತ್ತಿದ್ದಾನೆ, ಅವನು ದೇವರ ಎಲ್ಲಾ ಸತ್ಯಗಳಲ್ಲಿ ಸಂತೋಷಿಸುವವನಾಗಿದ್ದನು, ಅದರಲ್ಲಿ ಶುದ್ಧವೂ, ನ್ಯಾಯವೂ, ಹಿತಕರವೂ ಆಗಿದ್ದ ಆತನ ಧರ್ಮಶಾಸ್ತ್ರವೂ ಸೇರಿತ್ತು. ಅವನು ಕೀರ್ತನೆಗಾರನೊಂದಿಗೆ "ನಿನ್ನ ಧರ್ಮಶಾಸ್ತ್ರವೇ ನನ್ನ ಆನಂದವಾಗಿದೆ" ಮತ್ತು "ನಿನ್ನ ಧರ್ಮಶಾಸ್ತ್ರವು ನನಗೆ ಎಷ್ಟೋ ಪ್ರಿಯವಾಗಿದೆ!" (ಕೀರ್ತನೆ 119:77,97) ಎಂದು ಹೇಳುವವನಾಗಿದ್ದನು. **23**

**7:23** *"ಬೇರೊಂದು ನಿಯಮ"*– ಇಲ್ಲಿ ಆತನು ದೇವರ ಧರ್ಮಶಾಸ್ತ್ರವಲ್ಲದ ಮತ್ತೊಂದು ನಿಯಮದ ಬಗ್ಗೆ ಮಾತನಾಡುತ್ತಿದ್ದಾನೆ, ಅದನ್ನು 24ನೇ ವಚನದಲ್ಲಿ ಸೂಚಿಸಿದ್ದನು. ಅವನು ಎಂಥಾ ಗಂಭೀರವಾದ ಭಾಷೆ ಉಪಯೋಗಿಸಿದ್ದಾನೆ ಎಂಬದನ್ನು ಗಮನಿಸಿರಿ. ಈ ನಿಯಮವು ಅವನಿಗೆ ವಿರುದ್ಧವಾಗಿ "ಕಾದಾಡುತ್ತಿತ್ತು" –ಮತ್ತು ಅವನನ್ನು ತನಗೆ ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಪೌಲನು ತನಗಿರುವ ಎಲ್ಲವುಗಳಿಂದ, ತನ್ನ ಮಾನಸಿಕ ಶಕ್ತಿ ಹಾಗೂ ಚಿತ್ತದಿಂದ ಹೋರಾಡಿದರೂ ತನ್ನ ಹಳೆಯ ಸ್ವಭಾವವಾದ ಶರೀರದ ಮೇಲೆ ಜಯಗಳಿಸಲು ಆಗದವನಾಗಿದ್ದನು. ಅವನು ಮತ್ತೆಮತ್ತೆ ಸೋಲುತ್ತಿದ್ದನು ಆದ್ದರಿಂದಲೇ ಮುಂದಿನ ವಾಕ್ಯದಲ್ಲಿ ತನ್ನ ಅಳಲನ್ನು ತೋಡಿಕೊಂಡಿದ್ದಾನೆ. **24**

**7:24** ತನ್ನೊಳಗೇ ದುಷ್ಟತನವಿದೆ ಎಂಬ ತಿಳುವಳಿಕೆ ಮತ್ತು ಒಳ್ಳೆಯವನಾಗಿರಲು ತನ್ನೊಂದಿಗೆ ನಡೆಸಿದ ಯಶಸ್ವಿಯಾಗದ ಹೋರಾಟ, ಪೌಲನ ಹೃದಯದೊಳಗೆ ಆಳವಾದ ನೋವನ್ನುಂಟು ಮಾಡಿತು. ಇದು ತನ್ನ ಮೂಲಭೂತ, ಸಂಪೂರ್ಣ, ಘೋರವಾದ ಭ್ರಷ್ಟತನಕ್ಕೆ ಒಳಗಾಗಿರುವ ವ್ಯಕ್ತಿ ಇವುಗಳನ್ನು ಮುಖಾಮುಖಿಯಾಗಿ ಎದುರುಗೊಳ್ಳುವಾಗ

ಉಂಟಾಗುವ ವೇದನೆಯಾಗಿದೆ, ಯಾಕಂದರೆ ಈ ಪರಿಸ್ಥಿತಿಯನ್ನು ಬದಲಾಯಿಸಲು ಅವನ ಸಾಮರ್ಥ್ಯದಿಂದ ಸಾಧ್ಯವಿಲ್ಲ.

*"ಮರಣಕ್ಕೆ ಒಳಗಾದ ದೇಹ"*– 6:12 ನೋಡಿರಿ ಅಲ್ಲಿಯೂ ಅವನ "ಮರ್ತ್ಯ ದೇಹ" ಎಂಬ ಪದವನ್ನು ಬಳಸಿದ್ದಾನೆ. 6:6 ರಲ್ಲಿರುವ "ಪಾಪಾದೀನಸ್ವಭಾವ" ಎಂಬ ಪದದೊಂದಿಗೆ ಹೋಲಿಸಿ ನೋಡಿರಿ. ಇದು ಸಾಯುವ ದೇಹವಾಗಿದೆ ಯಾಕಂದರೆ ಇದರೊಳಗೆ ಪಾಪವು ಜೀವಿಸುತ್ತಿದೆ (ವ 17; 8:10). ಪೌಲನ ಸಾಯುವ ದೇಹದ ಬಗ್ಗೆ ಬರೆಯುತ್ತಿದ್ದಾನೆ, ಈ ದೇಹವು ಪಾಪ ಸ್ವಭಾವದಿಂದ ತುಂಬಿಹೋಗಿದೆ, ಇದನ್ನು ನಾವು ಹಿಂದಿನ ವಚನಗಳಲ್ಲಿ ನೋಡಬಹುದಾಗಿದೆ. (ಬೇರೆ ಮಾತುಗಳಲ್ಲಿ ಹೇಳುವದಾದರೆ, ಪಾಪ ಸ್ವಭಾವವಾಗಿರುವ, ಸಾರ್ಕ್ಸ್, ದೇಹಕ್ಕೆ ಉಪಯೋಗಿಸಲಾಗಿರುವ ಗ್ರೀಕ್ ಪದವಾದ ಸೋಮಾದಲ್ಲಿ ಜೀವಿಸುತ್ತದೆ). ಸಾಯುವ ದೇಹದಿಂದ ದೊರೆಯುವ ಬಿಡುಗಡೆಯು ಆತನು ಇವುಗಳನ್ನು ಬರೆಯುತ್ತಿರುವ ಸಮಯದಲ್ಲಾಗದೆ ಭವಿಷ್ಯದಲ್ಲಾಗುವ ಕಾರ್ಯವಾದ್ದರಿಂದ ಇದರ ಬಗ್ಗೆ ಪೌಲನ ದೃಷ್ಟಿಕೋನಗಳನ್ನು ಎಚ್ಚರಿಕೆಯಿಂದ ಗಮನಿಸಿರಿ. 8:23; 1 ಕೊರಿಂಥ 15:53-54; ಫಿಲಿಪ್ಪಿ 3:21ರೊಂದಿಗೆ ಹೋಲಿಸಿ ನೋಡಿರಿ. ಇದನ್ನು ತನ್ನ ಜೀವಿತಕಾಲದಲ್ಲಿ ಸಂಪಾದಿಸಿಕೊಳ್ಳಬೇಕೆಂದು ಅವನು ಎಂದಿಗೂ ಹೇಳಲಿಲ್ಲ. ಆದರೆ ವಿಶ್ವಾಸಿಗಳ ಶರೀರದ ಮೇಲೆ ಮತ್ತು ಶರೀರದೊಳಗಿರುವ ಪಾಪದ ಮೇಲೆ ಜಯಗಳಿಸಬಹುದು ಎಂಬದನ್ನು ಎಂದಿಗೂ ಅಲ್ಲಗಳೆಯಲಿಲ್ಲ. ಮುಂದಿನ ಅಧ್ಯಾಯದಲ್ಲಿ ನಾವು ಇದನ್ನು ಮಾಡಬಹುದೆಂಬದನ್ನು ಸ್ಪಷ್ಟವಾಗಿ ತೋರಿಸಿದ್ದಾನೆ. 18-21 ವಚನಗಳನ್ನು ಬರೆದಿರುವ ವ್ಯಕ್ತಿಯೇ8:37 ಮತ್ತು 2 ಕೊರಿಂಥ 2:14 ವಚನಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಯಾವುದು ಸತ್ಯ? ಎರಡೂ ಏಕಕಾಲದಲ್ಲಿ ಸತ್ಯವಾಗಿವೆ. **25**

**7:25** ಇದೇ ಸಮಯದಲ್ಲಿ ಮರಣಕ್ಕೆ ಒಳಗಾಗುವ ದೇಹದಿಂದ ದೊರೆಯುವ ಬಿಡುಗಡೆಗಾಗಿ ಪೌಲನು ಯೇಸು ಕ್ರಿಸ್ತನ ಮೂಲಕ ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದ್ದಾನೆ (ಇದನ್ನು ನಾವು ಕ್ರಿಸ್ತನಲ್ಲಿ ವಿಶ್ವಾಸಿಯಾಗಿ ಮಾತ್ರವೇ ಮಾಡಲು ಸಾಧ್ಯ), ತನ್ನನ್ನು ಬಂಧನಕ್ಕೊಳಪಡಿಸುವ ಪಾಪ ಸ್ವಭಾವ ತನ್ನಲ್ಲಿದೆ ಎಂದು ಅವನು ಒಪ್ಪಿಕೊಂಡಿದ್ದಾನೆ. ಒಂದುವೇಳೆ ನಾವು ಆತನ ಹೇಳಿಕೆಯನ್ನು ಇಲ್ಲಿ ನಿರ್ಲಕ್ಷಿಸುವದಾದರೆ ಮುಂದಿನ ವಾಕ್ಯವನ್ನು (ಮತ್ತು ಹೊಸ ಒಡಂಬಡಿಕೆಯ ಹಲವಾರು ವಚನಗಳನ್ನು) ಸರಿಯಾಗಿ ವ್ಯಾಖ್ಯಾನಿಸಲು ನಮ್ಮಿಂದ ಆಗುವದಿಲ್ಲ. 13:14; ಗಲಾ 5:16-17; 1 ಯೋಹಾನ 1:8 ಸಹ ನೋಡಿರಿ. ಆದರೆ ನಮಗೆದುರಾಗುವ ಪ್ರಶ್ನೆ ಏನೆಂದರೆ, ವಿಶ್ವಾಸಿಗಳಲ್ಲಿರುವ ಪಾಪ ಸ್ವಭಾವದ ಅಧಿಕಾರದಿಂದ ಈ ಬಿಡುಗಡೆ ಸಿಗುವದಿಲ್ಲವೇ? ಸ್ವಂತ್ರವಾಗಿ ಸಂತೋಷದಿಂದ ದೇವರ ಸೇವೆ ಮಾಡಲು ಅವರಿಂದ ಆಗುವದಿಲ್ಲವೇ? 6ನೇ ಅಧ್ಯಾಯದಲ್ಲಿ ಪೌಲನು ಸಾಧ್ಯ ಎಂಬದಾಗಿ ಹೇಳಿದಾನೆ ಮತ್ತು ಮಾರ್ಗವನ್ನೂ ತೋರಿಸಿದ್ದಾನೆ. 8ನೇ ಅಧ್ಯಾಯದಲ್ಲಿ ಇದನ್ನು ಮತ್ತಷ್ಟು

ಸ್ಪಷ್ಟಪಡಿಸಿದ್ದಾನೆ. ಆದರೆ 7ನೇ ಅಧ್ಯಾಯದಲ್ಲಿ ಅವನು ಪ್ರಕಟಪಡಿಸಿರುವದೇನೆಂದರೆ ಧರ್ಮಶಾಸ್ತ್ರ ಪಾಲನೆಯಿಂದ ಅಥವಾ ಒಬ್ಬನು ತನ್ನ ಸ್ವಂತ ಸಾಮರ್ಥ್ಯದಿಂದ ಪಾಪಕ್ಕೆ ವಿರುದ್ಧ ಹೋರಾಡುವದರಿಂದ ಜಯಹೊಂದಬಹುದೆಂಬ ನಿರೀಕ್ಷೆಯಿಲ್ಲ. ಪಾಪವು ಭೂಲೋಕದಲ್ಲಿ ಅತ್ಯಂತ ದೃಢತೆಯುಳ್ಳ ಬಲಿಷ್ಠನಿಗಿಂತ ಹೆಚ್ಚು ಬಲಿಷ್ಠವಾದದ್ದಾಗಿದೆ. ಹಳೆಯ ಒಡಂಬಡಿಕೆಯ ಫರೋಹನ ಹಾಗೆ ಅದು, "ಯೆಹೋವನು ಯಾರೋ ನನಗೆ ಗೊತ್ತಿಲ್ಲ. ಇದು ಮಾತ್ರವಲ್ಲದೆ ಇಸ್ರಾಯೇಲ್ಯರು ಹೊರಟುಹೋಗುವದಕ್ಕೆ ನಾನು ಒಪ್ಪುವದೇ ಇಲ್ಲ" (ವಿಮೋ 5:2). ವಿಶ್ವಾಸಿಗಳು ನಿರಾಸೆಗೊಳಗಾಗಿ ತಮ್ಮೊಳಗಿರುವ ಪಾಪಕ್ಕೆ ತಮ್ಮನ್ನು ಒಪ್ಪಿಸಿಕೊಡಬೇಕೆಂಬದಾಗಿಯಲ್ಲ ಬದಲಾಗಿ ಅವರು ತಮ್ಮನ್ನು ತಿಳಿದುಕೊಳ್ಳಬೇಕು ಮತ್ತು ದೇವರ ಮಾರ್ಗದನುಸಾರವಾಗಿ ಜಯ ಹೊಂದಬೇಕೆಂಬ ಕಾರಣದಿಂದ ಪೌಲನು ಈ ಬೋಧನೆ ಮಾಡಿದಾನೆ.

# 8[1]

**8:1** "ಆದದ್ದರಿಂದ" ಎಂಬ ಪದವು ಈ ವಾಕ್ಯವನ್ನು ಹಿಂದಿನ ವಾಕ್ಯಗೊಂದಿಗೆ ಸೇರಿಸುತ್ತದೆ ಮತ್ತು 7:14-25ರಲ್ಲಿ ಪೌಲನು ತನ್ನನ್ನು "ಯೇಸು ಕ್ರಿಸ್ತನಲ್ಲಿರುವ" –ವ್ಯಕ್ತಿಯೆಂದು ತನ್ನನ್ನು ವಿವರಿಸಿಕೊಳ್ಳುತ್ತಿರುವದಕ್ಕೆ ನಿಖರವಾದ ಸೂಚನೆಯಾಗಿ ತೋರುತ್ತದೆ. ಪಾಪದೊಂದಿಗೆ ಅವನ ಸಂಬಂಧ ಸಂಪೂರ್ಣವಾಗಿ ಮುರಿದುಹೋಗಿತ್ತು (7:17), ಅವನ ಅಂತರ್ಯವು ಬದಲಾದ್ದರಿಂದ ದೇವರ ಧರ್ಮಶಾಸ್ತ್ರದಲ್ಲಿ ಸಂತೋಷಿಸಿದನು (7:22) ಮತ್ತು ಸಾಯುವ ದೇಹದಿಂದ ಯೇಸು ಕ್ರಿಸ್ತನ ಮೂಲಕ ತನ್ನನ್ನು ಬಿಡುಗಡೆಗೊಳಿಸಿದ್ದಕ್ಕೆ ದೇವರಿಗೆ ಕೃತಜ್ಞತೆ ಸಲ್ಲಿಸಿದನು (7:25). ಈ ಹೇಳಿಕೆಗಳಿಂದ ತಾನು ಕ್ರಿಸ್ತನಲ್ಲಿದ್ದೇನೆಂದು ತೋರಿಸಿದನು ಹಾಗೂ ಇದರಿಂದ ತನಗೆ ಅಪರಾಧ ನಿರ್ಣಯವಿಲ್ಲವೆಂದು ತೋರಿಸಿದನು. ಮತ್ತು ಈ ಸ್ಥಿತಿಯಲ್ಲಿರುವ ಯಾರಿಗೂ ಅಪರಾಧ ನಿರ್ಣಯವಿಲ್ಲ. ಪಾಪದ ನಿಮಿತ್ತ ಬಾಧೆಗಳಿಗೆ ಒಳಗಾಗುವದರಿಂದ ವಿಶ್ವಾಸಿಗಳು ಸಹಜವಾಗಿ ತಮ್ಮನ್ನು ಅಪರಾಧಿಗಳೆಂದು ನಿರ್ಣಯಿಸಿಕೊಳ್ಳಲು ಮುಂದಾಗುತ್ತಾರೆ, ಆದರೆ ದೇವರು ಅವರನ್ನು ಅಪರಾಧಿಗಳೆಂದು ನಿರ್ಣಯಿಸುವದಿಲ್ಲ. ದೇವರು ಅಪರಾಧಿಗಳೆಂದು ನಿರ್ಣಯಿಸದಿರುವಾಗ ಪಾಪದಿಂದ ವಿಶ್ವಾಸಿಗಳು ಹೇಗೆ ಅಪರಾಧಿಗಳೆಂದು ನಿರ್ಣಯಿಸಿಕೊಳ್ಳುತ್ತಾರೆಂದು ತಿಳಿಯಲು 4:7-8 ಹೋಲಿಸಿ ನೋಡಿರಿ.

*"ಕ್ರಿಸ್ತನಲ್ಲಿರುವವರಿಗೆ"*– ಅಂದರೆ ಆತನ ಆತ್ಮೀಕ ದೇಹದ ಸದಸ್ಯರು, ಆತನಲ್ಲಿ ಐಕ್ಯರಾಗಿರುವದು – 6:3; 1 ಕೊರಿಂಥ 12:12-13. "ಅಪರಾಧ ನಿರ್ಯಣಯವು ಇಲ್ಲವೇ ಇಲ್ಲ" ಎಂಬದು ನೀತಿವಂತರೆಂದು ಎಣಿಸಲ್ಪಡುವದಕ್ಕೆ ಸಮಾನವಾಗಿದೆ (3:24; 4:7-8; 5:1). ಯೋಹಾನ 5:24 ನೋಡಿರಿ. ಯೇಸು ಕ್ರಿಸ್ತನಲ್ಲಿರುವವರಿಗೆ ಅಪರಾಧ ನಿರ್ಣಯ

ಇಲ್ಲದಿರುವ ಪ್ರಕಾರ, ಆತನಲ್ಲಿ ಐಕ್ಯರಾಗಿರುವವರಿಗೂ ಇಲ್ಲ. ಯೇಸು ಕ್ರಿಸ್ತನು ಅವರಿಗಾಗಿ ಪ್ರಾಣ ಕೊಟ್ಟಿದ್ದಾನೆ ಮತ್ತು ಅವರ ಅಪರಾಧ ನಿರ್ಣಯ ಹಾಗೂ ಪಾಪವನ್ನು ಶಾಶ್ವತವಾಗಿ ತೆಗೆದುಹಾಕಿದ್ದಾನೆ. ಆತನು ಮತ್ತು ಅವರು ಆತನೊಂದಿಗೆ ಅಪರಾಧ ನಿರ್ಣಯವನ್ನು ಮೀರಿದ ಹೊಸ ಜೀವಿತಕ್ಕಾಗಿ ಪುನರುತ್ಥಾನಗೊಂಡಿದ್ದಾರೆ. ಅವರಿಗೆ ಯಾಕೆ ಅಪರಾಧ ನಿರ್ಣಯವಿಲ್ಲವೆಂಬದಕ್ಕೆ ಮತ್ತೊಂದು ಕಾರಣವೇನೆಂದರೆ ಕ್ರಿಸ್ತನಲ್ಲಿ ಈ ರೀತಿಯಾದ ನಂಬಿಕೆ ಪಾಪ ಮತ್ತು ಮರಣದ ನಿಯಮದಿಂದ ಸ್ವಾತಂತ್ರ್ಯಕ್ಕೆ ನಡೆಸುತ್ತದೆ (ವ 2). ಕ್ರಿಸ್ತನು ತನ್ನ ಜನರನ್ನು ಅವರ ಪಾಪಗಳಿಂದ ರಕ್ಷಿಸುತ್ತಾನೆ ಮತ್ತು ಅವರ ಪಾಪಮಯತನಗಳ ಮೇಲೆ ಜಯವನ್ನು ಅನುಗ್ರಹಿಸುತ್ತಾನೆ. ಆತನು ಯಾರನ್ನು ನೀತಿವಂತರೆಂದು ನಿರ್ಣಯಿಸುತ್ತಾನೋ ಅವರನ್ನು ಶುದ್ಧೀಕರಿಸುತ್ತಾನೆ. ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಡುವದು ಶರೀರದಾಶೆ, ಲೋಕ ಮತ್ತು ದುರಾತ್ಮನ ಮೇಲೆ ಜಯವನ್ನು ಕೊಡುವ (ಏಕೈಕ) ಮಾರ್ಗವಾಗಿದೆ.

*"ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರು"*– ಈ ವಚನವನ್ನು 4ನೇ ವಚನದಿಂದ ತಪ್ಪಾಗಿ ನಕಲು ಮಾಡಲಾಗಿದೆ ಮತ್ತು ಮೂಲಭಾಷೆಯ ಅಂದರೆ ಗ್ರೀಕ್ ಭಾಷೆಯ 1ನೇ ವಚನದಲ್ಲಿ ಇದು ಇಲ್ಲ ಎಂಬದು ಅನೇಕ ಪಂಡಿತರ ಅಭಿಪ್ರಾಯವಾಗಿದೆ. ಉಳಿದವರು ಈ ಅಭಿಪ್ರಾಯವನ್ನು ತಿರಸ್ಕರಿಸುವವರಾಗಿದ್ದಾರೆ. ಈ ನೋಟ್ಸ್‌ಗಳ ಬರಹಗಾರ ನಂಬುವದೇನೆಂದರೆ ಈ ವಾಕ್ಯವು "ಕರ್ತನಾದ ಯೇಸು ಕ್ರಿಸ್ತನಲ್ಲಿರುವವರ" ಕುರಿತಾದ ಸಂಕ್ಷಿಪ್ತ ವಿವರಣೆಯಾಗಿದೆ ಮತ್ತು ಇದರ ಸತ್ಯವನ್ನೇ ಪೌಲನು ಮುಂದಿನ ವಾಕ್ಯದಲ್ಲಿ ತಿಳಿಸುತ್ತಿದ್ದಾನೆ. ಇದನ್ನು ನಾವು ಈ ರೀತಿಯಾಗಿ ತೆಗೆದುಕೊಂಡರೆ ಇದು ಮತ್ತಷ್ಟು ಸ್ಪಷ್ಟವಾಗುತ್ತದೆ: "ಆದದರಿಂದ ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ. ಅವರು ಶರೀರ ಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರ ನಡೆಯುವವರಾಗಿದ್ದಾರೆ. ಯಾಕಂದರೆ ಜೀವಾತ್ಮದ ನಿಯಮವು ಕರ್ತನಾದ ಯೇಸು ಕ್ರಿಸ್ತನಲ್ಲಿದೆ", ಇತ್ಯಾದಿ. (ಮೂಲ ಗ್ರೀಕ್ ಭಾಷೆಯಲ್ಲಿ ನಮ್ಮ ಆಧುನಿಕ ಉಚ್ಚರಣೆಯ ಗುರುತುಗಳಿಲ್ಲ.) **2**

**8:2** ಈ ಇಡೀ ಅಧ್ಯಾಯವು 7:14-25 ವಚನಕ್ಕೆ ಸಂಪೂರ್ಣವಾಗಿ ವ್ಯತ್ಯಾಸವುಳ್ಳದ್ದಾಗಿದೆ. ಇದಕ್ಕೆ ಕಾರಣವೇನೆಂದರೆ: ಆ ವಚನಗಳು ಒಬ್ಬ ವಿಶ್ವಾಸಿಯು ತನ್ನೊಳಗಿರುವ ಪಾಪದ ಘೋರ ವಾಸ್ತವವನ್ನು ಎದುರಿಸುವದರ ಬಗ್ಗೆ ವಿವರಿಸುತ್ತವೆ, ಆದರೆ ಈ ಅಧ್ಯಾಯವು ನಾವು "ಕ್ರಿಸ್ತನಲ್ಲಿ" ಏನಾಗಿದ್ದೇವೆ ಎಂಬದನ್ನು ವಿವರಿಸುತ್ತವೆ. 7ನೇ ಅಧ್ಯಾಯದಲ್ಲಿ ನೋಡಿರುವ ಪಾಪ ಮತ್ತು ಮರಣದ ನಿಯಮಕ್ಕಿಂತ ಉನ್ನತ ಹಾಗೂ ಉತ್ತಮವಾಗಿರುವ ನಿಯಮವನ್ನು ನಾವು ಇಲ್ಲಿ ನೋಡಬಹುದಾಗಿದೆ. ಈ ನಿಯಮವು ವಿಶ್ವಾಸಿಗಳಿಗೆ ಆ ನಿಯಮದ ಮೇಲೆ ಅಧಿಕಾರವನ್ನು ಕೊಡುತ್ತದೆ. ಈ ನಿಯಮವು "ಜೀವವರಕ್ಕೆ" ಸಂಬಂಧಿಸಿದ್ದಾಗಿದೆ – ದೇವರ

ಪವಿತ್ರಾತ್ಮನು ವಿಶ್ವಾಸಿಗಳಲ್ಲಿ ಜೀವಿಸುತ್ತಾನೆ ಮತ್ತು ಅವರು ತಮ್ಮ ಸ್ವಂತ ಸಾಮರ್ಥ್ಯದಲ್ಲಿ ಎಂದಿಗೂ ಮಾಡಲಾಗದ ಕಾರ್ಯಗಳನ್ನು ಮಾಡಲು ಅವರನ್ನು ಬಲಪಡಿಸುತ್ತಾನೆ. 8ನೇ ಅಧ್ಯಾಯದಲ್ಲಿ ಪೌಲನು ಸುಮಾರು ಮೂವತ್ತೂರು ಸಲ (7:14ರಲ್ಲಿ ನೋಟ್ ನೋಡಿರಿ) ಕ್ರಿಸ್ತನು ಮತ್ತು ದೇವರಾತ್ಮನ ಪ್ರಸ್ತಾಪ ಮಾಡಿದ್ದಾನೆ. ಇಲ್ಲಿ ಪೌಲನು ಅದ್ಭುತವಾದ ಸತ್ಯವನ್ನು ಪ್ರಕಟಪಡಿಸಿದ್ದಾನೆ ಏನೆಂದರೆ ದೇವರು ವಿಶ್ವಾಸಿಗಳ ದೇಹಗಳಲ್ಲಿ ಜೀವಿಸಲು ತನ್ನ ಆತ್ಮನನ್ನು ಕೊಟ್ಟಿದ್ದಾನೆ. ಪವಿತ್ರಾತ್ಮನು ಮಾತ್ರವೇ ಜಯಗಳಿಸಲು ಅವರಿಗೆ ಅಧಿಕಾರ ಕೊಡುತ್ತಾನೆ (ವ 4,13) ಆತನು ಜೀವ ಮತ್ತು ಸಮಾಧಾನ ಕೊಡುತ್ತಾನೆ (ವ 6) ಆತನು ಅವರನ್ನು ಮುನ್ನಡೆಸುತ್ತಾನೆ (ವ 14) ಆತನು ಅವರು ದೇವರ ಮಕ್ಕಳೆಂದು ತಿಳಿದುಕೊಳ್ಳುವಂತೆ ಮಾಡುತ್ತಾನೆ (ವ 15,16) ಮತ್ತು ಆತನು ಅವರಲ್ಲಿದ್ದು ಅವರಿಗಾಗಿ ಪ್ರಾರ್ಥಿಸುತ್ತಾನೆ (ವ 26,27) ಯೋಹಾನ 14:16-17ರಲ್ಲಿ ಪವಿತ್ರಾತ್ಮನ ಕುರಿತಾದ ನೋಟ್ಸ್ ನೋಡಿರಿ **3**

**8:3** *"ಧರ್ಮಶಾಸ್ತ್ರ"*– ದೇವರು ಮೋಶೆಯ ಮೂಲಕ ಕೊಟ್ಟ ಧರ್ಮಶಾಸ್ತ್ರದ ಬಗ್ಗೆ ಪೌಲನು ಮಾತನಾಡುತ್ತಿದ್ದಾನೆ. ಜನರನ್ನು ಕಾಪಾಡುವ ಶಕ್ತಿ ಅಥವಾ ಅವರು ತಮ್ಮ ಪಾಪ ಮತ್ತು ಪಾಪದ ಕಾರ್ಯಗಳನ್ನು ಜಯಿಸುವಂತೆ ಸಹಾಯ ಮಾಡಲು ಅದಕ್ಕಿರಲಿಲ್ಲ (3:19-20; 4:15; 7:5,7,14). "ಶರೀರ" (ಹಾಗೆಯೇ ವಚನ 4,5,8,9,12,13) – 7:15ರಲ್ಲಿ ನೋಟ್ಸ್ ನೋಡಿರಿ. ಪಾಪದಲ್ಲಿದ್ದ ಜನರು ತಪ್ಪಿಸಿಕೊಳ್ಳಲು ಮಾರ್ಗವನ್ನು ಏರ್ಪಡಿಸುವದಕ್ಕಾಗಿ ದೇವರು ತನ್ನ ಒಬ್ಬನೇ ಮಗನನ್ನು ಕಳುಹಿಸಿದನು (ಯೋಹಾನ 3:14-16). ದೇವಕುಮಾರನಾದ ಯೇಸು ಕ್ರಿಸ್ತನು ಪಾಪ ಸ್ವಭಾವವಿರುವ ಪಾಪಿಯಾಗಿ ಈ ಲೋಕಕ್ಕೆ ಬರಲಿಲ್ಲ (2 ಕೊರಿಂಥ 5:21; ಇಬ್ರಿ 4:15; 7:26; 1 ಪೇತ್ರ 2:22). ಆತನು ಪಾಪಿಯಾದ ಮಾನವನ ಸಾರೂಪ್ಯದಲ್ಲಿ ಬಂದನು. ಆತನು "ಪಾಪನಿವಾರಕ ಯಜ್ಞವಾಗಿ" ಬಂದನು ("ಪಾಪನಿವಾರಕ ಯಜ್ಞ" –ಎಂಬ ಪದ ಮೂಲ ಗ್ರೀಕ್ ಭಾಷೆಯಲಿಲ್ಲ ಬದಲಾಗಿ ಇಲ್ಲಿ ಸೇರಿಸಲಾಗಿದೆ). ಆತನು ಪಾಪವೆಂಬ ಎಲ್ಲಾ ಮಾನವರ ಸಮಸ್ಯೆಯನ್ನು ಬಗೆಹರಿಸಲು ಬಂದನು. ಆತನು ಅದನ್ನು ಸೋಲಿಸಿದನು ಮತ್ತು ಅದಕ್ಕಾಗಿ ಪ್ರಾಣ ಕೊಟ್ಟನು (3:24-25). **4**

**8:4** ಜನರನ್ನು ಅಪರಾಧ, ಅಪರಾಧ ನಿರ್ಣಯ ಮತ್ತು ಪಾಪದ ಅಧಿಕಾರದಿಂದ ಬಿಡಿಸುವದು ಹಾಗೂ ಅವರನ್ನು ತನ್ನ ಪವಿತ್ರ ಜನರನ್ನಾಗಿ ಮಾಡಿಕೊಳ್ಳುವದು ಅಂದರೆ ಪವಿತ್ರ ಹಾಗೂ ಆತ್ಮೀಕವಾಗಿರುವ ಧರ್ಮಶಾಸ್ತ್ರದಲ್ಲಿ ನೀತಿಯನ್ನು ಸಾಧಿಸುವವರು ಹಾಗೂ ಆತ್ಮೀಕರಾಗಿರುವವರನ್ನಾಗಿ ಇವೆಲ್ಲವುಗಳ ಮೂಲಕ ಮಾಡುವದೇ ದೇವರ ಮಹಾ ಉದ್ದೇಶವಾಗಿತ್ತು (7:12,14). ಇಬ್ರಿ 8:10 ಸಹ ನೋಡಿರಿ. ವಿಶ್ವಾಸಿಗಳು ಧರ್ಮಶಾಸ್ತ್ರಕ್ಕೆ ಅಧೀನರಲ್ಲ (6:14; 7:4). ಅವರು ಅದರ ದಿವಸಗಳು, ಆಚಾರಗಳು, ಊಟದ ವಿಷಯಗಳ

ಸೂಚನೆಗಳು, ಇತ್ಯಾದಿಗಳನ್ನು ಅನುಸರಿಸುವ ಅವಶ್ಯಕತೆಯಿಲ್ಲ. ಆದರೆ ಅವುಗಳಲ್ಲಿ ಧರ್ಮಶಾಸ್ತ್ರದ ನೀತಿಯ ಹಾಗೂ ನೈತಿಕ ಅವಶ್ಯಕತೆಗಳು ಪೂರೈಕೆಯಾಗಬೇಕೆಂದು ದೇವರು ಬಯಸುತ್ತಾನೆ. ಈ ಅವಶ್ಯಕತೆಯನ್ನು ಎರಡೂ ಆಜ್ಞೆಗಳಲ್ಲಿ ವ್ಯಕ್ತಪಡಿಸಲಾಗಿದೆ – 13:8-10; ಮತ್ತಾಯ 22:37-40 ನೋಡಿರಿ. ಇವುಗಳನ್ನು ನೆರವೇರಿಸಬೇಕೆಂದರೆ, ಒಂದು ಕಾರ್ಯ ಅತ್ಯಂತ ಪ್ರಾಮುಖ್ಯವಾದದ್ದಾಗಿದೆ – "ದೇವರಾತ್ಮನಿಗನುಸಾರ" ನಡೆದುಕೊಳ್ಳುವದು. ಇಲ್ಲಿ ಮತ್ತು ಈ ಅಧ್ಯಾಯದಾದ್ಯಂತ, ಆತ್ಮನು ಎಂದರೆ ದೇವರಾತ್ಮನು. ಗಲಾ 5:16-18 ಸಹ ನೋಡಿರಿ. "ದೇವರಾತ್ಮನಿಗನುಸಾರ ಜೀವಿಸುವದೆಂದರೆ" ಆತನು ನಮ್ಮೊಳಗೆ ವಾಸಿಸುತ್ತಾನೆ ಎಂಬದನ್ನು ಅರಿತುಕೊಳ್ಳುವದು (ವ 9,15) ನಮ್ಮನ್ನು ಆತನಿಗೆ ಸಮರ್ಪಿಸುವದು (6:13) ಆತನಿಗೆ ವಿಧೇಯರಾಗುವದು (ವ 14; ಗಲಾ 5:25) ಆತನ ಬಲ ಮತ್ತು ಅಧಿಕಾರಕ್ಕಾಗಿ ಆತನಲ್ಲಿ ಭರವಸೆಯನ್ನಿಡುವದು ಹಾಗೂ ಅವುಗಳನ್ನು ಉಪಯೋಗಿಸಿಕೊಳ್ಳುವದು (ವ 13) **5**

**8:5** *"ಶರೀರ"*– (7:5; ಗಲಾ 5:17). ಪೌಲನು ಇಲ್ಲಿ ಎರಡು ರೀತಿಯ ಜನರ ಬಗ್ಗೆ ವಿವರಿಸಿದ್ದಾನೆ, ಅಂದರೆ ಭೂಲೋಕದ ಮೇಲೆ ಕೇವಲ ಎರಡು ರೀತಿಯ ಜನರು ಮಾತ್ರವೇ ಇದ್ದಾರೆ. ಒಂದು ರೀತಿಯವರು ನಿರ್ದಿಷ್ಟವಾದ ವಿಚಾರಗಳಿಗನುಸಾರ ಯೋಚಿಸುತ್ತಾರೆ, ಮತ್ತೊಂದು ರೀತಿಯವರು ಸಂಪೂರ್ಣವಾಗಿ ವ್ಯತ್ಯಸ್ಥವಾದ ರೀತಿಯಲ್ಲಿ ಯೋಚಿಸುತ್ತಾರೆ. ಪಾಪಮಯ ಸ್ವಭಾವವು ಅದರ ಬಯಕೆಗಳನ್ನು ಅವಿಶ್ವಾಸಿಗಳ ಮನಸ್ಸಿನೊಳಗೆ ಬರಮಾಡುತ್ತದೆ ಮತ್ತು ಹುದುವಾಗಿ ಹೇಳುವದಾದರೆ, ಅವರು ಅವುಗಳನ್ನೇ ಹಿಂಬಾಲಿಸುತ್ತಾರೆ. ದೇವರಾತ್ಮನು ಆತನ ಬಯಕೆಗಳನ್ನು ವಿಶ್ವಾಸಿಗಳ ಮನಸ್ಸಿನೊಳಗೆ ಬರಮಾಡುತ್ತಾನೆ. ಮತ್ತು ಒಂದುವೇಳೆ ಅವರ ಮನಸ್ಸುಗಳು ಆತನು ಅವರ ವಿಷಯವಾಗಿ ಬಯಸುವ ವಿಷಯಗಳಿಂದ ತುಂಬಿರುವದಾದರೆ ಅವರು ಅವುಗಳನ್ನೇ ಹಿಂಬಾಲಿಸುತ್ತಾರೆ. ಒಬ್ಬ ವ್ಯಕ್ತಿ ತಾನು ಯೋಚಿಸುವ ರೀತಿ ಅವನ ಜೀವನದ ಮೇಲೆ ದೊಡ್ಡ ಪ್ರಭಾವ ಬೀರುತ್ತದೆ (ಆದ್ದರಿಂದಲೇ 2 ಕೊರಿಂಥ 10:5; ಫಿಲಿಪ್ಪಿ 4:8; ಕೊಲೊ 3:16; ಕೀರ್ತನೆ 1:2 ಪ್ರಾಮುಖ್ಯವಾಗಿದೆ). ಪಾಪ ಸ್ವಭಾವದ ಕಾರ್ಯಗಳು ಪಾಪದಲ್ಲಿರುವ ಜನರಿಗೆ ಎಲ್ಲಾ ಸಮಯಗಳಲ್ಲಿಯೂ ಅವು ಪಾಪವೆಂದು ಗೊತ್ತಾಗುವದಿಲ್ಲ. ಅವರು ದೇವರಲ್ಲಿ ಭಯಭಕ್ತಿಯುಳ್ಳ ಅಥವಾ ಬುದ್ಧಿಜ್ಞಾನಗಳಿರುವ ಕಾರ್ಯಗಳಾಗಿರಬಹುದು. ಆದರೆ ಅವುಗಳು ದೇವರಿಂದ ಬಂದ ಕಾರ್ಯಗಳಲ್ಲ (ಮತ್ತಾಯ 16:23). ಅವು ಪರಲೋಕ ಸಂಬಂಧವಾದ ಕಾರ್ಯಗಳಲ್ಲ (ಕೊಲೊ 3:2), ಬದಲಾಗಿ ಭೂಲೋಕ ಸಂಬಂಧವಾದ ಕಾರ್ಯಗಳಾಗಿವೆ (ಫಿಲಿಪ್ಪಿ 3:19), ದೇವರಾತ್ಮವಿಲ್ಲದ ಜನರಿಗೆ ಅವು ಸ್ವಾಭಾವಿಕವಾಗಿ ತೋರುತ್ತವೆ. 6ನೇ ವಚನದಲ್ಲಿ ಹೇಳಲಾಗಿರುವ "ಮರಣ" ಆತ್ಮೀಕ ಮರಣವಾಗಿದೆ ಅಂದರೆ ದೇವರಿಂದ ಬೇರ್ಪಡುವದಾಗಿದೆ (ಯೆಶಾಯ 59:2; ಎಫೆ 2:1; 4:18). ಯೇಸು ಕ್ರಿಸ್ತನಿಲ್ಲದ

ಪ್ರತಿಯೊಬ್ಬ ವ್ಯಕ್ತಿಯ ಪ್ರಾಕೃತ ಮನಸ್ಸು ತನ್ನನ್ನು ಮೆಚ್ಚಿಸಿಕೊಳ್ಳುವದರ ಮೇಲೆ ನೆಲೆಯಾಗಿರುತ್ತದೆ ಮತ್ತು ಈ ಕಾರ್ಯಗಳಿಗೂ ಒಬ್ಬನೇ ನಿಜವಾದ ದೇವರಿಗೂ ಯಾವುದೇ ಸಂಬಂಧವಿರುವದಿಲ್ಲ ಹಾಗೂ ಇವುಗಳು ಆತನನ್ನು ವಿರೋಧಿಸುತ್ತವೆ (ವ 7). ಅಂಥ ವ್ಯಕ್ತಿ ತಾನು ದೇವರ ಪಕ್ಷದವನೆಂದು ಮತ್ತು ದೇವರನ್ನು ಪ್ರೀತಿಸುತ್ತೇನೆಂದೂ ಹೇಳಬಹುದು. ಆದರೆ ಅದು ಕೇವಲ ಭ್ರಮೆಯಾಗಿದೆ. ಪಾಪಿಯಾಗಿರುವ ವ್ಯಕ್ತಿಯ ಮನಸ್ಸು ತಾನಾಗಿಯೇ ಬದಲಾಗುವದಿಲ್ಲ ಮತ್ತು ದೇವರಿಗೆ ವಿಧೇಯವಾಗುವದಿಲ್ಲ. ಇವುಗಳನ್ನು ಮಾಡುವದು ಅಸಾಧ್ಯವಾಗಿದೆ. ಒಂದುವೇಳೆ ಒಬ್ಬ ವ್ಯಕ್ತಿ ದೇವರಿಗೆ ವಿಧೇಯನಾಗಲು ಪ್ರಾರಂಭಿಸಿದರೆ ಅವನಲ್ಲಿ ಅಗಾಧವಾದ ಬದಲಾವಣೆ ಉಂಟಾಗುತ್ತದೆ. ದೇವರಾತ್ಮನು ಅವನೊಳಗೆ ಪ್ರವೇಶಿಸಬೇಕು, ಅವನಿಗೆ ಹೊಸ ಜೀವವನ್ನು ಕೊಡಬೇಕು ಮತ್ತು ಅವನ ಆಲೋಚನೆಗಳನ್ನು ಬದಲಾಯಿಸಬೇಕು. ಇವುಗಳಾಗದೆ ದೇವರನ್ನು ಮೆಚ್ಚಿಸಲು ಯಾರಿಂದಲೂ ಆಗುವದಿಲ್ಲ. ಅವನು ದೇವರಲ್ಲಿ ಭಯಭಕ್ತಿಯುಳ್ಳವನಾಗಿರಬಹುದು, ನೈತಿಕತೆಯುಳ್ಳವನಾಗಿರಬಹುದು, ವಿದ್ಯಾವಂತನಾಗಿರಬಹುದು, ಧರ್ಮಶಾಸ್ತ್ರ ಪಾಲನೆ ಮಾಡಲು ಪ್ರಯತ್ನಿಸುತ್ತಿರಬಹುದು ಆದರೆ ದೇವರಾತ್ಮನಿಲ್ಲದೆ ಹೋದರೆ ಅವೆಲ್ಲವೂ ಪಾಪ ಮತ್ತು ಮರಣವಾಗಿರುತ್ತವೆ ಹಾಗು ದೇವರಿಗೆ ಎಂದಿಗೂ ಅಂಗೀಕೃತವಾಗುವದಿಲ್ಲ. ಯೋಹಾನ 3:3-8ರೊಂದಿಗೆ ಹೋಲಿಸಿ ನೋಡಿರಿ. ಯಾಕಂದರೆ ಒಬ್ಬ ವ್ಯಕ್ತಿಯ ಪಾಪಮಯ ಸ್ವಭಾವವು ಧರ್ಮ ಮತ್ತು ನೈತಿಕತೆಯೆಂಬ ವಸ್ತ್ರವನ್ನು ಹೊದಿಸಿಕೊಂಡಿದ್ದರೂ ದೇವರಿಗೆ ಮೆಚ್ಚಿಕೆಯುಳ್ಳವನ್ನಾಗಿ ಮಾಡುವದಿಲ್ಲ. ಆತನು ಧಾರ್ಮಿಕ ಕಾರ್ಯವನ್ನಲ್ಲ ಬದಲಾಗಿ ಹೃದಯದ ಸ್ಥಿತಿಯನ್ನು ನೋಡುತ್ತಾನೆ (ಇಬ್ರಿ 4:12-13). ಅವಿಧೇಯತೆಗೆ ಒಳಗಾಗಿರುವ ಮಾನವನ ಧಾರ್ಮಿಕ ಕಾರ್ಯಗಳು ಮತ್ತು ಭಾವನೆಗಳು ಪಾಪದ ಕಲೆಗಳಿಗೆ ಒಳಗಾಗಿವೆ, ಉಳಿದ ಎಲ್ಲಾ ಕಾರ್ಯಗಳೂ ಪಾಪದ ಕಲೆಗಳಿಂದ ತುಂಬಿಹೋಗಿವೆ. ಯೆಶಾಯ 1:11-17; ಜ್ಞಾನೋ 14:12ರೊಂದಿಗೆ ಹೋಲಿಸಿ ನೋಡಿರಿ. **9**

**8:9** *"ನಿಮ್ಮಲ್ಲಿ"*– ಪೌಲನು 5-8 ವಚನಗಳಲ್ಲಿ ವಿವರಿಸಿರುವ ಎರಡು ರೀತಿಯ ವ್ಯಕ್ತಿಗಳು ಎರಡು ವಿವಿಧ ರಂಗಗಳಲ್ಲಿ ಜೀವಿಸುವವರಾಗಿದ್ದಾರೆ. ದೇವರಾತ್ಮನಿಲ್ಲದೆ ಜೀವಿಸುವವರು ತಮ್ಮ ಪಾಪಮಯ ಸ್ವಭಾವಗಳಿಗೆ ಸೇರಿದವರಾಗಿರುತ್ತಾರೆ ಮತ್ತು ಅವರು ಅವುಗಳಲ್ಲಿ ಹಾಗೂ ಅವುಗಳಿಗನುಸಾರವಾಗಿ ಜೀವಿಸುತ್ತಾರೆ. ದೇವರಾತ್ಮನಿಗೆ ಒಳಗಾಗಿರುವವರು ಪಾಪ ಮತ್ತು ತಮ್ಮ ಪಾಪಮಯ ಸ್ವಭಾವವನ್ನು ತಿರಸ್ಕರಿಸಿರುತ್ತಾರೆ. ಅವರು ದೇವರಾತ್ಮನಿಗೆ ಸಂಬಂಧಪಟ್ಟಿರುತ್ತಾರೆ ಮತ್ತು ಆತನು ಅವರಲ್ಲಿ ಜೀವಿಸುತ್ತಾನೆ ಹಾಗೂ ಕಾರ್ಯಮಾಡುತ್ತಾನೆ ಮತ್ತು ಅವರು ಆತನಲ್ಲಿ ಜೀವಿಸುತ್ತಾರೆ. ಈ ವಾಕ್ಯದಲ್ಲಿ ದೇವರಾತ್ಮನನ್ನು ಕ್ರಿಸ್ತನ ಆತ್ಮನೆಂದು ಕರೆಯಲಾಗಿದೆ. ಯೇಸು ಕ್ರಿಸ್ತನು ದೇವರಾಗಿದ್ದಾನೆ ಎಂದು ಇದು ಹೇಳುತ್ತದೆಯೇ? ಫಿಲಿಪ್ಪಿ 2:6; ಮತ್ತು ಲೂಕ 2:11 ವಾಕ್ಯಗಳನ್ನು ನೋಡಿರಿ.

ಯೇಸು ಕ್ರಿಸ್ತನ ಆತ್ಮವಿಲ್ಲದೆ ಯಾರೊಬ್ಬರೂ ಕ್ರಿಸ್ತನಿಗೆ ಅಥವಾ ತಂದೆಯಾದ ದೇವರಿಗೆ ಸೇರಿದವರಾಗಲು ಆಗುವದಿಲ್ಲ, ಯಾರೊಬ್ಬರೂ ರಕ್ಷಣೆ ಹೊಂದುವದಿಲ್ಲ ಅಥವಾ ನೀತಿವಂತರೆಂದು ಎಣಿಸಲ್ಪಡುವದಿಲ್ಲ. ಅಂಥ ಜನರನ್ನು ಕ್ರೈಸ್ತರೆಂದು ಕರೆಯಬಹುದು ಮತ್ತು ನಾವು ಕ್ರೈಸ್ತರೆಂದು ಅವರು ಅಂದುಕೊಳ್ಳಬಹುದು ಆದರೆ ಅವರು ಕ್ರಿಸ್ತನವರಲ್ಲ. ಒಬ್ಬನು ಕ್ರಿಸ್ತನ ಆತ್ಮವನ್ನು ಪಡೆದುಕೊಳ್ಳುವದು ಹೇಗೆ? ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೂಲಕ ಮಾತ್ರವೇ ಪಡೆದುಕೊಳ್ಳಬಹುದು. ಜನರು ವ್ಯಕ್ತಿಗತವಾಗಿ ನಂಬುವಾಗ ದೇವರು ತನ್ನ ಆತ್ಮನನ್ನು ವರವಾಗಿ ಕೊಡುತ್ತಾನೆ (5:5). **10**

**8:10** 9ನೇ ವಚನದಲ್ಲಿ ದೇವರಾತ್ಮನು ವಿಶ್ವಾಸಿಗಳಲ್ಲಿ ಜೀವಿಸುತ್ತಾನೆ ಎಂದು ಪೌಲನು ಹೇಳಿದ್ದಾನೆ. ಇಲ್ಲಿ ಯೇಸು ಕ್ರಿಸ್ತನೇ ಅವರೊಳಗೆ ಜೀವಿಸುತ್ತಾನೆ ಎಂದು ಹೇಳಿದ್ದಾನೆ (ಯೋಹಾನ 17:23; 2 ಕೊರಿಂಥ 13:5; ಕೊಲೊ 1:27; ಪ್ರಕ 3:20 ಸಹ ನೋಡಿರಿ). ಆತನು ಆತ್ಮನ ಮೂಲಕ ಅವರೊಳಗಿದ್ದಾನೆ. ಈ ವಾಕ್ಯಗಳು ದೇವರು, ಯೇಸು ಕ್ರಿಸ್ತನು ಮತ್ತು ಪವಿತ್ರಾತ್ಮನ ನಡುವೆಯಿರುವ ಐಕ್ಯತೆಯನ್ನು ತೋರಿಸುತ್ತಾನೆ (ಇದರ ಅರ್ಥ ಯೇಸು ಕ್ರಿಸ್ತನು, ಪವಿತ್ರಾತ್ಮನು ಮತ್ತು ತಂದೆಯಾದ ದೇವರು ಏಕವ್ಯಕ್ತಿಯಲ್ಲ. ಮತ್ತಾಯ 3:16; ಯೋಹಾನ 17:1; 2 ಯೋಹಾನ 3 ನೋಟ್ಸ್ ನೋಡಿರಿ). ವಿಶ್ವಾಸಿಯ "ದೇಹ", "ಮೃತಪಟ್ಟಿದೆ" ಎಂಬದನ್ನು ಗಮನಿಸಿರಿ. 6:12; 7:24ರೊಂದಿಗೆ ಹೋಲಿಸಿ ನೋಡಿರಿ. ಮರಣದ ವಿಧಾನವು ಎಲ್ಲರಲ್ಲಿನ ಹಾಗೆ ಕ್ರಿಸ್ತನ ಸ್ವಂತ ಜನರಲ್ಲಿಯೂ ಕಾರ್ಯಗತವಾಗಿದೆ ಮತ್ತು ನಾವು ಬದುಕಿರುವ ಸಮಯದಲ್ಲಿ ಒಂದುವೇಳೆ ಯೇಸು ಕ್ರಿಸ್ತನು ಹಿಂದಿರುಗಿ ಬರಲಿಲ್ಲವೆಂದರೆ ನಾವೆಲ್ಲರೂ ಸಾಯುತ್ತೇವೆ. ಇದಕ್ಕೆ ಕಾರಣ ಪಾಪವಾಗಿದೆ. ಆದರೆ ದೇವರಾತ್ಮನು (ವ 2) ವಿಶ್ವಾಸಿಗಳಲ್ಲಿ ಜೀವಿಸುತ್ತಾನೆ ಹಾಗೂ ಆತನ ನಿಮಿತ್ತ ಅವರ ಆತ್ಮಗಳು ಜೀವಂತವಾಗಿವೆ.

"*ಆತ್ಮನ ದೆಸೆಯಿಂದ*"– ಅಥವಾ, ಬಹುಶಃ "ಆತ್ಮನದಲ್ಲಿದೆ" (ಇಲ್ಲಿ ಗ್ರೀಕ್ ಭಾಷೆಯಲ್ಲಿ ಕ್ರಿಯಾಪದವಿಲ್ಲ). **11**

**8:11** ಇಲ್ಲಿ ಎರಡು ಸತ್ಯಗಳನ್ನು ನೋಡಬಹುದು – ಯೇಸು ಕ್ರಿಸ್ತನು ಸತ್ತವರೊಳಗಿಂದ ಪುನರುತ್ಥಾನಗೊಳ್ಳುವನು (1:4; ಮತ್ತಾಯ 28:6), ಮತ್ತು ಮುಂದೆ ವಿಶ್ವಾಸಿಗಳಿಗಾಗುವ ಪುನರುತ್ಥಾನ (ವ 23; ಯೋಹಾನ 6:39; 1 ಕೊರಿಂಥ 15:52; 1 ಥೆಸ 4:16). ಯೇಸು ಕ್ರಿಸ್ತನ ಸುವಾರ್ತೆಯಲ್ಲಿ ದೇಹವು ಮರಣದ ನಂತರ ಸಂಪೂರ್ಣವಾಗಿ ಲಯವಾಗುವದರಿಂದ ವಿಶ್ವಾಸಿಯ ಆತ್ಮಕ್ಕೆ ಕೇವಲ ತಾತ್ಕಾಲಿಕವಾದ ಮನೆಯಲ್ಲ. ನಮ್ಮ ದೇಹಗಳು ಪ್ರಮುಖವಾದ ಸಾಧನಗಳಾಗಿದ್ದು ಅದರ ಮೂಲಕ ನಮ್ಮ ಆತ್ಮವು ತನ್ನನ್ನು ವ್ಯಕ್ತಪಡಿಸಿಕೊಳ್ಳುತ್ತದೆ ಮತ್ತು ಯೇಸು ಕ್ರಿಸ್ತನ ದೇಹದಂತೆ ಅವುಗಳು ಎದ್ದೇಳುತ್ತವೆ ಹಾಗೂ ಮಹಿಮೆ ಹೊಂದುತ್ತವೆ (ಫಿಲಿಪ್ಪಿ 3:21). **12-13**

**8:12-13** ದೇವರು ಪ್ರಕಟಪಡಿಸಿರುವ ಈ ಮಹಿಮಾರ್ಥವಾದ ಸತ್ಯದ ವಿಷಯದಲ್ಲಿ

ವಿಶ್ವಾಸಿಗಳ ಪ್ರತಿಕ್ರಿಯೆ ಎಂಥದ್ದಾಗಿರಬೇಕು? ದೇವರ ಅಮೋಘವಾದ ಕೃಪೆಯ ಬೆಳಕಿನಲ್ಲಿ ಅವರ ಜವಾಬ್ದಾರಿಕೆ ಏನಾಗಿದೆ? ಪೌಲನು 6:11-13,19ರಲ್ಲಿ ಇದರ ಬಗ್ಗೆ ಬರೆದಿದ್ದಾನೆ. ಅವರು ತಮ್ಮನ್ನು ನಿರಾಕರಿಸಬೇಕು, ತಮ್ಮ ಪಾಪಮಯ ಸ್ವಭಾವಗಳನ್ನು ವಿಸರ್ಜಿಸಬೇಕು ಮತ್ತು "ದೇಹದ ದುರಭ್ಯಾಸಗಳನ್ನು ಸಾಯಿಸಲು" ದೇವರಾತ್ಮನ ಬಲಶಕ್ತಿ ಹಾಗೂ ಅಧಿಕಾರವನ್ನು ಉಪಯೋಗಿಸಿಕೊಳ್ಳಬೇಕು (ಕೊಲೊ 3:5-10 ನೋಡಿರಿ. ಮತ್ತಾಯ 5:29-30; ಗಲಾ 5:24 ಹೋಲಿಸಿ ನೋಡಿರಿ). ಈ ಕಾರ್ಯವನ್ನು ಸತತವಾಗಿ ಮಾಡಬೇಕಾಗಿದೆ. ಇದರ ಅರ್ಥ ಪ್ರತಿಯೊಂದು ದುಷ್ಟ ಕಾರ್ಯವನ್ನು ತೊರೆಯಬೇಕು ಮತ್ತು ಅದನ್ನು ಸಾಯಿಸಲು ದೇವರಾತ್ಮನೊಂದಿಗೆ ಕಾರ್ಯಮಾಡಬೇಕು – ಅಂದರೆ ನಮ್ಮ ಜೀವಿತದಲ್ಲಿರುವ ಪಾಪವನ್ನು ಸಾಯಿಸಬೇಕೆಂದರೆ, ನಮ್ಮ ಬಲವಲ್ಲ ಆತನ ಬಲದಿಂದ ಮಾತ್ರವೇ ಸಾಧ್ಯ. ಆದರೆ ನಾವು ಆತನೊಂದಿಗೆ ಸಹಕರಿಸಬೇಕು ಮತ್ತು ಆತನು ಕೊಡುವ ಶಕ್ತಿಯನ್ನು ಉಪಯೋಗ ಮಾಡಬೇಕು (ಫಿಲಿಪ್ಪಿ 2:12-13ರೊಂದಿಗೆ ಹೋಲಿಸಿ ನೋಡಿರಿ). ವಿಶ್ವಾಸಿಗಳು ತಮ್ಮ ಜೀವಿತಗಳಲ್ಲಿ ಪಾಪಮಯವಾದ ಕೃತ್ಯಗಳು, ಆಚಾರಗಳು ಮತ್ತು ಅಭ್ಯಾಸಗಳಿಗೆ ಅವಕಾಶ ಕೊಡಬಾರದು ಹಾಗೆ ಕೊಟ್ಟರೆ ಅದು ತಮ್ಮ ಮನೆಗಳಿಗೆ ವಿಷ ಸರ್ಪಗಳಿಗೆ ಅವಕಾಶಕೊಡುವದಕ್ಕೆ ಸಮಾನವಾಗಿರುತ್ತದೆ. ಒಬ್ಬ ನಿಜವಾದ ವಿಶ್ವಾಸಿಯು ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಡುತ್ತಾನೆ ಮತ್ತು ತನ್ನ ಜೀವಿತದಲ್ಲಿ ಅವುಗಳಿಗೆ ವಿರುದ್ಧವಾಗಿ ಹೋರಾಡುತ್ತಾನೆ ಹಾಗೂ ಅವುಗಳಿಗೆ ವಿರುದ್ಧವಾಗಿ ದೇವರಾತ್ಮನ ಶಕ್ತಿ ಉಪಯೋಗ ಮಾಡುವದನ್ನು ಕಲಿತುಕೊಳ್ಳುತ್ತಾನೆ. ಅವನು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವಾಗ ಈ ಕಾರ್ಯವನ್ನು ಮಾಡುವ ತೀರ್ಮಾನ ತೆಗೆದುಕೊಳ್ಳುತ್ತಾನೆ, ಅವನ ತೀರ್ಮಾನ ಆಗಿಂದಾಗೆ ತೆಗೆದುಕೊಂಡದ್ದಾಗಿರುತ್ತದೆ, ಆದರೆ ಅದನ್ನು ಕಾರ್ಯರೂಪಕ್ಕೆ ತರುವದು ನಿಧಾನವಾಗಿರುತ್ತದೆ ಮತ್ತು ಹೆಚ್ಚು ಪ್ರಯಾಸಕರವಾಗಿರುತ್ತದೆ. ಆದರೆ ಕೆಲವರು ಮಾತ್ರ ಇದರಲ್ಲಿ ಯಾವಾಗಲೂ ಮತ್ತು ಸಂಪೂರ್ಣವಾಗಿ ಜಯಗಳಿಸುತ್ತಾರೆ. ಆದರೆ ಎಲ್ಲ ವಿಶ್ವಾಸಿಗಳು ತಮ್ಮ ಜೀವಿತಗಳಲ್ಲಿ ಹೀಗೆಯೇ ನಡೆದುಕೊಳ್ಳಬೇಕಾಗಿದೆ. ಒಂದುವೇಳೆ "ಸಹೋದರ" ಎಂಬದಾಗಿ ಕರೆಯಲ್ಪಡುವಾತನು ತನ್ನ ದೇಹದ ಕಾರ್ಯಗಳನ್ನು ಸಂಪೂರ್ಣವಾಗಿ ಸಾಯಿಸದೆ ಹೋದರೆ, ದೇವರಾತ್ಮನ ಕಾರ್ಯ ತನ್ನಲ್ಲಿ ನಡೆಯುತ್ತಿಲ್ಲ ಎಂಬದನ್ನು ಅವನೇ ತೋರಿಸುವವನಾಗಿದ್ದಾನೆ (1 ಯೋಹಾನ 3:6,9ರೊಂದಿಗೆ ಹೋಲಿಸಿ ನೋಡಿರಿ). "ಶರೀರಭಾವದನುಸಾರ" ಸತತವಾಗಿ ಜೀವಿಸುವದು ದೇವರಾತ್ಮನು ಇಲ್ಲ ಎಂಬದಕ್ಕೆ ಪುರಾವೆಯಾಗಿದೆ ಮತ್ತು ಅಂಥ ಜೀವನವು ಮರಣವಾಗಿದೆ ಹಾಗೂ ಮರಣಕ್ಕೆ ನಡೆಸುತ್ತದೆ (ವ 6; 6:16,23). **14**

**8:14** ಈ ವಾಕ್ಯವು ದೇವರ ಮಕ್ಕಳು ಎಂದರೆ ಯಾರು ಎಂಬದನ್ನು ತೋರಿಸುತ್ತದೆ. ದೇವರಾತ್ಮನಿಂದ ಹುಟ್ಟಿದವರೇ ದೇವರ ಮಕ್ಕಳಾಗಿದ್ದಾರೆ (ಯೋಹಾನ 1:12-13).

ಇವೆಲ್ಲವುಗಳಿಗಿಂತ ಹೆಚ್ಚಾಗಿ – ಅವರು ಪವಿತ್ರಾತ್ಮನ ಮುನ್ನಡೆಸುವಿಕೆಯನ್ನು ಅನುಸರಿಸುತ್ತಾರೆ (ಯೋಹಾನ 10:27ರೊಂದಿಗೆ ಹೋಲಿಸಿ ನೋಡಿರಿ). ಮತ್ತು ದೇವರಾತ್ಮನು ಅವರನ್ನು "ದೇಹದ ಕಾರ್ಯಗಳನ್ನು ವಿಸರ್ಜಿಸುವ ಕಡೆಗೆ ನಡೆಸುತ್ತಾನೆ". ದೇವರಾತ್ಮನು ಯಾವಾಗಲೂ ಸ್ವಾರ್ಥ ಮತ್ತು ಪಾಪದಿಂದ ದೂರ ನಡೆಸುತ್ತಾನೆ. ಈ ಅನುಭವವಿಲ್ಲದಿರುವ ವ್ಯಕ್ತಿಯು ಯಥಾರ್ಥವಾದ ಪಶ್ಚಾತ್ತಾಪ ಮತ್ತು ನಂಬಿಕೆಯಿಲ್ಲದವನಾಗಿರುತ್ತಾನೆ ಹಾಗೂ ರಕ್ಷಣೆ ಹೊಂದಿರುವದಿಲ್ಲ (1 ಯೋಹಾನ 2:4-6; 3:3,7-10; ಯೋಹಾನ 14:23-24 ನೋಡಿರಿ). ಪೌಲನು ವಿಶ್ವಾಸಿಗಳನ್ನು ದೇವರ "ಮಕ್ಕಳು" ಎಂದು ಕರೆದಿದ್ದಾನೆ. 6:16-22ರಲ್ಲಿ ಆತನು ಅವರನ್ನು "ದಾಸರು" ಎಂದು ಕರೆದಿದ್ದಾನೆ. ಇದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. "ದಾಸತ್ವದ" ಬಗ್ಗೆ ಮಾತನಾಡುವಾಗ ಅವನು ಒತ್ತಾಯಪೂರ್ವಕವಾದ ಬಂಧನದ ಬಗ್ಗೆ ಹೇಳುತ್ತಿಲ್ಲ ಬದಲಾಗಿ ಮನಃಪೂರ್ವಕವಾಗಿ ಮತ್ತು ಇಷ್ಟಪೂರ್ವಕವಾಗಿ ದೇವರ ಸೇವೆ ಮಾಡುವದರ ಬಗ್ಗೆ ಹೇಳುತ್ತಿದ್ದಾನೆ. ವಿಶ್ವಾಸಿಗಳು ಮನಃಪೂರ್ವಕವಾಗಿ ಆತನ "ದಾಸರಾಗುವ" ಮೂಲಕ ತಾವು ಆತನ "ಮಕ್ಕಳು" ಎಂಬದನ್ನು ನಿರೂಪಿಸುತ್ತಾರೆ. ಒಂದುವೇಳೆ ಅವರೇನಾದರೂ ದೇವರ ದಾಸರಾಗಲು ಬಯಸದಿದ್ದರೆ ತಾವು ಆತನ ಮಕ್ಕಳಾಗಲು ಅಯೋಗ್ಯರೆಂಬದನ್ನು ತೋರಿಸುತ್ತಾರೆ ಮತ್ತು ನಿಜವಾಗಿ ಹೇಳುವದಾದರೆ ಅವರು ಆತನ ಮಕ್ಕಳಲ್ಲ. **15**

**8:15** ವಿಶ್ವಾಸಿಗಳು ಸ್ವೇಚ್ಛೆಯಿಂದ ದೇವರ ದಾಸರಾಗಿದ್ದಾರೆಯೇ ಹೊರತು ಭಯದಿಂದ ಸ್ವೇಚ್ಛೆಯಿಲ್ಲದೆ ದಾಸರಾಗಿಲ್ಲ (ಇಬ್ರಿ 2:14-15ರೊಂದಿಗೆ ಹೋಲಿಸಿ ನೋಡಿರಿ). ಮತ್ತು ದೇವರಾತ್ಮನು ಅವರೊಳಗೆ ಜೀವಿಸುವದರಿಂದ ಅವರು ತಾವಾಗಿಯೇ ದೇವರನ್ನು ತಮ್ಮ ತಂದೆಯೆಂದು ಎಣಿಸುತ್ತಾರೆ ಮತ್ತು ಹಾಗೆಯೇ ಆತನನ್ನು ಕರೆಯುತ್ತಾರೆ ಹಾಗೂ ತಮ್ಮ ಮನವಿಗಳನ್ನು ಆ ತಂದೆಗೆ ಒಪ್ಪಿಸುತ್ತಾರೆ.

*"ದತ್ತು ಸ್ವೀಕಾರ"*– ವ 23 ನೋಡಿರಿ. ಅರಾಮಿಕ್ ಭಾಷೆಯ "ಅಪ್ಪಾ" ಎಂಬ ಪದವನ್ನು "ಡ್ಯಾಡಿ" ಅಥವಾ "ಪಪ್ಪಾ" ಎಂದು ಕರೆಯಲಾಗಿದೆ. (ಮಾರ್ಕ 14:36; ಗಲಾ 4:6ರೊಂದಿಗೆ ಹೋಲಿಸಿ ನೋಡಿರಿ). **16**

**8:16** ದೇವರಾತ್ಮನು ಮತ್ತು ವಿಶ್ವಾಸಿಗಳ ಆತ್ಮಗಳ ನಡುವೆಯಿರುವ ವ್ಯತ್ಯಾಸವನ್ನು ಎಚ್ಚರಿಕೆಯಿಂದ ಗಮನಿಸಿರಿ. ಆವರಣ ವಾಕ್ಯದಲ್ಲಿ ಕಲಿಸುವ ಹಾಗೆ ಇವು ಒಂದಲ್ಲ ಮತ್ತು ಅದ್ವೈತ ವೇದಾಂತದ ಹಾಗೆ ಏಕವಾಗಿರುವ ಆತ್ಮವಲ್ಲ. ಯೋಹಾನ 14:16-17 ಸಹ ನೋಡಿರಿ. ವಿಶ್ವಾಸಿಗಳು, ದೇವರಾತ್ಮನ ಮುನ್ನಡೆಸುವಿಕೆಯನ್ನು ಹಿಂಬಾಲಿಸುತ್ತಾ ದೇಹದ ಬೇಡವಾದ ಕಾರ್ಯಗಳನ್ನು ತಮ್ಮ ಹೃದಯದಲ್ಲಿಯೇ ಸಾಯಿಸುವಾಗ (ವ 13,14), ಅವರ ಆತ್ಮ ಹಾಗೂ ದೇವರ ಆತ್ಮನ ನಡುವೆ ಸಂತೋಷಕರವಾದ ಒಡಂಬಡಿಕೆ ಏರ್ಪಡುತ್ತದೆ. ದೇವರಾತ್ಮನು ಅವರನ್ನು ನೀವು ದೇವರ ಮಕ್ಕಳೆಂಬ ಭರವಸೆಗೆ ನಡೆಸುತ್ತದೆ (1 ಯೋಹಾನ

3:24; 4:13ರೊಂದಿಗೆ ಹೋಲಿಸಿ ನೋಡಿರಿ). ದೇವರಾತ್ಮನು ಅವರ ಹೃದಯದೊಳಗೆ ಈ ಸಾಕ್ಷಿಯನ್ನು ಹೇಗೆ ಕೊಡುತ್ತಾನೆ ಎಂಬದನ್ನು ಪೌಲನು ವಿವರಣೆ ಮಾಡಿಲ್ಲ. ಆದರೆ ಇದು ಆಂತರಿಕ ಅನುಭವ ಎಂಬದು ಸ್ಪಷ್ಟವಾದ ಸಂಗತಿಯಾಗಿದೆ. ಮಾತ್ರವಲ್ಲದೆ ಆತ್ಮನ ಆಂತರ್ಯದ ಸಾಕ್ಷಿ ಮತ್ತು ಸತ್ಯವೇದದ ಹೊರಗಿನ ಸಾಕ್ಷಿ ಸಂಪೂರ್ಣವಾಗಿ ಇದನ್ನು ಒಪ್ಪುತ್ತದೆ ಎಂಬ ನಿಶ್ಚಯತೆ ನಮಗೆ ದೊರೆಯುತ್ತದೆ. ದೇವರ ವಾಕ್ಯವು ಯಾವುದನ್ನು ಸತ್ಯವಲ್ಲವೆಂದು ಹೇಳುತ್ತದೋ ಅದನ್ನು ದೇವರ ಆತ್ಮನು ಎಂದಿಗೂ ಸತ್ಯವೆಂದು ಹೇಳುವದಿಲ್ಲ. ದೇವರಾತ್ಮನು ದೇವರ ವಾಕ್ಯವನ್ನು ವಿಶ್ವಾಸಿಗಳ ಹೃದಯದೊಳಗೆ ವೈಯಕ್ತಿಕ, ವಾಸ್ತವ ಮತ್ತು ಸಜೀವವನ್ನಾಗಿ ಮಾಡುತ್ತಾನೆ. ಈ ತಿಳುವಳಿಕೆ ಮತ್ತು ಭರವಸೆಯಿಂದ ವಿಶ್ವಾಸಿಗಳಿಗೆ ದೊರೆಯುವ ಕಾರ್ಯಗಳನ್ನು 5:5; 1 ಯೋಹಾನ 5:10,20; 1 ಕೊರಿಂಥ 2:9-12; ಯೋಹಾನ 16:13-15ರಲ್ಲಿ ನೋಡಿರಿ. ಒಂದುವೇಳೆ ವಿಶ್ವಾಸಿಯು ಪಾಪ ಮಾಡಿದರೆ ಅವನು ಪವಿತ್ರಾತ್ಮನನ್ನು ಮತ್ತು ಪವಿತ್ರಾತ್ಮನ ಭರವಸೆಯ ಮಾತುಗಳನ್ನು "ನಂದಿಸುವ" ಅಪಾಯದಲ್ಲಿರುತ್ತಾನೆ (ಎಫೆ 4:30). **17**

**8:17** *"ಬಾಧ್ಯರು"*– ಯೇಸು ಕ್ರಿಸ್ತನು ಎಲ್ಲವುಗಳಿಗೆ ಬಾಧ್ಯನಾಗಿದ್ದಾನೆ (ಇಬ್ರಿ 1:2). ಆದ್ದರಿಂದ ಆತನೊಂದಿಗೆ ಬಾಧ್ಯರೆಂದರೆ ಎಲ್ಲಾ ಕಾರ್ಯಗಳನ್ನು ಬಾಧ್ಯವಾಗಿ ಹೊಂದುವದಾಗಿದೆ. 4:13; 1 ಕೊರಿಂಥ 3:21-23; ಎಫೆ 1:14; ಕೊಲೊ 1:12; ಪ್ರಕ 21:7; ಮತ್ತಾಯ 5:5 ನೋಡಿರಿ.

*"ಆತನೊಂದಿಗೆ ಶ್ರಮೆಗಳನ್ನನುಭವಿಸುವದು"*– ದೇವರು ತನ್ನ ಮಗನನ್ನು ಮೊದಲು ಶ್ರಮೆಗಳಲ್ಲಿ ನಂತರ ಪ್ರಭಾವದಲ್ಲಿ ನಡೆಸಿದನು (ಲೂಕ 24:26); ಮತ್ತು ಆತನು ತನ್ನ ಮಕ್ಕಳನ್ನು ಈಗ ಅದೇ ಮಾರ್ಗದಲ್ಲಿ ನಡೆಸುತ್ತಿದ್ದಾನೆ (ಯೋಹಾನ 16:33; ಅಪೊ 14:22; 1 ಪೇತ್ರ 4:1,12). ಯೇಸು ಕ್ರಿಸ್ತನ ಶ್ರಮೆಗಳಲ್ಲಿ ಪಾಲುಗಾರರಾಗುವದು, ಜನರೆಲ್ಲರೂ ಕ್ರಿಸ್ತನ ವಿಶ್ವಾಸಿಗಳಾಗಿರಲು ಅಥವಾ ಆಗದಿರಲಿ ತಮಗೆದುರಾಗುವ ಕಷ್ಟಗಳು, ದುಃಖಗಳು ಮತ್ತು ನೋವುಗಳನ್ನು ಸಹಿಸಿಕೊಳ್ಳುವದಲ್ಲ. ಬದಲಾಗಿ ನಾವು ಆತನಿಗೆ ಸೇರಿದವರು ಎಂಬ ಕಾರಣಕ್ಕಾಗಿಯೇ ಶ್ರಮೆಗಳನ್ನನುಭವಿಸುವದಾಗಿದೆ ಮತ್ತು ಆತನನ್ನು ತಿರಸ್ಕರಿಸುವ ಹಾಗೂ ದ್ವೇಷಿಸುವ ಲೋಕದಲ್ಲಿ ನಾವು ಜೀವಿಸುತ್ತಿದ್ದೇವೆ (ಯೋಹಾನ 15:18-21) ಯಾಕಂದರೆ ನಾವು ನಮ್ಮೊಳಗೆ ಹಾಗೂ ಬೇರೆ ಕಡೆಗಳಲ್ಲಿ ಪಾಪಕ್ಕೆ ವಿರುದ್ಧವಾಗಿ ಹೋರಾಡುವವರಾಗಿದ್ದೇವೆ ಹಾಗೂ ಸತ್ಯ ಮತ್ತು ನೀತಿಗಾಗಿ ಧ್ವನಿ ಎತ್ತುವದರಿಂದ ವಿಶ್ವಾಸಿಗಳಾಗಿ ನಮಗೆ ಶೋಧನೆಗಳು ಹಾಗೂ ಪರೀಕ್ಷೆಗಳು ಎದುರಾಗುತ್ತವೆ. ಇಂಥ ಕಾರ್ಯಗಳನ್ನು ಮಾಡುವವರೆಲ್ಲರೂ ಹಿಂಸೆಗಳನ್ನು ಎದುರಿಸುವರು (2 ತಿಮೊ 3:12). ಒಂದುವೇಳೆ ಈಗ ನಾವು ಆತನ ಶ್ರಮೆಗಳಲ್ಲಿ ಪಾಲುಗಾರರಾಗಲು ಬಯಸದಿರುವದಾದರೆ, ಆತನ ಪ್ರಭಾವದಲ್ಲಿ ಪಾಲುಗಾರರಾಗುತ್ತೇವೆ ಮತ್ತು ನಂತರದಲ್ಲಿ ಬಾಧ್ಯತೆಯನ್ನು

ಪಡೆಯುತ್ತೇವೆ ಎಂಬದಾಗಿ ಆಲೋಚಿಸಲು ಆಗುವದಿಲ್ಲ. ನಾವು ಆತನ ಶ್ರಮೆಗಳಲ್ಲಿ ಪಾಲುಗಾರರಾಗುವಾಗ ಯಾಕೆ ಪಾಲುಗಾರರಾಗುತ್ತಿದ್ದೇವೆ ಎಂದು ಕೇಳಬಾರದು. ಬದಲಾಗಿ ನಾವು ಆತನ ಶ್ರಮೆಗಳಲ್ಲಿ ಪಾಲುಗಾರರೇ ಆಗದೇ ಇದ್ದರೆ ಯಾಕೆ ಆಗುತ್ತಿಲ್ಲ ಎಂದು ಕೇಳಬೇಕು.

*"ಮಹಿಮೆ"*– 5:2; 9:23; ಯೋಹಾನ 17:22,24; ಕೊಲೊ 1:27; 3:4; 1 ಥೆಸ 2:12; ಇಬ್ರಿ 2:10; 1 ಪೇತ್ರ 4:13-14; 5:10. **18**

**8:18** ಪೌಲನು ಬಹಳ ಶ್ರಮೆಗಳನ್ನನುಭವಿಸಿದನು (2 ಕೊರಿಂಥ 11:23-29). ಆದರೆ ನಿತ್ಯವಾದ ಪ್ರಭಾವದ ಬೆಳಕಿನಲ್ಲಿ ತನ್ನ ಶ್ರಮೆಗಳೆಲ್ಲವೂ ಅಲ್ಪಕಾಲ ಮಾತ್ರವೇ ಎಂಬದಾಗಿ ಅವನು ಹೇಳಿದನು – 2 ಕೊರಿಂಥ 4:17. ತಾನು ತನ್ನ ಶ್ರಮೆಗಳನ್ನು ತಾಳ್ಮೆ ಮತ್ತು ಸಂತೋಷದಿಂದ ಸಹಿಸಿಕೊಳ್ಳುವಂತೆ ತನ್ನನ್ನು ಬಲಪಡಿಸಿದ ಆ ಪ್ರಭಾವದಲ್ಲಿ ತಾನು ಪಾಲುಗಾರನಾಗುವೆನೆಂಬದು ಅವನ ಭರವಸೆಯಾಗಿತ್ತು (5:3). **19**

**8:19** *"ದೇವಪುತ್ರರ ಪ್ರತ್ಯಕ್ಷತೆ"*– ವ 23; ಕೊಲೊ 3:4; 1 ಪೇತ್ರ 1:5; 1 ಯೋಹಾನ 3:1-2. **20-23**

**8:20-23** ಮೊದಲನೆಯ ಮಾನವನು ಪಾಪಕ್ಕೆ ಒಳಗಾದ್ದರಿಂದ ಇಡೀ ಲೋಕವು ಕಷ್ಟಕ್ಕೆ ಗುರಿಯಾಯಿತು – ಆದಿ 3:14-19. ದೇವರು ಆದಿಯಲ್ಲಿ ಉಂಟುಮಾಡಿದವುಗಳೆಲ್ಲವೂ ಒಳ್ಳೆಯವುಗಳಾಗಿದ್ದವು (ಆದಿ 1:31), ಆದರೆ ಪಾಪದ ನಿಮಿತ್ತ ನಾಶನ ಮತ್ತು ಮರಣ ಒಳ್ಳೆಯ ಸೃಷ್ಟಿಯೊಳಗೆ ಪ್ರವೇಶಿಸಿದವು. ಈ ಸೃಷ್ಟಿ ಈಗಿನ ತನ್ನ ನರಳಾಟದಿಂದ ಬಿಡುಗಡೆ ಹೊಂದುವದು ಮತ್ತು ಮುಂಬರುವ ಮಹಿಮೆಯಲ್ಲಿ ಪಾಲುತೆಗೆದುಕೊಳ್ಳುವದು. ಯೆಶಾಯ 11:6-9; 25:6-8; 35:1-10; 49:8-13ರೊಂದಿಗೆ ಹೋಲಿಸಿ ನೋಡಿರಿ. ಈಗ ಸೃಷ್ಟಿಯು ಪ್ರಾರಂಭದಲ್ಲಿ ಹೇಗಿತ್ತೋ ಹಾಗಿಲ್ಲ ಮತ್ತು ಯೇಸು ಕ್ರಿಸ್ತನು ಹಿಂದಿರುಗಿ ಬಂದ ನಂತರ ಹೀಗಿರುವದಿಲ್ಲ. ಮಾನವನ ಪಾಪದ ಪರಿಣಾಮಗಳಲ್ಲಿ ಪಾಲುತೆಗೆದುಕೊಂಡ ಹಾಗೆಯೇ, ಯೇಸು ಕ್ರಿಸ್ತನು ಕ್ರಮೇಣವಾಗಿ ಮಾನವರನ್ನು ಪಾಪದಿಂದ ವಿಮೋಚಿಸುವದರ ಪರಿಣಾಮಗಳಲ್ಲಿ ಪಾಲು ತೆಗೆದುಕೊಳ್ಳುವದು. **23**

**8:23** 7:24; 2 ಕೊರಿಂಥ 5:4 ನೋಡಿರಿ. ವಿಶ್ವಾಸಿಗಳು ಆಸಕ್ತಿಯಿಂದ ತಮ್ಮ ರಕ್ಷಣೆಯ ಅಂತಿಮ ಹಂತವನ್ನು ಅಂದರೆ ತಮ್ಮ ಪುನರುತ್ಥಾನ ಹಾಗೂ ಮಹಿಮೆಯನ್ನು ಎದುರುನೋಡುತ್ತಿದ್ದಾರೆ (ವ 30). ಇಲ್ಲಿ ಅದನ್ನು ಅವರ ದೇಹಗಳ "ವಿಮೋಚನೆ" ಎಂದು ಕರೆಯಲಾಗಿದೆ. 1 ಕೊರಿಂಥ 15:51-54; ಫಿಲಿಪ್ಪಿ 3:21 ನೋಡಿರಿ. ಹಾಗೆಯೇ ಯೋಹಾನ 5:28-29 ನೋಡಿರಿ. ಇಲ್ಲಿ "ದತ್ತು ಸ್ವೀಕಾರ" ಎಂದರೆ ವಿಶ್ವಾಸಿಗಳು ತಮ್ಮ ಪ್ರಾಣ, ಆತ್ಮ ಮತ್ತು ಶರೀರದಲ್ಲಿ ಸಂಪೂರ್ಣವಾಗಿ ಹಾಗೂ ನಿತ್ಯವಾಗಿ ವಿಮೋಚಿಸಲ್ಪಟ್ಟು ಕ್ರಿಸ್ತನ ಸಾರೂಪ್ಯಕ್ಕೆ ಮಾರ್ಪಡುತ್ತಾರೆ ಮತ್ತು ವಿಮೋಚಿಸಲ್ಪಟ್ಟಿರುವ ಹಾಗೂ

ರೂಪಾಂತರಗೊಂಡಿರುವ ಸೃಷ್ಟಿಯಲ್ಲಿ ದೇವರ ಮಕ್ಕಳಾಗಿ ತಮ್ಮ ಸ್ಥಾನವನ್ನು ಪಡೆದುಕೊಳ್ಳುತ್ತಾರೆ. **24**

**8:24** *"ಎದುರುನೋಡುವದು"*– 5:2. ಪೌಲನು ಮತ್ತು ಹೊಸ ಒಡಂಬಡಿಕೆಯ ಇತರೆ ಬರಹಗಾರರು ಉಪಯೋಗಿಸಿರುವ ಎದುರುನೋಡುವಿಕೆ ಪದದ ಮೂಲ ಪದವು ಹೆಚ್ಚು ಪ್ರಬಲವಾದ ಅರ್ಥವುಳ್ಳದ್ದಾಗಿದೆ. ಅದರ ಅರ್ಥ ದೇವರು ಪ್ರಕಟಪಡಿಸಿರುವ ಭವಿಷ್ಯದ ಕಾರ್ಯಗಳು ಖಂಡಿತವಾಗಿಯೂ ಆಗುತ್ತವೆ ಮತ್ತು ಆತನ ವಾಗ್ದಾನಗಳು ನೆರವೇರುತ್ತವೆ ಎಂಬ ದೃಢವಾದ ಭರವಸೆಯಾಗಿದೆ. ಇದು ನಂಬಿಕೆಯ ಇನ್ನೊಂದು ಮುಖವಾಗಿದೆ. ತೀತ 1:2; 1 ಪೇತ್ರ 1:21 ಸಹ ನೋಡಿರಿ. **26**

**8:26** ಈ ಅಧ್ಯಾಯವು ವಿಶ್ವಾಸಿಗಳ ಆತ್ಮೀಕ ಜೀವಿತ ಮತ್ತು ಅವರ ಅಂತಿಮ ರಕ್ಷಣೆಯ ಬಗ್ಗೆ ಅದ್ಭುತವಾದ ಪ್ರಕಟನೆಗಳನ್ನು ತಿಳಿಸುತ್ತದೆ. ಆದರೆ ಈ ಅಧ್ಯಾಯದ ಪ್ರಮುಖ ಭಾಗದಲ್ಲಿ ಮೂರು ನರಳುವಿಕೆಯನ್ನು ನೋಡಬಹುದಾಗಿದೆ – ವ 22 ಮತ್ತು 23. ಸೃಷ್ಟಿ, ವಿಶ್ವಾಸಿಗಳು ಮತ್ತು ದೇವರಾತ್ಮನು ಎಲ್ಲರು ಏಕ ಸಮಯದಲ್ಲಿ ನರಳುತ್ತಿದ್ದಾರೆ. ವಿಶ್ವಾಸಿಗಳಾಗಿರುವ ನಮ್ಮೊಳಗೆ ದೇವರಾತ್ಮನು ಯಾಕೆ ನರಳುತ್ತಾನೆ? ಆತನು ಆತ್ಮೀಕ ಹೋರಾಟದ ವಿಷಯದಲ್ಲಿ ಹೆಚ್ಚು ಕಾಳಜಿಯುಳ್ಳವನಾಗಿದ್ದಾನೆ. ನಾವು ಪರಿಶುದ್ಧತೆ ಹಾಗೂ ಜ್ಞಾನದಲ್ಲಿ ಅಭಿವೃದ್ಧಿಯಾಗಬೇಕೆಂದು, ಕರ್ತನಾದ ಯೇಸು ಕ್ರಿಸ್ತನಲ್ಲಿ ದೃಢಗೊಳ್ಳಬೇಕೆಂದು ಬಯಸುತ್ತಾನೆ. ಮಾತಿಲ್ಲದ ನರಳಾಟದಿಂದ ನಮ್ಮನ್ನು ಪಾಪದ ಗುಂಡಿ ಮತ್ತು ಸೈತಾನನ ಪ್ರಭಾವಗಳಿಂದ ದೂರವಿರಿಸಲು ಬಯಸುತ್ತಾನೆ. ಆತನು ನಮ್ಮನ್ನು ಬಲಿಷ್ಠ ಹಾಗೂ ಫಲಿಕಾರಿಯಾದ ದೇವರ ಮಕ್ಕಳನ್ನಾಗಿ ಮಾಡಲು ಹಾತೊರೆಯುತ್ತಾನೆ. ಕೊಲೊ 1:9-12ರಲ್ಲಿ ಪೌಲನು ದೇವರಾತ್ಮ ಪ್ರೇರಿತನಾಗಿ ಮಾಡಿರುವ ಪ್ರಾರ್ಥನೆಯೊಂದಿಗೆ ಹೋಲಿಸಿ ನೋಡಿರಿ.

*"ಹಾಗೆ"*– ವಿಶ್ವಾಸಿಗಳು ಘೋರವಾದ ಬಲಹೀನತೆಯಲ್ಲಿರುವದರಿಂದ ಅವರಿಗೆ ಆತ್ಮನ ಸಹಾಯ ಮತ್ತು ಮಧ್ಯಸ್ಥಿಕೆ ಹೆಚ್ಚು ಅವಶ್ಯವಾಗಿದೆ (7:14-25), ಮತ್ತು ಅವರಿಗೆ ಹೇಗೆ ಪ್ರಾರ್ಥಿಸಬೇಕು ಅಥವಾ ಯಾವುದಕ್ಕೆ ಪ್ರಾರ್ಥಿಸಬೇಕು ಎಂಬದನ್ನು ಅರಿಯದವರಾಗಿದ್ದಾರೆ. ನಮ್ಮ ಬಲಹೀನತೆಯನ್ನು ಮಾರ್ಪಡಿಸಲು ದೇವರಾತ್ಮನು ನಮ್ಮಲ್ಲಿ ಕಾರ್ಯಮಾಡುತ್ತಾನೆ ಎಂಬದಾಗಿ ನಾವು ಹೇಳಬಹುದು (2 ಕೊರಿಂಥ 12:9-10). ಯಾಕಂದರೆ ಆತನ ನಿಮಿತ್ತ ನಾವು ಬಲಹೀನರಾಗಿರುವಾಗಲೂ ಬಲವುಳ್ಳವರಾಗಿರುತ್ತೇವೆ. **27**

**8:27** ವಿಶ್ವಾಸಿಗಳಿಗೆ ತಮಗಾಗಿ ಪ್ರಾರ್ಥಿಸುವ ಸರ್ವಜ್ಞಾನವುಳ್ಳ ಇಬ್ಬರು ಮಧ್ಯಸ್ಥಿಕರಿರುತ್ತಾರೆ (ವ 34). ಮತ್ತು ಅವರಿಗೆ ಈ ಇಬ್ಬರು ಮಧ್ಯಸ್ಥಿಕರ ಪ್ರಾರ್ಥನೆಯನ್ನು ಕೇಳುವ ಒಬ್ಬ ಸರ್ವಶಕ್ತನಿದ್ದಾನೆ. ಅವರು ಯಾವಾಗಲೂ ತಂದೆಯ ಚಿತ್ತದನುಸಾರವಾಗಿಯೇ ಪ್ರಾರ್ಥನೆ ಮಾಡುತ್ತಾರೆ, ಆದ್ದರಿಂದ ತಂದೆ ಯಾವಾಗಲೂ ಕುಮಾರನು ಮತ್ತು ಪವಿತ್ರಾತ್ಮನ

ಪ್ರಾರ್ಥನೆಗಳಿಗೆ ಸದುತ್ತರ ಕೊಡುತ್ತಾನೆ (1 ಯೋಹಾನ 5:14-15 ಹೋಲಿಸಿ ನೋಡಿರಿ). ವಿಶ್ವಾಸಿಗಳ ಬಲಹೀನತೆಯಲ್ಲಿ ಅವರಿಗೆ ಸಹಾಯ ಮಾಡಲು ಮತ್ತು ಲೋಕ, ಶರೀರ ಹಾಗೂ ದುರಾತ್ಮನನ್ನು ಜಯಿಸಲು ಅವರನ್ನು ಬಲಪಡಿಸಲು ಇಡೀ ತ್ರಯೇಕತ್ವವು ಕಾರ್ಯನಿರ್ವಹಿಸುತ್ತದೆ. **28**

**8:28** ಇದು ಸತ್ಯವೇದದ ಅತ್ಯಂತ ಪ್ರಸಿದ್ಧವಾದ ವಾಕ್ಯಗಳಲ್ಲಿ ಒಂದಾಗಿದ್ದು ಜನರು ಇದನ್ನು ಇತರರಿಗೆ ಹೇಳುತ್ತಾರೆ ಮತ್ತು ಕೆಲವರು ತಮ್ಮ ಸ್ವಂತ ಪರಿಸ್ಥಿತಿಗಳಿಗೆ ಅನ್ವಯಿಸಿಕೊಳ್ಳುತ್ತಾರೆ. ಈ ಮಾತುಗಳನ್ನು ನಂಬುವವರು ಮತ್ತು ಇವುಗಳನ್ನು ಅಳವಡಿಸಿಕೊಳ್ಳುವವರು, ಉರಿ ಬಿಸಲಿನಲ್ಲಿರುವ ದೊಡ್ಡ ಬಂಡೆಯ ತಣ್ಣಗಿರುವ ನೆರಳಿನಂತಿರುತ್ತಾರೆ. ಈ ವಾಕ್ಯವು ಸತ್ಯವೆಂದು ತಿಳಿಯಲು ಅಸಾಧ್ಯವಾದರೂ ಅಪ್ಪಟ ಸತ್ಯವಾಗಿದೆ (35-39 ವಚನಗಳಲ್ಲಿ ವಿಶ್ವಾಸಿಗಳಿಗೆ ದೊರೆಯುವ ಕೆಲವು ಅನುಭವಗಳನ್ನು ನೋಡಿರಿ). ಈ ಲೋಕದ ಜೀವಿತದಲ್ಲಿ ತಮಗೆದುರಾಗುವ ಎಲ್ಲಾ ಘಟನೆಗಳಿಗೆ ಈ ಸತ್ಯವನ್ನು ಅಳವಡಿಸಿಕೊಳ್ಳುವವರು ಭಾಗ್ಯವಂತರು. ಪೌಲನು – "ನಮಗೆ ಗೊತ್ತಿದೆ" ಎಂದು ಹೇಳಿದ್ದಾನೆಯೇ ಹೊರತು – "ಪರವಾಗಿಲ್ಲ ನಮಗೆ ನಂಬಿಕೆಯಿದೆ" ಅಥವಾ "ಬಹುಶಃ ಇದು ನಿಜವಿರಬಹುದು" ಎಂಬದಾಗಿ ಹೇಳಿಲ್ಲ. ಇದು ಸತ್ಯ ಎಂದು ನಾವೂ ತಿಳಿದುಕೊಳ್ಳಬಹುದು ಯಾಕಂದರೆ ದೇವರೇ ಇದನ್ನು ಪ್ರಕಟಿಸಿದ್ದಾನೆ ಮತ್ತು ಸತ್ಯವೇದದ ಅನೇಕ ಭಾಗಗಳಲ್ಲಿ ಇದರ ಸತ್ಯಸಂಧತೆಗೆ ಅನೇಕ ಪುರಾವೆಗಳನ್ನು ಕೊಟ್ಟಿದ್ದಾನೆ (ಉದಾಹರಣೆಗೆ, ಆದಿ 50:20 ನೋಡಿರಿ). "ಆತನನ್ನು ಪ್ರೀತಿಸುವವರು" ಮತ್ತು "ಕರೆಯಲ್ಪಟ್ಟವರು" ಎಂಬ ಎರಡು ಪದಗಳು ನಿಜವಾದ ವಿಶ್ವಾಸಿಗಳು ಎಂಬದಾಗಿವೆ. ಎಲ್ಲರೂ ದೇವರನ್ನು ಪ್ರೀತಿಸುತ್ತಾರೆ ಮತ್ತು ಆತನು ಎಲ್ಲರನ್ನೂ ತನ್ನ ಉದ್ದೇಶದನುಸಾರವಾಗಿ ಕರೆದಿದ್ದಾನೆ (ವ 30; 1:5-6; 1 ಕೊರಿಂಥ 16:22; 1 ಯೋಹಾನ 4:8,16). ದೇವರು ವಿಶ್ವಾಸಿಗಳನ್ನು ನಡೆಸುವ ಪ್ರತಿಯೊಂದು ಪರಿಸ್ಥಿತಿಗಳಿಂದಲೂ ಹಿತಕರವಾದ ಕಾರ್ಯಗಳನ್ನು ಮಾಡುತ್ತಾನೆ. ಆ ಎಲ್ಲಾ ಕಾರ್ಯಗಳ ಮೂಲಕ ಅವರು ಆತ್ಮೀಕವಾಗಿ ಬೆಳೆಯಬೇಕು ಮತ್ತು ಕ್ರಿಸ್ತನಂತಾಗಬೇಕೆಂದು ಆತನು ಬಯಸುತ್ತಾನೆ. ಸಂಭವಿಸಿರುವ ಕೆಲವು ಘಟನೆಗಳಿಂದ ಯಾವ ಹಿತಕರ ಕಾರ್ಯಗಳಾಗಿವೆ ಎಂಬದನ್ನು ಕಾಣಲು ವಿಶ್ವಾಸಿಗಳಿಂದ ಯಾವಾಗಲೂ ಆಗದಿರಬಹುದು ಆದರೆ ನಾವು ಅರ್ಥಮಾಡಿಕೊಳ್ಳಬೇಕಾಗಿಲ್ಲ ನಂಬಿದರೆ ಸಾಕು. ಕೆಲವು ಆವೃತ್ತಿಗಳ ಭಾಷಾಂತರ ಈ ರೀತಿಯಾಗಿದೆ: "ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತಿದೆ". ಇದರಿಂದ ಅರ್ಥವೇನೂ ಬದಲಾಗುವದಿಲ್ಲ. ಎಲ್ಲಾ ಕಾರ್ಯಗಳು ಅನುಕೂಲವಾಗುವದಾದರೆ ಅದಕ್ಕೆ ಕಾರಣ ದೇವರೇ ಆಗಿದ್ದಾನೆ. **29**

**8:29** 28ನೇ ವಚನದಲ್ಲಿ ಹೇಳಲಾಗಿರುವ ದೇವರ ಸಂಕಲ್ಪ ಏನೆಂದರೆ: ವಿಶ್ವಾಸಿಗಳನ್ನು

ಕ್ರಿಸ್ತನ ಸಾರೂಪ್ಯವುಳ್ಳವರನ್ನಾಗಿ ಮಾಡುವದು (ಇಬ್ರಿ 2:10-11; 1 ಯೋಹಾನ 3:1-2 ಸಹ ನೋಡಿರಿ). ಇದಕ್ಕಿಂತ ಉನ್ನತವಾದ ಉದ್ದೇಶ ಮತ್ತು ಮುಖ್ಯವಾದ ಗುರಿ ಯಾವುದೂ ಇಲ್ಲ. ದೇವರ ಸಂಕಲ್ಪ ಈಡೇರಲು ಪೌಲನು ಐದು ಹಂತಗಳನ್ನು ನಮಗೆ ತಿಳಿಸಿದ್ದಾನೆ. ಇವುಗಳಲ್ಲಿ ಎರಡು ಲೋಕವು ಪ್ರಾರಂಭವಾಗುವ ಮೊದಲೇ ಇದ್ದವುಗಳಾಗಿವೆ, ಎರಡು ಕ್ರಿಸ್ತನಲ್ಲಿರುವ ವಿಶ್ವಾಸಿಯ ಜೀವಿತದಲ್ಲಿ ಪ್ರಾಂಭದಲ್ಲಿವೆ, ಇನ್ನೊಂದು ಇನ್ನೂ ಕಾಣಿಸಿಕೊಳ್ಳಬೇಕಾಗಿದೆ. ಈ ಹಂತಗಳು ಒಂದಕ್ಕೊಂದು ಹೊಂದಿಕೆಯಾಗಿವೆ ಮತ್ತು ಇವೆಲ್ಲವು ದೇವರಿಂದ ಮಾತ್ರವೇ ಸಾಧ್ಯವಾಗುವವುಗಳಾಗಿವೆ.

"*ಮೊದಲು ತಿಳುಕೊಂಡನು*"– ಇಲ್ಲಿ ಮೊದಲು ತಿಳುಕೊಂಡನು ಎಂಬ ಪದ ತಪ್ಪು ಅಭಿಪ್ರಾಯಕ್ಕೆ ನಡೆಸುತ್ತದೆ – ಇದನ್ನು 'ಪೂರ್ವಾಪರ ಎಂದು ತಿಳಿದು' ಸಾಮಾನ್ಯವಾಗಿ ಓದುವದೇ ತಪ್ಪಾಗಿದೆ. ಆದ್ದರಿಂದ ವಾದ ಮುಂದುವರೆಯುವದೇನೆಂದರೆ, ಯಾರು ತನ್ನನ್ನು ನಂಬುತ್ತಾರೆ ಮತ್ತು ಯಾರು ನಂಬುವದಿಲ್ಲ ಎಂಬದು ದೇವರಿಗೆ ಗೊತ್ತಿದ್ದರಿಂದ, ಯಾರು ತನ್ನನ್ನು ನಂಬುತ್ತಾರೆಂದು ಆತನು ಮೊದಲೇ ತಿಳಿದುಕೊಂಡಿದ್ದನೋ ಅವರಿಗೆ ರಕ್ಷಣೆಯನ್ನು ಏರ್ಪಡಿಸಿದನು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನು ಮೊದಲೇ ತಿಳಿದುಕೊಳ್ಳುವದು ಅಥವಾ ಮೊದಲೇ ನೋಡುವದು ಅವರ ನಂಬಿಕೆಯನ್ನಾಗಿದೆ. ಆದರೆ ತರ್ಕವಿಲ್ಲದ ಯೋಚನೆಯು ಸಹ ಅಂಥ "ವಿಧಿಲಿಖಿತವು" ಹಣೆಬರಹವೇ ಅಲ್ಲ ಎಂಬದನ್ನು ತೋರಿಸುತ್ತದೆ. ಇದು ಹೇಳುವದೇನೆಂದರೆ ಆತನು ಮೊದಲೇ ತಿಳಿದುಕೊಂಡಿರುವ ಪ್ರಕಾರ ಜನರ ನಂಬಿಕೆಗೆ ಹೌದೆಂದು ಹೇಳಿರಿ. ಮೊದಲೇ ತಿಳಿದುಕೊಂಡಿರುವ ನಂಬಿಕೆಯು ಕ್ರಿಯೆಗಳ ಮೇಲೆ ಆಧಾರವಾಗಿದೆ ಎಂಬ ಆಲೋಚನೆಯನ್ನು ಇದು ಏರ್ಪಡಿಸುತ್ತದೆ! ಇದು ಮೂಲ ಪದವನ್ನು ಭಾಷಾಂತರ ಮಾಡುವ ಗುಣಮಟ್ಟವನ್ನು ತಪ್ಪಿಸುತ್ತದೆ, ಹಾಗೆಯೇ ವಚನಭಾಗದಲ್ಲಿರುವ ಸಂದರ್ಭವನ್ನು ಸಹ ತಪ್ಪಿಸುತ್ತದೆ. ದೇವರು ತನ್ನ ಸೃಷ್ಟಿಗಳಲ್ಲಿ ಕೆಲವರು ಏನು ಮಾಡುತ್ತಾರೆ ಎಂಬದನ್ನು ಮೊದಲೇ ತಿಳಿದಿದ್ದನು ಎಂಬದಾಗಿ ಈ ವಾಕ್ಯವು ಹೇಳುವದಿಲ್ಲ. ಇದು ಮಾನವರ ಕ್ರಿಯೆಗಳ ಬಗ್ಗೆ ಮಾತನಾಡುತ್ತಲೇ ಇಲ್ಲ. ಆತನು ಸಕಲ ಕುಲ, ಭಾಷೆ, ಜನಾಂಗಗಳ ಜನರನ್ನು ವ್ಯಕ್ತಿಗತವಾಗಿ "ಮೊದಲೇ ತಿಳುಕೊಂಡಿದ್ದನು". ಈ ವಾಕ್ಯವು ಸಂಪೂರ್ಣವಾಗಿ ದೇವರ ಬಗ್ಗೆ ಮತ್ತು ದೇವರು ತನ್ನ ಮುಂದಾಲೋಚನೆಯ ಮೂಲಕ ಏನು ಮಾಡುತ್ತಾನೆ ಎಂಬದರ ಬಗ್ಗೆ ಮಾತನಾಡುತ್ತದೆಯೇ ಹೊರತು ಜನರ ಕ್ರಿಯೆಗಳ ಬಗ್ಗೆ ಮಾತನಾಡುವದಿಲ್ಲ. ದೇವರು ತನ್ನ ಕುರಿಗಳಾಗಿರುವ, ಕೆಲವರನ್ನು ಜಗದುತ್ಪತ್ತಿಗೂ ಮೊದಲೇ ಪ್ರೀತಿ ಮಾಡಿದನು. "ಮೊದಲೇ ತಿಳಿದುಕೊಂಡಿದ್ದನು" ಎಂದು ಭಾಷಾಂತರ ಮಾಡಲಾಗಿರುವ ಪದವನ್ನು ಸತ್ಯವೇದದ ವಾಕ್ಯಗಳಲ್ಲಿ ಹೇಗೆ ಉಪಯೋಗಿಸಲಾಗಿದೆ ಎಂಬದಕ್ಕೆ ಇಲ್ಲಿ ಕೆಲವು ಉದಾಹರಣೆಗಳನ್ನು ನೋಡಬಹುದು. ಹಳೆಯ ಒಡಂಬಡಿಕೆಯಲ್ಲಿ "ಯಡಾ" ಎಂಬ ಇಬ್ರಿಯ ಪದವನ್ನು ಉಪಯೋಗಿಸಲಾಗಿದೆ ಅದರೆ ಅರ್ಥ "ತಿಳಿಯುವದು".

“ಭೂಮಿಯ ಸಕಲಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ” (ಆಮೋಸ 3:2) ಕೆಜೆವಿ ಆವೃತ್ತಿ. ಆದರೆ ಈ ಪರಿಸ್ಥಿತಿಯಲ್ಲಿ “ನಿಮ್ಮನ್ನು ಮಾತ್ರವೇ ನಾನು ಆರಿಸಿಕೊಂಡಿದ್ದೇನೆ” ಎಂಬದಾಗಿ ಬರೆಯಲ್ಪಟ್ಟಿರುವದನ್ನು ನಾವು ಎನ್‌ಐವಿ ಆವೃತ್ತಿಯಲ್ಲಿ ನೋಡಬಹುದು. ದೇವರು ಮೊದಲೇ ತಿಳಿದುಕೊಂಡದ್ದರ ಬಗ್ಗೆ ಹೀಗೆ ಮಾತನಾಡಿದ್ದಾನೆ ಅಂದರೆ ಜಗದುತ್ಪತ್ತಿಗೆ ಮೊದಲೇ ಆತನು ನಮ್ಮನ್ನು ರಕ್ಷಿಸಲು ತನ್ನ ವಿಶೇಷವಾದ ಪ್ರೀತಿಯನ್ನು ತೋರ್ಪಡಿಸಿದ್ದಾನೆ. ಆದಿ 18:19 ವಾಕ್ಯವನ್ನು ಈ ರೀತಿಯಾಗಿ ಅರ್ಥಮಾಡಿಕೊಳ್ಳಬೇಕು. “ಅವನು ತನ್ನ ಪುತ್ರಪೌತ್ರರಿಗೆ - ನೀವು ನ್ಯಾಯನೀತಿಗಳನ್ನು ನಡಿಸಿ ಯೆಹೋವನ ಮಾರ್ಗವನ್ನು ಅನುಸರಿಸಬೇಕೆಂದು ಬೋಧಿಸುವಂತೆ ಅವನನ್ನು ನಾನು ಆದುಕೊಂಡೆನಲ್ಲಾ [ತಿಳಿದುಕೊಂಡೆನಲ್ಲಾ]. ಯೆರೆ 1:5 “ನಾನು ನಿನ್ನನ್ನು ಗರ್ಭದಲ್ಲಿ ರೂಪಿಸುವದಕ್ಕೆ ಮುಂಚೆ ತಿಳಿದಿದ್ದೆನು [ಅಂದರೆ ಆರಿಸಿಕೊಂಡೆನು] ನೀನು ಉದರದಿಂದ ಬರುವದಕ್ಕೆ ಮೊದಲೇ ನಿನ್ನನ್ನು ಪ್ರತಿಷ್ಠಿಸಿದ್ದೆನು; ಜನಾಂಗಗಳಿಗೆ ಪ್ರವಾದಿಯನ್ನಾಗಿ ನಿನ್ನನ್ನು ನೇಮಿಸಿದ್ದೇನೆ”. ಹೀಗೆ ದೇವರು ಮೊದಲೇ ತಿಳಿದಿದ್ದನು (ಪ್ರೀತಿಯಲ್ಲಿ ಆರಿಸಿಕೊಂಡನು), ದೇವರು ಸಂಕಲ್ಪಿಸಿದನು, ದೇವರು ಕರೆದನು, ದೇವರು ನೀತಿವಂತನೆಂದು ನಿರ್ಣಯಿಸಿದನು ಮತ್ತು ದೇವರು ಮಹಿಮೆಪಡಿಸಿದನು (ರೋಮಾ 8:30 ಇದನ್ನು ಭೂತಕಾಲದಲ್ಲಿ ತೋರಿಸುತ್ತದೆ, ಯಾಕಂದರೆ ದೇವರು ಮಾಡಲು ಬಯಸಿದ ಕಾರ್ಯವು ಒಳ್ಳೆಯದಾಗಿತ್ತು!) ಈ ಅಧ್ಯಾಯದಲ್ಲಿ ಮುಖ್ಯ ವಿಷಯ ಇದುವೇ ಆಗಿದೆ. ಯಾರು ನಂಬುತ್ತಾರೆ ಎಂಬದನ್ನು ದೇವರು ಮೊದಲೇ ತಿಳಿದಿದ್ದನು ಆದ್ದರಿಂದ ಅವರನ್ನು ತನ್ನ ಮಕ್ಕಳನ್ನಾಗಿ ಕರೆದನು ಎಂಬದಾಗಿ ಹೇಳುವ ಮೊದಲೇ ತಿಳಿದಿದ್ದನ್ನು ಪುನಃ ನೋಡಿಕೊಳ್ಳೋಣ. 1. ಮೇಲೆ ತಿಳಿಸಲಾಗಿರುವ ಪ್ರಕಾರ, ಇಂಥ ಪುನರ್ ನಿರ್ಮಾಣದ ಕಾರ್ಯದಲ್ಲಿ ದೇವರು ಯಾವ ಕಾರ್ಯಕ್ಕಾಗಿಯೂ ಯಾರನ್ನೂ ಮೊದಲೇ ಪ್ರತಿಷ್ಠಿಸುವದಿಲ್ಲ; ಜನರು ವ್ಯಕ್ತಿಗತವಾಗಿ ತಮ್ಮನ್ನು ಪ್ರತಿಷ್ಠಿಸಿಕೊಳ್ಳುತ್ತಾರೆ. ದೇವರು ವ್ಯಕ್ತಿಗತ ಆಯ್ಕೆಯೊಂದಿಗೆ ಕಾರ್ಯ ಮಾಡುತ್ತಾನೆ. ಇದು ಸತ್ಯವೇದದನುಸಾರವಾದದ್ದಲ್ಲ ಮತ್ತು ಮೊದಲೇ ಮಾಡಿದ್ದ ಸಂಕಲ್ಪವಲ್ಲ. 2. ಸತ್ಯವೇದವು ಮಾನವನ ಸ್ಥಿತಿಯ ಬಗ್ಗೆ ಏನು ಹೇಳುತ್ತದೆ? ಮಾನವನು “ಪಾಪ ಮತ್ತು ಅಪರಾಧಗಳಲ್ಲಿ ಮೃತಪಟ್ಟಿದ್ದಾನೆ” ಎಂದು ಹೇಳುತ್ತದೆ, ಎಫೆ 2:1. ಅದು ಹೇಳುವದೇನೆಂದರೆ “ದೇವರನ್ನು ಹುಡುಕುವವನು ಒಬ್ಬನೂ ಇಲ್ಲ” ರೋಮಾ 3:10-11. ಯೇಸು ಕ್ರಿಸ್ತನು ಹೇಳಿದ್ದೇನೆಂದರೆ, “ನನ್ನನ್ನು ಕಳುಹಿಸಿಕೊಟ್ಟಂಥ ತಂದೆಯು ಎಳೆದ ಹೊರತು ಯಾವನೂ ನನ್ನ ಬಳಿಗೆ ಬರಲಾರನು” ಯೋಹಾನ 6:44. ಸತ್ಯವೇದವು ಕಲಿಸುವ ವಿಷಯಗಳ ಬೆಳಕಿನಲ್ಲಿ, ಸಮಯದ ಕಾರಿಡಾರ್‌ಗನುಸಾರವಾಗಿ ಏನನ್ನು ಮೊದಲೇ ನೋಡಿದನು (ಅಥವಾ ನೋಡುವವನಾಗಿದ್ದನು)? ತನ್ನನ್ನು ನಿರಾಕರಿಸಿದ ಜನರು ಆತ್ಮೀಕವಾಗಿ

"ಮೃತಪಟ್ಟಿರುವದನ್ನು" (ರೋಮಾ 1:18-23) ಮತ್ತು ತನ್ನನ್ನು ಬಿಟ್ಟು ಹೋಗಿರುವವರು ತನ್ನ ಬಳಿಗೆ ಮರಳಿ ಬಾರದಿರುವ ಆಯ್ಕೆ ಮಾಡಿಕೊಳ್ಳುವದನ್ನು ನೋಡಿದನು. ಮೃತ ವ್ಯಕ್ತಿ ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ಕೊಡಲು ಆಗುವದಿಲ್ಲ. ಆತ್ಮೀಕವಾಗಿ ಮೃತಪಟ್ಟಿರುವ ವ್ಯಕ್ತಿಯು ಸಹ ಇದೇ ಪ್ರಕಾರ ವಿಶ್ವಾಸಿಸುವಂಥ ನಂಬಿಕೆಯನ್ನು ಉತ್ಪಾದಿಸಲಾರನು. ಗತಿಸಿರುವ ನಿತ್ಯತ್ವದಲ್ಲಿ, ಸೃಷ್ಟಿ, ಬೀಳುವಿಕೆ, ಒಡಂಬಡಿಕೆಗಳು ಅಥವಾ ಧರ್ಮಶಾಸ್ತ್ರ ಕೊಡುವ ಮೊದಲು, ನಾವು ಆತನವರಾಗಿರಬೇಕೆಂದು ಸಾರ್ವಭೌಮನಾದ ದೇವರು ಸಂಕಲ್ಪಿಸಿದನು. ದೇವರ ಉದ್ದೇಶ ಏನು? . . . ನಾವು ಪರಿಶುದ್ಧರು ಮತ್ತು ದೋಷವಿಲ್ಲದವರಾಗಿರಬೇಕು. ಆತನ ಪ್ರೇರಣೆ ಏನು? ಪ್ರೀತಿ. "ಪ್ರೀತಿಯ ಮೂಲಕ ಆತನು ನಮ್ಮನ್ನು ತನ್ನ ಮಕ್ಕಳನ್ನಾಗಿ ಸಂಕಲ್ಪಿಸಿಕೊಂಡನು." ಆತನ ಗುರಿ ಮತ್ತು ಅಂತಿಮ ಕಾರಣ? . . . "ಆತನ ಕೃಪೆಯ ಮಹಿಮೆಯನ್ನು ಸ್ತುತಿಸುವದು." ದೇವರು ಇದನ್ನು ತನ್ನ ಸ್ವಂತ ಮಹಿಮೆಗಾಗಿ ಮಾಡಿದ್ದಾನೆ. ಈಗ ಇದು ಪ್ರಸಿದ್ಧವಾದ ಆಲೋಚನೆಯಲ್ಲ. ಸ್ತ್ರೀಯರು ಮತ್ತು ಪುರುಷರು ತಮ್ಮ ವಿಷಯದಲ್ಲಿ "ಮೃತರೆಂದು" ಯೋಚಿಸಲು ಬಯಸುವದಿಲ್ಲ ಹಾಗೂ ನಂಬಿಕೆಯಿಂದ ದೇವರಿಗೆ ಪ್ರತಿಕ್ರಿಯಿಸಲು ಸಾಮರ್ಥ್ಯವಿಲ್ಲದವರಾಗಿದ್ದಾರೆ. ಆದರೂ ದೇವರು ನಮಗೆ ಕೊಟ್ಟಿರುವ ನಂಬಿಕೆ ಆತನ ವರವೆಂದು ಕಲಿಸಲಾಗುತ್ತದೆ (ಎಫೆ 2:8). ದೇವರ ಕರೆಗೆ ಪ್ರತಿಕ್ರಿಯಿಸುವವರು ಆತನ ಕುರಿಗಳು, ಆತನಿಂದ ಆರಿಸಲ್ಪಟ್ಟವರು ಮತ್ತು ತನ್ನ ಕೃಪೆಯ ಮೂಲಕ ಆತನಿಂದ ನಂಬಿಕೆಯ ವರವನ್ನು ಪಡೆದುಕೊಂಡಿರುವವರಾಗಿದ್ದಾರೆ. ಈ ಪತ್ರಿಕೆಯ ಕೊನೆಯಲ್ಲಿ ಈ ವಿಷಯದ ನೋಟ್ಸ್ ನೋಡಿರಿ.

*"ಮೊದಲು ನೇಮಿಸಿದನು"*– ಈ ಪದವನ್ನು ಗ್ರೀಕ್ ಭಾಷೆಯ ಹೊಸ ಒಡಂಬಡಿಕೆಯಲ್ಲಿ ಕೇವಲ ಆರು ಸಲ ಮಾತ್ರ ನೋಡಬಹುದಾಗಿದೆ (ಇಲ್ಲಿ ವ 30; ಅಪೊ 4:28; 1 ಕೊರಿಂಥ 2:7; ಎಫೆ 1:5,11). ಕುರುಡು ನಂಬಿಕೆ ಅಥವಾ ಕರ್ಮದೊಂದಿಗೆ ಇದಕ್ಕೆ ಯಾವುದೇ ಸಂಬಂಧವಿಲ್ಲ. ಇದರ ಅರ್ಥ ಏನು ಮಾಡಬೇಕೆಂಬದು ಹಾಗೂ ಮಾಡಬೇಕಾಗಿರುವದನ್ನು ನೇಮಿಸಲು ದೇವರು ಮೊದಲೇ ತಿಳಿದಿದ್ದನು. ಮತ್ತು ಸರ್ವಜ್ಞಾನಿ ಹಾಗೂ ಸರ್ವಶಕ್ತನಾಗಿರುವ ದೇವರು ಮೊದಲೇ ನೇಮಿಸಿರುವ ಕಾರ್ಯಗಳು ಖಂಡಿತವಾಗಿಯೂ ನಡೆಯುತ್ತವೆ ಎಂಬ ದೃಢತೆ ನಮಗಿರಬೇಕು. ಒಂದು ಪ್ರತ್ಯೇಕ ಘಟನೆಯ ಬಗ್ಗೆ ಮಾತನಾಡುವ, ಅಪೊ 4:28 ಹೊರತುಪಡಿಸಿ, ಹೊಸ ಒಡಂಬಡಿಕೆಯು ವಿಶ್ವಾಸಿಗಳ ವಿಷಯವಾಗಿ ಮಾತ್ರವೇ ಮೊದಲೇ ನೇಮಕವಾಗಿರುವ ಕಾರ್ಯಗಳ ಬಗ್ಗೆ ಮಾತನಾಡುತ್ತದೆ. ದೇವರು ಜನರನ್ನು ನಿತ್ಯವಾದ ಶಿಕ್ಷೆಗೆ ಮೊದಲೇ ನೇಮಿಸಿದ್ದಾನೆ ಎಂದು ಹೊಸ ಒಡಂಬಡಿಕೆಯು ಎಲ್ಲಿಯೂ ಹೇಳಿಲ್ಲ. ಮೊದಲೇ ನೇಮಿಸಿರುವದರ ಕುರಿತು ಹೊಸ ಒಡಂಬಡಿಕೆ ಕೊಡುವ ಬೋಧನೆಯು ವಿಶ್ವಾಸಿಗಳಿಗೆ ದೊಡ್ಡ ಸಮಾಧಾನ, ನಿರೀಕ್ಷೆಯನ್ನು ಕೊಡುತ್ತದೆ. ದೇವರು ನನ್ನನ್ನು ಮೊದಲೇ ರಕ್ಷಣೆಗೆ ನೇಮಿಸಿದ್ದಾನೆಯೇ ಎಂಬ ಆಶ್ಚರ್ಯದೊಂದಿಗೆ ಅದು ಯಾರನ್ನೂ ನಿರಾಸೆಗೆ ನಡೆಸಬಾರದು.

ಯೋಹಾನ 6:37-44ರಲ್ಲಿ ನೋಟ್ಸ್ ನೋಡಿರಿ. ಬಯಸುವ ಯಾರು ಬೇಕಾದರೂ ಕ್ರಿಸ್ತನ ಕಡೆಗೆ ಬರಬಹುದು (ಪ್ರಕ 22:17) ಮತ್ತು ಆತನ ಬಳಿಗೆ ಬರುವ ಹಾಗೂ ಆತನನ್ನು ನಂಬುವ ಕಾರ್ಯವೇ ದೇವರು ಆ ವ್ಯಕ್ತಿಯನ್ನು ಆರಿಸಿಕೊಂಡಿದ್ದಾನೆ ಎಂಬದಕ್ಕೆ ಪುರಾವೆಯಾಗಿದೆ. **30**

**8:30** *"ಕರೆದನು"*– ವ 28; 1:6. ಇದರ ಅರ್ಥ ಕ್ರಿಸ್ತನ ಬಳಿಗೆ ಕರೆದನು ಯಾಕಂದರೆ ಅವರು ಬಂದು ಆತನನ್ನು ನಂಬಬೇಕು. ದೇವರ ಕರೆ ಎಂದರೆ ಏನು ಎಂಬದನ್ನು ಅರ್ಥಮಾಡಿಕೊಳ್ಳಲು ಇಲ್ಲಿ ಕೊಡಲಾಗಿರುವ ವಾಕ್ಯ ಭಾಗಗಳನ್ನು ಧ್ಯಾನಿಸಿರಿ – 11:29; ಗಲಾ 1:6; 2 ಥೆಸ 2:14; 1 ಕೊರಿಂಥ 1:9,24; ಗಲಾ 5:13; ಕೊಲೊ 3:15; 1 ತಿಮೊ 6:12; 1 ಪೇತ್ರ 2:9,20,21; 3:9; ಯೂದ 1; 2 ತಿಮೊ 1:9; ಇಬ್ರಿ 3:1. ದೇವರು ನಮ್ಮನ್ನು ಕರೆದಿದ್ದಾನೆ ಎಂಬ ದೃಢತೆ ಎಲ್ಲಾ ವಿಶ್ವಾಸಿಗಳಿಗೂ ಇರಬೇಕು – 2 ಪೇತ್ರ 1:10-11. ದೇವರು ನಮ್ಮನ್ನು ಆರಿಸಿಕೊಂಡಿದ್ದಾನೆ, ನಮ್ಮನ್ನು ಕರೆದಿದ್ದಾನೆ ಮತ್ತು ನೀತಿವಂತರೆಂದು ನಿರ್ಣಯಿಸಿದ್ದಾನೆ ಎಂಬದನ್ನು ವಿಶ್ವಾಸಿಗಳು ತಿಳಿದುಕೊಳ್ಳಬಹುದು ಹಾಗೂ ತಿಳಿದುಕೊಳ್ಳಲೇಬೇಕು.

*"ನೀತಿವಂತರೆಂಬ ನಿರ್ಣಯ"*– ದೇವರಿಂದ ಕರೆಯಲ್ಪಡುವವರು, ಪೌಲನು ಈ ಪದವನ್ನು ಉಪಯೋಗಿಸಿರುವದರ ಅರ್ಥದಲ್ಲಿ, ಎಲ್ಲರೂ ದೇವರ ಬಳಿಗೆ ಬರುತ್ತಾರೆ ಮತ್ತು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುತ್ತಾರೆ. ಕೂಡಲೇ ದೇವರು ಅವರ ಎಲ್ಲಾ ಪಾಪಗಳನ್ನು ಕ್ಷಮಿಸುತ್ತಾನೆ ಮತ್ತು ಅವರನ್ನು ಸಂಪೂರ್ಣವಾಗಿ ನೀತಿವಂತರೆಂದು ಎಣಿಸುತ್ತಾನೆ. 1:16-17; 3:21-28; 4:5,6-8; 5:1; 10:10 ನೋಡಿರಿ.

*"ಮಹಿಮಪದವಿ"*– ವ 17,18,23. ದೇವಜನರ ರಕ್ಷಣೆಯ ಈ ಕಡೆಯ ಹಂತವನ್ನು ಉಳಿದ ಹಂತಗಳ ಹಾಗೆ ಭೂತಕಾಲದಲ್ಲಿ ತಿಳಿಸಲಾಗಿದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ದೇವರ ಮೂಲ ತಿಳುವಳಿಕೆ ಮತ್ತು ಸಂಕಲ್ಪದ, ಆತನ ದೃಷ್ಟಿಯಲ್ಲಿ ಇವುಗಳು ಈಗಾಗಲೇ ನಡೆದಿರುವದಕ್ಕೆ ಸಮಾನವಾದವುಗಳಾಗಿವೆ (4:17ರೊಂದಿಗೆ ಹೋಲಿಸಿ ನೋಡಿರಿ). ಸಂಕಲ್ಪಿಸಲ್ಪಟ್ಟು, ಕರೆಯಲ್ಪಟ್ಟು, ನೀತಿವಂತರೆಂದು ನಿರ್ಣಯಿಸಲ್ಪಟ್ಟವರು ಮಹಿಮಪದವಿಗೆ ಸೇರಿಸಲ್ಪಡುತ್ತಾರೆ. "ಮಹಿಮಪದವಿಗೆ ಸೇರುವರು" ಎಂಬದಾಗಿ ಹೇಳುವದನ್ನು ಇಲ್ಲಿ ಯಾರುಬೇಕಾದರೂ ನಿರಾಕರಿಸಬಹುದು, ಆದರೂ ವಿಶ್ವಾಸಿಗಳನ್ನು ಮಹಿಮಪದವಿಗೆ ನಡೆಸುವ ಅಂತಿಮ ಕಾರ್ಯವು ಯೇಸು ಕ್ರಿಸ್ತನ ಎರಡನೇ ಬರೋಣದ ನಂತರವಷ್ಟೇ ನಡೆಯುತ್ತದೆ. ಯಾಕಂದರೆ ಯೇಸು ಕ್ರಿಸ್ತನು ಈಗಾಗಲೇ ಮಹಿಮಪದವಿಗೆ ಸೇರಿದ್ದಾನೆ ಮತ್ತು ಅವರು ಆತನಲ್ಲಿ ಐಕ್ಯರಾಗಿದ್ದಾರೆ, ಅತನಲ್ಲಿದ್ದಾರೆ ಮತ್ತು ಆದ್ದರಿಂದ ಪ್ರತಿಯೊಂದು ವಾಸ್ತವಿಕ ರೀತಿಯಲ್ಲಿ ಅವರು ಈಗಾಗಲೇ ಮಹಿಮಪದವಿಗೆ ಸೇರಿದ್ದಾರೆ – ಯೋಹಾನ 17:22; ಎಫೆ 2:6; ಕೊಲೊ 3:3-4 ನೋಡಿರಿ. ತನ್ನ ಕುಮಾರನಲ್ಲಿ ನಂಬಿಕೆಯನ್ನಿಡಲು ದೇವರು ಯಾರನ್ನೆಲ್ಲಾ ಕರೆದಿದ್ದಾನೋ ಅವರ ಅಂತಿಮ ರಕ್ಷಣೆಯ ಸಮಯದಲ್ಲಿ ನಡೆಯುವ ಕಾರ್ಯಗಳ ಬಗ್ಗೆ ಇವೆಲ್ಲವೂ ಮಾತನಾಡುತ್ತವೆ. ಯೇಸು ಕ್ರಿಸ್ತನು

ತಾನೇ ಈ ಸತ್ಯವನ್ನು ಯೋಹಾನ 6:37-40; 10:27-29ರಲ್ಲಿ ವ್ಯಕ್ತಪಡಿಸಿದ್ದಾನೆ. **31**

**8:31** ನಾವು ಏನು ಹೇಳೋಣ? ದೇವರು ತನ್ನ ಜನರ ವಿಷಯದಲ್ಲಿ ಮಾಡಿರುವ ಯೋಜನೆಗಳು ಹಾಗೂ ನೆರವೇರಿಸುವ ಕಾರ್ಯಗಳ ಬಗ್ಗೆ ನಮ್ಮ ಮಾತುಗಳೆಲ್ಲವೂ ನಂಬಿಕೆಯಿಂದ ಕೂಡಿದ್ದು, ಸ್ತುತಿಸುವಂಥವುಗಳಾಗಿರಲು ಹಾಗೂ ಭರವಸೆಯುಳ್ಳವುಗಳಾಗಿರಲಿ. ಇವುಗಳೆಲ್ಲವೂ ಸತ್ಯವೇ ಎಂಬ ಸಂದೇಹ ನಮ್ಮ ಯಾರ ಮಾತುಗಳೂ ವ್ಯಕ್ತಪಡಿಸಬಾರದು. ಆತನಲ್ಲಿ ನಂಬಿಕೆಯಿಡುವವರಾದ ನಮ್ಮ ಪಕ್ಷದಲ್ಲಿ ದೇವರು ಇರುತ್ತಾನೆ. ಆತನು ನಮ್ಮೊಂದಿಗಿರುತ್ತಾನೆ, ನಮ್ಮಲ್ಲಿರುತ್ತಾನೆ. ನಮ್ಮೊಳಗೆ ಅಥವಾ ನಮ್ಮ ಹೊರಗಿರುವ ಯಾವ ವೈರಿಯು ನಮ್ಮ ವಿಷಯವಾಗಿರುವ ದೇವರ ಉದ್ದೇಶಗಳನ್ನು ಸೋಲಿಸಲು ಆಗುವದಿಲ್ಲ (ವ 37; ಇಬ್ರಿ 13:6; ಯೋಹಾನ 10:29; ರೋಮಾ 5:20). **32**

**8:32** ದೇವರು ಕೊಡಲು ಇಷ್ಟಪಡುತ್ತಾನೆ ಯಾಕಂದರೆ ಆತನು ಪ್ರೀತಿಯಾಗಿದ್ದಾನೆ (1 ಯೋಹಾನ 4:8; 2 ಪೇತ್ರ 1:3; 2 ಕೊರಿಂಥ 9:15; ಅಪೊ 14:17; ಮತ್ತಾಯ 5:45; 7:10; ಕೀರ್ತನೆ 145:9). ಆತನು "ಕೃಪಾಪೂರ್ಣನಾದ ದೇವರಾಗಿದ್ದಾನೆ" (1 ಪೇತ್ರ 5:10). ಆತನ ಸಿಂಹಾಸನವು "ಕೃಪೆಯ ಸಿಂಹಾಸನವಾಗಿದೆ" (ಇಬ್ರಿ 4:16). ವಿಶೇಷವಾದ ರೀತಿಯಲ್ಲಿ ಕೃಪೆ ಆತನ ಜನರ ಮೇಲೆ ಆಳ್ವಿಕೆ ಮಾಡುತ್ತದೆ (ರೋಮಾ 5:21) ಮತ್ತು ಕೃಪೆ ಅವರ ಎಲ್ಲಾ ಬಲಹೀನತೆ ಮತ್ತು ಪಾಪದ ಕಾರ್ಯಗಳ ಮೇಲೆ ಜಯಗಳಿಸುತ್ತದೆ. ದೇವರು ತನ್ನ ಮಗನನ್ನು ಕೊಟ್ಟದ್ದೇ ಎಲ್ಲಾ ವರದಾನಗಳಲ್ಲಿ ಶ್ರೇಷ್ಠವಾದದ್ದಾಗಿದೆ. ವಿಶ್ವಾಸಿಗಳ ಅಂತಿಮ ರಕ್ಷಣೆಗೆ ಅವಶ್ಯವಾಗಿರುವದನ್ನು ಆತನು ತಡೆಹಿಡಿಯಲು ಸಾಧ್ಯವೇ? **33**

**8:33** ದೇವರು ವಿಶ್ವಾಸಿಗಳನ್ನು ನೀತಿವಂತರೆಂದು ಎಣಿಸುವದರಿಂದ ಅವರಿಗೆ ವಿರುದ್ಧವಾದ ಯಾವ ಆರೋಪಗಳನ್ನೂ ಆತನು ಅಂಗೀಕರಿಸುವದಿಲ್ಲ. ವಿಶ್ವಾಸಿಗಳು ಕ್ರಿಸ್ತನೊಂದಿಗೆ ಐಕ್ಯವಾಗಿದ್ದಾರೆ, ಕ್ರಿಸ್ತನಲ್ಲಿದ್ದಾರೆ ಮತ್ತು ಕ್ರಿಸ್ತನ ಸಂಪೂರ್ಣವಾದ ನೀತಿವಂತಿಕೆಯಲ್ಲಿ ಪಾಲುಗಾರರಾಗಿದ್ದಾರೆ. ದೇವರು ತನ್ನ ಕುಮಾರನ ವಿಷಯದಲ್ಲಿ ಯಾವ ಆರೋಪಗಳನ್ನು ಅಂಗೀಕರಿಸಿಕೊಳ್ಳದ ಹಾಗೆ, ತನ್ನೊಂದಿಗೆ ಐಕ್ಯರಾಗಿರುವವರ ಮೇಲಿನ ಯಾವ ಆರೋಪಗಳನ್ನೂ ಅಂಗೀಕರಿಸಿಕೊಳ್ಳುವದಿಲ್ಲ. 4:6-8 ಮತ್ತು ಅಲ್ಲಿನ ನೋಟ್ಸ್ ನೋಡಿರಿ. ಪಾಪವೊಂದೇ ಅವರ ರಕ್ಷಣೆಯನ್ನು ಕದ್ದುಕೊಳ್ಳುವ ಸಾಧ್ಯತೆಯಿದೆ ಮತ್ತು ದೇವರು ಅವರ ಪಾಪಗಳನ್ನು ಅವರಿಗೆ ವಿರುದ್ಧವಾಗಿ ಎಣಿಸುವದಿಲ್ಲ. ಇದು ಅವರಿಗೆ ಪಾಪ ಮಾಡುವ ಪರವಾನಗಿಯನ್ನು ಕೊಡುತ್ತದೆಯೇ? ಖಂಡಿತವಾಗಿಯೂ ಇಲ್ಲ – 6:1,15; 8:4,12-14. **34**

**8:34** ದೇವರು ಅಪರಾಧಿಯೆಂಬ ನಿರ್ಣಯವನ್ನು ಒಪ್ಪಿಕೊಳ್ಳುವಂತೆ ವಿಶ್ವಾಸಿಗಳ ಮೇಲೆ ಅಪರಾಧವನ್ನು ಹೊರಿಸುವವರು ಯಾರು? ಯಾರೂ ಇಲ್ಲ. ಸೈತಾನನಿಗೂ ಆಗುವದಿಲ್ಲ, ಇತರರಿಂದಲೂ ಆಗುವದಿಲ್ಲ ಯಾಕೆ ವಿಶ್ವಾಸಿಯಿಂದಲೂ ಆಗುವದಿಲ್ಲ. ಯೇಸು ಕ್ರಿಸ್ತನು

ಅವರ ಪಾಪಗಳನ್ನು ಸಂಪೂರ್ಣವಾಗಿ ತೆಗೆದುಹಾಕಲು ಅವರಿಗೆ ತನ್ನ ಪ್ರಾಣವನ್ನು ಕೊಟ್ಟಿದ್ದಾನೆ (ಇಬ್ರಿ 10:10,14). ಇದು ಮಾತ್ರವಲ್ಲದೇ, ಆತನು ತನ್ನ ಜನರಿಗಾಗಿ ತಂದೆಯ ಬಲಗಡೆಯಲ್ಲಿದ್ದಾನೆ. ಅಲ್ಲಿ ಆತನು ಪ್ರತಿಯೊಂದು ಆರೋಪ ಅಥವಾ ಹೊರಿಸಲಾಗುವ ಅಪರಾಧಗಳಿಗೆ ಉತ್ತರ ಕೊಡುತ್ತಾನೆ. ಆತನ ಜೀವಿತ ಮತ್ತು ಮಧ್ಯಸ್ಥಿಕೆ ಅವರನ್ನು ಈಗ ಮತ್ತು ಸದಾಕಾಲ ಸುರಕ್ಷಿತವಾಗಿರಿಸುತ್ತದೆ (5:9-10; ಇಬ್ರಿ 7:25; 1 ಯೋಹಾನ 2:1).

**35-39**

**8:35-39** "ಕ್ರಿಸ್ತನ ಪ್ರೀತಿ" ಎಂದರೆ ವಿಶ್ವಾಸಿಗಳು ಆತನ ಮೇಲಿಟ್ಟಿರುವ ಪ್ರೀತಿಯಲ್ಲ ಬದಲಾಗಿ ವಿಶ್ವಾಸಿಗಳ ಮೇಲೆ ಆತನಿಗಿರುವ ಪ್ರೀತಿ. ಆದರೆ ವಿಶ್ವಾಸಿಗಳ ಮೇಲೆ ಕ್ರಿಸ್ತನಿಗಿರುವ ಪ್ರೀತಿ ಅವರ ಪಾಪದ ನಿಮಿತ್ತ ವಿಫಲವಾದರೆ, ಮುಂದೇನು? ಆತನ ಪ್ರೀತಿ ಎಂದಿಗೂ ವಿಫಲವಾಗುವದಿಲ್ಲ. ಅದು ಶಾಶ್ವತವಾದದ್ದಾಗಿದೆ (ಯೆರೆ 31:3). ಅವರು ಭೂಲೋಕದಲ್ಲಿ ಉಂಟಾಗುವ ಮೊದಲೇ ಅದು ಪ್ರಾರಂಭವಾಯಿತು ಮತ್ತು ಅವರು ಇದರಲ್ಲಿ ಜೀವಿಸುವ ತನಕ ಹಾಗೂ ಇದಾದ ನಂತರ ಸದಾಕಾಲವೂ ಮುಂದುವರೆಯುವದು. ಅತನ ಪಾಪಗಳು ಮತ್ತು ದುಷ್ಕೃತ್ಯಗಳನ್ನು ಆತನು ಮೊದಲೇ ಬಲ್ಲವನಾಗಿದ್ದನು ಆದರೂ ತನ್ನ ಪ್ರೀತಿಯನ್ನು ಅವರಿಗೆ ಕೊಟ್ಟನು. ಕ್ರಿಸ್ತನ ಪ್ರೀತಿ "ಎಲ್ಲಾ ತಿಳುವಳಿಕೆಯನ್ನು ಮೀರಿದ್ದು" –(ಎಫೆ 3:19). ಅದು ಎಲ್ಲಾ ಅಡಚಣೆಗಳನ್ನು ಜಯಿಸುತ್ತದೆ ಮತ್ತು ಕಡೆಗೆ ತನ್ನ ಜನರೆಲ್ಲರನ್ನು ಆತನ ಪ್ರೀತಿಯ ಪ್ರಸನ್ನತೆಗೆ ಸುರಕ್ಷಿತವಾಗಿ ನಡೆಸುತ್ತದೆ (ಗೀತೆ 8:6-7 ವಚನಗಳೊಂದಿಗೆ ಹೋಲಿಸಿರಿ). ಪೌಲನು ಇಲ್ಲಿ ಕಷ್ಟಗಳು ಮತ್ತು ಅಪಾಯಗಳ ಬಗ್ಗೆ ಯಾಕೆ ಮಾತನಾಡಿದ್ದಾನೆ? ಯಾಕಂದರೆ ಇವುಗಳು ದೇವಜನರಿಗೆ ಸಹಜವಾಗಿ ಎದುರಾಗುವ ಕಾರ್ಯಗಳಾಗಿವೆ (ಯೋಹಾನ 16:33; ಅಪೊ 14:22); ಯಾಕಂದರೆ ವಿಶ್ವಾಸಿಗಳ ಮೇಲೆ ಜಯಗಳಿಸಲು ಸೈತಾನನು ಇವುಗಳನ್ನು ಉಪಯೋಗಿಸುತ್ತಾನೆ; ಯಾಕಂದರೆ ಇವುಗಳು ಕ್ರಿಸ್ತನು ನಮ್ಮ ಮೇಲೆ ಇನ್ನೂ ಪ್ರೀತಿಯಿಟ್ಟಿದ್ದಾನೋ ಎಂಬದಾಗಿ ವಿಶ್ವಾಸಿಗಳು ಯೋಚಿಸುವಂತೆ ಮಾಡುತ್ತವೆ; ಮತ್ತು ಅವರು ಪಾಪ ಮಾಡುವಂತೆ ಹಾಗೂ ತಾತ್ಕಾಲಿಕವಾಗಿ ಅಪನಂಬಿಕೆಗೆ ಒಳಗಾಗುವಂತೆ ಮಾಡಲು ಶಕ್ತವಾಗಿವೆ. ಒಂದುವೇಳೆ ಈ ಕಾರ್ಯ ನಡೆದರೆ ಯೇಸು ಕ್ರಿಸ್ತನು ಅವರನ್ನು ಅಲ್ಲಗಳೆಯುತ್ತಾನೆಯೇ? ತನ್ನ ಪ್ರೀತಿಯನ್ನು ನಿಲ್ಲಿಸಿಬಿಡುತ್ತಾನೆಯೇ? ಇಲ್ಲ. ಆತನು ಅವರನ್ನು ಜೀವಿತದ ಎಲ್ಲಾ ಅನುಭವಗಳ ನಡುವೆಯೇ ಸುರಕ್ಷಿತವಾಗಿ ಕಾಯುತ್ತಾನೆ.

**36**

**- 8:36** ಕೀರ್ತನೆ 44:22. **37**

**8:37** ಈ ಅಧ್ಯಾಯದ ಸಂದರ್ಭಕ್ಕನುಸಾರವಾಗಿ ದೇವರು ವಿಶ್ವಾಸಿಗಳು ಕೇವಲ ಪೌಲನಂತೆ ಮಾತ್ರವಲ್ಲ ಬದಲಾಗಿ "ಪೂರ್ಣ ಜಯಶಾಲಿಗಳನ್ನಾಗಿ" ಎಂದು ಹೇಳಬಹುದು – ಇಲ್ಲಿ "ನಾವು" ಎಂಬ ಪದವನ್ನು ಗಮನಿಸಿರಿ, ಇದು ರೋಮಾಪುರದಲ್ಲಿರುವ ಎಲ್ಲಾ

ವಿಶ್ವಾಸಿಗಳನ್ನು ಒಳಗೊಂಡಿದೆ (ಮತ್ತು ಇದನ್ನು ವಿಸ್ತರಿಸುವದಾದರೆ ಈಗಿನ ಎಲ್ಲಾ ವಿಶ್ವಾಸಿಗಳೂ ಸೇರುತ್ತಾರೆ). ಕೇವಲ ಜಯಿಸುವವನು ಮಾತ್ರವಲ್ಲ ಬದಲಾಗಿ ಯಾವುದೇ ವಿಷಯವಾದರೂ ಅಂತಿಮವಾಗಿ ಅದನ್ನು ಸೋಲಿಸಲು ಅಸಾಧ್ಯವೆನಿಸುವವುಗಳನ್ನು ಜಯಿಸುತ್ತಾನೆ. ಮತ್ತು ಪೌಲನು "ನಾವು" ಎಂಬದಾಗಿ ಹೇಳಿದ್ದಾನೆಯೇ ಹೊರತು "ನಾವು ಮಾಡಬಹುದೇನೋ" ಎಂದು ಹೇಳಿಲ್ಲ. ಪಾಪ ಮತ್ತು ಸೈತಾನನು, ಲೋಕ, ಶರೀರ ಮತ್ತು ದುರಾತ್ಮನು, ವಿಶ್ವಾಸಿಗಳಿಗೆ ಗಾಯಮಾಡಬಹುದು ಮತ್ತು ತಾತ್ಕಾಲಿಕವಾಗಿ ಅವರು ಬಿದ್ದು ಹೋಗುವಂತೆ ಮಾಡಬಹುದು, ಅವರನ್ನು ನೋಯಿಸಬಹುದು, ಗಲಿಬಿಲಿಗೊಳಪಡಿಸಬಹುದು, ಹಿಂಸಿಸಬಹುದು ಮತ್ತು ಹೊಡೆದು ಉರುಳಿಸಬಹುದು (2 ಕೊರಿಂಥ 4:8-9). ಆದರೆ ಅಂತಿಮವಾಗಿ ಅವರ ಮೇಲೆ ಜಯಗಳಿಸಲು ಆಗುವದಿಲ್ಲ. ಪೂರ್ಣ ಜಯಶಾಲಿಗಳಾಗಿರುವವರ ಮೇಲೆ ಜಯಗಳಿಸಲು ಸಾಧ್ಯವಿಲ್ಲ. ಅವರಿಗೆ ನಂಬಿಕೆಯನ್ನು ಕೊಟ್ಟಿರುವ ದೇವರು ಕಡೆಯ ತನಕ ಅವರು ನಂಬಿಕೆಯುಳ್ಳವರಾಗಿರುವಂತೆ ಮಾಡುತ್ತಾನೆ. ಅವರನ್ನು ಕ್ರಿಸ್ತನ ಕಡೆಗೆ ಕರೆದುಕೊಂಡು ಬಂದಾತನು ಕ್ರಿಸ್ತನಲ್ಲಿಯೇ ಅವರನ್ನು ಕಾಯುತ್ತಾನೆ ಮತ್ತು ಅವರಿಗೆ ಅಂತಿಮವಾದ, ನಿತ್ಯವಾದ ಜಯವನ್ನು ಕೊಡುತ್ತಾನೆ. ವಿಶ್ವಾಸಿಗಳು ಒಂದೇ ಒಂದು ಕಾರಣಕ್ಕೆ ಪೂರ್ಣ ಜಯಶಾಲಿಗಳಾಗಿದ್ದಾರೆ – ಯಾಕಂದರೆ ಪಾಪ, ಲೋಕ, ಸೈತಾನ, ಮರಣ ಮತ್ತು ದೇವರಿಗೆ ವಿರುದ್ಧವಾಗಿ ತಲೆ ಎತ್ತುವ ಪ್ರತಿಯೊಂದರ ಮೇಲೆಯೂ ಕಟ್ಟಕಡೆಯ ಜಯಶಾಲಿಯಾಗಿರುವ ಕ್ರಿಸ್ತನಲ್ಲಿ ಅವರು ಐಕ್ಯಗೊಂಡಿದ್ದಾರೆ ಹಾಗೂ ಆತನ ಜಯದಲ್ಲಿ ಪಾಲುಗಾರರಾಗಿದ್ದಾರೆ. **38-39**

**8:38-39** ವಿಶ್ವಾಸಿಗಳು ಕರ್ತನಾದ ಯೇಸು ಕ್ರಿಸ್ತನ ಪ್ರೀತಿಪೂರ್ವಕವಾದ ಪರಿಪಾಲನೆಯಲ್ಲಿ ಸುರಕ್ಷಿತರಾಗಿದ್ದಾರೆ ಎಂದು ಪೌಲನು ಮತ್ತಷ್ಟು ವಿಶಿಷ್ಟವಾಗಿ ಹೇಳಲು ಹೇಗೆ ಸಾಧ್ಯ? ಜೀವಿತವು ತನ್ನ ಶೋಧನೆಗಳು ಮತ್ತು ಕಷ್ಟಗಳ ಮೂಲಕ ಅವರನ್ನು ಆತನಿಂದ ಬೇರ್ಪಡಿಸಲಾರದು. ಹಾಗೆಯೇ ಭವಿಷ್ಯದಲ್ಲಾಗುವ ಸಾಧ್ಯತೆಗಳೂ ಬೇರ್ಪಡಿಸಲಾರವು. ಹಾಗೆಯೇ ಜೀವಿತದ ಕಡೆಯಲ್ಲಿ ಸಂಭವಿಸುವ ಮರಣ, ಯಾವುದೇ ರೀತಿಯಲ್ಲಿ ಮರಣ ಬಂದರೂ ಬೇರ್ಪಡಿಸಲಾರದು. ದುರಾತ್ಮ ಶಕ್ತಿಯಾಗಲಿ, ಒಳ್ಳೆಯ ಅಧಿಕಾರವಾಗಲಿ ಬಯಸಿದರೂ ಬೇರ್ಪಡಿಸಲು ಆಗುವದಿಲ್ಲ. ಆದರೆ, ಇಲ್ಲಿ ಪಾಪದ ಬಗ್ಗೆ ಹೇಳಲಾಗಿಲ್ಲ ಎಂದು ಕೆಲವರು ಹೇಳಬಹುದು. ಆದರೂ "ಜೀವ" ಮತ್ತು "ಭವಿಷ್ಯ" ಎಂಬ ಈ ಎರಡು ಪದಗಳು ವ್ಯಕ್ತಪಡಿಸುವ ಸಾಧ್ಯತೆಗಳೊಂದಿಗೆ ಅದನ್ನು ಸೇರಿಸಲಾಗಿದೆ. ಮತ್ತು ವಿಶ್ವಾಸಿಯ ಪಾಪದ ವಿಷಯದಲ್ಲಿ ದೇವರು ಏನು ಹೇಳುತ್ತಾನೆ ಎಂಬದನ್ನು ನಾವು 33,34 ಮತ್ತು 4:8 ವಚನಗಳಲ್ಲಿ ನೋಡಿದ್ದೇವೆ. ಕೃಪೆ ಆಳ್ವಿಕೆ ಮಾಡುತ್ತದೆ (5:21)! ಪೌಲನು ಮೇಲೆ ತಿಳಿಸಲಾಗಿರುವ ಸತ್ಯದ ವಿಷಯದಲ್ಲಿ "ಮನವರಿಕೆಯುಳ್ಳವನಾದ್ದರಿಂದ" ನಾವೂ ಮನವರಿಕೆಯುಳ್ಳವರಾಗಿರಬೇಕು ಮತ್ತು ಯಾವಾಗಲೂ ಇದರಲ್ಲಿ ಸಂತೋಷಿಸಬೇಕು.

ಪೌಲನು ಯೇಸು ಕ್ರಿಸ್ತನ ಸುವಾರ್ತೆ ಎಂದರೆ ಏನು ಎಂಬದನ್ನು ವ್ಯಕ್ತಪಡಿಸಿದ್ದಾನೆ ಮತ್ತು ಅದು ರಕ್ಷಣೆ ಹೊಂದಲು ಯಾವ ರೀತಿ ದೇವರ ಶಕ್ತಿಯಾಗಿದೆ ಎಂಬದನ್ನು ತೋರಿಸಿದ್ದಾನೆ. ಆತನು ದೇವರ ಕೋಪದಡಿಯಲ್ಲಿ ಮಾನವನ ಘೋರವಾದ ಪರಿಸ್ಥಿತಿಯಿಂದ ಹಿಡಿದು ಯೇಸು ಕ್ರಿಸ್ತನಲ್ಲಿ ಕ್ಷಮಿಸಲ್ಪಟ್ಟು, ನೀತಿವಂತರೆಂದು ನಿರ್ಣಯಿಸಲ್ಪಟ್ಟು, ಶುದ್ಧೀಕರಣ ಹೊಂದಿ, ಮಹಿಮಪದವಿಗೆ ಸೇರಿಸಿ, ಪ್ರೀತಿಸಲ್ಪಟ್ಟು, ಸದಾಕಾಲವೂ ಸುರಕ್ಷಿತವಾಗಿರುವ ವಿಶ್ವಾಸಿಗಳ ಅಮೋಘವಾದ ಸ್ಥಿತಿಯನ್ನು ಹಂತಹಂತವಾಗಿ ವಿವರಿಸಿದ್ದಾನೆ. ಅವನು ಸುವಾರ್ತೆಯ ವಿಷಯದಲ್ಲಿ ಯಾಕೆ ನಾಚಿಕೊಳ್ಳುವವನಾಗಿರಲಿಲ್ಲ ಎಂಬದನ್ನು ನಾವು ನೋಡಬಹುದು (1:16). ಯೇಸು ಕ್ರಿಸ್ತನ ಸುವಾರ್ತೆಯು ಹೋಲಿಸಲಾಗದ ರೀತಿಯಲ್ಲಿ ಮಹಿಮಾರ್ಥವಾಗಿದೆ ಮತ್ತು ವಿವರಿಸಲಾಗದ ಮಾನವನ ಕಳಪೆ ಸಾಮರ್ಥ್ಯಕ್ಕಿಂತಲೂ ಹೆಚ್ಚು ಪ್ರಬಲವಾದದ್ದಾಗಿದೆ. ಅದು ಮಾನವನ ಅವಶ್ಯಕತೆ ಮತ್ತು ದೇವರ ಪ್ರಭಾವಕ್ಕೆ ಸರಿಯಾಗಿ ಹೊಂದಿಕೊಳ್ಳುವದಾಗಿದೆ. ನಾವು ಸುವಾರ್ತೆಯನ್ನು ನಂಬೋಣ ಮತ್ತು ಪೂರ್ತಿಯಾಗಿ ಕಲಿತುಕೊಳ್ಳೋಣ ಹಾಗೂ ಅದರಲ್ಲಿ ಸಂತೋಷಿಸೋಣ, ಅದಕ್ಕನುಸಾರ ಜೀವಿಸೋಣ, ಅದರ ಬಗ್ಗೆ ಮಾತನಾಡೋಣ ಮತ್ತು ನಮ್ಮ ಜೀವಿತದ ಎಲ್ಲಾ ದಿವಸಗಳ ಅದರ ಬಗ್ಗೆ ಇತರರಿಗೆ ತಿಳಿಸೋಣ.

# 9 1-3

**9:1-3** ದೇವರು ಮಾನವನಿಗೆ ಒದಗಿಸುವ ರಕ್ಷಣೆಯ ಬಗ್ಗೆ ತನ್ನ ವಿವರಣೆಯನ್ನು ಪೌಲನು ಮುಗಿಸಿದ್ದಾನೆ. ಈಗ 9,10,11 ಅಧ್ಯಾಯಗಳಲ್ಲಿ ದೇವರಾದುಕೊಂಡ ಇಸ್ರಾಯೇಲ್ಯರು ಯೇಸು ಕ್ರಿಸ್ತನನ್ನು ಹಾಗೂ ಆತನ ಸುವಾರ್ತೆಯನ್ನು ಯಾಕೆ ತಿರಸ್ಕರಿಸಿದರು ಹಾಗೂ ಅವರ ಭವಿಷ್ಯ ಏನಾಗುವದು ಎಂಬದರ ಬಗ್ಗೆ ಮಾತನಾಡುತ್ತಿದ್ದಾನೆ. **2**

**9:2** *"ಮನಸ್ಸಾಕ್ಷಿ"*– ಅಪೊ 23:1; 24:16; 1 ಕೊರಿಂಥ 4:4; 8:7; 2 ಕೊರಿಂಥ 1:12; 1 ತಿಮೊ 5:19; 3:9. ಪೌಲನು ಈ ವಾಕ್ಯಗಳಲ್ಲಿ ಬಹಳ ಗಂಭೀರವಾಗಿ ಮಾತನಾಡಿದ್ದಾನೆ ಯಾಕಂದರೆ ಅನೇಕ ಯೆಹೂದ್ಯರು ಅವನನ್ನು ತಮ್ಮ ವೈರಿ ಅಂದುಕೊಂಡಿದ್ದರು (ಅಪೊ 21:21,28; 24:5). ಸತ್ಯವೇನೆಂದರೆ ಆತನು ಅವರನ್ನು ಪ್ರೀತಿಸಿದನು ಮತ್ತು ಅವರ ರಕ್ಷಣೆಯನ್ನು ಬಹಳವಾಗಿ ಬಯಸುತ್ತಿದ್ದರಿಂದ (ಒಂದುವೇಳೆ ಸಾಧ್ಯವಾದರೆ) ಅವರು ರಕ್ಷಣೆ ಹೊಂದುವ ಸಲುವಾಗಿ ತಾನೇ ನಾಶವಾದರೂ ಪರವಾಗಿಲ್ಲವೆಂದು ಯೋಚಿಸುತ್ತಿದ್ದನು. ವಿಮೋ 32:32 ಮತ್ತು ಗಲಾ 3:13 ಹೋಲಿಸಿ ನೋಡಿರಿ. ಇಸ್ರಾಯೇಲ್ಯರ ಮೆಸ್ಸೀಯನಾದ, ಕರ್ತನಾದ ಯೇಸು ಕ್ರಿಸ್ತನು ಪ್ರಬಲವಾಗಿ ಅವನ ಹೃದಯದಲ್ಲಿ ಕಾರ್ಯಮಾಡುತ್ತಿದ್ದನು. **4-5**

**9:4-5** ಇಲ್ಲಿ ಪೌಲನು 3:1ರಲ್ಲಿರುವ ಪ್ರಶ್ನೆಗೆ ಪೂರ್ತಿಯಾಗಿ ಉತ್ತರ ಕೊಟ್ಟಿದ್ದಾನೆ. ಜನಾಂಗವಾಗಿ ಆತನು ಹೇಳುವದೇನೆಂದರೆ, ಇಸ್ರಯೇಲ್ಯರಿಗೆ ಈಗಲೂ ಕೆಲವು ಸೌಕರ್ಯಗಳಿವೆ.

ಇಸ್ರಾಯೇಲ್ಯರು ಯೇಸು ಕ್ರಿಸ್ತನನ್ನು ತಿರಸ್ಕರಿಸಿದರೂ ಈ ಸೌಕರ್ಯಗಳನ್ನು ಕಳೆದುಕೊಂಡಿಲ್ಲ. ಈ ವಚನಗಳಲ್ಲಿ ಪೌಲನು ಸೂಚಿಸುವದೇನೆಂದರೆ ತಾನು ಹೇಳಿರುವ ಕಾರ್ಯಗಳು ಈಗಲೂ ಆ ಜನಾಂಗದವರಿಗೆ ಸೇರಿದವುಗಳಾಗಿವೆ. **4**

**9:4** *"ಪುತ್ರರಾಗಿ ಸ್ವೀಕರಿಸಿಕೊಳ್ಳುವದು"*– ಅಚಿದರೆ ದೇವರು ಇಸ್ರಾಯೇಲ್ ಜನರನ್ನು ತನ್ನ ಜನರನ್ನಾಗಿ ಆರಿಸಿಕೊಂಡಿದ್ದಾನೆ (ಧರ್ಮೋ 7:6; 14:1-2). ಭೂಲೋಕದಲ್ಲಿರುವ ಎಲ್ಲಾ ಜನಾಂಗಗಳೊಳಗೆ ಇವರು ಮಾತ್ರವೇ ತಮ್ಮ ಆರಾಧನೆಯ ಸ್ಥಳದಲ್ಲಿ ದೇವರ ಪ್ರಭಾವವನ್ನು ನೋಡಿದವರಾಗಿದ್ದಾರೆ ಮತ್ತು ಭವಿಷ್ಯದಲ್ಲಿಯೂ ಆ ಪ್ರಭಾವದ ವಾಗ್ದಾನವನ್ನು ಹೊಂದಿದ್ದಾರೆ (ವಿಮೋ 40:34-35; 1 ಅರಸು 8:11; ಯೆಹೆಜ್ಕೇಲ 43:2-5; 44:4). ದೇವರು ಅವರೊಂದಿಗೆ ಮಾಡಿಕೊಂಡ ಒಡಂಬಡಿಕೆಗಳು ಅವರದೇ ಆಗಿವೆ (ಆದಿ 15:18; ವಿಮೋ 24:8; 2 ಸಮು 7:16; 23:5; ಯೆರೆ 31:31-33; 32:40). ದೇವರು ತನ್ನ ಧರ್ಮಶಾಸ್ತ್ರವನ್ನು ಅವರಿಗೆ ಮಾತ್ರವೇ ಕೊಟ್ಟನು (ವಿಮೋ 20:1-2; ಧರ್ಮೋ 4:8). ಚರಿತ್ರೆಯಾದ್ಯಂತ ಇರುವ ಜನರಲ್ಲಿ ಇವರಿಗೆ ಮಾತ್ರವೇ ದೇವರು ಯಾವ ರೀತಿ ಆರಾಧನೆ ಮಾಡಬೇಕೆಂದು ತಿಳಿಸಿದನು (ವಿಮೋಚನಕಾಂಡ 25-40 ಅಧ್ಯಾಯಗಳು; 1 ಅರಸು 6ನೇ ಅಧ್ಯಾಯ). ಹಳೆಯ ಒಡಂಬಡಿಕೆಯಾದ್ಯಂತ ಅವರಿಗೆ ಕೊಡಲ್ಪಟ್ಟಿರುವ ಅನೇಕ ವಾಗ್ದಾನಗಳನ್ನು ನಾವು ಅಲ್ಲಲ್ಲಿ ನೋಡಬಹುದು – ಅವುಗಳು ಭವಿಷ್ಯದಲ್ಲಿ ದೊರೆಯುವ ದೊಡ್ಡ ಆಶೀರ್ವಾದಗಳನ್ನು ಸೂಚಿಸುತ್ತವೆ. ಜನರ ಸ್ಥಾಪಕರು ಹಾಗೂ ನಾಯಕರಾಗಿ ದೇವರು ತಾನಾಗಿಯೇ ಆಯ್ಕೆ ಮಾಡಿಕೊಂಡ ಅಬ್ರಹಾಮ, ಇಸಾಕ ಮತ್ತು ಯಾಕೋಬನು ಅವರ ಮೂಲಪಿತೃಗಳೇ ಆಗಿದ್ದಾರೆ (11:28; ಆದಿ 12:1-3; ವಿಮೋ 3:6). ಯೇಸು ಕ್ರಿಸ್ತನು ಸಹ ಅಬ್ರಹಾಮ ಮತ್ತು ದಾವೀದನ ವಂಶದಲ್ಲಿ ಇಸ್ರಾಯೇಲನಾಗಿ ಜನಿಸಿದನು. **5**

**9:5** *"ಯೇಸು ಕ್ರಿಸ್ತನು ಎಲ್ಲಾದರೆ ಮೇಲೆ ಒಡೆಯನೂ ನಿರಂತರ ಸ್ತುತಿ ಹೊಂದತಕ್ಕವನು"*– ಯೇಸು ಕ್ರಿಸ್ತನೇ ದೇವರು ಎಂಬ ಸರಳವಾದ ಪ್ರಕಟನೆಯನ್ನು ನಾವು ಇಲ್ಲಿ ನೋಡಬಹುದಾಗಿದೆ. ಇಲ್ಲಿರುವ ಗ್ರೀಕ್ ಪದಗಳ ವಿವಿಧ ಭಾಷಂತರಗಳನ್ನು ಕೆಲವು ಆವೃತ್ತಿಗಳಲ್ಲಿ ನೋಡಬಹುದಾಗಿದೆ, ಆದರೆ ಮೇಲೆ ಕೊಡಲಾಗಿರುವ ಭಾಷಾಂತರವು ಗ್ರೀಕ್ ಭಾಷೆಗನುಸಾರವಾದದ್ದಾಗಿದೆ, ಹಾಗೂ ಸತ್ಯವೇದದ ಇತರೆ ಭಾಗಗಳೂ ಯೇಸು ಕ್ರಿಸ್ತನೇ ದೇವರೆಂದು ಹೇಳುತ್ತವೆ. ಫಿಲಿಪ್ಪಿ 2:6 ಮತ್ತು ಲೂಕ 2:11 ವಾಕ್ಯಗಳನ್ನು ನೋಡಿರಿ. **6**

**9:6** ಇಸ್ರಾಯೇಲ್ಯರು ಎಲ್ಲಾ ರೀತಿಯ ಸೌಕರ್ಯಗಳಿದ್ದ ಜನರಾಗಿದ್ದರೂ ಯೇಸು ಕ್ರಿಸ್ತನು ಮತ್ತು ಆತನ ಸುವಾರ್ತೆಯನ್ನು ಅಂಗೀಕರಿಸಿಕೊಳ್ಳಲು ವಿಫಲರಾದರು. ಮತ್ತು ದೇವರ ರಾಜ್ಯವನ್ನು ಅವರಿಂದ ತೆಗೆದು ಬೇರೆಯವರಿಗೆ ಕೊಡಲಾಯಿತು (ಯೋಹಾನ 1:11; ಮತ್ತಾಯ 21:42-43). ಇದರ ಅರ್ಥ ದೇವರ ವಾಕ್ಯ ವಿಫಲವಾಯಿತು ಮತ್ತು ಆತನ ವಾಗ್ದಾನಗಳು ಮುರಿಯಲ್ಪಟ್ಟವು ಎಂಬದಾಗಿದೆಯೇ? ಪೌಲನು ಹೇಳುವದೇನೆಂದರೆ, ಇಲ್ಲ.

ನಂತರ ಅವನು ಎರಡು ರೀತಿಯ ಯೆಹೂದ್ಯರ ನಡುವೆಯಿರುವ ವ್ಯತ್ಯಾಸಗಳನ್ನು ತೋರಿಸುತ್ತಿದ್ದಾನೆ - ಸ್ವಾಭಾವಿಕವಾಗಿ ಇಸ್ರಾಯೇಲ್ಯರ ಸಂತತಿಯವರು ಮತ್ತು ದೇವರು ಅವರೊಳಗಿಂದ ಆರಿಸಿ, ಕರೆದ ವ್ಯಕ್ತಿಗಳು. ಎರಡನೇ ರೀತಿಯವರು ನಿಜವಾದ ಇಸ್ರಾಯೇಲ್ಯರಾಗಿದ್ದಾರೆ. 2:28-29; ಮತ್ತಾಯ 3:9; ಯೋಹಾನ 8:39-41 ಸಹ ನೋಡಿರಿ. **7-9**

**9:7-9** ಆದಿ 21:12 ನೋಡಿರಿ. ಅಬ್ರಹಾಮನಿಗೆ ಬೇರೆ ಮಕ್ಕಳು ಇದ್ದರು (ಆದಿ 16:15; 25:1-2). ಆದರೆ ದೇವರು ಇಸಾಕನನ್ನು ಮಾತ್ರವೇ ಅಬ್ರಹಾಮನ ಬಾಧ್ಯಸ್ಥನನ್ನಾಗಿ ಮತ್ತು ಆತ್ಮೀಕ ಸಂತತಿಯಾಗಿ ಆರಿಸಿಕೊಂಡನು. ಅವನು ವಾಗ್ದಾನದ ಮಗನಾಗಿದ್ದನು - 4:18-21; ಆದಿ 15:4; 17:15-16; 18:10; 21:1-3. ಬೇರೆ ಮಾತುಗಳಲ್ಲಿ ಹೇಳುವದಾದರೆ, ದೇವರು ಅಬ್ರಹಾಮನೊಂದಿಗೆ ಮಾಡಿದ ಒಡಂಬಡಿಕೆ ಮತ್ತು ವಾಗ್ದಾನಗಳಲ್ಲಿ ಅವನ ಸ್ವಾಭಾವಿಕ ಸಂತತಿಯವರು ಇರಲಿಲ್ಲ ಬದಲಾಗಿ ದೇವರಾದುಕೊಂಡವನು ಮಾತ್ರವೇ ಇದ್ದನು. **10-13**

**9:10-13** ಇದೇ ಸತ್ಯ ಇಸಾಕನ ಸಂತತಿಯವರಿಗೂ ಅನ್ವಯಿಸುತ್ತದೆ. ದೇವರು ಇಸಾಕನ ಸಂತತಿಯಿಂದ ಯಾಕೋಬನನ್ನು ಮಾತ್ರವೇ ತನ್ನ ಜನರ ನಾಯಕನಾಗಿರಲು ಆರಿಸಿಕೊಂಡನು, ಇವನು ಅಬ್ರಹಾಮನ ಸಂತತಿಯಾಗಿದ್ದು ದೇವರ ವಾಗ್ದಾನಗಳನ್ನು ಬಾಧ್ಯವಾಗಿ ಪಡೆಯುವವನಾಗಿದ್ದಾನೆ. ದೇವರು ಯಾಕೋಬನನ್ನು ಆರಿಸಿಕೊಂಡು ಏಸಾವನನ್ನು ತಿರಸ್ಕರಿಸಿದ್ದಕ್ಕೆ ಕಾರಣ ಅವರು ನಂತರದಲ್ಲಿ ಮಾಡುವ ಕಾರ್ಯಗಳಿಗೆ ಸಂಬಂಧವಿರಲಿಲ್ಲ. ತನ್ನ ಜ್ಞಾನ ಮತ್ತು ಕೃಪೆಗಾಗಿ ದೇವರು ಒಬ್ಬನನ್ನು ಆರಿಸಿಕೊಂಡನೇ ಹೊರತು ಇಬ್ಬರನ್ನಲ್ಲ, ಮತ್ತು ದೇವರಿಂದ ಆರಿಸಲ್ಪಟ್ಟವನಲ್ಲಿ ಆತನ ವಾಕ್ಯಗಳು ನೆರವೇರಿದವು. "ದೊಡ್ಡವನು ನರಕಕ್ಕೆ ಹೋಗುವನು, ಚಿಕ್ಕವನು ಪರಲೋಕಕ್ಕೆ ಹೋಗುವನು" ಎಂಬದಾಗಿ ದೇವರು ಹೇಳಲಿಲ್ಲ ಬದಲಾಗಿ "ಹಿರಿಯವನು ಕಿರಿಯವನ ಸೇವೆ ಮಾಡುವನು" ಎಂಬದಾಗಿ ಮಾತ್ರವೇ ಹೇಳಿದ್ದನ್ನು ಗಮನಿಸಿರಿ. 9-11 ಅಧ್ಯಾಯಗಳಲ್ಲಿರುವ ವಿಷಯ ವ್ಯಕ್ತಿಗತ ರಕ್ಷಣೆಯಲ್ಲ, ಬದಲಾಗಿ ದೇವರು ಜನರು ಹಾಗೂ ಜನಾಂಗಗಳೊಂದಿಗೆ ಹೇಗೆ ನಡೆದುಕೊಳ್ಳುತ್ತಾನೆ ಎಂಬದಾಗಿದೆ. **12**

- **9:12** ಆದಿ 25:23. **13**

**9:13** ಮಲಾಕಿ 1:2-3. ದೇವರು ದ್ವೇಷಿಸಿದವರ ಬಗ್ಗೆ ತಿಳಿಯಲು ಕೀರ್ತನೆ 5:5 ನೋಟ್ಸ್; ಮಲಾಕಿ 1:3; ಲೂಕ 14:26 ನೋಡಿರಿ. ದೇವರು ಯಾಕೋಬನ ಮೇಲೆ ವಿಶೇಷವಾದ ಪ್ರೀತಿಯುಳ್ಳವನಾಗಿದ್ದನು ಅದನ್ನು ಚರಿತ್ರೆಯಲ್ಲಿ ನಾವು ನೋಡಬಹುದು. ಏಸಾವನ ಚರಿತ್ರೆಯನ್ನು ನೋಡುವದಾದರೆ ದೇವರು ಅವನ ಸಂತತಿಯ ಮೇಲೆ ಅದೇ ರೀತಿಯ ಪ್ರೀತಿ ತೋರಲಿಲ್ಲವೆಂದು ತಿಳಿಯಬಹುದು. 12ನೇ ವಚನವು ಚರಿತ್ರೆಯಲ್ಲಿ ನೆರವೇರುವದನ್ನು ತೋರಿಸಲು ಪೌಲನು ಮಲಾಕಿಯ ವಚನ ಉಪಯೋಗಿಸಿದ್ದಾನೆ. **14-24**

**9:14-24** ಈ ಕಾಲದಲ್ಲಿ ಇಸ್ರಾಯೇಲ್ ಜನಾಂಗವನ್ನು ತಿರಸ್ಕರಿಸಿರುವದು ನ್ಯಾಯವಾಗಿದೆ. ದೇವರ ನ್ಯಾಯದ ವಿಷಯದಲ್ಲಿ ಪ್ರಶ್ನೆಯು ಎದುರಾಗುವ ಸಾಧ್ಯತೆಯಿದೆ (ವ 14). ಇದಕ್ಕೆ ಉತ್ತರವೇನೆಂದರೆ ದೇವರು ಖಂಡಿತವಾಗಿಯೂ ಸಾರ್ವಭೌಮನಾಗಿದ್ದಾನೆ ಮತ್ತು ತನಗನ್ನಿಸುವ ಪ್ರಕಾರ ಮಾನವರೊಂದಿಗೆ ನಡೆದುಕೊಳ್ಳುತ್ತಾನೆ. ಎಲ್ಲರೂ ಪಾಪಿಗಳಾಗಿದ್ದಾರೆ (3:9,23) ಮತ್ತು ದೇವರು ನ್ಯಾಯವಾಗಿಯೇ ಎಲ್ಲರನ್ನೂ ತಿರಸ್ಕರಿಸ ಬಹುದಾಗಿತ್ತು. ಆದರೆ ಹಾಗೆ ಮಾಡದೆ ಆತನು ಕೆಲವರನ್ನು ತನ್ನವರನ್ನಾಗಿ ಆರಿಸಿಕೊಂಡಿದ್ದಾನೆ. ಇದು ಸಂಪೂರ್ಣವಾಗಿ ನ್ಯಾಯವಾದ ಕಾರ್ಯವಾಗಿದೆ. ದೇವರಿಗೆ ವಿರುದ್ಧ ಮಾತನಾಡಲು ಮತ್ತು ಆತನ ಮೇಲೆ ಆರೋಪ ಹೊರಸಲು ಯಾರಿಗೂ ಅಧಿಕಾರವಿಲ್ಲ (ವ 20,21). ದೇವರು ದೇವರಾಗಿದ್ದಾನೆ. ಆತನೇ ಇಡೀ ಭೂಮಂಡಲಕ್ಕೆ ದೊಡ್ಡ ಅರಸನಾಗಿದ್ದಾನೆ (ಕೀರ್ತನೆ 47:1-3; ಯೆಶಾಯ 40:22-23; ದಾನಿ 4:34-35; ಮಲಾಕಿ 1:14), ಮತ್ತು ತನ್ನ ಚಿತ್ತದ ಮೇರೆಗೆ ನಡೆದುಕೊಳ್ಳುವವನಾಗಿದ್ದಾನೆ ಹಾಗೂ ನಡೆದುಕೊಳ್ಳುತ್ತಾನೆ. ದೇವರು ಎಲ್ಲರನ್ನು ಆರಿಸಿಕೊಳ್ಳದೆ ಕೆಲವರನ್ನು ಮಾತ್ರವೇ ಆರಿಸಿಕೊಂಡಿರುವದು, ಪುನರ್ಜನ್ಮ, ಹಿಂದಿನ ಜನ್ಮದಂಥ ಕರ್ಮದ ಸಿದ್ಧಾಂತಗಳಿಗೆ ಸಂಬಂಧಪಟ್ಟಿಲ್ಲ. (ಇವುಗಳು ವಾಸ್ತವವಲ್ಲ. ಯೋಬ 11:12; ಯೋಹಾನ 9:3 ನೋಟ್ಸ್ ನೋಡಿರಿ). ಹಾಗೆಯೇ ಕ್ರೂರ ಅಥವಾ ಸರ್ವಾಧಿಕಾರಿಯ ಅನಿಯಂತ್ರಿತ ಚಿತ್ತಕ್ಕೆ ಸಂಬಂಧಿಸಿದ್ದೂ ಅಲ್ಲ. ದೇವರು ಸರ್ವಾಧಿಕಾರಿಯಾಗಿದ್ದಾನೆ ಮತ್ತು ಎಲ್ಲಾ ವಿಷಯಗಳಲ್ಲಿಯೂ ತನ್ನ ಚಿತ್ತದಂತೆ ಕಾರ್ಯಗಳನ್ನು ಮಾಡುತ್ತಾನೆ. ಹಾಗೆಯೇ ಆತನು ಪ್ರೀತಿಸ್ವರೂಪನಾಗಿದ್ದಾನೆ ಎಂಬದನ್ನೂ ನಾವು ಅರ್ಥಮಾಡಿಕೊಳ್ಳಬೇಕು (1 ಯೋಹಾನ 4:9). ಮತ್ತು ಆತನು ಯಾವಾಗಲೂ ತನ್ನ ಸ್ವಭಾವದನುಸಾರವಾಗಿಯೇ ಕಾರ್ಯ ಮಾಡುತ್ತಾನೆ. ತಕ್ಕ ಸಮಯದಲ್ಲಿ ಆತನು ತನ್ನ ಕರುಣೆಯನ್ನು ತೋರಿಸುವದರಲ್ಲಿ ಸಂತೋಷಿಸುತ್ತಾನೆ (10:12; 11:32; ವಿಮೋ 34:6-7; ಮೀಕ 7:18). ಆದರೆ ಅನರು ಪಶ್ಚಾತ್ತಾಪಪಡದೆ ತಮ್ಮ ಪಾಪಗಳಲ್ಲಿ ಮುಂದುವರೆಯುವಾಗ ಆತನು ತನ್ನ ಕರುಣೆಯನ್ನು ತೋರಿಸುವದಿಲ್ಲ ಯಾಕಂದರೆ ಆತನ ನ್ಯಾಯವು ಅಂಥ ಜನರು ಶಿಕ್ಷಿಸಲ್ಪಡಬೇಕೆಂದು ಬಯಸುತ್ತದೆಯಾದರೂ ಪ್ರೀತಿಯುಳ್ಳ ಆತನ ಹೃದಯ ದುಃಖಿಸುತ್ತದೆ (ಯೆರೆ 48:30-39; ಲೂಕ 19:41 ನೋಟ್ಸ್ ನೋಡಿರಿ). ರೋಮಾ ಪತ್ರಿಕೆಯಲ್ಲಿರುವ ಈ ವಾಕ್ಯಗಳು ಏಕಾಂಗಿಯಲ್ಲ ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು ಮತ್ತು ಇವುಗಳನ್ನು ಇಡೀ ಸತ್ಯವೇದದ ಬೆಳಕಿನಲ್ಲಿ ವ್ಯಾಖ್ಯಾನಿಸಬೇಕು. ದೇವರ ಸಾರ್ವಭೌಮತ್ವ, ಮುಂದಾಗಿ ತಿಳಿದುಕೊಳ್ಳುವಿಕೆ ಮತ್ತು ಸಂಕಲ್ಪದ ರಹಸ್ಯಗಳು ಏನೇಆಗಿದ್ದರೂ, ಒಂದು ವಿಷಯ ನಮಗೆ ಗೊತ್ತಿರಬೇಕು ಏನೆಂದರೆ – ತನ್ನ ವಾಕ್ಯಗಳಲ್ಲಿ ಆತನು ತನ್ನ ಕುರಿತು ಕೊಟ್ಟಿರುವ ಪ್ರಕಟನೆಗಳಿಗೆ ವಿರುದ್ಧ ಅವುಗಳನ್ನು ಏನೂ ಮಾಡಲು ಬಿಡುವದಿಲ್ಲ. ದೇವರು ತಪ್ಪು ಮಾಡುವ ಸಾಧ್ಯತೆಯೇ ಇಲ್ಲ. ಆತನು ಎಲ್ಲವುಗಳನ್ನು ಪರಿಪೂರ್ಣವಾದ ನ್ಯಾಯ ಮತ್ತು

ಪರಿಪೂರ್ಣವಾದ ಪ್ರೀತಿಯ ಆಧಾರದ ಮೇರೆಗೆ ಮಾಡುತ್ತಾನೆ. ಆ ಬಲವಾದ ಬಂಡೆಯ ಮೇಲೆ ನಮ್ಮ ಹೃದಯಗಳು ವಿಶ್ರಮಿಸಿಕೊಳ್ಳಬಹುದಾಗಿದೆ. **14**

**- 9:14** ಆದಿ 18:25. **15**

**- 9:15** ವಿಮೋ 33:19. **16**

**9:16** ದೇವರಿಗೆ ಮಾತ್ರವೇ ತಾನು ಯಾರಿಗೆ ಕರುಣೆ ತೋರಿಸಬೇಕು ಮತ್ತು ಯಾರನ್ನು ಶಿಕ್ಷಿಸಬೇಕು ಎಂಬದು ಗೊತ್ತಿದೆ. ಆತನ ಕರುಣೆ ಉಚಿತವಾಗಿದೆ – ಅದನ್ನು ಇಂಥವರಿಗೆ ತೋರಿಸಲೇಬೇಕೆಂಬ ಕಡ್ಡಾಯವಿಲ್ಲ. ಮಾನವರು ಅದನ್ನು ತಮ್ಮ ಸ್ವಂತ ಪ್ರಯತ್ನಗಳಿಂದ ಪಡೆಯಲು ಆಗುವದಿಲ್ಲ ಅಥವಾ ತಾವು ಅದಕ್ಕೆ ಅರ್ಹರು ಎಂಬ ಕಾರಣಕ್ಕೆ ದೇವರ ಮೇಲೆ ಒತ್ತಡ ಹಾಕಲೂ ಆಗುವದಿಲ್ಲ. ದೇವರು ಕರುಣೆ ತೋರದ ಕಠಿಣ ಹೃದಯನು ಮತ್ತು ಮನಮರುಗದವನು ಎಂಬ ಆಲೋಚನೆ ನಮ್ಮಲ್ಲಿ ಬರಬಾರದು. ಒಬ್ಬನು ತನ್ನ ಪಾಪಗಳನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಳ್ಳುವದಾದರೆ ದೇವರು ನಿಶ್ಚಯವಾಗಿಯೂ ಅವನಿಗೆ ಕರುಣೆ ತೋರಿಸುವನು (11:32; ಯೆಶಾಯ 55:7). ದೇವರು ತನ್ನ ಕರುಣೆಯುಳ್ಳ, ಕನಿಕರವುಳ್ಳ, ಪ್ರೀತಿಪೂರ್ವಕವಾದ ಚಿತ್ತಕ್ಕೆ ವಿರುದ್ಧವಾಗಿರುವ ಕ್ರೂರವಾದ ಚಿತ್ತವುಳ್ಳವನಲ್ಲ. ಆತನು ತೋರಬೇಕಾದ ಸಮಯದಲ್ಲಿ ಕರುಣೆ ತೋರಿಸುತ್ತಾನೆ ಮತ್ತು ಶಿಕ್ಷಿಸಬೇಕಾದ ಸಮಯದಲ್ಲಿ ಶಿಕ್ಷಿಸುತ್ತಾನೆ (10:20-21; ಆದಿ 6:7; ಯೆರೆ 48:30-39; ಯೆಹೆಜ್ಕೇಲ 18:30-32; ಲೂಕ 19:41-44ರಲ್ಲಿ ಅಂಥ ನೋಟ್ಸ್‌ಗಳನ್ನು ನೋಡಿರಿ. ದೇವರ ಸಾರ್ವಭೌಮತ್ವವು ಆತನ ಪ್ರೀತಿಗೆ ವಿರುದ್ಧವಾಗಿ ಎಂದಿಗೂ ಕಾರ್ಯಮಾಡುವದಿಲ್ಲ ಅಥವಾ ಯಾರ ವಿರುದ್ಧವೂ ಅನ್ಯಾಯವಾದ ಕಾರ್ಯವನ್ನು ಮಾಡುವದಿಲ್ಲ ಎಂಬ ದೃಢತೆ ನಮಗಿರಬೇಕು. **17**

**9:17** ವಿಮೋ 9:16; 7:17. ದೇವರು ದುಷ್ಟರೊಂದಿಗೆ ನಡೆದುಕೊಳ್ಳುವ ರೀತಿ ಆತನ ಪ್ರಭಾವವನ್ನು ಪ್ರಚುರಪಡಿಸುತ್ತದೆ ಮತ್ತು ಭೂಲೋಕದಲ್ಲಿ ಆತನ ತಿಳುವಳಿಕೆಯನ್ನು ಹೆಚ್ಚಿಸುತ್ತದೆ. ಇದು ಲೋಕಕ್ಕೆ ದೊಡ್ಡ ಲಾಭ ಮತ್ತು ಅಪಾರವಾದ ಕರುಣೆಯಾಗಿದೆ. **18**

**9:18** ವಿಮೋ 4:21 ರಲ್ಲಿ ಫರೋಹನು ತನ್ನನ್ನು ಕಠಿಣಪಡಿಸಿಕೊಂಡದ್ದರ ನೋಟ್ ನೋಡಿರಿ. ಫರೋಹನು ದೇವರು ತನ್ನ ಕರುಣೆಯಿಂದಾಗಿ, ಐಗುಪ್ತ ದೇಶದ ಮೇಲೆ ಬರಮಾಡಿರುವ ಉಪದ್ರುವಗಳನ್ನು ನಿಲ್ಲಿಸಬೇಕೆಂದು ಬಯಸಿದನು ಆದರೆ ತಾನು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳಲು ಬಯಸಲಿಲ್ಲ. ದೇವರು ಅವನನ್ನು ಹೆಚ್ಚಿನ ಪಾಪ ಹಾಗೂ ಹೃದಯ ಕಾಠಿಣ್ಯತೆಗೆ ಒಪ್ಪಿಸುವ ಮೂಲಕ ಅವನ ಪಾಪವನ್ನು ಶಿಕ್ಷಿಸಿದನು. 1:21-26,28 ವಚನಗಳನ್ನು ಹೋಲಿಸಿ ನೋಡಿರಿ. ಅಂಥ ಶಿಕ್ಷೆಗೆ ಪಾತ್ರನಾಗಿರುವವರ ಹೃದಯವನ್ನು ದೇವರು ಕಠಿಣಪಡಿಸುವದಿಲ್ಲ ಎಂಬದಾಗಿ ನಾವು ದೃಢತೆಯಿಂದಿರಬಹುದು. ಮತ್ತು ದೇವರು ಎಲ್ಲಾ ಪರಿಸ್ಥಿತಿಗಳಲ್ಲಿ ಯಾವುದು ಉತ್ತಮವೆಂದು ಯೋಚಿಸುತ್ತಾನೆಯೋ ಅದಕ್ಕನುಸಾರವಾಗಿ ಕಾರ್ಯಮಾಡಲು ಸ್ವತಂತ್ರನಾಗಿದ್ದಾನೆ. **19-21**

**9:19-21** ಮಾನವರು ತಮ್ಮ ಪಾಪಮಯ ಸ್ಥಿತಿ ಹಾಗೂ ಹೃದಯದ ಕಾಠಿಣ್ಯತೆಗೆ ತಾವೇ ಕಾರಣರೆಂದು ತಿಳಿದಿದ್ದರೂ ದೇವರ ಮೇಲೆ ಆರೋಪ ಹೊರಿಸಲು ಪ್ರಯತ್ನಿಸುತ್ತಾರೆ ಎಂಬದು ಪೌಲನಿಗೆ ಚೆನ್ನಾಗಿ ಗೊತ್ತಿತ್ತು. ಆದಿ 3:12-13 ಹೋಲಿಸಿ ನೋಡಿರಿ. ಸೃಷ್ಟಿಸಲ್ಪಟ್ಟ ಜೀವಿಯಾಗಿರುವ ಮಾನವನಿಗೆ ಸೃಷ್ಟಿಕರ್ತನಾಗಿರುವ ದೇವರ ವಿರುದ್ಧ ಮಾತನಾಡುವ ಯಾವುದೇ ಹಕ್ಕು ಇಲ್ಲ ಎಂಬದನ್ನೂ ಪೌಲನು ಬಲ್ಲವನಾಗಿದ್ದನು. ಮಾನವರಲ್ಲಿಯೂ ಕುಂಬಾರನು ತಾನು ಬಯಸುವ ರೀತಿಯಲ್ಲಿಯೇ ಮಡಿಕೆಗಳನ್ನು ಮಾಡುತಾನೆ ಮತ್ತು ಮಡಿಕೆಗಳು ನಮ್ಮನ್ನು ಯಾಕೆ ಹೀಗೆ ಮಾಡುತ್ತಿರುವೆ ಎಂದು ಕೇಳುವದಿಲ್ಲ. ಯೆಶಾಯ 29:16; 45:9; 64:8; ಯೆರೆ 18:4-6 ವಾಕ್ಯದೊಂದಿಗೆ ಹೋಲಿಸಿ ನೋಡಿರಿ. ಆದಿಕಾಂಡ ಪುಸ್ತಕದಲ್ಲಿರುವ ಸೃಷ್ಟಿಯ ಕಾರ್ಯದಿಂದ ದೇವರು ದೈವೀಕ ಕುಂಬಾರನಾಗಿದ್ದು ಯಾವ ಕೆಟ್ಟ ಪಾತ್ರೆಯನ್ನೂ ಮಾಡಲಿಲ್ಲ ಎಂದು ನಾವು ಬಲ್ಲವರಾಗಿದ್ದೇವೆ (ಆದಿ 1:31). ಒಳ್ಳೆಯ, ಬುದ್ಧಿಯುಳ್ಳ ಮತ್ತು ಪ್ರೀತಿಯುಳ್ಳ ಕುಂಬಾರನು ಬೇಡವಾದ ಹಾಗೂ ಭ್ರಷ್ಟವಾದ ಪಾತ್ರೆಗಳನ್ನು ಎಂದಿಗೂ ಮಾಡುವದಿಲ್ಲ ಮತ್ತು ದೇವರು ಒಳ್ಳೆಯ, ಬುದ್ಧಿಯುಳ್ಳ ಮತ್ತು ಪ್ರೀತಿಯುಳ್ಳ ಕುಂಬಾರನಾಗಿದ್ದಾನೆ. ಒಂದುವೇಳೆ ಯಾವ ಮಡಿಕೆಯಾದರೂ ಕೆಟ್ಟದ್ದಾಗಿದ್ದರೆ ಅದರ ಮೂಲವೇನೆಂದು ಹುಡುಕುವಾಗ ದೇವರಲ್ಲ ಬದಲಾಗಿ ಮಾನವನು ಹಾಗೂ ಸೈತಾನನೆಂದು ನಾವು ತಿಳಿಯಬಹುದಾಗಿದೆ. ಮಾನವನ ಸ್ಥಾನವು ದೇವರ ಎದುರಿನಲ್ಲಿ ಧೂಳಿನಲ್ಲಿದೆ, ಅವನು ಆತನ ಎದುರಿನಲ್ಲಿ ತನ್ನ ಅಪರಾಧ ಹಾಗೂ ಅಸಮರ್ಥತೆಯನ್ನು ಅರಿಕೆ ಮಾಡಿಕೊಳ್ಳಬೇಕು ಮತ್ತು ದೇವರು ದೇವರಾಗಿದ್ದಾನೆ ಹಾಗೂ ನಾವೇನಾಗಬೇಕೋ ಅದನ್ನು ಮಾಡಲು ಆತನಿಂದ ಮಾತ್ರವೇ ಸಾಧ್ಯ. ದೇವರಿಗೆ ವಿರುದ್ಧವಾಗಿ ಮಾತನಾಡುವದು ಅಥವಾ ನಮ್ಮ ಸ್ಥಿತಿಗೆ ಆತನ ಮೇಲೆ ಆರೋಪ ಮಾಡುವ ಬದಲು, ನಾವು ನಮ್ಮನ್ನು ಆತನ ಹಸ್ತಗಳಿಗೆ ನಂಬುತ್ತಾ ಮನಃಪೂರ್ವಕವಾಗಿ ಒಪ್ಪಿಸಬೇಕು. ನಂತರ ಆತನು ನಮ್ಮನ್ನು ಒಳ್ಳೆಯ ಹಾಗೂ ಮಹಿಮಾರ್ಥ ಉದ್ದೇಶಗಳಿಗೆ ಉತ್ತಮ ಪಾತ್ರೆಗಳನ್ನಾಗಿ ಮಾಡುತ್ತಾನೆ. **21**

**9:21** “*ಒಂದೇ ಮುದ್ದೆ*”– ಮಾನವರೆಲ್ಲರೂ ಒಂದೇ ರೀತಿ ಅವಿಧೇಯವಾದ, ಪಾಪ ಸ್ವಭಾವವುಳ್ಳವರಾಗಿದ್ದಾರೆ (3:9,23; ಎಫೆ 2:3). ಅವರು ತಮ್ಮನ್ನು ಕೆಟ್ಟ ಮುದ್ದೆಯನ್ನಾಗಿ ಮಾಡಿಕೊಂಡಿದ್ದಾರೆ ಮತ್ತು ಯಾವುದೇ ರೀತಿಯ ಉತ್ತಮ ಕಾರ್ಯಗಳಿಗೆ ಮಾಡುವಂಥ ಅರ್ಹತೆ ಅವುಗಳಿಗಿಲ್ಲ. ಮಾನವರಲ್ಲಿ ಒಳ್ಳೆಯ ಮತ್ತು ಉತ್ತಮವಾದ ಮುದ್ದೆ ಮತ್ತು ತಳವಿಲ್ಲದ ಭ್ರಷ್ಟವಾದ ಮುದ್ದೆ ಎಂಬದಾಗಿ ಏನೂ ಇರುವದಿಲ್ಲ. ನಾವೆಲ್ಲರೂ “ಒಂದೇ ಮುದ್ದೆಯಾಗಿದ್ದೇವೆ” –ಯಾಕಂದರೆ ಆದಾಮನ ಸಂತತಿಯವರಾದ ನಾವೆಲ್ಲರೂ, ಪಾಪ ಸ್ವಭಾವವುಳ್ಳವರಾಗಿದ್ದೇವೆ (3:19; 5:12; 7:18). **22-24**

**9:22-24** ದೇವರು ಮಾನವರೊಂದಿಗಿನ ತನ್ನ ಎಲ್ಲಾ ಕಾರ್ಯಗಳಲ್ಲಿ ಒಳ್ಳೆಯ

ಉದ್ದೇಶಗಳುಳ್ಳವನಾಗಿದ್ದಾನೆ. ದೇವರು ಪಾಪದ ವಿಷಯದಲ್ಲಿ ಮಹಾ ಕೋಪವುಳ್ಳವನಾಗಿದ್ದಾನೆ ಮತ್ತು ಆತನು ಎಲ್ಲಾ ಕಾರ್ಯಗಳನ್ನು ಮಾಡಲು ಶಕ್ತನಾದ ದೇವರಾಗಿದ್ದಾನೆ ಎಂಬದನ್ನು ಜನರು ಅರ್ಥಮಾಡಿಕೊಳ್ಳುವದು ಇಡೀ ಲೋಕಕ್ಕೆ ಪ್ರಯೋಜನವುಳ್ಳ ಕಾರ್ಯವಾಗಿದೆ. ಆತನು ಫರೋಹನು ಮತ್ತು ಐಗುಪ್ತ್ಯರು (ವ 17) ಹಾಗೂ ಮಾನವರ ವಿರುದ್ಧ ಚರಿತ್ರೆಯಲ್ಲಿ ಅನೇಕರಿಗೆ ವಿರುದ್ಧವಾಗಿ ಆತನು ತನ್ನ ಕೋಪ ಮತ್ತು ಅಧಿಕಾರ ತೋರಿಸಲು ಆಯ್ಕೆ ಮಾಡಿಕೊಂಡನು. ಇಲ್ಲಿ ಪೌಲನು ಎರಡು ಗುಂಪುಗಳ ನಡುವೆಯ ವ್ಯತ್ಯಾಸವನ್ನು ತೋರಿದ್ದಾನೆ "ಆತನ ಕೋಪಕ್ಕೆ ಗುರಿಯಾದ ನಾಶನಪಾತ್ರರು", ಮತ್ತು "ಪ್ರಭಾವ ಹೊಂದುವದಕ್ಕೆ ಸಿದ್ಧವಾದ ಕರುಣಾಪಾತ್ರರು". ಬೇರೆ ಮಾತುಗಳಲ್ಲಿ ಹೇಳುವದಾದರೆ, ದೇವರು ರಕ್ಷಣೆಗೆ ಆರಿಸಿಕೊಂಡಿರುವ ಮತ್ತು ಆರಿಸಿಕೊಳ್ಳದಿರುವ ವಿಶ್ವಾಸಿಗಳು ಮತ್ತು ಅವಿಶ್ವಾಸಿಗಳು. ವಿಶ್ವಾಸಿಗಳ ವಿಷಯವಾಗಿ ಪೌಲನು ಹೇಳುವದೇನೆಂದರೆ ದೇವರು ಅವರನ್ನು ಮಹಿಮೆಗಾಗಿ ಸಿದ್ಧಮಾಡಿದ್ದಾನೆ (8:17-18ರೊಂದಿಗೆ ಹೋಲಿಸಿ ನೋಡಿರಿ). ಅವಿಶ್ವಾಸಿಗಳ ವಿಷಯದಲ್ಲಿ ಅವನು ಹೇಳುವದೇನೆಂದರೆ ಅವರು ನಾಶನಕ್ಕೆ ಸಿದ್ಧವಾಗಿದ್ದಾರೆ, ಆದರೆ ಅವರನ್ನು ಸಿದ್ಧಮಾಡಿರುವದು ಯಾರು ಎಂಬದನ್ನು ಅವನು ಹೇಳಿಲ್ಲ. ದೇವರು ಮಾಡಿದ್ದಾನೆಂದು ಆತನು ಹೇಳುವದಿಲ್ಲವಾದ್ದರಿಂದ, ಬೇರೆ ಯಾರೋ ಸಿದ್ಧಮಾಡಿದ್ದಾರೆ ಅಥವಾ ಅವರು ತಾವಾಗಿಯೇ ತಮ್ಮನ್ನು ಶಿಕ್ಷೆಗೆ ಸಿದ್ಧಮಾಡಿಕೊಂಡಿದ್ದಾರೆ ಎಂದು ಯೋಚಿಸಬಹುದಾಗಿದೆ. 1:18-32; 2:4-11; ಜ್ಞಾನೋ 1:24-33; ಯೆಹೆಜ್ಕೇಲ 18:30-32; ಮತ್ತಾಯ 23:37; 1 ತಿಮೊ 2:3-4 ವಚನಗಳ ಆಧಾರದ ಮೇರೆಗೆ ಜನರು ತಮ್ಮನ್ನು ತಾವೇ ನಾಶನಕ್ಕೆ ಗುರಿಮಾಡಿಕೊಳ್ಳುತ್ತಾರೆ ಎಂದು ನಾವು ನಂಬಬಹುದಾಗಿದೆ. ಹಾಗೆಯೇ ಮತ್ತಾಯ 13:38-39 ನೋಡಿರಿ. 1:18; ಸಂಖ್ಯಾ 25:3; ಧರ್ಮೋ 4:24; ಕೀರ್ತನೆ 90:7-11; ಯೋಹಾನ 3:36ರಲ್ಲಿ ದೇವರ ಕೋಪದ ಕುರಿತು ನೋಟ್ಸ್ ನೋಡಿರಿ. **24**

**9:24** *"ಅನ್ಯರು"*– 1:5,16. ಮೇಲಿನ ವಚನಗಳಲ್ಲಿ ಪೌಲನ ಮಾತಿನ ಅರ್ಥವೇನೆಂದರೆ ದೇವರಿಗೆ ಇಸ್ರಾಯೇಲ್ಯರಿಂದ ಕೆಲವರನ್ನು ಮಾತ್ರವೇ ಆರಿಸಿಕೊಳ್ಳುವ ಮತ್ತು ಉಳಿದವರನ್ನು ನಿರಾಕರಿಸುವ ಹಾಗೂ ಅನ್ಯರಿಗೆ ಕರುಣೆಯನ್ನು ತೋರುವ ಸೂಕ್ತವಾದ ಹಕ್ಕಿದೆ. 25-29 ವಚನಗಳಲ್ಲಿ, ಇವೆಲ್ಲವೂ ಹಳೆಯ ಒಡಂಬಡಿಕೆಗನುಸಾರವಾಗಿವೆ ಎಂಬದನ್ನು ಆತನು ತೋರಿಸಿದ್ದಾನೆ. ದೇವರ ವಾಕ್ಯವು ಎಲ್ಲಿಯೂ ಬಿದ್ದುಹೋಗಿಲ್ಲ (ವ 6). **25**

**9:25** ಹೋಶೇಯ 2:23. "ನನ್ನ ಜನವಲ್ಲದ್ದು" ಎಂದರೆ ದೇವಜನರಾಗಿರುವ ಇಸ್ರಾಯೇಲ್ಯರಲ್ಲದವರು. **26**

- **9:26** ಹೋಶೇಯ 1:10. **27-28**
- **9:27-28** ಯೆಶಾಯ 10:22-23. **29**

**9:29** ಯೆಶಾಯ 1:9. ಜನಾಂಗವು ಅತ್ಯಂತ ಭ್ರಷ್ಟವಾಗಿತ್ತು ಒಂದುವೇಳೆ ದೇವರು

ಅವರೊಳಗಿಂದ ಕೆಲವರನ್ನು ಆರಿಸಿಕೊಳ್ಳದೆ ಹೋಗಿದ್ದರೆ ಇಡೀ ಜನಾಂಗವು ಘೋರವಾಗಿ ನಾಶವಾಗುತ್ತಿತ್ತು (ಆದಿ 19:23-25).

"*ಸೇನಾಧೀಶ್ವರನಾದ ಕರ್ತನು*"– ಎಂದರೆ "ಸಕಲಸೇನಾಧಿಪತಿಯಾಗಿರುವ ಕರ್ತನು". 1 ಸಮು 1:3ರಲ್ಲಿ ನೋಟ್ ನೋಡಿರಿ. **30-32**

**9:30-32** ಯೆಹೂದ್ಯರು ತಮ್ಮ ನೇಮನಿಷ್ಠೆಗಳನ್ನು ಆಧಾರಮಾಡಿಕೊಂಡರು. ಅವರಿಗೆ ಧರ್ಮಶಾಸ್ತ್ರ ಕೊಡಲಾಗಿತ್ತು ಮತ್ತು ಧರ್ಮಶಾಸ್ತ್ರ ಪಾಲನೆಯಿಂದ ಅವರು ದೇವರಿಗೆ ಮೆಚ್ಚಿಕೆಯುಳ್ಳವರಾಗಲು ಪ್ರಯತ್ನಿಸಿದರು. ಆದರೆ ನೇಮನಿಷ್ಠೆಗಳ ಮೂಲಕ ನೀತಿವಂತರಾಗಲು ಅವರು ಮಾಡಿದ ಪ್ರಯತ್ನ ಹೀನಾಯವಾಗಿ ವಿಫಲಗೊಂಡಿತು (3:9,19,20). ಅನ್ಯರ ಬಳಿ ಧರ್ಮಶಾಸ್ತ್ರವಿರಲಿಲ್ಲ ಮತ್ತು ಅವರು ನೀತಿವಂತಿಕೆಯ ಬಗ್ಗೆ ಹೆಚ್ಚಾಗಿ ಯೋಚಿಸುತ್ತಿರಲಿಲ್ಲ. ದೇವರು ಅವರನ್ನು ನಂಬಿಕೆಯ ಅಧಾರದ ಮೇರೆಗೆ ನೀತಿವಂತರೆಂದು ಎಣಿಸಿದನು (3:22,26,28; 5:1). ಆದರೆ ಯೆಹೂದ್ಯರು, ದೇವರು ಯೆರೂಸಲೇಮಿನಲ್ಲಿ ಇಟ್ಟ "ಸಜೀವ ಕಲ್ಲಾದ" ಯೇಸು ಕ್ರಿಸ್ತನನ್ನು ನಿರಾಕರಿಸಿದರು (ಯೋಹಾನ 1:11; ಮತ್ತಾಯ 21:42; ಅಪೊ 4:11; 1 ಪೇತ್ರ 2:6-8). ಯೆಹೂದ್ಯರು ಸೋಲಬೇಕೆಂದು ದೇವರು ಮೊದಲೇ ಸಂಕಲ್ಪ ಮಾಡಿದ್ದನು ಎಂಬದಾಗಿ ಪೌಲನು ಹೇಳದಿರುವದನ್ನು ಗಮನಿಸಿರಿ, ಅವರು ತಮ್ಮ ಸ್ವಂತ ಮಾರ್ಗಗಳ ಅನುಸರಿಸಿದ್ದರಿಂದ ವಿಫಲರಾದರು. **33**

**9:33** ಯೆಶಾಯ 8:14; 28:16. "ಚೀಯೋನ್" ಎಂದರೆ ಯೆರೂಸಲೇಮ್.

# 10 1

**10:1** 9:1-3 ನೋಡಿರಿ. **2-3**

**10:2-3** ಸಮಗ್ರವಾಗಿ ನೋಡುವದಾದರೆ, ಯೆಹೂದ್ಯರು ನಾಸ್ತಿಕರಾಗಲಿ ಅಥವಾ ಚಿಂತೆಯಿಲ್ಲದ ಪಾಪಿಗಳಾಗಲಿ ಆಗಿರಲಿಲ್ಲ (2:17-20). ಪೌಲನು ಅವರ ಆಸಕ್ತಿಯನ್ನು ಗಮನಿಸಿದನು ಮತ್ತು ಅವರ ವಿಷಯದಲ್ಲಿ ಕರುಣೆಯುಳ್ಳವನಾಗಿದ್ದನು. ಅವನು ಅತ್ಮೀಕ ತಿಳುವಳಿಕೆ ಮತ್ತು ಜ್ಞಾನದ ಮೇಲೆ ಆಧಾರವಾಗಿರದ ತನ್ನ ನೇಮನಿಷ್ಠೆಗಳ ಮೇಲಿನ ಆಸಕ್ತಿಯನ್ನು ಅವನು ನೆನಪಿಸಿಕೊಂಡಿರಬಹುದು ಯಾಕಂದರೆ ಅದು ಅವನನ್ನು ದಾರಿ ತಪ್ಪುವಂತೆ ಮಾಡಿತ್ತು (ಅಪೊ 8:1-3; 9:1-2; 22:3-4; 26:9-11; ಫಿಲಿಪ್ಪಿ 3:6). ಅವರು ನೇಮನಿಷ್ಠೆಗಳಲ್ಲಿ ಆಸಕ್ತರಾಗಿದ್ದರು ಆದರೆ ನಾಶನದ ಮಾರ್ಗದಲ್ಲಿ ಜೀವಿಸುತ್ತಿದ್ದರು. ದೇವರ ವಿಷಯದಲ್ಲಿ ಆಸಕ್ತರಾಗಿದ್ದಾರೆಂದರೆ ಅದರ ಅರ್ಥ ತಾವು ಯಾರ ವಿಷಯದಲ್ಲಿ ಆಸಕ್ತರಾಗಿದ್ದರೋ ಆ ದೇವರು ಅವರಿಗೆ ಗೊತ್ತು ಅಥವಾ ಅವರು ಆತನಿಗೆ ಮೆಚ್ಚಿಕೆಯುಳ್ಳವರಾಗಿದ್ದಾರೆ ಎಂಬದಾಗಿಯಲ್ಲ. ಯೆಹೂದ್ಯರು, ಎಲ್ಲಾ ಜನರ ಹಾಗೆ,

ದೇವರು ತನ್ನಲ್ಲಿ ನಂಬಿಕೆಯಿಡುವವರಿಗೆ ನೀತಿಯನ್ನು ಕೊಡುತ್ತಾನೆಂಬದನ್ನು ಅರ್ಥಮಾಡಿಕೊಳ್ಳಲಿಲ್ಲ (3:24; 4:4-5,13) ತಮ್ಮ ಕ್ರಿಯೆಗಳ ಮೂಲಕ ಅದನ್ನು ಸಂಪಾದಿಸಿಕೊಳ್ಳಬೇಕೆಂದು ಯೋಚಿಸಿದರು. ದೇವರು ಅವರ ಧರ್ಮಶಾಸ್ತ್ರದಲ್ಲಿ ಪ್ರಕಟಪಡಿಸಿದ್ದ ಸತ್ಯವನ್ನು ಅವರು ಕಲಿತುಕೊಳಲಿಲ್ಲ. ಆದ್ದರಿಂದ ಅವರು ದೇವರ ನೀತಿಯ ಮಾರ್ಗಕ್ಕೆ ಅಂದರೆ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡಲು ತಮ್ಮನ್ನು ಒಪ್ಪಿಸಿಕೊಡಲಿಲ್ಲ. ಮಾನವರೆಲ್ಲರೂ ಸ್ವಾಭಾವಿಕವಾಗಿ ಮಾಡುವ ಕಾರ್ಯಗಳನ್ನು ಅವರು ಮಾಡಿದರು – ಅವರು ತಮ್ಮ ನೀತಿಯನ್ನು ತಾನೇ ಸ್ಥಾಪಿಸಲು, ತಮ್ಮನ್ನು ನೀತಿವಂತರೆಂದು ನಿರ್ಣಯಿಸಿಕೊಳ್ಳಲು, ತಮ್ಮ ಸ್ವಂತ ಕ್ರಿಯೆಗಳಿಂದ ರಕ್ಷಣೆ ಸಂಪಾದಿಸಿಕೊಳ್ಳಲು ಪ್ರಯತ್ನಿಸಿದರು. **4**

**10:4** *"ಧರ್ಮಶಾಸ್ತ್ರ"*– 3:20,31; 4:15; 5:20; 6:14; 7:4,7,12,14; 8:3-4; ಗಲಾ 3:19,23-25. ಯೇಸು ಕ್ರಿಸ್ತನು ವಿಶ್ವಾಸಿ ಮತ್ತು ಮೋಶೆಯ ಧರ್ಮಶಾಸ್ತ್ರದ ನಡುವೆಯಿರುವ ಸಂಬಂಧವನ್ನು ತೋರಿಸಿದ್ದಾನೆ. **5**

**- 10:5** ಯಾಜಕ 18:5. **6-8**

**10:6-8** ಧರ್ಮೋ 30:12-14. ಮೋಶೆಯ ಮಾತುಗಳನ್ನು (ಕ್ರಿಪೂ 1400) ಪೌಲನು ಯೇಸು ಕ್ರಿಸ್ತನ ಸುವಾರ್ತೆಗೆ ಅಳವಡಿಸಿಕೊಂಡಿರುವದು ಯುಕ್ತವಾಗಿದೆಯೇ. ಖಂಡಿತವಾಗಿಯೂ ಸತ್ಯವಾಗಿದೆ. ಮೋಶೆಯ ಮಾತುಗಳ ನಿಜವಾದ ಆತ್ಮೀಕ ಅರ್ಥವನ್ನು ತಿಳಿಯಲು ದೇವರಾತ್ಮನು ಪೌಲನನ್ನು ಬಲಪಡಿಸಿದನು. **7**

**10:7** *"ಪ್ರೇತಲೋಕ"*– ಪ್ರಕ 9:1-2,11; 11:7; 17:8; 20:1,3. ಈ ಪದದ ಅರ್ಥ ಸತ್ತವರ ರಂಗ. **9-10**

**10:9-10** ಪೌಲನು ಬೋಧನೆ ಮಾಡಿದ "ನಂಬಿಕೆಯ ವಾಕ್ಯ" ಇದುವೇ ಆಗಿದೆ (ವ 8). ಯೇಸು ಕ್ರಿಸ್ತನು ಈಗಾಗಲೇ ಪರಲೋಕದಿಂದ ಇಳಿದು ಬಂದಿದ್ದಾನೆ ಮತ್ತು ದೇವರು ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದಾನೆ (1:3-4; 4:24-25; 8:32,34). ಈಗ ಒಂದುವೇಳೆ ಜನರು ದೇವರ ನೀತಿಯನ್ನು ವರವಾಗಿ ಹೊಂದಲು ಬಯಸುವದಾದರೆ, ಅವರು ಪಾಪವನ್ನು ಬಿಟ್ಟುಬಿಡಬೇಕು ಮತ್ತು ಯೇಸು ಕಿಸ್ತನಲ್ಲಿ ನಂಬಿಕೆಯನ್ನಿಡಬೇಕು. ಯೇಸು ಕ್ರಿಸ್ತನ ಶಾರೀರಿಕ ಪುನರುತ್ಥಾನದಲ್ಲಿ ನಂಬಿಕೆಯನ್ನಿಡುವದು ರಕ್ಷಣೆಗೆ ಅವಶ್ಯವಾಗಿದೆ ಎಂಬದನ್ನು ಗಮನಿಸಿರಿ. 4:24-25; 1 ಕೊರಿಂಥ 15:1-8 ನೋಡಿರಿ. ಇದು ಸುವಾರ್ತೆಯ ಮೂಲಭೂತ ಸಂಗತಿಯಾಗಿದೆ. ಇದರ ಪ್ರಾಮುಖ್ಯತೆಯನ್ನು ಅಪೊಸ್ತಲರ ಅಪೊ 1:3; 2:24 ವಾಕ್ಯಗಳಲ್ಲಿ ನೋಡಿರಿ. ಒಂದುವೇಳೆ ನಾವು ಈ ಸಂಗತಿಯನ್ನು ನಂಬಲಿಲ್ಲವೆಂದರೆ ದೇವರು ತನ್ನ ಮಗನ ವಿಷಯದಲ್ಲಿ ಬರೆಸಿರುವ ದಾಖಲೆಯನ್ನು ನಂಬುವದಿಲ್ಲ ಎಂದು ತೋರಿಸಿ ಕೊಡುವವರಾಗಿದ್ದೇವೆ. ಯೇಸು ಕ್ರಿಸ್ತನನ್ನು ನಂಬುವದೆಂದರೆ ಆತನು ಸತ್ತವರೊಳಗಿಂದ

ಎದ್ದು ಬಂದಿದ್ದಾನೆಂದು ನಂಬುವದಾಗಿದೆ. ಹಾಗೆಯೇ ಯೇಸುವೇ ಕರ್ತನೆಂದು ನಂಬುವದು ಸಹ ಅವಶ್ಯವಾಗಿದೆ. ಯೋಹಾನ 8:24; ಅಪೊ 2:36; 1 ಕೊರಿಂಥ 8:6; 12:3; ಎಫೆ 4:5 ನೋಡಿರಿ. ಯೇಸು ಕ್ರಿಸ್ತನು ಅನೇಕರಲ್ಲಿ ಒಬ್ಬನಾಗಿರುವ ಕರ್ತನು ಮಾತ್ರವಲ್ಲ. ಬದಲಾಗಿ ಆತನು ಮಾತ್ರವೇ ದೈವೀಕ ಕರ್ತನಾಗಿದ್ದಾನೆ. ಪೌಲನ ಅರ್ಥವೇನೆಂದರೆ ಯೇಸು ಕ್ರಿಸ್ತನೊಬ್ಬನೇ ಪರಮ ಅಧಿಕಾರವುಳ್ಳವನಾಗಿದ್ದಾನೆ, ಎಲ್ಲವುಗಳ ಒಡೆಯನಾಗಿದ್ದಾನೆ, ಹಳೆಯ ಒಡಂಬಡಿಕೆಯ ಯೆಹೋವನು ಮಾನವನಾಗಿ ಇಳಿದು ಬಂದಿದ್ದಾನೆ (ವ 13; ಲೂಕ 2:11; ಯೋಹಾನ 8:24,58. ವಿಮೋ 3:14-15ರಲ್ಲಿ ನೋಟ್ಸ್ ನೋಡಿರಿ). ಯೇಸುವೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಳ್ಳುವದು ದೇವರು ನಮ್ಮ ಮೇಲೆ ಕರುಣೆ ತೋರಿ ನಮ್ಮನ್ನು ರಕ್ಷಿಸುವಂಥ ನಮ್ಮ ಶ್ರೇಷ್ಠವಾದ ಕಾರ್ಯವೇನಲ್ಲ. ಮಾನವರು ರಕ್ಷಣೆ ಹೊಂದಲು ನಂಬಿಕೆಯೊಂದಿಗೆ ಸೇರಿಸಲಾಗಿರುವ ಮಾಡಲೇ ಬೇಕಾದ ಕಾರ್ಯವಲ್ಲ. ನಂಬಿಕೆಯು ನಿಜವಾಗಿದೆ ಎಂಬದಕ್ಕೆ ಇದು ಸಾಕ್ಷಿಯಾಗಿದೆ. ಹೃದಯದಲ್ಲಿ ಕಾರ್ಯಮಾಡುವ ನಂಬಿಕೆಯು ಬಾಯಿ ಯೇಸುವಿನ ಬಗ್ಗೆ ಮಾತನಾಡಲು ಮತ್ತು ಆತನನ್ನೇ ಕರ್ತನೆಂದು ಅರಿಕೆಮಾಡಲು ಸಹಾಯ ಮಾಡುತ್ತದೆ. ಹಾಗೆಯೇ ಮತ್ತಾಯ 10:32-33 ನೋಡಿರಿ. ಯೇಸುವನ್ನು ಕ್ರಿಸ್ತನೆಂದು ಅರಿಕೆ ಮಾಡಲು ಭಯಪಡುವ ಅಥವಾ ನಾಚಿಕೆಪಡುವ ಜನರ ನಂಬಿಕೆಯ ಬಗ್ಗೆ ನಾವು ಸಂದೇಹಪಡಬಹುದಾಗಿದೆ. ಅರಿಕೆಯಿಲ್ಲದ ನಂಬಿಕೆಯು ದೋಷವುಳ್ಳದ್ದಾಗಿದೆ, ಅರಿಕೆಯಿಲ್ಲದ ನಂಬಿಕೆಯು ಪ್ರಯೋಜನವಿಲ್ಲದ್ದಾಗಿದೆ. ಒಬ್ಬ ವಿಶ್ವಾಸಿಯು "ಯೇಸುವೇ ಕರ್ತನೆಂದು" ಹೃತ್ಪೂರ್ವಕವಾಗಿ ಹೇಳುವದು, ಅವನು ಯೇಸುವನ್ನು ತನ್ನ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳಲು ಮತ್ತು ಆತನಿಗೆ ವಿಧೇಯನಾಗಲು ಬಯಸುತ್ತಿದ್ದಾನೆ ಎಂಬದನ್ನು ಸೂಚಿಸುತ್ತದೆ (14:9; ಮತ್ತಾಯ 7:21; ಯೋಹಾನ 3:36; ಅಪೊ 5:32; ಇಬ್ರಿ 5:9; 1 ಯೋಹಾನ 2:3-4 ನೋಡಿರಿ). ಅಪೊ 22:10ರಲ್ಲಿರುವ ನೋಟ್ ನೋಡಿರಿ. ಒಬ್ಬ ವಿಶ್ವಾಸಿಯು "ಯೇಸುವೇ ಕರ್ತನೇ, ಆದರೆ ನನ್ನ ಕರ್ತನಲ್ಲ. ಆತನು ಇತರರಿಗೆ ಏನು ಮಾಡಬೇಕೆಂದು ಹೇಳಬಹುದೇನೋ, ಆದರೆ ನನಗಲ್ಲ" ಎಂಬದಾಗಿ ಹೇಳುವ ಅಥವಾ ಆಲೋಚಿಸುವ ಬಗ್ಗೆ ಕನಸು ಕಾಣುವದಾದರೂ ಹೇಗೆ? ಯೇಸು ಕ್ರಿಸ್ತನ ಬಳಿಗೆ ಬರುವ ಜನರು ತಮ್ಮ ಜೀವಿತದ ಮೇಲೆ ತಾವೇ ಒಡೆಯರಾಗುವ ಹಾಗೂ ಕರ್ತನಾದ ಯೇಸು ಕ್ರಿಸ್ತನ ಒಡೆತನವನ್ನು ನಿರಾಕರಿಸುವ ಪಾಪದ ವಿಷಯದಲ್ಲಿ ಮೊದಲು ಪಶ್ಚಾತ್ತಾಪಪಡಬೇಕು. 10ನೇ ವಚನವು ಪೌಲನು ರೋಮಾಪುರದವರಿಗೆ ನೀತಿವಂತಿಕೆಯ ಬಗ್ಗೆ ಕಲಿಸುವ ಬೋಧನೆಯನ್ನು ಕೊನೆಗೊಳಿಸುತ್ತದೆ. ದೇವರಾತ್ಮನ ಪ್ರೇರಣೆಯಿಂದ ಆತನು ಕೆಳಗಿನ ಕಾರ್ಯಗಳಲ್ಲಿ ತೋರಿಸಿಕೊಟ್ಟಿದ್ದಾನೆ: ದೇವರು ಸಂಪೂರ್ಣವಾಗಿ, ಪರಿಪೂರ್ಣವಾಗಿ ನೀತಿವಂತನಾಗಿದ್ದಾನೆ, ಜನರು ತಾವಾಗಿಯೇ ನೀತಿವಂತರಾಗಲು ಆಗುವದಿಲ್ಲ (1:18—3:19) ದೇವರು ತನ್ನ ಮಾರ್ಗದನುಸಾರವಾಗಿ ನೀತಿಯನ್ನು ಕೊಡುತ್ತಾನೆ ಎಂಬ ವಿಷಯವನ್ನು ಅವರು

ಅರಿಯದವರಾಗಿದ್ದಾರೆ (ವ 2) ದೇವರ ಮಾರ್ಗ ಅವರಿಗೆ ಗೊತ್ತಿಲ್ಲವಾದ್ದರಿಂದ ಅವರು ತಮ್ಮ ಸ್ವಂತ ನೀತಿಯನ್ನು ಸ್ಥಾಪಿಸಲು ಮುಂದಾಗುತ್ತಾರೆ (ವ 3) ಇದು ಅಸಾಧ್ಯವಾದ ಕಾರ್ಯವಾಗಿದೆ (3:20,28; 8:3) ದೇವರ ಎದುರಿನಲ್ಲಿ ನೀತಿವಂತರಾಗಿ ನಿಲ್ಲಲು ಇರುವ ಏಕೈಕ ಮಾರ್ಗ ಯೇಸು ಕ್ರಿಸ್ತನ ನೀತಿಯನ್ನು ಹೊಂದುವದಾಗಿದೆ (3:22-26) ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೂಲಕ ಮಾತ್ರವೇ ಆತನ ನೀತಿಯನ್ನು ಪಡೆಯಲು ಸಾಧ್ಯ (1:16-17; 4:5; 5:1) ದೇವರು ಯಾರನ್ನು ನೀತಿವಂತರೆಂದು ಎಣಿಸುತ್ತಾನೋ ಅವರು ನೀತಿವಂತರಾಗಿ ಜೀವಿಸಲು ಪ್ರಾರಂಭಿಸುತ್ತಾರೆ (6:17-18; 8:4,13,14). **11**

**10:11** ಯೆಶಾಯ 28:16 . ರೋಮಾ 1:16; 5:5ರೊಂದಿಗೆ ಹೋಲಿಸಿ ನೋಡಿರಿ. **12**

**10:12** *"ಹೆಚ್ಚು ಕಡಿಮೆ ಏನೂ ಇಲ್ಲ"*– 3:22-23,29,30. ಕರ್ತನು ಒಬ್ಬನೇ – ಆತನೇ ಯೇಸು ಕ್ರಿಸ್ತನು – ಇಲ್ಲಿ ಆತನ ಗುಣಸ್ವಭಾವ ಎಂಥದ್ದೆಂದು ನೋಡಬಹುದಾಗಿದೆ. ತನ್ನ ಬಳಿಗೆ ಬರುವ ಜನರನ್ನು ಆಶೀರ್ವದಿಸುವದರಲ್ಲಿ ಆತನು ಸಂತೋಷಿಸುತ್ತಾನೆ. ಅವರೆಲ್ಲರೂ ಆತ್ಮೀಕ ವಿಷಯಗಳಲ್ಲಿ ಐಶ್ವರ್ಯವಂತರಾಗಿರಬೇಕೆಂದು ಆತನು ಬಯಸುತ್ತಾನೆ. 5:21; 2 ಕೊರಿಂಥ 8:9; 1 ತಿಮೊ 1:13-14 ಹೋಲಿಸಿ ನೋಡಿರಿ. **13**

**10:13** ಇಲ್ಲಿ ಪೌಲನು ಯೋವೇಲ 2:32ನೇ ವಾಕ್ಯವನ್ನು ಬಳಸಿದ್ದಾನೆ ಇಲ್ಲಿ ಕರ್ತನೇ ಎಂದು ಭಾಷಾಂತರ ಮಾಡಲಾಗಿರುವ ಪದ ಇಬ್ರಿಯದಲ್ಲಿ ಯೆಹೋವ ಎಂಬ ಪದವಾಗಿದೆ. ಪೌಲನು ಇಲ್ಲಿ ಕರ್ತನಾದ ಯೇಸು ಕ್ರಿಸ್ತನ ಬಗ್ಗೆ ಮಾತನಾಡುತ್ತಿದ್ದಾನೆ (ವ 9). ಕರ್ತನ ನಾಮವನ್ನು ಹೇಳಿಕೊಳ್ಳುವದೆಂದರೆ ಯೆಹೋವನ ನಾಮವನ್ನು ಹೇಳಿಕೊಳ್ಳುವದಾಗಿದೆ. ಯೇಸು ಕ್ರಿಸ್ತನು ಮಾನವನಾಗಿ ಬಂದ ಯೆಹೋವನಾಗಿದ್ದಾನೆ ಎಂಬದಕ್ಕೆ ಇದು ಮತ್ತೊಂದು ಸೂಚನೆಯಾಗಿದೆ. ಲೂಕ 2:11ರಲ್ಲಿ ಇದರ ಮತ್ತಷ್ಟು ಸೂಚನೆಗಳನ್ನು ನೋಡಿರಿ. ಈ ಸಂದರ್ಭದಲ್ಲಿ ಆತನ ನಾಮವನ್ನು ಹೇಳಿಕೊಳ್ಳುವದೆಂದರೆ ಆತನಲ್ಲಿ ನಂಬಿಕೆಯನ್ನಿಡುವದಾಗಿದೆ (ವ 14). ದೇವರು ತನ್ನ ಕರುಣೆ ಮತ್ತು ರಕ್ಷಣೆಯನ್ನು ಕೊಡುವ ಕೊಡುಗೆ ಹೇಗೆ ಎಲ್ಲರಿಗೂ ಅನ್ವಯವಾಗುತ್ತದೆ ಎಂಬದನ್ನು ಈ ವಾಕ್ಯದಲ್ಲಿ ನೋಡಿರಿ. 1:16ರಲ್ಲಿ ರಕ್ಷಣೆಯ ನೋಟ್ ನೋಡಿರಿ. **14**

**10:14** ಜನರನ್ನು ರಕ್ಷಿಸಿ ನೀತಿವಂತರನ್ನಾಗಿ ಮಾಡುವ ಸುವಾರ್ತೆಯ ವಿವರಣೆಯನ್ನು ಪೌಲನು ಮುಗಿಸಿದ್ದಾನೆ. ಅದು ನಿಜವಾಗಿಯೂ ಶುಭದ ಸುವಾರ್ತೆಯಾಗಿದೆ ಆದರೆ ಜನರು ಶುಭದ ಸುವಾರ್ತೆಯನ್ನು ಕೇಳದಿದ್ದರೆ ಮತ್ತು ನಂಬದಿದ್ದರೆ ಅದರಿಂದ ಪ್ರಯೋಜನವೇನು? ಆದ್ದರಿಂದ ಆತನು ಸುವಾರ್ತೆಯನ್ನು ಸಾರುವದರ ಪ್ರಾಮುಖ್ಯತೆ ಹಾಗೂ ದೇವರು ಸಾರಲು ತನ್ನ ಸೇವಕರನ್ನು ಕಳುಹಿಸುವದರ ಬಗ್ಗೆ ಮಾತನಾಡುತ್ತಿದ್ದಾನೆ. ಅಪೊ 1:8; ಯೋಹಾನ 20:21; ಲೂಕ 24:46-47; ಮಾರ್ಕ 16:15; ಮತ್ತಾಯ 28:18-20 ಸಹ ನೋಡಿರಿ. **15**

**10:15** ಯೆಶಾಯ 52:7. ಆ ಪಾದಗಳು ಶುಭದ ಸುವಾರ್ತೆಯನ್ನು ಸಾರುತ್ತಾ ಅನೇಕ

ಮೈಲಿಗಳನ್ನು ನಡೆದಿರುವದರಿಂದ ಒರಟಾಗಿರಬಹುದು, ಗಾಯಗೊಂಡಿರಬಹುದು ಮತ್ತು ಕೊಳಕಾಗಿರಬಹುದು. ಆದರೆ ದೇವರ ದೃಷ್ಟಿಯಲ್ಲಿ ಅವುಗಳು ಭೂಲೋಕದಲ್ಲಿಯೇ ಅತ್ಯಂತ ಸುಂದರವಾದ ಪಾದಗಳಾಗಿವೆ ಯಾಕಂದರೆ ಅವುಗಳು ಅತ್ಯಂತ ಸುಂದರ ಹಾಗೂ ಪ್ರಾಮುಖ್ಯವಾದ ಕಾರ್ಯಗಳಿಗೆ ಹೋಗುವವುಗಳಾಗಿವೆ. **16-21**

**10:16-21** ಇಸ್ರಾಯೇಲ್ಯರು ಯೇಸು ಕ್ರಿಸ್ತನನ್ನು ನಿರಾಕರಿಸಿದ್ದು ಮತ್ತು ದೇವರು ಇಸ್ರಾಯೇಲ್ಯರನ್ನು ನಿರಾಕರಿಸಿದ್ದಕ್ಕೆ ಇಸ್ರಾಯೇಲ್ಯರೇ ಕಾರಣ ಎಂಬದನ್ನು ಪೌಲನು ಇಲ್ಲಿ ಸ್ಪಷ್ಟವಾಗಿ ತೋರಿಸಿದ್ದಾನೆ. ಅವರು ತಮ್ಮ ನಿರಾಕರಣೆಗೆ ದೇವರ ಕೆಲವು ರಹಸ್ಯವಾದ ವಿಧಿಗಳ ಮೇಲೆ ಆರೋಪ ಮಾಡಲು ಆಗುವದಿಲ್ಲ. **16**

**10:16** ಇದು ಅವರ ದೊಡ್ಡ ಪಾಪ ಮತ್ತು ನಿರಾಕರಣೆಗೆ ಪ್ರಮುಖ ಕಾರಣವಾಗಿದೆ. ಯೇಸು ಕ್ರಿಸ್ತನು ಈ ಲೋಕಕ್ಕೆ ಬಂದಾಗ ಅವರು ಆತನನ್ನು ಅಂಗೀಕರಿಸಿಕೊಳ್ಳಲಿಲ್ಲ (ಯೋಹಾನ 1:11). ಇದು ಅವರ ಧರ್ಮಶಾಸ್ತ್ರದಲ್ಲಿಯೇ ಬರೆಯಲ್ಪಟ್ಟಿರುವ ವಿಷಯವಾಗಿದೆ – ಯೆಶಾಯ 53:1. **17**

**10:17** ವಚನ 14. ಜನರಲ್ಲಿ ನಂಬಿಕೆ ಹೇಗೆ ಉಂಟಾಗುತ್ತದೆ ಎಂದು ನೋಡಿರಿ. **18**

**10:18** ಯೆಹೂದ್ಯರು ಸುವಾರ್ತೆಯನ್ನು ಕೇಳಲಿಲ್ಲವಾದ್ದರಿಂದ ದೇವರು ಅವರ ಪಾಪವನ್ನು ಕ್ಷಮಿಸುತ್ತಾನೆಯೇ? ಖಂಡಿತವಾಗಿಯೂ ಇಲ್ಲ. ಅವರು ಸುವಾರ್ತೆಯನ್ನು ಕೇಳಿದರು. ಕೀರ್ತನೆ 19:4 ಸೃಷ್ಟಿಯ ಸಾಕ್ಷಿಯ ಬಗ್ಗೆ ಮಾತನಾಡುತ್ತದೆ. ಪೌಲನ ಮಾತಿನ ಅರ್ಥವೇನೆಂದರೆ ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ನಡುವೆಯ ವರ್ಷಗಳು ಮತ್ತು ಆತನು ಬರೆಯುತ್ತಿರುವ ಈ ಪತ್ರಿಕೆಯ ಸಮಯದಲ್ಲಿ ಸೃಷ್ಟಿಯ ಸಾಕ್ಷಿಯ ಹಾಗೆ ಸುವಾರ್ತೆಯು ಎಲ್ಲಾ ಭಾಗಗಳಲ್ಲಿದ್ದ ಯೆಹೂದ್ಯರಿಗೆ ತಲುಪಿದೆ. ಅಪೊ 1:8; 2:36; 13:14-16; 17:1-2,10; 18:5; 19:8. **19-21**

**10:19-21** ಯೆಹೂದ್ಯರು ಸುವಾರ್ತೆಯನ್ನು ಅರ್ಥಮಾಡಿಕೊಳ್ಳಲಿಲ್ಲವಾದ್ದರಿಂದ ದೇವರು ಅವರ ಪಾಪವನ್ನು ತಳ್ಳಿಬಿಡುವನೇ? ಖಂಡಿತವಾಗಿಯೂ ಇಲ್ಲ. ಸುವಾರ್ತೆಯನ್ನು ಅಂಗೀಕರಿಸಿಕೊಂಡ ಯೆಹೂದ್ಯರಿಗಿಂತ ಹೆಚ್ಚಾಗಿ ಅವರು ಸುವಾರ್ತೆಯನ್ನು ಅರ್ಥಮಾಡಿಕೊಂಡರು ಎಂಬದನ್ನು ತೋರಿಸಲು ಪೌಲನು ಹಳೆಯ ಒಡಂಬಡಿಕೆಯ ಮೂರು ವಾಕ್ಯಗಳನ್ನು ಕೊಟ್ಟಿದ್ದಾನೆ. **19**

**10:19** ಧರ್ಮೋ 32:21. ಇಲ್ಲಿ "ವಿವೇಕವಿಲ್ಲದ" ಜನಾಂಗ (ಅನ್ಯರು) ತಿಳುವಳಿಕೆಯಿದ್ದ ಯೆಹೂದ್ಯರ ನಡುವೆ ವ್ಯತ್ಯಾಸ ಕೊಡಲಾಗಿರುವದನ್ನು ನೋಡಬಹುದು. **20-21**

**10:20-21** ಯೆಶಾಯ 65:1-2. ಅನ್ಯರಿಗೆ ನಿಜವಾದ ದೇವರನ್ನು ಹುಡುಕುವ ಸಾಮಾನ್ಯ ತಿಳುವಳಿಕೆಯೂ ಇರಲಿಲ್ಲ. ಇಸ್ರಾಯೇಲ್ಯರಿಗೆ ಇತ್ತು, ಆದರೂ ಅವರು ಹುಡುಕಲಿಲ್ಲ. ಇದಕ್ಕೆ ಕಾರಣ ಇಸ್ರಾಯೇಲ್ಯರ ಎದುರುಬೀಳುವ ಅವಿಧೇಯತೆ. ದೇವರು ತನ್ನ ಪ್ರೀತಿಯ ಕರಗಳನ್ನು

ಚಾಚುತ್ತಾ ನಿಂತುಕೊಂಡು, ಅವರಿಗೆ ಮಹದಾದ ಕಾರ್ಯಗಳು, ತಾಳ್ಮೆ, ಕರುಣೆ ಹಾಗೂ ರಕ್ಷಣೆಯನ್ನು ಕೊಡಲು ಬಯಸುತ್ತಿರುವದು ಇಲ್ಲಿನ ಚಿತ್ರಣವಾಗಿದೆ. ಮತ್ತಾಯ 23:37; ನ್ಯಾಯ 2:10-19; ಹೋಶೇಯ 11:8ರೊಂದಿಗೆ ಹೋಲಿಸಿ ನೋಡಿರಿ. ಇಂಥ ದೇವರು ಸಾರ್ವಭಮನು ಮತ್ತು ತನಗೆ ಬೇಕಾದ್ದನ್ನು ಮಾಡಲು ಶಕ್ತನಾದ್ದರಿಂದ, ಜನರು ಹುಟ್ಟುವ ಮೊದಲೇ ಅವರು ನರಕಕ್ಕೆ ಹೋಗಬೇಕೆಂದು ಯೋಚಿಸುತ್ತಾನೆ ಎಂಬದಾಗಿ ನಾವು ಹೇಳಬಹುದೇ?

# 11 1-10

**11:1-10** 9,10 ಮತ್ತು 11ನೇ ಅಧ್ಯಾಯಗಳು ಘಟಕವನ್ನು ಏರ್ಪಡಿಸುತ್ತವೆ. ಇಲ್ಲಿನ ವಿಷಯವು ಇಸ್ರಾಯೇಲ್ ಜನಾಂಗದ ಬೀಳ್ವಿಕೆಯಾಗಿದೆ. ಅವರ ಬೀಳ್ವಿಕೆಗೆ ಕಾರಣ ಅವರೇ ಆಗಿದ್ದಾರೆಯೇ ಹೊರತು ದೇವರಲ್ಲ ಎಂಬದನ್ನು ಪೌಲನು 10ನೇ ಅಧ್ಯಾಯದಲ್ಲಿ ತೋರಿಸಿದ್ದಾನೆ. ಅವರ ಅಪನಂಬಿಕೆ ಮತ್ತು ಹೃದಯ ಕಾಠಿಣ್ಯತೆಯ ಹೊರತಾಗಿಯೂ, ದೇವರು ಅವರ ವಿಷಯದಲ್ಲಿ ಕೃಪೆಯುಳ್ಳ ಉದ್ದೇಶವುಳ್ಳವನಾಗಿದ್ದಾನೆ ಮತ್ತು ಕ್ರಮೇಣವಾಗಿ ಅವರನ್ನು ತನ್ನೆಡೆಗೆ ಸೆಳೆದುಕೊಳ್ಳುವನು ಎಂಬದಾಗಿ 11ನೇ ಅಧ್ಯಾಯದಲ್ಲಿ ತೋರಿಸಿದ್ದಾನೆ. "ದೇವರು ತನ್ನ ಜನರನ್ನು ತಳ್ಳಿಬಿಟ್ಟಿದ್ದಾನೆಯೇ" ಎಂಬದಾಗಿ ಪ್ರಾರಂಭದ ಐದು ವಾಕ್ಯದಲ್ಲಿ ಕೇಳಲಾಗಿರುವ ಪ್ರಶ್ನೆಗೆ ಈ ಇಡೀ ಅಧ್ಯಾಯವು ಉತ್ತರ ಕೊಡುತ್ತದೆ. ಪೌಲನ ಉತ್ತರ "ಇಲ್ಲ" ಎಂಬದಾಗಿದೆ. ಯೆಹೂದ್ಯನಾಗಿರುವ ಆತನೇ ದೇವರು ತಳ್ಳಿಬಿಟ್ಟಿಲ್ಲ ಎಂಬದಕ್ಕೆ ಪುರಾವೆಯಾಗಿದ್ದಾನೆ. ಮೂಲ ಅಪೊಸ್ತಲರು ಮತ್ತು ಯೆರೂಸಲೇಮಿನಲ್ಲಿ ಮೊದಲ ಸಭೆಯನ್ನು ಸ್ಥಾಪಿಸಿದವರೆಲ್ಲರೂ ಯೆಹೂದ್ಯರೆಂಬದಾಗಿಯೂ ಆತನು ಹೇಳುವವನಾಗಿದ್ದಾನೆ. ಮತ್ತು ರೋಮನ್ ಸಾಮ್ರಾಜ್ಯದಾದ್ಯಂತವಿದ್ದ ಅನೇಕ ಸಭೆಗಳ ಸದಸ್ಯರು ಯೆಹೂದ್ಯರಾಗಿದ್ದರು, ಆದರೂ ಅವರಲ್ಲಿ ಕೆಲವರು ಕಠಿಣ ಹೃದಯರು ಹಾಗೂ ಅವಿಧೇಯರಾಗಿದ್ದರು. ದೇವರಲ್ಲಿ ನಂಬಿಕೆಯನ್ನಿಟ್ಟು ಆತನಿಗೆ ವಿಧೇಯರಾಗಿ ಜೀವಿಸುವವರೂ ಇದ್ದರು. ಎಲೀಯನ ಕಾಲದ ಪರಿಸ್ಥಿತಿಯಂತೆ ಈಗಿನ ಪರಿಸ್ಥಿತಿ ಇತ್ತು (ಅಂದರೆ ಯೇಸು ಕ್ರಿಸ್ತನು ಬರುವದಕ್ಕಿಂತ ಸುಮಾರು 850 ವರ್ಷಗಳ ಮುಂಚೆ). 1 ಅರಸು 19:14-18 ನೋಡಿರಿ. **5**

**11:5** ಕೃಪೆಯ ಆಧಾರ ಮೇಲೆ ಮಾತ್ರವೇ ದೇವರು ಇಸ್ರಾಯೇಲ್ ಜನಾಂಗದೊಳಗಿಂದ ನಂಬುವವರನ್ನು ಮಾತ್ರವೇ ಆರಿಸಿಕೊಂಡನು. ಆತನ ಆಯ್ಕೆಯು ಅವರ ಒಳ್ಳೆಯ ಕಾರ್ಯಗಳು ಮತ್ತು ಅವರ ಅರ್ಹತೆ ಅಥವಾ ಅದರ ಕೊರತೆಗಳಿಗೆ ಸಂಬಂಧಿಸಿರಲಿಲ್ಲ – 3:24. **6**

**11:6** 4:5 ನೋಡಿರಿ. **7**

**11:7** 9:30-32 ನೋಡಿರಿ. ಇಸ್ರಾಯೇಲ್ಯರಲ್ಲಿ ಅನೇಕರು "ಕುರುಡರಾದರು."

ಮೊದಲನೆಯದಾಗಿ, ಅವರು ದೇವರು ಕೊಟ್ಟ ಬೆಳಕನ್ನು ನಿರಾಕರಿಸಿದರು. ನಂತರ ಅವರು ಬೆಳಕನ್ನು ನೋಡದಂತೆ ಮಾಡುವ ಮೂಲಕ ದೇವರು ಅವರನ್ನು ಶಿಕ್ಷಿಸಿದನು. ಯೆಶಾಯ 6:9-10 ನೋಡಿರಿ. **8**

**11:8** ಧರ್ಮೋ 29:4; ಯೆಶಾಯ 29:10 . ಯೆಶಾಯ 6:9-10; ಮತ್ತು ಮತ್ತಾಯ 13:13-15 ಹೋಲಿಸಿ ನೋಡಿರಿ. **9-10**

**- 11:9-10** ಕೀರ್ತನೆ 69:22-23. **11**

**11:11** ಇಲ್ಲಿಂದ 32ನೇ ವಚನದ ತನಕ ಕಠಿಣ ಹೃದಯವುಳ್ಳವರಾಗಿ, ಎಡವಿಬಿದ್ದ ಇಸ್ರಾಯೇಲ್ ಜನಾಂಗದ ಬಹುಪಾಲು ಜನರ ಬಗ್ಗೆ ಪೌಲನು ಮಾತನಾಡುತ್ತಿದ್ದಾನೆ (9:32-33). ಎಂದಿಗೂ ಚೇತರಿಸಿಕೊಳ್ಳದ ನಿರೀಕ್ಷೆಯೇ ಇಲ್ಲದಿಂದ ಇಸ್ರಾಯೇಲ್ ಜನಾಂಗವು ಬಿದ್ದುಹೋಗಿದೆಯೇ? ಅದು ಇನ್ನು ಮೇಲಕ್ಕೆ ಏಳುವದೇ ಇಲ್ಲವೇ? ದೇವರು ಇಸ್ರಾಯೇಲ್ ಜನರನ್ನು ಸಂಪೂರ್ಣವಾಗಿ ತಳ್ಳಿಬಿಟ್ಟು ಈಗ ಹೊಸ ಒಡಂಬಡಿಕೆಯ ಸಭೆಯೊಂದಿಗೆ ಮತ್ತು ಸಭೆಗಾಗಿ ಮಾತ್ರವೇ ಕಾರ್ಯಮಾಡುತ್ತಿದ್ದಾನೆಯೇ? ಪೌಲನು ಸ್ಪಷ್ಟವಾಗಿ ಉತ್ತರಿಸಿದ್ದಾನೆ – ದೇವರು ಇಸ್ರಾಯೇಲ್ ಜನಾಂಗವನ್ನು ಸಂಪೂರ್ಣವಾಗಿ ತಳ್ಳಿಬಿಟ್ಟಿಲ್ಲ. ಆತನು ಈಗಲೂ ಅವರ ವಿಷಯದಲ್ಲಿ ಉದ್ದೇಶಗಳುಳ್ಳವನಾಗಿದ್ದಾನೆ ಮತ್ತು ಅವರನ್ನು ತನ್ನ ಕಡೆಗೆ ಕರೆದುಕೊಳ್ಳುತ್ತಾನೆ (ಅಪೊ 1:6-7 ಹೋಲಿಸಿ ನೋಡಿರಿ). ಅವರ ಬೀಳುವಿಕೆಯಲ್ಲಿಯೂ ದೇವರು ಒಳ್ಳೆಯ ಉದ್ದೇಶವನ್ನು ಹೊಂದಿದ್ದಾನೆ ಎಂದು ಹೇಳುವ ಮೂಲಕ ಅವನು ಪ್ರಾರಂಭಿಸಿದ್ದಾನೆ. ಅವರು ಅವಿಧೇಯರು ಮತ್ತು ಕಠಿಣ ಹೃದಯವುಳ್ಳವರಾಗಿದ್ದರು ಆದ್ದರಿಂದಲೇ ದೇವಕುಮಾರನನ್ನು ನಿರಾಕರಿಸಿ ಶಿಲುಬೆಗೆ ಹಾಕಿಸಿದರು. ಆದರೆ ಇವೆಲ್ಲವೂ ಸಂಪೂರ್ಣವಾಗಿ ಲೋಕಕ್ಕೆ ಹಿತಕರವಾಯಿತು (ಅಪೊ 2:22-24). ದೇವರು ಎಲ್ಲರಿಗೂ ಸುವಾರ್ತೆಯನ್ನು ಕೊಡುವ ಸಲುವಾಗಿ ಅವರ ದುಷ್ಟ ಕ್ರಿಯೆಗಳ ಮೂಲಕ ಕಾರ್ಯಮಾಡಿದನು. ಮತ್ತು ನಂತರದಲ್ಲಿ ಅವರು ಸುವಾರ್ತೆಯನ್ನು ತಿರಸ್ಕರಿಸಿದಾಗ ಅವರು ಬೇರೆ ಜನಾಂಗಗಳ ಕಡೆಗೆ ತಿರುಗಿಕೊಂಡನು, ಅದನ್ನು ಇಲ್ಲಿ "ಅನ್ಯರು" ಎಂದು ಕರೆಯಲಾಗಿದೆ (1:16; ಅಪೊ 13:46; ಮತ್ತಾಯ 21:42-43ರೊಂದಿಗೆ ಹೋಲಿಸಿ ನೋಡಿರಿ). **12**

**11:12** ಪೌಲನ ತರ್ಕ ನೇರವಾದದ್ದಾಗಿದೆ. ಅವರ ಪಾಪದ ಮೂಲಕ ಸುವಾರ್ತೆಯ ಭಾಗ್ಯವು ಸರ್ವಲೋಕಕ್ಕೆ ದೊರಕಿದೆ ಆದ್ದರಿಂದ ಅವರ "ಪುರ್ಣತೆಯು" ಖಂಡಿತವಾಗಿ ಇನ್ನೂ ಅಧಿಕ ಭಾಗ್ಯವನ್ನು ದೊರಕಿಸುತ್ತದೆ. ಪೌಲನು "ಒಂದುವೇಳೆ" ಅವರು ಪೂರ್ಣ ಪುನಃ ಸ್ಥಾಪನೆಯನ್ನು ಹೊಂದಿದರೆ ಎಷ್ಟೋ ಹೆಚ್ಚಾಗಿ ಭಾಗ್ಯ ದೊರೆಯುತ್ತದೆ ಎಂದು ಹೇಳಿಲ್ಲ. ಭವಿಷ್ಯದಲ್ಲಾಗುವ ಅವರ ಪೂರ್ಣ ಪುನಃಸ್ಥಾಪನೆಯ ಬಗ್ಗೆ ಆತನು ಸರಳವಾಗಿಯೇ ಹೇಳಿದ್ದಾನೆ. ಅವರ "ಪೂರ್ಣತೆ" ಎಂದರೆ ಅವರು ಜನಾಂಗವಾಗಿ ದೇವರ ಕಡೆಗೆ ತಿರುಗಿಕೊಳ್ಳುವರು ಮತ್ತು ದೇವರು ಅವರಿಗೆ ಮಾಡಿದ ವಾಗ್ದಾನಗಳನ್ನು ಪೂರ್ತಿಯಾಗಿ

ನೆರವೇರಿಸುವನು (ಯೆಶಾಯ 2:1-5; 11:1-9; ಯೆರೆ 23:5-8; ಯೆಹೆಜ್ಕೇಲ 37:21-28; ಜೆಕರ್ಯ 14:9,16,21).

*"ಭಾಗ್ಯದ"*– ವಿಷಯದಲ್ಲಿ 2:4; 10:12; 2 ಕೊರಿಂಥ 8:9; ಎಫೆ 1:7,18; 2:7; 3:8,16; ಫಿಲಿಪ್ಪಿ 4:19; ಕೊಲೊ 1:27 ನೋಡಿರಿ. **13**

**- 11:13** ಗಲಾ 2:7. **14**

**11:14** ವಚನ 11; 10:1,19.

*"ಜನರು"*– ಅಕ್ಷರಾರ್ಥವಾಗಿ "ದೇಹ" ನಾವು "ದೇಹ ಮತ್ತು ಮಾಂಸ" ಎಂದು ಹೇಳುವ ಹಾಗೆ. **15**

**11:15** ವಚನ 12. ದೇವರು ಇಸ್ರಾಯೇಲ್ ಜನಾಂಗವನ್ನು ಪೂರ್ತಿಯಾಗಿ ಅಂಗೀಕರಿಸಿಕೊಳ್ಳುವ ಸಮಯದ ಬಗ್ಗೆ ಪೌಲನು ಮಾತನಾಡುತ್ತಿದ್ದಾನೆ. ಅದು "ಸತ್ತವರು ಜೀವಿತರಾಗಿ ಎದ್ದು ಬರುವ ಸಮಯವಾಗಿರುತ್ತದೆ." ಕೆಲವು ಪಂಡಿತರು ಇದು ಅಕ್ಷರಾರ್ಥವಾಗಿ ಸತ್ತವರ ಪುನರುತ್ಥಾನ ಎಂದು ಹೇಳುತ್ತಾರೆ (ಯೋಹಾನ 5:28-29). ಇನ್ನೂ ಕೆಲವರು ಇಸ್ರಾಯೇಲ್ ಜನರ ಮನಪರಿವರ್ತನೆಯ ಫಲವಾಗಿ ಅದ್ಭುತವಾದ ಆತ್ಮೀಕ ಜೀವಿತ ಮತ್ತು ಆಶೀರ್ವಾದ ಇಡೀ ಜನಾಂಗಕ್ಕೆ ದೊರೆಯುತ್ತದೆ (8:20-23; ಅಪೊ 3:21; ಮತ್ತಾಯ 19:28) ಎಂದು ಹೇಳುತ್ತಾರೆ. ಬಹುತೇಕ ಎರಡೂ ಅಭಿಪ್ರಾಯಗಳು ಸರಿಯಾಗಿವೆ. **16**

**11:16** *"ಪ್ರಥಮ ಫಲ ನೈವೇದ್ಯ"*– ಸಂಖ್ಯಾ 15:17-21. ಇಲ್ಲಿ ಪ್ರಥಮ ಫಲ ನೈವೇದ್ಯ ಎಂದರೆ ಯೆಹೂದ್ಯರೊಳಗಿಂದ ದೇವರಾದುಕೊಂಡ ಕೆಲವರು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡಿರುವದು (ವ 5) ಅಥವಾ ಜನಾಂಗದ ಮೂಲಪಿತೃಗಳು – ಅಬ್ರಹಾಮ, ಇಸಾಕ ಮತ್ತು ಯಾಕೋಬ, ಅಥವಾ ಯೇಸು ಕ್ರಿಸ್ತನು (ಆದರೆ ಇದರ ಸಾಧ್ಯತೆ ಬಹಳ ಕಡಿಮೆ). ಪೌಲನು ಇಲ್ಲಿ ಹೇಳುತ್ತಿರುವ ವಿಷಯದ ಎರಡು ವಿಷಯಗಳಲ್ಲಿಯೂ ಒಂದೇ ಆಗಿದೆ - ಹೇಗೆಂದರೆ, ಇಡೀ ಇಸ್ರಾಯೇಲ್ ಜನಾಂಗವು ತಮ್ಮ ಅವಿಧೇಯ ಹಗೂ ಅಪನಂಬಿಕೆಯ ಸ್ಥಿತಿಯಲ್ಲಿಯೂ "ಪರಿಶುದ್ಧವಾಗಿದೆ." –ಇಲ್ಲಿ ಪರಿಶುದ್ಧತೆ ಎಂದರೆ ದೇವರ ಒಳ್ಳೆಯ ಉದ್ದೇಶಗಳಿಗಾಗಿ ಬೇರ್ಪಡಿಸಲ್ಪಟ್ಟಿರುವದು. ಯಾಜಕ 20:7-8ರ ನೋಟ್ ನೋಡಿರಿ. "ಬೇರು" ಖಂಡಿತವಾಗಿಯೂ ಅಬ್ರಹಾಮ, ಇಸಾಕ ಮತ್ತು ಯಾಕೋಬನನ್ನು ಸೂಚಿಸುತ್ತದೆ ಅಥವಾ ಕೇವಲ ಅಬ್ರಹಾಮನನ್ನು ಮಾತ್ರವೇ ಸೂಚಿಸುತ್ತದೆ (4:1). ಅವರ ಮೂಲಕ ಉಂಟಾದ ಜನಾಂಗವು ದೇವರ ವಿಶೇಷವಾದ ಜನರು ಮತ್ತು ಪವಿತ್ರ ಜನಾಂಗವಾಗಿದೆ (ಧರ್ಮೋ 7:6; 14:2). ಪೌಲನು ಹೇಳುವದೇನೆಂದರೆ ಇವರ ವಿಷಯದಲ್ಲಿ ಪಶ್ಚಾತ್ತಾಪಪಡುವದಿಲ್ಲ (ವ 29). **17-24**

**11:17-24** ಯೆಹೂದ್ಯರು ಯೇಸು ಕ್ರಿಸ್ತನನ್ನು ತಿರಸ್ಕರಿಸುವ ಮೊದಲು "ಎಣ್ಣೇಮರವಾದ" ಇಸ್ರಾಯೇಲ್ ಜನಾಂಗದವರಾಗಿದ್ದು, ಅಬ್ರಹಾಮ, ಇಸಾಕ ಮತ್ತು

ಯಾಕೋಬನೆಂಬ "ಬೇರಿನಿಂದ" ಬೆಳೆದವರಾಗಿದ್ದರು. ಜನಾಂಗದ "ಕೆಲವು" ಕೊಂಬೆಗಳು (ಅಂದರೆ ಜನಾಂಗದ ಬಹುತೇಕ ಜನರು) ಅಪನಂಬಿಕೆಯ ನಿಮಿತ್ತ ಮುರಿಯಲ್ಪಟ್ಟಿದ್ದಾರೆ (ವ 17, 20). ಅವರ ಸ್ಥಳದಲ್ಲಿ ಅನ್ಯಜನರೊಳಗಿಂದ ಕ್ರಿಸ್ತನನ್ನು ಅಂಗೀಕರಿಸಿಕೊಂಡ ಕ್ರೈಸ್ತರನ್ನು "ಕಸಿಮಾಡಲಾಗಿದೆ" (ವ 17,19; ಮತ್ತಾಯ 21:43). ಅನ್ಯರು ಕಾಡೆಣ್ಣೇ ಮರದಂತಿದ್ದರು (ವ 24). ಸ್ವಾಭಾವಿಕವಾಗಿ ಅವರು ಅಬ್ರಹಾಮ, ಇಸಾಕ ಮತ್ತು ಯಾಕೋಬನೊಂದಿಗೆ ಅಥವಾ ಅವರಿಂದ ಬೆಳೆದ "ಎಣ್ಣೇಮರದೊಂದಿಗೆ" ಯಾವುದೇ ಸಂಬಂಧ ಇರಲಿಲ್ಲ. ಈಗ ಯೇಸು ಕ್ರಿಸ್ತನ ಮೂಲಕ ಅವರು ಅಬ್ರಹಾಮನೊಂದಿಗೆ ಸಂಬಂಧವುಳ್ಳವರಾಗಿದ್ದಾರೆ (ಕಸಿಮಾಡಿಸಿಕೊಂಡ ಮರವಾಗಿದ್ದಾರೆ – ವ 24). ಪೌಲನು ಅನ್ಯರಾಗಿರುವ ಕ್ರೈಸ್ತರಿಗೆ ಎಚ್ಚರಿಕೆ ಕೊಟ್ಟಿದ್ದಾನೆ (ವ 13). ಅವರು ಬಿದ್ದುಹೋಗಿರುವ ಇಸ್ರಾಯೇಲ್ಯರಿಗೆ ವಿರುದ್ಧವಾಗಿ ಹೆಚ್ಚಳಪಡಬಾರದು (ವ 18), ಗರ್ವಪಡದೆ ಭಯಪಡುವವರಾಗಿರಬೇಕು (ವ 20). ದೇವರು ಇಸ್ರಾಯೇಲ್ಯರ ಕೊಂಬೆಗಳನ್ನು ಮುರಿದು, ಅನ್ಯರನ್ನು ಕಸಿ ಮಾಡಿರುವದಾದರೆ, ಅನ್ಯರನ್ನೂ ಮುರಿದು ಇಸ್ರಾಯೇಲ್ಯರನ್ನು ಕಸಿ ಮಾಡುವಾತನಾಗಿದ್ದಾನೆ. ಈ "ಮುರಿಯಲ್ಪಡುವಿಕೆಯು" ರಕ್ಷಣೆ ಹೊಂದಿರುವ ವ್ಯಕ್ತಿಗಳು ತಮ್ಮ ರಕ್ಷಣೆ ಕಳೆದುಕೊಳ್ಳುವರು ಎಂದು ಸೂಚಿಸುತ್ತದೆಯೇ? ಇಲ್ಲ. ಇದು ಪೌಲನ ವಿಷಯವೇ ಅಲ್ಲ. "ಎಣ್ಣೇ ಮರವು" ಯೇಸು ಕ್ರಿಸ್ತನ ಆತ್ಮೀಕ ದೇಹವೇ ಅಲ್ಲ. ಹಳೆಯ ಒಡಂಬಡಿಕೆಯಲ್ಲಿ ಮತ್ತು ಯೇಸು ಕ್ರಿಸ್ತನು ಭೂಲೋಕದಲ್ಲಿದ್ದ ಸಮಯದಲ್ಲಿ ಎಣ್ಣೇ ಮರವು ವಿಶ್ವಾಸಿಗಳು ಹಾಗೂ ಅವಿಶ್ವಾಸಿಗಳನ್ನೊಳಗೊಂಡ ಇಡೀ ಇಸ್ರಾಯೇಲ್ ಜನಾಂಗವಾಗಿತ್ತು. ಕೇವಲ ಅವಿಶ್ವಾಸಿಗಳು ಮಾತ್ರವೇ ಮುರಿಯಲ್ಪಟ್ಟಿದಾರೆ ಮತ್ತು ಆ ಜನಾಂಗದ ಬಹುತೇಕ ಭಾಗ ಇಂದಿನ ತನಕ ಅದೇ ಸ್ಥಿತಿಯಲ್ಲಿದೆ. ದೇವರು ಅವರನ್ನು ಈ ಕಾಲಕ್ಕೆ ಪಕ್ಕಕ್ಕಿಟ್ಟಿದ್ದಾನೆ, ತನ್ನ ಮರಕ್ಕೆ ಅನ್ಯರನ್ನು ಸೇರಿಸಿದ್ದಾನೆ ಮತ್ತು ಭೂಲೋಕದಲ್ಲಿ ತನ್ನ ಉದ್ದೇಶ ನೆರವೇರಿಸಲು ಅವರ ಮೂಲಕ ಕಾರ್ಯಮಾಡುತ್ತಿದ್ದಾನೆ. ಆದರೆ ಯೆಹೂದ್ಯರ ಹಾಗೆ ಅನ್ಯರ ಸಭೆಗಳು ಸಹ ಗರ್ವ ಮತ್ತು ಅಪನಂಬಿಕೆಯಿಂದ ಬಿದ್ದುಹೋಗುವ ಸಾಧ್ಯತೆಗಳಿವೆ. ಪೌಲನು ಅವರು "ಭಯಪಡಬೇಕೆಂದು" ಹೇಳಿದ್ದಾನೆ ಯಾಕಂದರೆ ಒಂದುವೇಳೆ ಅವರು ಅವಿಧೇಯರಾದ ಇಸ್ರಾಯೇಲ್ಯರ ಮಾರ್ಗವನ್ನು ಅನುಸರಿಸಿದರೆ ದೇವರು ಅವಿಧೇಯರಾದ ಇಸ್ರಾಯೇಲ್ಯರೊಂದಿಗೆ ನಡೆದುಕೊಂಡ ರೀತಿಯಲ್ಲಿಯೇ ಅವರೊಂದಿಗೂ ನಡೆದುಕೊಳ್ಳುವನು (ವ 21,22). ಮತ್ತು ಇಸ್ರಾಯೇಲ್ಯರು ನಂಬಿಕೆಯಿಂದ ಕ್ರಿಸ್ತನ ಕಡೆಗೆ ತಿರುಗಿಕೊಂಡರೆ ಅವರನ್ನು ಪುನಃ ಎಣ್ಣೇಮರಕ್ಕೆ ಸೇರಿಸಿಕೊಳ್ಳಲಾಗುವದು (ವ 24. ಅಪೊ 1:6 ರಲ್ಲಿರುವ ನೋಟ್ ನೋಡಿರಿ). **25**

**11:25** ಅನ್ಯರೊಳಗಿಂದ ಕ್ರೈಸ್ತರಾದವರು ಗರ್ವಿಷ್ಟರು ಅಥವಾ ಮೋಸಹೋಗುವವರಾಗುವದು ಪೌಲನು ಇಷ್ಟವಿರಲಿಲ್ಲ. ದೇವರು ಇಸ್ರಾಯೇಲ್ಯರನ್ನು

ಸಂಪೂರ್ಣವಾಗಿ ತಳ್ಳಿಬಿಟ್ಟಿದ್ದಾನೆ ಮತ್ತು ಆತನು ಇಸ್ರಾಯೇಲ್ಯರಿಗೆ ಮಾಡಿದ ವಾಗ್ದಾನಗಳೆಲ್ಲವೂ ಹೊಸ ಒಡಂಬಡಿಕೆಯ ಸಭೆಗೆ ಸೇರುತ್ತವೆ ಎಂಬದಾಗಿ ಒಂದುವೇಳೆ ಅವರು ಅಂದುಕೊಂಡರೆ ಗರ್ವಿಷ್ಠರಾಗುವರು ಮತ್ತು ಮೋಶಹೋಗುವರು ಎಂಬದು ಪೌಲನಿಗೆ ಚೆನ್ನಾಗಿ ಗೊತ್ತಿತ್ತು. ಇಸ್ರಾಯೇಲ್ಯರ ಬಗ್ಗೆ ಕೆಲವು ಸ್ಪಷ್ಟವಾದ ಹೇಳಿಕೆಗಳನ್ನು ಕೊಡುವ ಮೂಲಕ ಪೌಲನು ಇದನ್ನು ತಪ್ಪಿಸಲು ಪ್ರಯತ್ನಿಸಿದ್ದಾನೆ. ಅವನು ಈ ಬೋಧನೆಯನ್ನು "ರಹಸ್ಯ" ಎಂಬದಾಗಿ ಕರೆದಿದ್ದಾನೆ – ಅಂದರೆ ದೇವರು ಪ್ರಕಟಪಡಿಸದ ಹೊರತು ಮಾನವರಿಗೆ ತಿಳಿದುಕೊಳ್ಳಲು ಆಗುವದಿಲ್ಲ. ಅನ್ಯರು "ಪೂರ್ತಿಯಾಗಿ" (ಪೂರ್ಣ ಸಂಖ್ಯೆಯಲ್ಲಿ) ಬರುವ ತನಕ ಮಾತ್ರವೇ ಇಸ್ರಾಯೇಲ್ಯರು "ಕುರುಡರಾಗಿರುವರು." ನಂತರ ಇಸ್ರಾಯೇಲ್ಯರ ಹೃದಯ ಮತ್ತು ಮನಸ್ಸುಗಳ ಮೇಲಿರುವ ಅಂಧತೆಯು ತೆಗೆಯಲ್ಪಡುವದು ಎಂಬದಾಗಿ ಪೌಲನು ಹೇಳಿದ್ದಾನೆ. **26**

**11:26** *"ಇಸ್ರಾಯೇಲ್ ಜನವೆಲ್ಲಾ"*– ಅನ್ಯಜನರೆಲ್ಲರೂ ಪೂರ್ಣ ಸಂಖ್ಯೆಯಲ್ಲಿ ಬಂದ ನಂತರ ಇಸ್ರಾಯೇಲ್ ಜನಾಂಗವು ಪೂರ್ಣವಾಗಿ ಅಸ್ತಿತ್ವಕ್ಕೆ ಬರುವದು ಎಂಬದು ಪೌಲನ ಮಾತುಗಳ ಅರ್ಥವಾಗಿದೆ. (ಆ ಸಮಯವು ಇನ್ನೂ ಬಂದಿಲ್ಲ.) ಈ ಹೇಳಿಕೆಯ ಪುರಾವೆಗೆ ಪೌಲನು ಯೆಶಾಯ 59:20-21; 27:9 ವಾಕ್ಯಗಳನ್ನು ತಿಳಿಸಿದ್ದಾನೆ. "ಚೀಯೋನ್" ಎಂದರೆ ಯೆರೂಸಲೇಮ್. "ಯಾಕೋಬ್" ಎಂದರೆ ಇಸ್ರಾಯೇಲ್ ಜನರು. "ಒಡಂಬಡಿಕೆ" –ಎಂದರೆ ದೇವರು ಇಸ್ರಾಯೇಲ್ ಜನರೊಂದಿಗೆ ಮಾಡಿಕೊಳ್ಳುವೆನು ಎಂಬದಾಗಿ ಹೇಳಿರುವ ಹೊಸ ಒಡಂಬಡಿಕೆ – ಯೆರೆ 31:31-34. **28**

**11:28** *"ಶತ್ರುಗಳು"*– ಅಪನಂಬಿಕೆಯುಳ್ಳ ಯೆಹೂದ್ಯರು ಸುವಾರ್ತೆಯು ಸಾರುವದನ್ನು ಮತ್ತು ಅನ್ಯರು ಯೇಸು ಕ್ರಿಸ್ತನ ಕಡೆಗೆ ಬರುವದನ್ನು ತಡೆಯಲು ತಮ್ಮಿಂದಾಗುವ ಎಲ್ಲಾ ಪ್ರಯತ್ನಗಳ ಮೂಲಕ ಹೋರಾಡಿದರು (1 ಥೆಸ 2:14-16).

*"ಪ್ರಿಯರು"*– ಇಸ್ರಾಯೇಲ್ ಜನಾಂಗದ ಅಪನಂಬಿಕೆ ಮತ್ತು ದುಷ್ಟ ಸ್ವಭಾವದ ಹೊರತಾಗಿಯೂ ದೇವರು ಅವರನ್ನು ಪ್ರೀತಿಸುವವನಾಗಿದ್ದಾನೆ. ಇದಕ್ಕೆ ಕಾರಣ ಅವರ ಮೂಲಪಿತೃಗಳಾಗಿದ್ದಾರೆ (ಅಬ್ರಹಾಮ, ಇಸಾಕ ಮತ್ತು ಯಾಕೋಬ). **29**

**11:29** ಮಲಾಕಿ 3:6ರೊಂದಿಗೆ ಹೋಲಿಸಿ ನೋಡಿರಿ. ದೇವರು ಇಸ್ರಾಯೇಲ್ಯರನ್ನು ಈ ಕಾಲದಲ್ಲಿ ದೂರಮಾಡಿದ್ದಾನಾದರೂ, ಅವರ ವಿಷಯದಲ್ಲಿ ಆತನು ತನ್ನ ಮನಸ್ಸನ್ನು ಬದಲಾಯಿಸಿಕೊಂಡಿಲ್ಲ. ಆತನು ಈಗಲೂ ಅವರನ್ನು ತನ್ನ ಜನಾಂಗವೆಂದು ಎಣಿಸುತ್ತಾನೆ. ಆತನು ಅವರಿಗೆ ಕೊಟ್ಟಿರುವ ಕೆಲವು ವರಗಳನ್ನು 9:4-5ರಲ್ಲಿ ನೋಡಬಹುದಾಗಿದೆ. **30-31**

**11:30-31** ಅನ್ಯರೊಳಗಿಂದ ಬಂದ ವಿಶ್ವಾಸಿಗಳು ಒಮ್ಮೆ ಈಗ ಯೆಹೂದ್ಯರು ಅಪನಂಬಿಕೆಯುಳ್ಳವರಾಗಿರುವಂತೆ ಅಪನಂಬಿಕೆಯುಳ್ಳವರು ಮತ್ತು ನಾಶನಮಾರ್ಗದಲ್ಲಿರುವವರಾಗಿದ್ದರು. ಆದರೆ ದೇವರು ಅನ್ಯರಿಗೆ ಕರುಣೆ ತೋರಿದಂತೆಯೇ

ಅವಿಧೇಯರಾಗಿರುವ ತನ್ನ ಜನರಿಗೂ ಕರುಣೆ ತೋರುವನು. **32**

**11:32** ಗಲಾ 3:23-24 ರೊಂದಿಗೆ ಹೋಲಿಸಿ ನೋಡಿರಿ. ದೇವರು ತನ್ನ ನೀತಿಯುಳ್ಳ ನ್ಯಾಯತೀರ್ಪಿನ ಪ್ರಕಾರ ಅನ್ಯರನ್ನು ಅವರ ಹೃದಯದ ದುಷ್ಟತನಗಳಿಗೆ ಒಪ್ಪಿಸಿದನು (1:24-32). ದೇವರು ಯೆಹೂದ್ಯರನ್ನು ಕಠಿಣಪಡಿಸುವ ಮೂಲಕ ಶಿಕ್ಷಿಸಿದನು ಮತ್ತು ಅವರು ತಮ್ಮ ಅವಿಧೇಯ ಪರಿಸ್ಥಿತಿಯಲ್ಲಿ ಆತನ ಮಗನನ್ನು ಶಿಲುಬೆಗೇರಿಸಿದರು (11:7-8). ಎಲ್ಲರೂ ಪಾಪ ಮತ್ತು ಅವಿಧೇಯತೆಯಲ್ಲಿ ಬಂಧಿಗಳಾಗಿದ್ದರು. ಈ ಸಂದರ್ಭದಲ್ಲಿ ಯೆಹೂದ್ಯರಾಗಲಿ ಗ್ರೀಕರಾಗಲಿ ಎಲ್ಲರಿಗೂ ತನ್ನ ಕರುಣೆಯೊಂದೇ ಮಾರ್ಗವೆಂದು ಆತನು ಪ್ರಕಟಪಡಿಸಿದನು. ದೇವರು ಇಸ್ರಾಯೇಲ್ಯರೊಂದಿಗೆ ರಹಸ್ಯವಾಗಿ ಮಾಡಿದ ಕಾರ್ಯಗಳೆಲ್ಲವೂ ಎಲ್ಲರಿಗೆ ಕರುಣೆ ತೋರುವ ಸಲುವಾಗಿ ಪ್ರೀತಿಯಿಂದ, ಕೃಪೆಯ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಲಾಯಿತು ಎಂಬದನ್ನು ನಾವು ಈ ವಾಕ್ಯಗಳಲ್ಲಿ ನೋಡಬಹುದು. ಆತನು ಮಾನವರನ್ನು ಕಠಿಣಪಡಿಸಿ, ನಂತರ ಶಿಕ್ಷಿಸುವದರಲ್ಲಿ ಸಂತೋಷಪಡುವ ದೇವರಲ್ಲ. ಕರುಣೆಯೇ ಆತನ ಸಂತೋಷವಾಗಿದೆ (ಮೀಕ 7:18-19; ಪ್ರಲಾ 3:31-33). ಆದರೆ ನಾವು ಈ ವಾಕ್ಯವನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬಾರದು. ಎಲ್ಲಾ ಜನರು ಅಂತಿಮವಾಗಿ ರಕ್ಷಣೆ ಹೊಂದುವರು ಎಂಬದಾಗಿ ಸತ್ಯವೇದವು ಕಲಿಸುವದಿಲ್ಲ. ಯೇಸು ಕ್ರಿಸ್ತನನ್ನು ನಿರಾಕರಿಸಿ ತಮ್ಮ ಪಾಪಗಳಲ್ಲಿಯೇ ಸಾಯುವವರು ಶಾಶ್ವತವಾಗಿ ನಾಶವಾಗುತ್ತಾರೆ (2:5-6; 6:23; ಯೋಹಾನ 3:36; ಪ್ರಕ 21:8). ಇಲ್ಲಿ "ಎಲ್ಲರಿಗೂ ಕರುಣೆ" ಎಂದರೆ ಯೆಹೂದ್ಯರಾಗಲಿ ಅನ್ಯರಾಗಲಿ ಎಲ್ಲರಿಗೂ ದೊರೆಯುತ್ತದೆ ಎಂಬದಾಗಿದೆ. ಕರುಣೆ ತೋರುವದರಲ್ಲಿ ದೇವರು ಅವರ ನಡುವೆ ಯಾವ ವ್ಯತ್ಯಾಸವನ್ನೂ ಮಾಡುವದಿಲ್ಲ ಮತ್ತು ಯೆಹೂದ್ಯರು ಹಾಗೂ ಅನ್ಯರ ರಕ್ಷಣೆಯು ದೇವರ ಯೋಜನೆಗೆ ಅನುಸಾರವಾದದ್ದಾಗಿದೆ. **33-36**

**11:33-36** ಪೌಲನು ಸುವಾರ್ತೆ ಮತ್ತು ದೇವರು ಯೆಹೂದ್ಯರು ಹಾಗೂ ಅನ್ಯರೊಂದಿಗೆ ನಡೆದುಕೊಳ್ಳುವ ವಿಧಾನದ ಬಗ್ಗೆ ಕೊಡುತ್ತಿದ್ದ ವಿವರಣೆಯನ್ನು ಇಲ್ಲಿಗೆ ಮುಗಿಸಿದ್ದಾನೆ. ತಾನು ಎಲ್ಲವನ್ನೂ ವಿವರಿಸಿಲ್ಲ ಎಂಬದನ್ನು ಆತನು ಚೆನ್ನಾಗಿ ಬಲ್ಲವನಾಗಿದ್ದನು. ಈ ತಿಳುವಳಿಕೆಗೆ ಮೀರಿದ ರಹಸ್ಯಗಳು ಮತ್ತು ಅಗಾಧತೆಗಳು ದೇವರ ಜ್ಞಾನದಲ್ಲಿವೆ ಅವುಗಳನ್ನು ಗ್ರಹಿಸಿಕೊಳ್ಳಲು ಮಾನವನಿಂದ ಆಗುವದಿಲ್ಲ. ಆದ್ದರಿಂದ ಆತನು ಈಗ ದೇವರು ದೇವರೇ ಎಂದು ಹೇಳುತ್ತಿದ್ದಾನೆ ಹಾಗೂ ಆತನನ್ನು ಸ್ತುತಿಸುತ್ತಿದ್ದಾನೆ. **33**

**11:33** ನಾವು ದೇವರ ವಾಕ್ಯವನ್ನು ಕಲಿತುಕೊಂಡಷ್ಟು ಮತ್ತು ಆತನು ತನ್ನ ಕುರಿತು ಕೊಟ್ಟಿರುವ ಪ್ರಕಟನೆ ಅರ್ಥಮಾಡಿಕೊಂಡಷ್ಟೂ, ಆತನು ಎಲ್ಲದರಲ್ಲಿಯೂ ಉನ್ನತನಾಗಿರುವ ಹಾಗೆ ಜ್ಞಾನದಲ್ಲಿ ನಮಗಿಂತಲೂ ಉನ್ನತನಾಗಿದ್ದಾನೆ ಎಂಬದನ್ನು ನಾವು ನೋಡಬಹುದಾಗಿದೆ. ಲೋಕದಲ್ಲಿ ತಾನು ಮಾಡುತ್ತಿರುವ ಕಾರ್ಯಗಳನ್ನೆಲ್ಲಾ ಆತನು

ಬಲ್ಲವನಾಗಿದ್ದಾನೆ. ಆತನು ಪ್ರಕಟಪಡಿಸಿರುವದರಲ್ಲಿ ಕೇವಲ ಸ್ವಲ್ಪವನ್ನು ಮಾತ್ರವೇ ನಾವು ಬಲ್ಲವರಾಗಿದ್ದೇವೆ. ಆತನ ಮಾರ್ಗವನ್ನು ಟೀಕಿಸುವ ಮತ್ತು ನಮ್ಮೊಂದಿಗೆ ಹಾಗೂ ಇತರರೊಂದಿಗೆ ಆತನು ನಡೆದುಕೊಳ್ಳುವ ಬಗ್ಗೆ (ಅನೇಕರ ಹಾಗೆ) ಆರೋಪ ಮಾಡುವ ಬದಲು, ಆತನಲ್ಲಿ ಭರವಸೆಯಿಟ್ಟು ಆತನ ಸುತ್ತಿಸುವದನ್ನು ಹಾಗೂ ನಮ್ಮ ಮನಸ್ಸುಗಳನ್ನು ಆತನ ನಿತ್ಯವಾದ ಜ್ಞಾನಕ್ಕೆ ಒಪ್ಪಿಸುವದನ್ನು ಕಲಿತುಕೊಳ್ಳಬೇಕಾಗಿದೆ. ಯೋಬ 40:3-5; 42:1-6 ವಾಕ್ಯಗಳೊಂದಿಗೆ ಹೋಲಿಸಿ ನೋಡಿರಿ. **34**

**11:34** ಯೆಶಾಯ 40:13. ಈ ವಾಕ್ಯದ ಪರಿಸ್ಥಿತಿಯನ್ನು ಗಮನಿಸಿರಿ (ಯೆಶಾಯ 40:12-26). ಇದು ದೇವರ ಶ್ರೇಷ್ಠತೆಯ ಸುಂದರವಾದ ಚಿತ್ರವನ್ನು ಕೊಡುತ್ತದೆ. ಸೃಷ್ಟಿಯ ಕಾರ್ಯದಲ್ಲಿ ಮತ್ತು ಲೋಕದ ಆಡಳಿತದಲ್ಲಿ ದೇವರಿಗೆ ಯಾವ ಮನುಷ್ಯನ ಸಲಹೆಯು ಬೇಕಾಗಿರಲಿಲ್ಲ. **35**

**11:35** ಯೋಬ 41:11. ದೇವರು ಮಾನವರಿಗೆ ಸಾಲಗಾರನಲ್ಲ. ಆತನು ಯಾರಿಗೂ ರಕ್ಷಣೆ ಅಥವಾ ಬೇರೆ ಯಾವುದನ್ನೂ ಕೊಡಬೇಕಾಗಿಲ್ಲ. ಆತನು ಮಾನವರೊಂದಿಗೆ ನಡೆದುಕೊಳ್ಳುವ ರೀತಿಯೆಲ್ಲವೂ ಕೃಪೆ ಹಾಗೂ ಕರುಣೆಯ ಆಧಾರವಾಗಿರುತ್ತದೆ. ಯಾಕಂದರೆ ಎಲ್ಲರೂ ಆತನಿಗೆ ಅವಿಧೇಯರಾಗಿದ್ದಾರೆ. ಆತನು ನ್ಯಾಯವಾಗಿಯೇ ಮಾನವನ ಜೀವಿತಕ್ಕೆ ಬೇಕಾದ ಎಲ್ಲಾ ಅವಶ್ಯಕತೆಗಳನ್ನು ಕಸಿದುಕೊಂಡು ಅವರನ್ನು ನರಕಕ್ಕೆ ಕಳುಹಿಸಬಹುದಾಗಿದೆ. **36**

**11:36** "*ಆತನಿಂದ*"– ದೇವರು ಸೃಷ್ಟಿಕರ್ತನಾಗಿದ್ದಾನೆ."

"*ಆತನಿಂದ ನಡೆಯುತ್ತಾ*"– ದೇವರು ಲೋಕವನ್ನು ಕಾಯುತ್ತಾನೆ ಮತ್ತು ಆಳ್ವಿಕೆ ಮಾಡುತ್ತಾನೆ.

"*ಆತನಿಗಾಗಿ*"– ಲೋಕದಲ್ಲಿರುವ ಎಲ್ಲಾ ಕಾರ್ಯಗಳು ದೇವರ ಉದ್ದೇಶವನ್ನು ನೆರವೇರಿಸುತ್ತವೆ. ಅವು ಆತನಿಗಾಗಿ ಅಸ್ತಿತ್ವದಲ್ಲಿವೆಯೇ ಹೊರತು ಅವುಗಳಿಗಾಗಿಯಲ್ಲ. ಎಲ್ಲವುಗಳಿಗೆ ಅರ್ಹನಾಗಿರುವ ಆತನಿಗೆ ಮಾತ್ರವೇ ಮಹಿಮೆ ಸಲ್ಲಿಸುವದನ್ನು ನಾವೆಲ್ಲರೂ ಪೌಲನಿಂದ ಕಲಿತುಕೊಳ್ಳೋಣ.

# 12 1

**12:1** ಪೌಲನು ಈ ಪತ್ರಿಕೆಯ ಸೈದ್ಧಾಂತಿಕ ಭಾಗವನ್ನು ಮುಗಿಸಿದ್ದಾನೆ. ಎಲ್ಲರೂ ಪಾಪಿಗಳಾಗಿದ್ದಾರೆ ಮತ್ತು ದೇವರ ಕೋಪಕ್ಕೆ ಪಾತ್ರರಾಗಿದ್ದಾರೆ ಎಂಬದನ್ನು ತೋರಿಸಿಕೊಟ್ಟಿದ್ದಾನೆ ಹಾಗೂ ದೇವರ ಕರುಣೆಯ ಬಗ್ಗೆ ಮಹತ್ವವಾಗಿರುವ ಸಂಗತಿಯನ್ನು ಪ್ರಕಟಪಡಿಸಿದ್ದಾನೆ. ಇಲ್ಲಿಂದ ಈ ಪತ್ರಿಕೆಯ ಮುಕ್ತಾಯದ ತನಕ ದೇವರು ವಿಶ್ವಾಸಿಗಳಿಗೆ ಕರುಣೆಯುಳ್ಳವನಾಗಿರುವದರಿಂದ ಅವರು ಪ್ರಾಯೋಗಿಕವಾಗಿ ಯಾವ ರೀತಿ ಅನುದಿನ ಜೀವಿಸಬೇಕೆಂದು ಬರೆದಿದ್ದಾನೆ. 1-11 ಅಧ್ಯಾಯಗಳಲ್ಲಿ ಪ್ರಕಟಪಡಿಸಲಾಗಿರುವ

ಅದ್ಭುತವಾದ ಸತ್ಯಗಳನ್ನೆಲ್ಲಾ ಓದುವವರು ಬದಲಾಗದೆ ಅವುಗಳಿಗೆ ಅವಿಧೇಯರಾಗಿ ನಡೆದುಕೊಂಡರೆ ಏನು ಪ್ರಯೋಜನ? ಮೊದಲನೆಯದಾಗಿ ನಾವೆಲ್ಲರೂ ಮಾಡಬೇಕಾಗಿರುವ ಕಾರ್ಯ ನಮ್ಮನ್ನು ಸಂಪೂರ್ಣವಾಗಿ ದೇವರಿಗೆ ಒಪ್ಪಿಸಿಕೊಡಬೇಕು. ಹಳೆಯ ಒಡಂಬಡಿಕೆಯ ಕಾಲದಲ್ಲಿ ಯಾಜಕರು ವಧಿಸಲ್ಪಟ್ಟ ಪ್ರಾಣಿಗಳನ್ನು ಯಜ್ಞವಾಗಿ ಅರ್ಪಿಸುತ್ತಿದ್ದರು. ಈಗ ವಿಶ್ವಾಸಿಗಳು - ಹೊಸ ಒಡಂಬಡಿಕೆಯ ಯಾಜಕರು (ಪ್ರಕ 1:6; 1 ಪೇತ್ರ 2:5,9; ಇಬ್ರಿ 13:15-16) – ದೇವರು ತನ್ನ ಮಹಿಮೆಗಾಗಿ ಉಪಯೋಗಿಸಿಕೊಳ್ಳುವ ಸಲುವಾಗಿ ತಮ್ಮ ದೇಹಗಳನ್ನು ಸಜೀವ ಯಜ್ಞವಾಗಿ ಅರ್ಪಿಸಬೇಕು (6:13,19; 1 ಕೊರಿಂಥ 6:13,19,20). ದೇವರಿಗೆ ಕೇವಲ ಮಾತುಗಳು ಮಾತ್ರವಲ್ಲ ಬದಲಗಿ ಈ ರೀತಿಯ ಆರಾಧನೆ ಬೇಕಾಗಿದೆ. ಈ ರೀತಿಯ ಆರಾಧನೆ ದೇವರಿಗೆ “ಮೀಸಲಾದದ್ದು” ಮತ್ತು “ಮೆಚ್ಚಿಕೆಯಾದದ್ದಾಗಿದೆ.” **2**

**12:2** “*ಇಹಲೋಕ*”– ಹೊಸ ಒಡಂಬಡಿಕೆಯು ಮಾನವರ ಲೋಕದ ಬಗ್ಗೆ ಬಹಳಷ್ಟು ವಿಷಯಗಳನ್ನು ಹೇಳುತ್ತದೆ. ಲೋಕವು ದೇವರನ್ನು ತಿಳಿದುಕೊಂಡಿಲ್ಲ (ಯೋಹಾನ 1:10) ಆತ್ಮೀಕ ಅಂಧಕಾರವನ್ನು ಪ್ರೀತಿಸುತ್ತದೆ (ಯೋಹಾನ 3:19) ಯೇಸು ಕ್ರಿಸ್ತನನ್ನು ಮತ್ತು ಆತನ ಹಿಂಬಾಲಕರನ್ನು ದ್ವೇಷಿಸುತ್ತದೆ (ಯೋಹಾನ 7:7; 15:19) ಅದರ “ಅಧಿಕಾರಿ” ಮತ್ತು “ದೇವರು” ಸೈತಾನನಾಗಿದ್ದಾನೆ (ಯೋಹಾನ 12:31; 2 ಕೊರಿಂಥ 4:4) ಅದು ದೇವರ ಆತ್ಮವನ್ನು ಹೊಂದಿಕೊಳ್ಳಲಾರದು (ಯೋಹಾನ 14:17) ಅದರ ಜ್ಞಾನವು ಮೂರ್ಖತನವಾಗಿದೆ (1 ಕೊರಿಂಥ 1:20; 3:19) ಅದು ಕೇವಲ ತಾತ್ಕಾಲಿಕವಾಗಿದೆ (1 ಕೊರಿಂಥ 7:31; 2 ಕೊರಿಂಥ 4:18) ಅದು ದೇವರಿಲ್ಲದೆ ಮತ್ತು ನಿರೀಕ್ಷೆಯಿಲ್ಲದ್ದಾಗಿದೆ (ಎಫೆ 2:12) ಅದರ ಸ್ನೇಹವು ದೇವರೊಂದಿಗೆ ವೈರತ್ವವಾಗಿದೆ (ಯಾಕೋಬ 4:4) ಅದು ಭ್ರಷ್ಟವಾಗಿದೆ (1 ಪೇತ್ರ 1:4) ಅದು ಗರ್ವ ಮತ್ತು ಕಣ್ಣಿನಾಸೆಯಿಂದ ತುಂಬಿದೆ (1 ಯೋಹಾನ 2:15-17) ಅದು ದುಷ್ಟತನದಲ್ಲಿದೆ (1 ಯೋಹಾನ 5:19) ಇಹಲೋಕ ನಡವಳಿಕೆಯನ್ನು “ಅನುಸರಿಸಬೇಡಿರಿ” ಎಂದು ಪೌಲನು ಹೇಳಿರುವದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಲೋಕದಲ್ಲಿರುವ ಪರಿಣಾಮಕಾರಿಯಾದ ಕಾರ್ಯಗಳು ತನ್ನ ಜನರನ್ನು ರೂಪಿಸುತ್ತದೆ ಮತ್ತು ಅವರು ದುಷ್ಟ ರೀತಿಯಲ್ಲಿ ನಡೆದುಕೊಳ್ಳುವಂತೆ ಮಾಡುತ್ತವೆ. ವಿಶ್ವಾಸಿಗಳು ಯೇಸು ಕ್ರಿಸ್ತನ ಸಾರೂಪ್ಯಕ್ಕೆ “ಮಾರ್ಪಡಬೇಕು.” ಮಾರ್ಪಡುವಿಕೆಯು ದೇವರಾತ್ಮನ ಆಂತರ್ಯದ ಕಾರ್ಯವಾಗಿದೆ. ವಿಶ್ವಾಸಿಗಳು ಲೋಕದ ಮಾರ್ಗಗಳನ್ನು ತ್ಯಜಿಸಲು ಬಾಹ್ಯವಾಗಿ ಹೆಚ್ಚಿನ ಕಾರ್ಯವನ್ನು ಮಾಡಬೇಕು-ಅವರ ಆಂತರಿಕ ಜೀವಿತವು ಸಹ ಸಂಪೂರ್ಣ ವ್ಯತ್ಯಸ್ಥವಾಗಿರಬೇಕು. ಅದು ಅವರು ತಮ್ಮ ಮನಸ್ಸುಗಳನ್ನು “ನವೀಕರಿಸಿಕೊಳ್ಳುವಾಗ” ಸಾಧ್ಯವಾಗುತ್ತದೆ (ಎಫೆ 4:22-23). ಆಲೋಚನೆಗಳು ಅತ್ಯಂತ ಪ್ರಾಮುಖ್ಯವಾಗಿವೆ. ವಿಶ್ವಾಸಿಗಳು ಯಾವ ರೀತಿ ನಡೆದುಕೊಳ್ಳುತ್ತಾರೆ ಎಂಬದನ್ನು ಇವು ವ್ಯಾಪಕವಾಗಿ ವ್ಯಕ್ತಪಡಿಸುತ್ತವೆ. ಮಾರ್ಪಟ್ಟ ಜೀವಿತವನ್ನು ಜೀವಿಸಲ್ಲು ಇರುವ ಏಕೈಕ ಮಾರ್ಗ ಎಂದರೆ

ನಮ್ಮ ಆಲೋಚನೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು ಮತ್ತು ನಮ್ಮ ಮನಸ್ಸುಗಳನ್ನು ದೇವರ ಸತ್ಯದಿಂದ ತುಂಬಿಸಿಕೊಳ್ಳಬೇಕು (8:5-6; 2 ಕೊರಿಂಥ 10:5; ಕೊಲೊ 3:16; ಕೀರ್ತನೆ 1:1-3; ಫಿಲಿಪ್ಪಿ 2:5; 4:8; ಇಬ್ರಿ 8:10). ನಾವು ಪೂರ್ಣ ಮನಸ್ಸಿನಿಂದ ದೇವರನ್ನು ಪ್ರೀತಿಸಬೇಕು (ಮತ್ತಾಯ 22:37). ನಮ್ಮಲ್ಲಿ ಇಂಥ "ನವೀಕರಣ" ಆಗಬೇಕು. ತಮ್ಮನ್ನು ದೇವರಿಗೆ ಒಪ್ಪಿಸಿಕೊಡದವರು, ಮತ್ತು ಆಂತರಿಕ ಮಾರ್ಪಡುವಿಕೆಯಲ್ಲಿ ದೇವರಾತ್ಮನ ಕಾರ್ಯದೊಂದಿಗೆ ಸಹಕರಿಸದವರು, ತಮ್ಮ ವಿಷಯದಲ್ಲಿ ದೇವರ ಚಿತ್ತವೇನೆಂದು ತಿಳಿದುಕೊಳ್ಳಲು ಆಗುವದಿಲ್ಲ. ಒಂದುವೇಳೆ ನಾವು ಪರಿಪೂರ್ಣವಾದ ಆ ಚಿತ್ತವನ್ನು ತಿಳಿದುಕೊಳ್ಳಲು ಮತ್ತು ಹಿಂಬಾಲಿಸಲು ಬಯಸಿದರೆ, ಆತನು ಇಲ್ಲಿ ಹೇಳಿರುವ ಕಾರ್ಯವನ್ನು ಮಾಡಬೇಕು. **3**

**12:3** 2 ಕೊರಿಂಥ 10:12; ಗಲಾ 6:3. ಪೌಲನು ಇಲ್ಲಿ ವಿಶ್ವಾಸಿಗಳು ಜೀವಿಸಬೇಕಾದ ಮಾರ್ಪಟ್ಟ ಜೀವಿತದ ಬಗ್ಗೆ ಮಾತನಾಡುತ್ತಿದ್ದಾನೆ. ಆತನು ಅವರ ಮನಸ್ಸುಗಳೊಂದಿಗೆ ಅದರಲ್ಲೂ ವಿಶೇಷವಾಗಿ ಅವರ ಕುರಿತಾಗಿರುವ ಆಲೋಚನೆಗಳ ಬಗ್ಗೆ ಪ್ರಾರಂಭಿಸುತ್ತಿರುವದನ್ನು ಗಮನಿಸಿರಿ. ಹಾಗೆಯೇ ದೇವರೇ ಕೆಲವರಿಗೆ ಹೆಚ್ಚಿನ ನಂಬಿಕೆಯನ್ನೂ ಕೊಡುತ್ತಾನೆ ಎಂಬದನ್ನು ಗಮನಿಸಿರಿ (1 ಕೊರಿಂಥ 12:9). **4-8**

**12:4-8** ವಿಶ್ವಾಸಿಗಳು ಒಂದೇ ಆತ್ಮೀಕ "ದೇಹವಾಗುವ" ಸಲುವಾಗಿ ದೇವರಾತ್ಮನೊಂದಿಗೆ ಐಕ್ಯವಾಗಿದ್ದಾರೆ. ಯೋಹಾನ 17:21-23; 1 ಕೊರಿಂಥ 12:12-13; ಎಫೆ 4:15-16; 5:23 ನೋಡಿರಿ. ಈ ಆತ್ಮೀಕ ದೇಹದಲ್ಲಿ ಪ್ರತಿಯೊಬ್ಬ ವಿಶ್ವಾಸಿ ಉಳಿದವರೆಲ್ಲರೊಂದಿಗೆ ಸೇರಿದ್ದಾನೆ (ವ 5) ಮತ್ತು ದೇವರು ಪ್ರತಿಯೊಬ್ಬ ವ್ಯಕ್ತಿ ಒಂದು ಅಥವಾ ಹೆಚ್ಚು ತಲಾಂತು ("ವರಗಳು") ಅಥವಾ ಸಾಮರ್ಥ್ಯಗಳನ್ನು ಕೊಟ್ಟಿದ್ದಾನೆ ಆದ್ದರಿಂದ ಅವನಾಗಲಿ ಅಥವಾ ಅವಳಾಗಲಿ ದೇಹದಲ್ಲಿರುವ ಇತರರಿಗೆ ಉಪಯುಕ್ತರಾಗಿರಬೇಕು. ಪ್ರತಿಯೊಬ್ಬ ವ್ಯಕ್ತಿ ತನ್ನ ಸಾಮರ್ಥ್ಯ ಏನು ಎಂದು ತಿಳಿದುಕೊಳ್ಳಬೇಕು ಮತ್ತು ಅದನ್ನು ದೇವರ ಮಹಿಮೆ ಹಾಗೂ ಇತರರ ಹಿತಕ್ಕಾಗಿ ಉಪಯೋಗಿಸಬೇಕು. 1 ಕೊರಿಂಥ 12:7-11,27-31; ಎಫೆ 4:11-13 ನೋಡಿರಿ. **6**

**12:6** *"ಪ್ರವಾದನೆ"*– ಸಂಖ್ಯಾ 11:25; 1 ಕೊರಿಂಥ 12:10,28 ನೋಟ್ಸ್ ನೋಡಿರಿ. **9-21**

**12:9-21** ಇಲ್ಲಿ ವಿಶ್ವಾಸಿಗಳು ಜೀವಿಸಬೇಕಾದ ಮಾರ್ಪಟ್ಟ ಜೀವಿತದ ಸುಂದರ ಚಿತ್ರಣವನ್ನು ಕೊಡಲಾಗಿದೆ. ಇದರ ಅರ್ಥ ಜೊತೆಯಲ್ಲಿರುವ ವಿಶ್ವಾಸಿಗಳಿಗೆ (ವ 9,10,13,15,16), ಕ್ರಿಸ್ತನಿಗೆ (ವ 11,12) ಮತ್ತು ವೈರಿಗಳಿಗೆ (ವ 14,19-21) ಪ್ರೀತಿಯನ್ನು ತೋರಿಸುವದಾಗಿದೆ. **9**

**12:9** *"ಕಪಟತನ"*– ಏನಾದರೂ ಪ್ರಯೋಜನ ಪಡೆಯುವ ಸಲುವಾಗಿ ಎಲ್ಲರೂ ಇತರರನ್ನು ಪ್ರೀತಿಸುವಂತೆ ತೋರ್ಪಡಿಸಿಕೊಳ್ಳುತ್ತಾರೆ. ಆದರೆ ವಿಶ್ವಾಸಿಗಳು

ನಾಟಕವಾಡಬಾರದು.

"*ಹೇಸಿಕೊಂಡು*"– ಒಂದುವೇಳೆ ನಾವು ದೇವರನ್ನು ಪ್ರೀತಿಸಬೇಕಾದ ರೀತಿಯಲ್ಲಿ ಪ್ರೀತಿಸುವದಾದರೆ, ದೇವರಿಗೆ ವಿರುದ್ಧವಾಗಿರುವದನ್ನೆಲ್ಲಾ ದ್ವೇಷಿಸುವದನ್ನು ಕಲಿತುಕೊಳ್ಳುತ್ತೇವೆ – ಕೀರ್ತನೆ 97:10. ನಾವು ಯೇಸು ಕ್ರಿಸ್ತನು ಪ್ರೀತಿಸಿದ ಹಾಗೆ ಜನರನ್ನು ಪ್ರೀತಿಸಬೇಕು, ಆದರೆ ಅವರಲ್ಲಿರುವ (ಮತ್ತು ನಮ್ಮಲ್ಲಿರುವ) ದುಷ್ಟತನವನ್ನು ದ್ವೇಷಿಸಬೇಕು. **10**

**- 12:10** ಯೋಹಾನ 13:34; 15:12,17. **11**

**12:11** 1 ಕೊರಿಂಥ 15:58; ತೀತ 2:14. ಒಂದುವೇಳೆ ನಾವು ದೇವರನ್ನು ಪ್ರೀತಿಸಬೇಕಾದ ರೀತಿಯಲ್ಲಿ ಪ್ರೀತಿಸುವದಾದರೆ ಆತನ ಸೇವೆಯಲ್ಲಿ ಹೆಚ್ಚು ಆಸಕ್ತರಾಗಿರಲು ಬಯಸುತ್ತೇವೆ. ನಿಜವಾಗಿ ಹೇಳುವದಾದರೆ, ಆತನ ಮೇಲೆ ನಮಗಿರುವ ಪ್ರೀತಿ, ನಾವು ಹೇಳುವ ಮಾತುಗಳಲ್ಲಿಯಲ್ಲ ಬದಲಾಗಿ ಮಾಡುವ ಕಾರ್ಯಗಳಲ್ಲಿ ಪ್ರಕಟವಾಗುತ್ತದೆ. ಯೋಹಾನ 2:17ರೊಂದಿಗೆ ಹೋಲಿಸಿ ನೋಡಿರಿ. **12**

**- 12:12** 5:2-5; ಲೂಕ 18:1; ಎಫೆ 6:18; 1 ಥೆಸ 5:17 ನೋಡಿರಿ. **13**

**12:13** ಪ್ರೀತಿಯು ಪ್ರಾಯೋಗಿಕವಾಗಿರಬೇಕು ಮತ್ತು ಕೆಲವೊಮ್ಮೆ ಅದು ಬೆಲೆಯುಳ್ಳದ್ದಾಗಿರುತ್ತದೆ – 1 ಯೋಹಾನ 3:16-18; ಮತ್ತಾಯ 25:34-40.

"*ಕೊರತೆ ಬಂದಾಗ*"– ಒಬ್ಬನು ತನ್ನಲ್ಲಿರುವದನ್ನು ಇತರರೊಂದಿಗೆ ಹಂಚಿಕೊಳ್ಳಬೇಕೇ ಹೊರತು ಇತರರು ಕೊಡುವದಕ್ಕೆ ತಡೆಯೊಡ್ಡಬಾರದು. 2 ಕೊರಿಂಥ 9:15ರಲ್ಲಿ ಕೊಡುವದರ ಬಗ್ಗೆ ಕೊಡಲಾಗಿರುವ ನೋಟ್ಸ್ ನೋಡಿರಿ.

"*ಅತಿಥಿ ಸತ್ಕಾರ*"– ಕೆಲವರು ಮಾತ್ರವೇ ಸೂಕ್ತ ಆಸಕ್ತಿ ತೋರಿಸುತ್ತಾರೆ! **14**

**- 12:14** ಮತ್ತಾಯ 5:46-48; 1 ಪೇತ್ರ 2:21-23. **15**

**12:15** 1 ಕೊರಿಂಥ 12:25-27; ಗಲಾ 6:2. ವಿಶ್ವಾಸಿಗಳು ತಣ್ಣಗೆ, ಬೆಚ್ಚಗೆ ಮತ್ತು ಸ್ವಾರ್ಥಪರರಾಗಿ ಇರಬಾರದು ಬದಲಾಗಿ ಇತರರ ದುಃಖಗಳಲ್ಲಿ ಮತ್ತು ಸಂತೋಷಗಳಲ್ಲಿ ಭಾಗಿಯಾಗಬೇಕು. **16**

**12:16** ಅಪೊ 4:32; ಎಫೆ 4:2-3. ಗರ್ವ, ದೊಡ್ಡಸ್ತಿಕೆ ಮತ್ತು ಇತರರಿಗಿಂತ ತಮ್ಮನ್ನು ಮಾತ್ರವೇ ಬುದ್ಧಿವಂತರೆಣಿಸಿಕೊಳ್ಳುವದು ವಿಶ್ವಾಸಿಗಳ ಸಮಾಧಾನ ಹಾಗೂ ಐಕ್ಯತೆಯನ್ನು ಹಾಳುಮಾಡುತ್ತದೆ. ಯೇಸು ಕ್ರಿಸ್ತನಲ್ಲಿ ಕೆಳಗಣ ಸ್ಥಾನದಲ್ಲಿರುವವರು ಮತ್ತು ಉನ್ನತಸ್ಥಾನದಲ್ಲಿರುವವರು ಸಮಾನರಾಗಿದ್ದಾರೆ ಮತ್ತು ಅದಕ್ಕನುಸಾರವಾಗಿಯೇ ಎಲ್ಲರೂ ನಡೆದುಕೊಳ್ಳಬೇಕು – ಅಪೊ 6:1; 1 ಕೊರಿಂಥ 12:13; ಗಲಾ 3:18. ಜಾತಿಯ ಆಧಾರದ ಮೇರೆಗೆ ಗರ್ವ ಮತ್ತು ಹೊಂದಾಣಿಕೆಯಿಲ್ಲದೆ ನಡಕೊಳ್ಳುವದು ಅಥವಾ ಸಮಾಜದಲ್ಲಿ ಉನ್ನತ ಸ್ಥಾನದ ನಿಮಿತ್ತ ಹೆಚ್ಚಳಪಡುವದು ಅಥವಾ ಸಭೆಯಲ್ಲಿ ಕರ್ತನಿಗೆ

ಅಸಹ್ಯರಾಗಿ ನಡೆದುಕೊಳ್ಳಬಾರದು. **17-18**

**12:17-18** ವಚನ 21; ಮತ್ತಾಯ 5:38-41. ವಿಶ್ವಾಸಿಗಳು ಭೂಲೋಕದಲ್ಲಿ ಕ್ರಿಸ್ತನನ್ನು ಪ್ರತಿನಿಧಿಸುವವರಾಗಿದ್ದಾರೆ. ಒಳ್ಳೆಯ ಸ್ವಭಾವವು ಆತನಿಗೆ ಗೌರವವನ್ನು ತರುತ್ತದೆ, ಕೆಟ್ಟ ಸ್ವಭಾವವು ಆತನಿಗೆ ಅಗೌರರವನ್ನು ತರುತ್ತದೆ. 2:24; 1 ಪೇತ್ರ 2:9; ಇಬ್ರಿ 12:14ರೊಂದಿಗೆ ಹೋಲಿಸಿ ನೋಡಿರಿ. **19**

**12:19** ಧರ್ಮೋ 32:35. ಸೇಡು ತೀರಿಸಿಕೊಳ್ಳುವ ಬಯಕೆಯು ವ್ಯಕ್ತಿಗತವಾಗಿ, ಕುಟುಂಬವಾಗಿ ಮತ್ತು ಜನಾಂಗವಾಗಿ ದೊಡ್ಡ ಸಮಸ್ಯೆಯನ್ನುಂಟು ಮಾಡುತ್ತದೆ. ಯೇಸು ಕ್ರಿಸ್ತನ ಜನರ ಹೃದಯಗಳಲ್ಲಿ ಮುಯ್ಯಿ ತೀರಿಸಿಕೊಳ್ಳಬೇಕೆಂಬ ಬಯಕೆಯೇ ಇರಬಾರದು. ಮತ್ತಾಯ 5:38-44; 2 ಥೆಸ 1:6-9; ಕೀರ್ತನೆ 94:1; ಸಂಖ್ಯಾ 31:1-3; ನಹೂ 1:2,7 ನೋಟ್ಸ್ ನೋಡಿರಿ. **20**

**12:20** ಜ್ಞಾನೋ 25:21-22; ಲೂಕ 6:27-28; 1 ಪೇತ್ರ 2:21-23. ನಮಗೆ ನೋವು ಮಾಡುವವರಿಗೆ ನೋವು ಮಾಡುವದು ದುಷ್ಟತನದಿಂದ ದುಷ್ಟತನವನ್ನು ಜಯಿಸಲು ಪ್ರಯತ್ನಿಸುವದಕ್ಕೆ ಸಮಾನವಾಗಿದೆ. ಇತರರ ದುಷ್ಟ ಕಾರ್ಯಗಳು ದೇವರ ವಿಧಿಗಳಿಗೆ ಅವಿಧೇಯರಾಗುವಂತೆ ಮತ್ತು ದುಷ್ಟಕಾರ್ಯಗಳಲ್ಲಿ ಭಾಗಿಯಾಗುವಂತೆ ಮಾಡುತ್ತವೆ.

# 13 1-7

**13:1-7** ಕ್ರಿಸ್ತನಲ್ಲಿರುವ ವಿಶ್ವಾಸಿಗಳನ್ನು ದೇವರ ರಾಜ್ಯದೊಳಗೆ ಸೇರಿಸಲಾಗಿದೆ. ಅವರು ತಮ್ಮ ಪ್ರಾಥಮಿಕ ಪ್ರಾಮಾಣಿಕತೆಯನ್ನು ರಾಜಾಧಿರಾಜನಾಗಿರುವ ಯೇಸು ಕ್ರಿಸ್ತನಿಗೆ ತೋರುವವರಾಗಿದ್ದಾರೆ. ಆದರೆ ಅವರಿನ್ನೂ ಲೋಕದೊಳಗಿದ್ದಾರೆ ಮತ್ತು ಮಾನವರ ಅಧಿಕಾರದಲ್ಲಿದ್ದಾರೆ. ಈ ವಾಕ್ಯಗಳು ಅವರು ಅಧಿಕಾರಿಗಳೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬದನ್ನು ತೋರಿಸುತ್ತವೆ. **1**

**13:1** ಎಲ್ಲಾ ನಾಯಕರು ಮತ್ತು ಸರ್ಕಾರಿ ಅಧಿಕಾರಿಗಳು ದೇವರಿಗೆ ವಿಧೇಯರಾಗುವ ಒಳ್ಳೆಯ ವ್ಯಕ್ತಿಗಳು ಎಂಬದು ಇದರ ಅರ್ಥವಲ್ಲ. (ಪೌಲನು ಈ ಮಾತುಗಳನ್ನು ಬರೆಯುವಾಗ ರೋಮಾಪುರದವರು ಅಥವಾ ಲೋಕದ ಯಾವುದೇ ರಾಷ್ಟ್ರ ಎಂದೂ ನೋಡಿರದ ಕ್ರೂರ ಅರಸನಾದ ನಿರೋ ಆಳ್ವಿಕೆ ಮಾಡುತ್ತಿದ್ದನು.) ಆದರೆ ಅವರ ತಪ್ಪುಗಳು, ಪಾಪಗಳು, ವಿಫಲತೆಗಳು ಮತ್ತು ಭ್ರಷ್ಟಾಚಾರದ ಹೊರತಾಗಿಯೂ ದೇವರೇ ಅಧಿಕಾರಗಳನ್ನು ನೇಮಿಸುವಾತನಾಗಿದ್ದಾನೆ (ಕೀರ್ತನೆ 75:2-7; ದಾನಿ 4:34-35). ಜನರ ಪಾಪಗಳನ್ನು ಶಿಕ್ಷಿಸುವದಕ್ಕಾಗಿ ದೇವರು ಕೆಲವೊಮ್ಮೆ ದುಷ್ಟ ನಾಯಕರು ಅಧಿಕಾರಕ್ಕೆ ಬರಲು ಅನುಮತಿಸುತ್ತಾನೆ. ಆದರೆ ಕೆಟ್ಟ ಸರ್ಕಾರವು ಯಾವುದೇ ಸರ್ಕಾರ ಇಲ್ಲದಿರುವದಕ್ಕಿಂತಲೂ ಉತ್ತಮವಾಗಿದೆ. ಅರಾಜಕತೆ - ಸರ್ಕಾರ ಸಂಪೂರ್ಣವಾಗಿ ಪತನವಾಗುವದು – ಇದು

ಯಾವುದೇ ದೇಶಕ್ಕೆ ಸಂಭವಿಸಿದರೂ ಘೋರವಾದ ಪರಿಸ್ಥಿತಿಯಾಗಿದೆ, ಆಗ ದುಷ್ಟತನಗಳನ್ನು ತಡೆಯಲು ಯಾವುದೇ ಸರ್ಕಾರ ಅಧಿಕಾರದಲ್ಲಿರುವದಿಲ್ಲ. ತಮ್ಮ ಅಧಿಕಾರಿಗಳಿಗೆ ವಿಧೇಯರಾಗುವದು ಕ್ರೈಸ್ತರ ಕರ್ತವ್ಯವಾಗಿದೆ ಯಾಕಂದರೆ ದೇವರೇ ಅವರನ್ನು ನೇಮಿಸಿದ್ದಾನೆ (ವ 2,5,7). ಈ ನಿಯಮಕ್ಕೆ ಒಂದು ಕಾರ್ಯ ಒಳಪಡುವದಿಲ್ಲ – ಒಂದುವೇಳೆ ಯಾವುದಾದರು ದೇಶದ ನಿಯಮ ಅಥವಾ ಅಧಿಕಾರಿಗಳ ಆದೇಶ ದೇವರ ವಾಕ್ಯಗಳಿಗೆ ವಿರುದ್ಧವಾಗಿದ್ದರೆ, ವಿಶ್ವಾಸಿಗಳು ಮನುಷ್ಯರಿಗೆ ವಿಧೇಯರಾಗದೆ ದೇವರಿಗೆ ವಿಧೇಯರಾಗಿ ನಡೆದುಕೊಳ್ಳಬೇಕು. ಅಪೊ 4:18-20; 5:28-29 ನೋಡಿರಿ. **4**

**13:4** *"ದೇವರ ಸೇವಕನು"*– ಇದರ ಅರ್ಥ ನಾಯಕರು ಮನಃಪೂರ್ವಕವಾಗಿ ಅಥವಾ ಇಷ್ಟಪೂರ್ವಕವಾಗಿ ದೇವರ ಸೇವೆ ಮಾಡುತ್ತಿದ್ದಾರೆ ಎಂಬದಾಗಿಯಲ್ಲ (ಆದರೂ ಕೆಲವರು ಮಾಡುವವರಾಗಿದ್ದಾರೆ). ಅವರು ಭೂಲೋಕದ ಮೇಲೆ ಆಳ್ವಿಕೆ ಮಾಡುತ್ತಿರುವ ದೇವರ ಕೈಗಳಲ್ಲಿರುವ ಸಾಧನಗಳಾಗಿದ್ದಾರಷ್ಟೇ. **6-7**

**13:6-7** ಮತ್ತಾಯ 22:21; 1 ಪೇತ್ರ 2:17. ಒಂದುವೇಳೆ ವಿಶ್ವಾಸಿಯು ಕಂದಾಯ ಕೊಡುವ ವಿಷಯದಲ್ಲಿ ಪ್ರಾಮಾಣಿಕನಲ್ಲದಿದ್ದರೆ, ಇತ್ಯಾದಿ, ಅವನು ದೇವರಿಗೆ ವಿರುದ್ಧವಾಗಿ ಪಾಪ ಮಾಡುವವನಾಗಿದ್ದಾನೆ. **8**

**13:8** ಸಾಲ ತೆಗೆದುಕೊಳ್ಳುವದನ್ನು ತಪ್ಪಿಸಬಹುದು. ಅದೊಂದು ಬಲೆಯಾಗಿದ್ದು ಚಿಂತೆಯಿಲ್ಲದವರನ್ನು ತನ್ನೊಳಗೆ ಸಿಕ್ಕಿಸಿಕೊಳ್ಳುತ್ತದೆ. ಅದರಿಂದ ಬಂಧನ ಮತ್ತು ದುರವಸ್ಥೆ ಉಂಟಾಗುತ್ತದೆ. ಮದುವೆ ಇತ್ಯಾದಿಯಂಥ ವಿಶೇಷ ಕಾರ್ಯಗಳಿಗೆ ಅಥವಾ ಅನಾವಶ್ಯಕವಾದ ವಸ್ತುಗಳ ಖರೀದಿಗಾಗಿ ಸಾಲ ತೆಗೆದುಕೊಳ್ಳುವದು, ಖಂಡಿತವಾಗಿಯೂ ವಿಶ್ವಾಸಿಗಳ ವಿಷಯದಲ್ಲಿ ತಪ್ಪಾಗಿದೆ. ವಿಶ್ವಾಸಿಗಳು ತಮಗಿರುವದರಲ್ಲಿ ಸಂತುಷ್ಟರಾಗಿರಬೇಕಾದದ್ದು ಅತ್ಯಂತ ಪ್ರಾಮುಖ್ಯವಾದ ನಿಯಮವಾಗಿದೆ (ಫಿಲಿಪ್ಪಿ 4:12; 1 ತಿಮೊ 6:6-8; ಇಬ್ರಿ 13:5) ಮತ್ತು ದೇವರು ಒದಗಿಸುವ ನಂಬಿಕೆಯೇ ಅವರಿಗೆ ಬಹಳ ಮುಖ್ಯವಾಗಿದ್ದು ಎಲ್ಲವನ್ನೂ ಒದಗಿಸುತ್ತದೆ (ಮತ್ತಾಯ 6:33; ಫಿಲಿಪ್ಪಿ 4:19). ತಮ್ಮಿಂದ ಹಿಂದಿರುಗಿಸಲು ಆಗುವ ಸಮಯದಲ್ಲಿಯೂ ಸಾಲವನ್ನು ಹಿಂದಿರುಗಿಸದವರು ಕಳ್ಳರಿಗೆ ಸಮಾನರಾಗಿದ್ದಾರೆ – ಯಾಕಂದರೆ ಕಳ್ಳರು ತಮಗೆ ಸೇರದವುಗಳನ್ನು ಕದ್ದುಕೊಂಡು ಉಪಯೋಗಿಸಿಕೊಳ್ಳುತ್ತಾರೆ. ಆದರೆ ಎಲ್ಲಾ ವಿಶ್ವಾಸಿಗಳಿಗೆ ಒಂದು ಸಾಲವಿದೆ, ಅದನ್ನು ತೀರಿಸಲು ಅವರು ಯಾವಾಗಲೂ ಪ್ರಯತ್ನಿಸುವವರಾಗಿರಬೇಕು – ಏನೆಂದರೆ ಒಬ್ಬರನ್ನೊಬ್ಬರು ಪ್ರೀತಿಸಬೇಕು (12:9-10; ಯೋಹಾನ 13:34). **9**

- **13:9** ವಿಮೋ 20; ಯಾಜಕ 19:18. **11-14**

**13:11-14** ಆತ್ಮೀಕವಾಗಿ ಮಾತನಾಡುವದಾದರೆ, ಲೋಕವು ಕತ್ತಲೆಯ ಸ್ಥಳವಾಗಿದೆ (ಯೋಹಾನ 3:19-20), ಆದರೆ ವಿಶ್ವಾಸಿಗಳು ಬೆಳಕಿನ ಮಕ್ಕಳಾಗಿದ್ದಾರೆ (ಮತ್ತಾಯ 5:14;

ಯೋಹಾನ 12:36; ಎಫೆ 5:8). ಅವರು ಯಾವ ರೀತಿ ನಡೆದುಕೊಳ್ಳಬೇಕೆಂದು ದೇವರು ಬಯಸುತ್ತಾನೆ ಎಂಬದನ್ನು ಇಲ್ಲಿ ನೋಡಬಹುದು. **11-12**

**13:11-12** ಪೌಲನಿಗಾಗಲಿ ಅಥವಾ ಇತರೆ ಅಪೊಸ್ತಲರಿಗಾಗಲಿ ಯೇಸು ಕ್ರಿಸ್ತನ ಎರಡನೇ ಬರೋಣ ಯಾವಾಗ ಎಂಬದು ಗೊತ್ತಿರಲಿಲ್ಲ. ಅವನು ಆಸಕ್ತಿಯಿಂದ ಅದನ್ನು ಎದುರುನೋಡುತ್ತಿದ್ದನು ಮತ್ತು ತನಗಿರುವಂಥ ನಿರೀಕ್ಷೆಯ ಮನೋಭಾವನೆಯೇ ಪ್ರತಿಯೊಬ್ಬ ವಿಶ್ವಾಸಿಯಲ್ಲಿಯೂ ಇರಬೇಕೆಂದು ಅವನು ಬಯಸುತ್ತಿದ್ದನು. ಎಲ್ಲಾ ತಲೆಮಾರಿನ ವಿಶ್ವಾಸಿಗಳಿಗೆ ಹೊಂದಿಕೆಯಾಗುವಂಥ ಭಾಷೆಯನ್ನು ಉಪಯೋಗಿಸುವಂತೆ ಪವಿತ್ರಾತ್ಮನು ಅವನನ್ನು ಪ್ರೇರೇಪಿಸಿದನು. ಮತ್ತಾಯ 24:36,42,44 ಹೋಲಿಸಿ ನೋಡಿರಿ. **11**

**13:11** *"ವಿಮೋಚನೆ"*– ಇದರ ಅರ್ಥ ವಿಶ್ವಾಸಿಗಳು ಈಗಾಗಲೇ ಸಂಪೂರ್ಣವಾದ ವಿಮೋಚನೆ ಹೊಂದಿದ್ದಾರೆ. 8:23; 1 ಪೇತ್ರ 1:9ರೊಂದಿಗೆ ಹೋಲಿಸಿ ನೋಡಿರಿ. **12**

**13:12** *"ಬೆಳಕಿಗೆ ಅನುಗುಣವಾದ ಆಯುಧ"*– ಇದರ ಅರ್ಥ ವಿಶ್ವಾಸಿಗಳು ತಮ್ಮ ಜೀವಿತಗಳಿಗೆ ಸತ್ಯವನ್ನು ಅಳವಡಿಸಿಕೊಳ್ಳುವಾಗ ಅದುವೇ ಪಾಪ ಮತ್ತು ಸೈತಾನನಿಗೆ ವಿರುದ್ಧವಾಗಿ ಅವರಲ್ಲಿ ಕಾರ್ಯಮಾಡುತ್ತದೆ. ಎಫೆ 6:11-17ರೊಂದಿಗೆ ಹೋಲಿಸಿ ನೋಡಿರಿ. ಧರಿಸಿಕೊಳ್ಳಿರಿ ಎಂದರೆ ಯೇಸು ಕ್ರಿಸ್ತನು ಮತ್ತಾಯ 4:1-11ರಲ್ಲಿ ಉಪಯೋಗಿಸಿಕೊಂಡ ಹಾಗೆ ಉಪಯೋಗಿಸಿಕೊಳ್ಳಬೇಕೆಂದು ಅರ್ಥಮಾಡಿಕೊಳ್ಳುವದಾಗಿದೆ. **13**

**- 13:13** 1 ಕೊರಿಂಥ 6:9-11; ಎಫೆ 5:3-6; ಕೊಲೊ 3:5-8. **14**

**13:14** ಕರ್ತನಾದ ಯೇಸು ಕ್ರಿಸ್ತನು ವಿಶ್ವಾಸಿಗಳಲ್ಲಿದ್ದಾನೆ (8:9; 2 ಕೊರಿಂಥ 13:5). "ಧರಿಸಿಕೊಳ್ಳಿರಿ" ಎಂಬದು ಬಾಹ್ಯದ ಜೀವಿತದ ಬಗ್ಗೆ ಮಾತನಾಡುತ್ತದೆ. ಇದರ ಅರ್ಥ ತಮ್ಮೊಳಗಿರುವ ಕ್ರಿಸ್ತನ ಮಾರ್ಗದನುಸಾರವಾಗಿ ವಿಶ್ವಾಸಿಗಳು ನಡೆದುಕೊಳ್ಳಬೇಕು. ಎಫೆ 5:22-24ರೊಂದಿಗೆ ಹೋಲಿಸಿ ನೋಡಿರಿ. ನಾವು ಆತನ ಸತ್ಯವನ್ನು ನಮ್ಮ ನಡವಳಿಕೆಗೆ ಅಳವಡಿಸಿಕೊಳ್ಳಬೇಕು. ವಿಶ್ವಾಸಿಗಳಲ್ಲಿ ಪಾಪದ ಸ್ವಭಾವವು ಅದರ ಆಶೆಗಳೊಂದಿಗೆ ಇನ್ನೂ ನೆಲೆಯಾಗಿದೆ ಎಂಬದನ್ನು ಪೌಲನು ಮನವರಿಕೆ ಮಾಡಿಕೊಂಡಿರುವದನ್ನು ಗಮನಿಸಿರಿ. 7:18; 8:13; ಗಲಾ 5:16-17ರೊಂದಿಗೆ ಹೋಲಿಸಿ ನೋಡಿರಿ. ಪಾಪ ಸ್ವಭಾವದ ಮೇಲೆ ಜಯಗಳಿಸಲು ಸಹಾಯ ಮಾಡುವ ಆಲೋಚನೆಗಳ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳಿರಿ. 8:5; 12:2 ನೋಡಿರಿ.

# 14 1

**14:1** ಇಲ್ಲಿ ಪೌಲನು ಹುದುವಾಗಿರುವ ತತ್ವವನ್ನು ಕಲಿಸಿದ್ದಾನೆ. 2-6 ವಚನಗಳಲ್ಲಿ ವಿಶ್ವಾಸಿಗಳು ಬಹುತೇಕ ಒಪ್ಪಿಕೊಳ್ಳದಿರುವ ಎರಡು ವಿಷಯಗಳಿಗೆ ಉದಾಹರಣೆಗಳನ್ನು

ಕೊಟ್ಟಿದ್ದಾನೆ. ಕ್ರೈಸ್ತರು ಒಬ್ಬರಿಗೊಬ್ಬರು ಸಹಾಯ ಮಾಡುವವರಾಗಿರಬೇಕೇ ಹೊರತು ತೀರ್ಪು ಮಾಡುವವರಾಗಿರಬಾರದು (ಮತ್ತಾಯ 7:1-5) ಎಂಬ ಉದ್ದೇಶದಿಂದ ಆತನು ಇದನ್ನು ತೋರಿಸಿದ್ದಾನೆ. ಪ್ರತಿಯೊಬ್ಬ ವಿಶ್ವಾಸಿಯು ಕ್ರಿಸ್ತನಿಗಾಗಿ ಜೀವಿಸಲು ಪ್ರಯತ್ನಿಸುವ ಇತರೆ ಎಲ್ಲಾ ವಿಶ್ವಾಸಿಗಳನ್ನು ಅಂಗೀಕರಿಸಿಕೊಳ್ಳಬೇಕು (ಆದರೆ 1 ಕೊರಿಂಥ 5:9-13; 2 ಥೆಸ 3:6 ಸಹ ನೋಡಿರಿ). ವಿಶ್ವಾಸಿಗಳು ದುಷ್ಟ ಕಾರ್ಯಗಳ ವಿರುದ್ಧ ತೀರ್ಪು ಮಾಡಬೇಕೇ ಹೊರತು ಪ್ರಾಮುಖ್ಯವಲ್ಲದ ವಿಷಯಗಳಿಗೆ ಒಪ್ಪದಿರುವ ಜೊತೆ ವಿಶ್ವಾಸಿಗಳ ಮೇಲೆ ಆರೋಪ ಮಾಡಬಾರದು. ಅಂಥ ವಿಷಯಗಳಿಗೆ ಇತರೆ ವಿಶ್ವಾಸಿಗಳಿಂದ ಬೇರ್ಪಡುವದು ದೊಡ್ಡ ತಪ್ಪಾಗಿದೆ (12:16; ಎಫೆ 4:3). ಖಂಡಿತವಾಗಿಯೂ ನಂಬಿಕೆಯ ವಿಷಯದಲ್ಲಿ ಕೆಲವು ಮೂಲಭೂತ ಸತ್ಯಗಳಿವೆ ಅವುಗಳನ್ನು ಸಾರಬೇಕು ಮತ್ತು ಅವುಗಳನ್ನು ತಿರಸ್ಕರಿಸುವ ಕ್ರೈಸ್ತರಿಂದ ಬೇರ್ಪಡುವ ಬೆಲೆಯನ್ನು ತೆತ್ತಬೇಕು. ಆದರೆ ಪೌಲನು ಆ ವಿಷಯಗಳ ಬಗ್ಗೆ ಈ ಅಧ್ಯಾಯದಲ್ಲಿ ಮಾತನಾಡುತ್ತಿಲ್ಲ. **2**

**14:2** ಕೃಪೆಯ ಕಾಲದಲ್ಲಿರುವ ವಿಶ್ವಾಸಿಗಳು ಯಾವುದನ್ನು ಬೇಕಾದರೂ ತಿನ್ನಬಹುದು. ಅವರು ಯಾವುದೇ ರೀತಿಯ ಶುದ್ಧ ಅಥವಾ ಅಶುದ್ಧ ಪದಾರ್ಥಗಳ ನಿಯಮಗಳಿಗೆ ಒಳಪಟ್ಟಿಲ್ಲ (ವ 14; ಮಾರ್ಕ 7:18-19; ಅಪೊ 10:9-16; 1 ತಿಮೊ 4:3-5). ಆದರೆ ಕೆಲವು ವಿಶ್ವಾಸಿಗಳು ಇದನ್ನು ಇನ್ನೂ ಅರ್ಥಮಾಡಿಕೊಂಡಿಲ್ಲ ಮತ್ತು ನಾವು ಕೆಲವು ಆಹಾರ ಪದಾರ್ಥಗಳನ್ನು ತಿನ್ನಬಾರದೆಂದು ಯೋಚಿಸುತ್ತಾರೆ. ಅವರು ಈಗ ಚಾಲನೆಯಲ್ಲಿ ಇಲ್ಲದಿರುವ ಹಳೆಯ ಒಡಂಬಡಿಕೆಯ (ಯಾಜಕಕಾಂಡ 11ನೇ ಅಧ್ಯಾಯದ) ಶುದ್ಧೀಕರಣ ಕ್ರಮದ ಆಧಾರದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. **3-4**

**14:3-4** ಇದು ಪ್ರಾಮುಖ್ಯವಾದ ತತ್ವವನ್ನು ನಾವು ನೋಡಬಹುದು. ವಿಶ್ವಾಸಿಗಳು ಅಂಗೀಕರಿಸಿಕೊಳ್ಳಬೇಕು ಮತ್ತು ಒಬ್ಬರನ್ನೊಬ್ಬರು ಪ್ರೀತಿಸಬೇಕು. ಹೆಚ್ಚು ತಿಳುವಳಿಕೆಯುಳ್ಳವರು ನಾವು ಇತರರಿಗಿಂತ ವಿಶೇಷವಾದವರೆಂದು ಎಣಿಸಬಾರದು ಮತ್ತು ಯಾರಾದರು ತಮ್ಮ ವೈಯಕ್ತಿಕ ನಿಯಮಗಳನ್ನು ಉಲ್ಲಂಘಿಸಿದರೆ ಉಲ್ಲಂಘಿಸಿದವರನ್ನು ದೋಷಿಗಳೆಂದು ನಿರ್ಣಯಿಸಬಾರದು. ಎಲ್ಲರೂ ಯೇಸು ಕ್ರಿಸ್ತನ ಸೇವಕರಾಗಿದ್ದೇವೆ ಮತ್ತು ಅವರ ವಿಷಯದಲ್ಲಿ ತೀರ್ಪು ಮಾಡುವ ಅಧಿಕಾರ ಆತನಿಗೆ ಮಾತ್ರವೇ ಇದೆ. ದೇವರು ಅಂಗೀಕರಿಸಿಕೊಂಡಿರುವ ಯಾರನ್ನೂ ವಿಶ್ವಾಸಿಗಳು ತಿರಸ್ಕರಿಸಬಾರದು. **5-6**

**14:5-6** ದೇವರು ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರಿಗೆ ನೇಮಿಸಿದ ಸಬ್ಬತ್ ದಿನಗಳನ್ನು ಮತ್ತು ವಿಶೇಷವಾದ ದಿವಸಗಳನ್ನು ಆಚರಿಸಬೇಕೆಂದು ಕೆಲವು ಯೆಹೂದ್ಯ ವಿಶ್ವಾಸಿಗಳು ಯೋಚಿಸುತ್ತಿದ್ದರು. ಆದರೆ ಅಂಥ ನಿಯಮಗಳಿಗೆ ಕ್ರೈಸ್ತರು ಒಳಪಡಬೇಕಿಲ್ಲ ಎಂಬದಾಗಿ ಇತರೆ ವಿಶ್ವಾಸಿಗಳು ಯೋಚಿಸುತ್ತಿದ್ದರು. 3,4 ವಚನಗಳ ತತ್ವವು ಇದಕ್ಕೆ ಅನ್ವಯಿಸುತ್ತದೆ. **6**

**14:6** *"ಸ್ತೋತ್ರ"*– ಮತ್ತಾಯ 14:19 ನೋಡಿರಿ. **7-12**

**14:7-12** ಪ್ರತಿಯೊಬ್ಬ ವಿಶ್ವಾಸಿಯು ದೇವರ ಸೇವಕನಾಗಿದ್ದಾನೆ ಮತ್ತು ದೇವರೊಬ್ಬನಿಗೆ ಮಾತ್ರವೇ ಉತ್ತರ ಹೇಳುವವನಾಗಿದ್ದಾನೆ. ಆತನು ಕರ್ತನಿಗೆ ಸೇರಿದವನಾಗಿದ್ದಾನೆ (ವ 7,8; 1 ಕೊರಿಂಥ 6:19-20). ಪ್ರತಿಯೊಬ್ಬನೂ ಭೂಲೋಕದಲ್ಲಿರುವಾಗ ಬೆಳಕಿನವನಾಗಿ ಜೀವಿಸಬೇಕು ಮತ್ತು ಪ್ರತಿಯೊಬ್ಬನೂ ಪರಲೋಕದಲ್ಲಿರುವ ನ್ಯಾಯಧಿಪತಿಯ ಎದುರಿನಲ್ಲಿ ನಿಂತುಕೊಳ್ಳಬೇಕು (ವ 10,12; 2 ಕೊರಿಂಥ 5:10; ಪ್ರಕ 22:12). ವಿಶ್ವಾಸಿಗಳ ಜೀವಿತಗಳನು ನಿಯಂತ್ರಿಸುವ ಅಥವಾ ಅವರನ್ನು ಅಪರಾಧಿಗಳೆಂದು ನಿರ್ಣಯಿಸುವ ಅಧಿಕಾರ ಬೇರೆ ಯಾರಿಗೂ ಇಲ್ಲ. **9**

**14:9** 10:9; ಅಪೊ 2:32-36; ಫಿಲಿಪ್ಪಿ 2:8-11 ನೋಡಿರಿ. "ಕರ್ತನ" ವಿಷಯದಲ್ಲಿ ನೋಟ್ಸಾಗಿ 10:9-10,13; ಮತ್ತಾಯ 22:41-45; ಲೂಕ 2:11 ನೋಡಿರಿ. **11**

**- 14:11** ಯೆಶಾಯ 49:18; 45:23. **13-21**

**14:13-21** ಈ ವಾಕ್ಯಗಳು ಮತ್ತೊಂದು ಪ್ರಾಮುಖ್ಯವಾದ ತತ್ವವನ್ನು ತಿಳಿಸುತ್ತವೆ. ಪ್ರತಿಯೊಬ್ಬ ವಿಶ್ವಾಸಿಯು ತನ್ನನ್ನು ಮೆಚ್ಚಿಸಿಕೊಳ್ಳಲು ಜೀವಿಸುವವನಾಗಿರದೆ ಇತರರ ಹಿತಕ್ಕಾಗಿ ಜೀವಿಸುವವನಾಗಿರಬೇಕು. 15:1-3; 1 ಕೊರಿಂಥ 10:24,33; 9:19-23; 8:9-12 ನೋಡಿರಿ. ಅದನ್ನು ತಿನ್ನುವದು, ಇದನ್ನು ತಿನ್ನುವದು ಅಥವಾ ಅದನ್ನು ತಿನ್ನುವದಿಲ್ಲ ಇದನ್ನು ತಿನ್ನುವದಿಲ್ಲ ಎಂದು ಹೇಳುವದು ಸಣ್ಣ ವಿಷಯವಾಗಿದೆ. ಆದರೆ ಒಂದುವೇಳೆ ಇದರಿಂದ ಇತರರಿಗೆ ನೋವಾದರೆ ಅಥವಾ ತೊಂದರೆಯಾದರೆ ಅದು ಸಣ್ಣ ವಿಷಯವಲ್ಲ. ಇತರೆ ವಿಶ್ವಾಸಿಗಳ ಮೇಲೆ ಯಾವ ಪರಿಣಾಮ ಎದುರಾದರೂ ಚಿಂತಿಸದೆ ನಾವು ನಮಗೆ ಬೇಕಾದ ಕಾರ್ಯಗಳನ್ನು ಮಾಡುವವರಾಗಿರಬಾರದು. ಯೇಸು ಕ್ರಿಸ್ತನು ಆ ವಿಶ್ವಾಸಿಗಳಿಗಾಗಿಯೂ ಪ್ರಾಣ ಕೊಟ್ಟಿದ್ದಾನೆ. ಅವರ ನಂಬಿಕೆಗೆ ಹಾನಿ ಮಾಡುವಂಥ ಯಾವ ಸ್ವಭಾವವಾದರೂ ನಾವು ಅದನ್ನು ಬದಲಾಯಿಸಿಕೊಳ್ಳಬೇಕಾದದ್ದು ನಮ್ಮ ಜವಾಬ್ದಾರಿಕೆಯಲ್ಲವೇ? ದೇವರ ರಾಜ್ಯದಲ್ಲಿ ಒಬ್ಬನು ತನಗೆ ಬೇಕಾಗಿರುವದನ್ನು ತಿನ್ನುವದು ಅಥವಾ ಕುಡಿಯುವದು ಅಥವಾ ಗೊಂದಲವನ್ನುಂಟು ಮಾಡುವ ಸಂಗತಿಗಳಲ್ಲಿ ವೈಯಕ್ತಿಕ ಸ್ವಾತಂತ್ರ್ಯವುಳ್ಳವರಾಗಿರುವದು ಪ್ರಾಮುಖ್ಯವಲ್ಲ (ವ 1). ಬದಲಾಗಿ ದೇವರ ರಾಜ್ಯದ ಮೂಲಭೂತ ವಿಷಯಗಳಾದ - ನೀತಿ, ಸಮಾಧಾನ ಮತ್ತು ಸಂತೋಷವನ್ನು (ವ 17) ಪ್ರಚುರಪಡಿಸುವದೇ ಪ್ರಾಮುಖ್ಯವಾಗಿದೆ. ನಾವು ನಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ನಡೆದುಕೊಳ್ಳುವದಾದರೆ ಈ ಕಾರ್ಯಗಳನ್ನು ಪ್ರಚುರಪಡಿಸಲು ಆಗುವದಿಲ್ಲ. 1 ಕೊರಿಂಥ 8:13ರಲ್ಲಿ ಪೌಲನ ಮನೋಭಾವನೆಯನ್ನು ಗಮನಿಸಿರಿ. 1 ಕೊರಿಂಥ 10:31 ನಾವು ಅನುಸರಿಸಬಹುದಾದ ಉತ್ತಮ ನಿಯಮವಾಗಿದೆ. ರೋಮಾ ಪತ್ರಿಕೆಯಲ್ಲಿ ದೇವರ ರಾಜ್ಯ ಎಂಬ ಪದವನ್ನು ಪೌಲನು ಇಲ್ಲಿ ಮಾತ್ರವೇ ಉಪಯೋಗಿಸಿದ್ದಾನೆ. ಮತ್ತಾಯ 4:17ರಲ್ಲಿ ಈ ರಾಜ್ಯದ ಬಗ್ಗೆ ಇರುವ ನೋಟ್ ನೋಡಿರಿ.

15

**14:15** 1 ಕೊರಿಂಥ 8:11 ರಲ್ಲಿರುವ ನೋಟ್ ನೋಡಿರಿ. **22-23**

**14:22-23** ಅಪರಾಧದ ಆರೋಪದಿಂದ ಮನಸ್ಸಾಕ್ಷಿಯನ್ನು ಸ್ಪಷ್ಟವಾಗಿ ಮತ್ತು ಸ್ವತಂತ್ರವಾಗಿ ಇಟ್ಟುಕೊಳ್ಳುವದು ಅತ್ಯಂತ ಪ್ರಾಮುಖ್ಯವಾಗಿದೆ. ಒಂದುವೇಳೆ ಮನಸ್ಸಾಕ್ಷಿಯ ಎಚ್ಚರಿಕೆಗೆ ವಿರುದ್ಧವಾಗಿ ಯಾವುದಾದರು ಕಾರ್ಯವನ್ನು ಮಾಡಲು ನಾವು ಅನುಮತಿಸುವದಾದರೆ, ನಾವು ಪಾಪ ಮಾಡುತ್ತೇವೆ ಮತ್ತು ನಮ್ಮನ್ನು ಅಶುದ್ಧರನ್ನಾಗಿ ಮಾಡಿಕೊಳ್ಳುತ್ತೇವೆ. ಎಲ್ಲವೂ ಸರಿ ಎಂಬ ಭರವಸೆಯಿಲ್ಲದೆ ಹೋದರೆ ನಮ್ಮಿಂದ ಮಾಡಲು ಆಗದಿರುವಾಗ ನಾವು ಅದನ್ನು ಮಾಡಬಾರದು. 1 ತಿಮೊ 1:19ರೊಂದಿಗೆ ಹೋಲಿಸಿ ನೋಡಿರಿ. ಅಪೊ 23:1ರಲ್ಲಿ ಮನಸ್ಸಾಕ್ಷಿಯ ನೋಟ್ ನೋಡಿರಿ. ಈ ಅಧ್ಯಾಯದ ಸಾರಾಂಶವೇನೆಂದರೆ, ನಾವು ಕರ್ತನಿಗಾಗಿ ಜೀವಿಸಬೇಕು ಮತ್ತು ನಮ್ಮ ಕ್ರಿಯೆಗಳಿಗನುಸಾರ ಆತನಿಂದ ನ್ಯಾಯತೀರ್ಪು ಹೊಂದಬೇಕು (ವ 8,10,12). ಆದ್ದರಿಂದ ಆತನನ್ನು ಮೆಚ್ಚಿಸಬೇಕೆಂಬದೇ ನಮ್ಮ ಮುಖ್ಯ ಗುರಿಯಾಗಿರಬೇಕು. ನಾವು ಈ ಲೋಕದೊಳಗೆ ಕ್ರಿಸ್ತನಲ್ಲಿ ನಮಗೆ ಸಹೋದರ ಸಹೋದರಿಯಾಗಿರುವವರೊಂದಿಗೆ ಜೀವಿಸಬೇಕು. ಆದ್ದರಿಂದ ಅವರ ವಿಷಯದಲ್ಲಿ ನಮ್ಮ ಮುಖ್ಯ ಉದ್ದೇಶ ಅವರನ್ನು ನಂಬಿಕೆಯನ್ನು ಕಟ್ಟಬೇಕು ಮತ್ತು ಅನಾವ್ಯಕವಾಗಿ ಅವರಿಗೆ ತೊಂದರೆ ಮಾಡುವ ಯಾವ ಕಾರ್ಯಗಳನ್ನೂ ಮಾಡಬಾರದು (ವ 15,19,21). ಮತ್ತು ನಾವು ನಮ್ಮೊಂದಿಗೂ ಜೀವಿಸಬೇಕು. ಆದ್ದರಿಂದ ನಾವು ನಮ್ಮ ಸ್ವಂತ ಹೃದಯಗಳು ಮತ್ತು ಮನಸ್ಸಾಕ್ಷಿಯ ಚುಚ್ಚುವಿಕೆಗಳಿಗೆ ಒಳಗಾಗದಂತೆ ಜೀವಿಸೋಣ.

# 15 1-2

**15:1-2** 14:1,19-21; 1 ಕೊರಿಂಥ 12:25; ಗಲಾ 6:1-2 ನೋಡಿರಿ. ಲೂಕ 9:23ರೊಂದಿಗೆ ಹೋಲಿಸಿ ನೋಡಿರಿ. ಯೇಸು ಕ್ರಿಸ್ತನು ನಾವು ನಮ್ಮನ್ನು ಮೆಚ್ಚಿಸಿಕೊಂಡು, ನಮ್ಮ ಕಾರ್ಯಗಳನ್ನು ನೋಡಿಕೊಳ್ಳಲು ಕರೆಯಲಿಲ್ಲ ಬದಲಾಗಿ ನಮ್ಮ ಶಿಲುಬೆಯನ್ನು ನಾವು ಹೊತ್ತುಕೊಂಡು ಸಾಗಲು ನಮ್ಮನ್ನು ಕರೆದಿದ್ದಾನೆ. **3**

**15:3** ಕೀರ್ತನೆ 69:9; ಯೋಹಾನ 8:29. ಯೇಸು ಕ್ರಿಸ್ತನು ಭೂಲೋಕದಲ್ಲಿ ತಂದೆಯಾದ ದೇವರನ್ನು ಪ್ರತಿನಿಧಿಸಿದನಾದ್ದರಿಂದ, ಲೋಕದ ತಿರಸ್ಕಾರ, ಅವಮಾನ ಮತ್ತು ನಿಂದೆಗಳನ್ನು ಸಹಿಸಿಕೊಂಡನು. ಒಂದುವೇಳೆ ಆತನು ತನ್ನನ್ನು ಮೆಚ್ಚಿಸಿಕೊಳ್ಳಲು ಪ್ರಯತ್ನಿಸಿದ್ದರೆ ಇವೆಲ್ಲವನ್ನು ತಪ್ಪಿಸಿಕೊಳ್ಳಬಹುದಾಗಿತ್ತು. ಆದರೆ ಏನೂ ಆದರೂ ದೇವರನ್ನು ಮೆಚ್ಚಿಸಬೇಕೆಂಬದೇ ಆತನ ಮುಖ್ಯ ಉದ್ದೇಶವಾಗಿತ್ತು. ಆತನೇ ನಮ್ಮ ಮಾದರಿಯಾಗಿದ್ದಾನೆ. **4**

**15:4** ಹಳೆಯ ಒಡಂಬಡಿಕೆಯಲ್ಲಿ ("ಶಾಸ್ತ್ರದಲ್ಲಿ") ತಮ್ಮನ್ನು ಮೆಚ್ಚಿಸಿಕೊಳ್ಳದೆ

ದೇವರಿಗಾಗಿ ಮತ್ತು ಇತರರಿಗಾಗಿ ಜೀವಿಸಿದಂಥ ಜನರ ಅನೇಕ ಉತ್ತಮವಾದ ಉದಾಹರಣೆಗಳನ್ನು ನಾವು ನೋಡಬಹುದು. ನಾವು ಅವರಿಂದ ಕಲಿತುಕೊಳ್ಳಬೇಕು. ಹಳೆಯ ಒಡಂಬಡಿಕೆಯಲ್ಲಿ ಬರೆದಿರುವದೆಲ್ಲಾ ನಮ್ಮನ್ನು "ಉಪದೇಶಿಸುವದಕ್ಕೆ" ಬರೆಯಲಾಗಿದೆ ಎಂಬದನ್ನು ಗಮನಿಸಿರಿ. ಒಂದುವೇಳೆ ನಾವು ಅದರಲ್ಲಿ ಯಾವ ಭಾಗವನ್ನಾದರೂ ನಿರ್ಲಕ್ಷಿಸಿದರೆ ನಮ್ಮನ್ನೇ ಪ್ರಾಮುಖ್ಯವಾದ ಸತ್ಯದಿಂದ ದೂರಮಾಡಿಕೊಳ್ಳುವವರಾಗಿದ್ದೇವೆ. ಮತ್ತು ವಿಶ್ವಾಸಿಗಳಾಗಿ ಈ ಲೋಕದಲ್ಲಿ ನಾವು ಎದುರಿಸಬೇಕಾಗಿರುವ ಕಾರ್ಯಗಳನ್ನು ಎದುರಿಸಲು ನಮಗೆ ಸಹಾಯ ಮಾಡುವ ಹಾಗೂ ಪ್ರೋತ್ಸಾಹ ಮಾಡುವ ಅನೇಕ ವಿಷಯಗಳನ್ನು ತಪ್ಪಿಸಿಕೊಳ್ಳುವವರಾಗಿದ್ದೇವೆ. 2 ತಿಮೊ 3:16-17 ಸಹ ನೋಡಿರಿ.

"*ಆದರಣೆ*"– ಇದರ ಗ್ರೀಕ್ ಪದದ ಅರ್ಥ ಸಹ ಆದರಣೆಯಾಗಿದೆ. **5**

**15:5** "*ಒಂದೇ ಮನಸ್ಸುಳ್ಳವರು*"– 12:16; 14:19; ಎಫೆ 4:3. **6**

**15:6** "*ಕೊಂಡಾಡುವಿರಿ*"– ಪ್ರತಿಯೊಬ್ಬ ವಿಶ್ವಾಸಿ ತಾನು ಮಾಡುವ ಪ್ರತಿಯೊಂದು ಕಾರ್ಯದಲ್ಲಿ ದೇವರನ್ನು ಕೊಂಡಾಡಬೇಕೆಂಬ ಗುರಿಯುಳ್ಳವನಾಗಿರಬೇಕು (1 ಕೊರಿಂಥ 10:31). **7**

**15:7** 14:1,3 ನೋಡಿರಿ. **8**

**15:8** "*ಸೇವಕನು*"– ಮತ್ತಾಯ 15:24; 20:28; ಲೂಕ 22:27; ಫಿಲಿಪ್ಪಿ 2:7; ಯೆಶಾಯ 42:1 ನೋಡಿರಿ. ಯೇಸು ಕ್ರಿಸ್ತನು ಯೆಹೂದ್ಯರ ಸೇವಕನಾಗಿ ಹಳೆಯ ಒಡಂಬಡಿಕೆಯಲ್ಲಿ ದೇವರು ಅವರಿಗೆ ಮಾಡಿದ ವಾಗ್ದಾನಗಳನ್ನು ತೆಗೆದುಹಾಕಲಿಲ್ಲ. ಅತನು ಅವುಗಳನ್ನು ದೃಢಪಡಿಸಿದನು. 9:4-5; 11:26-27 ನೋಡಿರಿ. ಅವುಗಳನ್ನು ದೃಢಪಡಿಸಿದನು ಎಂದರೆ ಅವುಗಳ ನೆರವೇರುವಿಕೆಯನ್ನು ಖಚಿತಪಡಿಸಿದನು. ತನ್ನ ಮರಣ ಮತ್ತು ಪುನರುತ್ಥಾನದ ಮೂಲಕ ಯೇಸು ಕ್ರಿಸ್ತನು ದೇವರ ಎಲ್ಲಾ ವಾಗ್ದಾನಗಳ ನೆರವೇರುವಿಕೆಗೆ ಅಡಿಪಾಯ ಹಾಕಿದನು. **9**

**15:9** ಆದರೆ ಈ ಎಲ್ಲಾ ವಿಷಯಗಳಲ್ಲಿ ಯೇಸು ಕ್ರಿಸ್ತನು ಅನ್ಯರನ್ನು ಸಹ ಮನಸ್ಸಿನಲ್ಲಿಟ್ಟುಕೊಂಡಿದ್ದನು. ಹಳೆಯ ಒಡಂಬಡಿಕೆಯ ವಚನಗಳನ್ನು ಸೂಚಿಸುವ ಮೂಲಕ ಪೌಲನು ಇದನ್ನು ತೋರಿಸಿದ್ದಾನೆ. ಕೀರ್ತನೆ 18:49 ಮೊದಲನೆಯದಾಗಿದೆ. ಯೇಸು ಕ್ರಿಸ್ತನು ಅನ್ಯರ ನಡುವೆ ದೇವರನ್ನು ಸ್ತುತಿಸುತ್ತಿರುವದೇ ಈ ಚಿತ್ರಣವಾಗಿದೆ. **10**

**15:10** ಧರ್ಮೋ 32:43. ಅನ್ಯರು ("ಆತನ ಜನರಾಗಿರುವ") ಯೆಹೂದ್ಯರೊಂದಿಗೆ ಆನಂದಕರವಾದ ಅನ್ಯೋನ್ಯತೆಯಲ್ಲಿ ಭಾಗಿಯಾಗುತ್ತಾರೆ. **11**

- **15:11** ಕೀರ್ತನೆ 117:1. **12**
- **15:12** ಯೆಶಾಯ 11:10. **13**

**15:13** "*ನಿರೀಕ್ಷೆಯ ಮೂಲನಾದ ದೇವರು*"–ಎಂದರೆ ತನ್ನ ಜನರಲ್ಲಿ ನಿರೀಕ್ಷೆಯನ್ನು

ಹುಟ್ಟಿಸುವವನು ಹಾಗೂ ಅದನ್ನು ಪೂರೈಸುವ ದೇವರಾಗಿದ್ದಾನೆ. ನಿರೀಕ್ಷೆಯ ಅಂತಿಮವಾದ ರಕ್ಷಣೆಯದ್ದಾಗಿದೆ (5:2-5; 8:23-25). ಪವಿತ್ರಾತ್ಮನು ವಿಶ್ವಾಸಿಗಳ ಹೃದಯಗಳಲ್ಲಿ ಇದನ್ನು ಹುಟ್ಟಿಸುತ್ತಾನೆ. ದೇವರಾತ್ಮನ ಮೂಲಕ ಸಂತೋಷ ಮತ್ತು ಸಮಾಧಾನವೂ ಉಂಟಾಗುತ್ತದೆ (ಗಲಾ 5:22). ಇವು ದೇವರ ರಾಜ್ಯದ ಸಹಜವಾಗಿರುವ ಅಂಶಗಳಾಗಿವೆ (14:17). ತನಗೆ ವಿಧೇಯರಾಗಿ ನಡೆದುಕೊಳ್ಳುವ ಶಿಷ್ಯರಿಗೆ ಯೇಸು ಕ್ರಿಸ್ತನು ಇವೆರೆಡನ್ನೂ ವಾಗ್ದಾನ ಮಾಡಿದ್ದಾನೆ (ಯೋಹಾನ 14:27; 15:11). ವಿಶ್ವಾಸಿಗಳು ಇವುಗಳಿಂದ ತುಂಬಿದವರಾಗಿರಬೇಕೆಂದು ದೇವರು ಬಯಸುತ್ತಾನೆ. ಆಗ ಮಾತ್ರವೇ ಅವರು ಇತರರೊಂದಿಗೆ ನಡೆದುಕೊಳ್ಳಬೇಕಾದ ರೀತಿಯಲ್ಲಿ ನಡೆದುಕೊಳ್ಳಲು ಶಕ್ತರಾಗುತ್ತಾರೆ ಮತ್ತು ದೇವರನ್ನು ಸ್ತುತಿಸಬೇಕಾದ ರೀತಿಯಲ್ಲಿ ಸ್ತುತಿಸಿ ಆತನ ಮಹಿಮೆಗಾಗಿ ಜೀವಿಸುತ್ತಾರೆ. ವಿಶ್ವಾಸಿಗಳು ತಮ್ಮ ಸಂತೋಷ ಹಾಗೂ ಸಮಾಧಾನವನ್ನು ಕಸಿದುಕೊಳ್ಳುವ ಅಥವಾ ತಮ್ಮ ನೀರಿಕ್ಷೆಯನ್ನು ಹುಸಿಗೊಳಿಸುವ ಕಾರ್ಯಗಳ ನಿರಾಕರಿಸುವದನ್ನು ಕಲಿತುಕೊಳ್ಳಬೇಕು. **14**

**15:14** ಒಳ್ಳೇತನವು ದೇವರಾತ್ಮನ ಮತ್ತೊಂದು ವರವಾಗಿದೆ (ಗಲಾ 5:22). ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳುವ ಸಾಮರ್ಥ್ಯ ವಿಶ್ವಾಸಿಗಳೆಲ್ಲರಿಗೂ ಇರಬೇಕು (ಇಬ್ರಿ 5:11-14; 1 ಥೆಸ 5:14). **15**

**15:15** 1:8 ನೋಡಿರಿ. 2 ಪೇತ್ರ 1:12; 3:1; ಯೂದ 5; 2 ತಿಮೊ 2:14 ಹೋಲಿಸಿ ನೋಡಿರಿ. ಆತ್ಮೀಕ ಸತ್ಯವನ್ನು ಕಳೆದುಕೊಳ್ಳುವದು ಮತ್ತು ಮರೆತುಹೋಗುವದು ಬಹಳ ಸುಲಭವಾಗಿದೆ. ನಮ್ಮೆಲ್ಲರಿಗೂ ಆಗಾಗ ಜ್ಞಾಪಕಪಡಿಸುತ್ತಿರಬೇಕು. **16**

**15:16** ಅಪೊ 22:21; ಗಲಾ 2:7; ಎಫೆ 3:8. ಸುವಾರ್ತೆ ಸಾರುವದೇ ಪೌಲನ ಪ್ರಾಮುಖ್ಯವಾದ ಸೇವೆಯಾಗಿತ್ತು (1:1).

"*ಕಾಣಿಕೆ ಸಲ್ಲಿಸುವದು*"– ಯಾಜಕರ ಕರ್ತವ್ಯವಾಗಿತ್ತು. ಪೌಲನು ಸಾಧಾರಣ ವಿಶ್ವಾಸಿಗಳಿಗೆ ಹೋಲಿಸಿದರೆ ತಾನು ಯಾಜಕನೆಂಬದಾಗಿ ಹೇಳಲಿಲ್ಲ (ವಿಶ್ವಾಸಿಗಳೆಲ್ಲರೂ ಯಾಜಕರಾಗಿದ್ದಾರೆ – 1 ಪೇತ್ರ 2:5,9; ಪ್ರಕ 1:6; 5:10; 20:6; ಇಬ್ರಿ 10:19-22). ಪೌಲನು ಅನ್ಯರಿಗಾಗಿ ಯಾವ ಯಜ್ಞವನ್ನಾಗಲಿ ಕಾಣಿಕೆಯನ್ನಾಗಲಿ ಅರ್ಪಿಸಲಿಲ್ಲ. ಅನ್ಯರು ತಾವೇ "ಕಾಣಿಕೆಗಳಾಗಿದ್ದರು." ಸುವಾರ್ತೆಯನ್ನು ನಂಬಿದವರು ದೇವರಿಗೆ ಅಂಗೀಕೃತವಾದ ಕಾಣಿಕೆಗಳಾದರು ಯಾಕಂದರೆ ಅವರು ಪವಿತ್ರಾತ್ಮನಿಂದ ಶುದ್ಧೀಕರಿಸಲ್ಪಟ್ಟರು (12:1 ರೊಂದಿಗೆ ಹೋಲಿಸಿ ನೋಡಿರಿ). ಇದರ ಅರ್ಥ ದೇವಜನರ ನಡುವೆ ಕಾಣಿಸಿಕೊಳ್ಳುವ ಸಲುವಾಗಿ ಆತನು ಅವರನ್ನು ಬೇರ್ಪಡಿಸಿದನು. ಯೋಹಾನ 17:17-19ರಲ್ಲಿ ಶುದ್ಧೀಕರಣದ ನೋಟ್ಸ್ ನೋಡಿರಿ. **17-18**

**15:17-18** ಪೌಲನು ತನ್ನಲ್ಲಿ ಹೆಚ್ಚಳಪಡಲಿಲ್ಲ. ಆತನ ಸೇವೆ ಯೇಸು ಕ್ರಿಸ್ತನಲ್ಲಾಗಿತ್ತು ಮತ್ತು ಆತನ ಸಂತೋಷವೂ ಯೇಸು ಕ್ರಿಸ್ತನಲ್ಲಾಗಿತ್ತು. ತನ್ನ ಸೇವೆಯು ನೆರವೇರುವದಕ್ಕೆ

ಕಾರಣ ತನ್ನ ಸಾಮರ್ಥ್ಯ ಅಥವಾ ಅಧಿಕಾರ ಎಂದು ಆತನು ಯೋಚಿಸಲಿಲ್ಲ. ತನ್ನ ಬಗ್ಗೆ ಮಾತನಾಡುವಾಗ ಆತನು ವಿವಿಧ ಭಾಷೆಗಳನ್ನು ಉಪಯೋಗಿಸಿದನು – 7:18; ಎಫೆ 3:8; 1 ತಿಮೊ 1:15. **19**

**15:19** ಅಪೊ 14:8-9; 16:18,25,26; 19:11-12; 2 ಕೊರಿಂಥ 12:11-12. ಯೆರೂಸಲೇಮಿನಿಂದ ಇಲ್ಲುರಿಕ (ಗ್ರೀಸ್ ಮತ್ತು ಮೆಕೆದೋನ್ಯದ ಉತ್ತರ ಪಶ್ಚಿಮ ಕ್ಷೇತ್ರ) ಅತ್ಯಂತ ವಿಸ್ತಾರವಾದ ಪ್ರದೇಶವಾಗಿದ್ದು, ಸಿರಿಯಾ, ಕೇಂದ್ರ ಮತ್ತು ಪಶ್ಚಿಮ ಟರ್ಕಿ, ಗ್ರೀಸ್ ಮತ್ತು ಮೆಕೆದೋನ್ಯ ಪ್ರಾಂತ್ಯಗಳನ್ನು ಒಳಗೊಂಡಿದ್ದವು. **20-21**

**15:20-21** ಪೌಲನನ್ನು ತನ್ನ ಸೇವೆಯನ್ನು ನಡೆಸಿದ ತತ್ವವನ್ನು ನಾವು ಇಲ್ಲಿ ನೋಡಬಹುದಾಗಿದೆ. ಯೆಶಾಯ 52:15ರ ವಾಕ್ಯವನ್ನು ಆತನು ಇಲ್ಲಿ ಹೇಳಿದ್ದಾನೆ. ಪೌಲನು ಸಾಮಾನ್ಯವಾಗಿ ಪ್ರಯಾಣಿಸುತ್ತಿದ್ದನು, ಸುವಾರ್ತೆ ತಲುಪದಿರುವ ಜನರಿಗೆ ಸುವಾರ್ತೆ ತಲುಪಿಸಬೇಕೆಂದಿದ್ದನು, ತನ್ನ ಸಂತತಿಯ ಎಲ್ಲಾ ಜನರಿಗೆ ಯೇಸು ಕ್ರಿಸ್ತನ ಸುವಾರ್ತೆ ಕೇಳಿಸಿಕೊಳ್ಳುವ ಅವಕಾಶ ಒದಗಿಸಬೇಕೆಂದಿದ್ದನು. ಇದರಲ್ಲಿ ಆತನು ನಮ್ಮೆಲ್ಲರಿಗೂ ಮಾದರಿಯಾಗಿದ್ದಾನೆ. ಮತ್ತಾಯ 28:18-20; ಮಾರ್ಕ 16:15; ಲೂಕ 24:46-47; ಅಪೊ 1:8ರೊಂದಿಗೆ ಹೋಲಿಸಿ ನೋಡಿರಿ. **22-23**

**15:22-23** 1:10-13 ನೋಡಿರಿ. ಹೊಸ ಕ್ಷೇತ್ರಗಳಿಗೆ ಹೋಗುವ ಮೊದಲು ಅವನು ವ್ಯಾಪಕವಾಗಿದ್ದ ಆ ಕ್ಷೇತ್ರದಲ್ಲಿ ತನ್ನ ಸೇವೆಯನ್ನು ಮುಗಿಸಬೇಕೆಂದಿದ್ದನು. **24**

**15:24** ಇಟಲಿಯ ಪಶ್ಚಿಮ ಭಾಗದಲ್ಲಿರುವ ಸಮುದ್ರದ ಆಚೆಕಡೆಯಲ್ಲಿ ಸ್ಪೇನ್ ದೇಶವಿತ್ತು. ಇಲ್ಲಿ ಮತ್ತು 28ನೇ ವಚನದಲ್ಲಿ ಮಾತ್ರವೇ ಸತ್ಯವೇದ ಅದರ ಹೆಸರನ್ನು ಕೊಟ್ಟಿದೆ. ಪೌಲನಿಗೆ ಈಗ ಸುಮಾರು 60 ವರ್ಷ ಪ್ರಾಯವಾಗಿದ್ದಿರಬಹುದು, ಆದರೆ ಅವನು ಸೇವೆಗಾಗಿ ಹೊಸ ಕ್ಷೇತ್ರಗಳನ್ನು ಎದುರುನೋಡುತ್ತಿದ್ದನು. ಪೌಲನು ಈ ವಾಕ್ಯದಲ್ಲಿ ಧನ ಸಹಾಯದ ಬಗ್ಗೆ ಮಾತನಾಡುತ್ತಿಲ್ಲ. ತನಗಾಗಿ ಮತ್ತು ತನ್ನ ಸೇವೆಗಾಗಿ ಹಣ ಕೇಳುವದು ಅವನ ವಿಧಾನವಾಗಿರಲಿಲ್ಲ. ಪ್ರಯಾಣ ಮಾಡುವವರೊಂದಿಗೆ ಅರ್ಧ ದಾರಿಯ ತನಕವಾದರೂ ಸಹೋದರರಲ್ಲಿ ಒಬ್ಬರನ್ನು ಅಥವಾ ಇಬ್ಬರನ್ನು ಜೊತೆಯಾಗಿ ಕಳುಹಿಸುವ ಪದ್ಧತಿಯ ಬಗ್ಗೆ ಆತನು ಮಾತನಾಡುತ್ತಿದ್ದಾನೆ. ಅಪೊ 15:3; 20:38; 21:5; 1 ಕೊರಿಂಥ 16:6,11; 2 ಕೊರಿಂಥ 1:16. **25-27**

**15:25-27** 2 ಕೊರಿಂಥ 8:1-5. ಈ ತತ್ವವು ಸಹ ಈಗ ಅನ್ವಯಿಸುತ್ತದೆ. ಆತ್ಮೀಕ ಸೌಭಾಗ್ಯಗಳನ್ನು ಹೊಂದಿರುವವರು ತಮ್ಮ ಆತ್ಮೀಕ ಸೌಭಾಗ್ಯಗಳಿಗೆ ಕಾರಣರಾದವರೊಂದಿಗೆ ಭೌತಿಕ ವಸ್ತುಗಳನ್ನು ಹಂಚಿಕೊಳ್ಳುವದು ಉತ್ತಮವಾದ ಕರ್ತವ್ಯವಾಗಿದೆ. 1 ಕೊರಿಂಥ 9:7-14 ನೋಡಿರಿ. **28**

**15:28** "*ಫಲ*"– ಇಲ್ಲಿ ಆರ್ಥಿಕ ಸಹಾಯದ ಬಗ್ಗೆ ಮಾತನಾಡಲಾಗಿದೆ. ಪೌಲನು ಸ್ಪೇನ್

ದೇಶಕ್ಕೆ ಹೋದನೋ ಇಲ್ಲವೋ ಎಂಬದನ್ನು ಸತ್ಯವೇದವಾಗಲಿ ಚರಿತ್ರೆಯಾಗಲಿ ಹೇಳುವದಿಲ್ಲ. **29**

**15:29** ಪೌಲನು ರೋಮನ್ ಸರ್ಕಾರದ ಸೆರೆಯವನಾಗಿ ರೋಮಾಪುರಕ್ಕೆ ಹೋದನು (ಅಪೊ 28:16). ಆದರೆ ಅವನ ನಂಬಿಕೆ ಇಲ್ಲಿ ನೆರವೇರಿತು. ಯೇಸು ಕ್ರಿಸ್ತನು ಅವನಿಗೆ ಕೊಟ್ಟ ಆಶೀರ್ವಾದದ ಪೂರ್ಣ ಪ್ರಮಾಣ ಎಂದರೆ, ಸೌಕರ್ಯ, ಹೇರಳವಾದ ಆಸ್ತಿ ಅಥವಾ ಕೈಚೀಲದ ತುಂಬ ಹಣ ಎಂಬದಾಗಿರಲಿಲ್ಲ. ಇದರ ಅರ್ಥ ಹೃದಯದಲ್ಲಿ ಸಂತೋಷ ಮತ್ತು ಸಮಾಧಾನ ಹಾಗು ಸುವಾರ್ತೆ ಸಾರಲು ದೇವರ ಬಲ. ಆ ದೇವರ ಮನುಷ್ಯನಿಗೆ ಹೊರಗಿನ ಪರಿಸ್ಥಿತಿಗಳು ಹೆಚ್ಚು ಪ್ರಾಮುಖ್ಯವಾಗಿರಲಿಲ್ಲ. ಫಿಲಿಪ್ಪಿ 4:11-13; 2 ಕೊರಿಂಥ 12:9-10 ನೋಡಿರಿ. ಆತನು ನಮ್ಮೆಲ್ಲರಿಗೆ ಮಾದರಿಯಾಗಿದ್ದಾನೆ. **30**

**15:30** ವಿಶ್ವಾಸಿಗಳು ತನಗಾಗಿ ಮಾಡುವ ಪ್ರಾರ್ಥನೆಯ ಬೆಲೆ ಪೌಲನಿಗೆ ಚೆನ್ನಾಗಿ ಗೊತ್ತಿತ್ತು – 2 ಕೊರಿಂಥ 1:11; ಎಫೆ 6:19-20; ಫಿಲಿಪ್ಪಿ 1:19; 1 ಥೆಸ 5:25; 2 ಥೆಸ 3:1; ಫಿಲೆ 22. “ಪವಿತ್ರಾತ್ಮನಿಂದಾಗುವ ಪ್ರೀತಿ” ಎಂದರೆ ಪವಿತ್ರಾತ್ಮನಿಗೆ ವಿಶ್ವಾಸಿಗಳ ಮೇಲಿರುವ ಪ್ರೀತಿಯಾಗಿದೆ. ಇದು ವ್ಯಕ್ತಿತ್ವದ ಸೂಚನೆಯಾಗಿದೆ (ಯೋಹಾನ 14:16-17ರಲ್ಲಿ ನೋಟ್ ನೋಡಿರಿ).

*“ಹೋರಾಟ”*– 1 ಕೊರಿಂಥ 9:25-26; ಎಫೆ 6:12; ಕೊಲೊ 1:29. ಯೇಸು ಕ್ರಿಸ್ತನ ಸೇವೆ ಮಾಡುವವರು ಮತ್ತು ಪರಿಶುದ್ಧರಾಗಿ ಜೀವಿಸುವವರು ಈ ಹೋರಾಟದ ಬಗ್ಗೆ ತಿಳಿದಿರುತ್ತಾರೆ. **31-32**

**15:31-32** ಅಪೊ 21:27 ರಿಂದ ಕೊನೆಯ ತನಕ ಯೂದಾಯದಲ್ಲಿರುವ ಅವಿಶ್ವಾಸಿಗಳಿಂದ ಪೌಲನನ್ನು ಹೇಗೆ ಬಿಡುಗಡೆಗೊಳಿಸಲಾಯಿತು ಮತ್ತು ಸಂತೋಷವಾಗಿ ರೋಮಾಪುರಕ್ಕೆ ಹೋದದ್ದರ ಘಟನೆಯನ್ನು ತಿಳಿಸಲಾಗಿದೆ. ರೋಮಾಪುರದ ವಿಶ್ವಾಸಿಗಳ ಪ್ರಾರ್ಥನೆಗೂ ಇದಕ್ಕೂ ಸಂಬಂಧವಿರುವ ಹಾಗೆ ಅನ್ನುವದಿಲ್ಲವೇ? ಯಾಕೋಬ 5:16ರೊಂದಿಗೆ ಹೋಲಿಸಿ ನೋಡಿರಿ.

# 16**1-16**

**16:1-16** ಸತ್ಯವೇದದ ಎಲ್ಲಾ ಭಾಗಗಳು ಪ್ರೇರಣೆಯಿಂದ ಕೊಡಲ್ಪಟ್ಟಿವೆ, ಮತ್ತು ಅದರ ಪ್ರತಿಯೊಂದು ಭಾಗದಲ್ಲಿಯೂ ನಾವು ಒಳ್ಳೆಯ ಪಾಠಗಳನ್ನು ಕಲಿತುಕೊಳ್ಳಬೇಕಾಗಿದೆ. ಈ ವಚನಗಳಲ್ಲಿ ರೋಮಾಪುರದಲ್ಲಿರುವ ವಿಶ್ವಾಸಿಗಳ ಮೇಲೆ ಪೌಲನಿಗೆ (ಮತ್ತು ದೇವರಿಗಿರುವ) ಪ್ರೀತಿ ಹಾಗೂ ಕಾಳಜಿಯನ್ನು ನೋಡುತ್ತೇವೆ. ಆತನು (ಮತ್ತು ಕರ್ತನು) ಅವರಲ್ಲಿ ಸಮ್ಮತಿಸಿದ ಕಾರ್ಯಗಳನ್ನು ನಾವು ನೋಡುತ್ತೇವೆ, ಆದ್ದರಿಂದಲೇ ಅವರು ನಮ್ಮ ಜೀವಿತ ಹಾಗೂ ಸೇವೆಗೆ ಒಳ್ಳೆಯ ಮಾದರಿಗಳಾಗಿದ್ದಾರೆ. ಈ ದಾಖಲೆಯನ್ನು

ನೋಡುವದಾದರೆ ನಮ್ಮ ವಿಷಯವಾಗಿ ಪರಲೋಕದಲ್ಲಿಯೂ ಇನ್ನೂ ಮಹದಾದ ಹಾಗೂ ಸಂಪೂರ್ಣವಾದ ದಾಖಲೆ ಬರೆಯಲ್ಪಟ್ಟಿರುವದನ್ನು ನಾವು ನೆನಪಿಸಿಕೊಳ್ಳಬಹುದು (ಇಬ್ರಿ 12:23; ಮಲಾಕಿ 3:16; ಪ್ರಕ 20:12; ದಾನಿ 7:10; ಲೂಕ 10:20; ಫಿಲಿಪ್ಪಿ 4:3). **1**

**16:1** *"ಸಹೋದರಿ"*– ಇದು ರಕ್ತಸಂಬಂಧವಲ್ಲ ಬದಲಾಗಿ ಆತ್ಮೀಕ ಸಂಬಂಧವನ್ನು ಸೂಚಿಸುತ್ತದೆ.

*"ಸೇವಕಳು"*– ಈ ಗ್ರೀಕ್ ಪದವನ್ನು "ಸಭೆಯ ಹಿರಿಯೆ" ಎಂಬದಾಗಿಯೂ ಭಾಷಾಂತರ ಮಾಡಬಹುದು. ಫೊಯಿಬೆ ಸಭೆಯ ಜವಾಬ್ದಾರಿಕೆಯ ಸ್ಥಾನದಲ್ಲಿದ್ದಳು. ಕೆಂಕ್ರೆಯು ಕೊರಿಂಥದಿಂದ ಸುಮಾರು ಏಳು ಮೈಲಿ ದೂರದಲ್ಲಿದ್ದ ಸಮುದ್ರ ತೀರವಾಗಿತ್ತು. ಆಕೆ ಪೌಲನ ಪತ್ರಿಕೆಯನ್ನು ರೋಮಾಪುರಕ್ಕೆ ತೆಗೆದುಕೊಂಡು ಹೋಗಿರಬಹುದೆನಿಸುತ್ತದೆ. **3**

**- 16:3** ಅಪೊ 18:2,18,26; 1 ಕೊರಿಂಥ 16:19; 2 ತಿಮೊ 4:19. **4**

**16:4** 5:7; 1 ಯೋಹಾನ 3:16 ನೋಡಿರಿ. ಅವರು ಕೇವಲ ದೇವರ ವಾಕ್ಯಗಳನ್ನು ಬೋಧಿಸುತ್ತಿರಲಿಲ್ಲ ಬದಲಾಗಿ ಅದರಂತೆ ಜೀವಿಸುತ್ತಿದ್ದರು. **5**

**16:5** ಆಗಿನ ಸಮಯದಲ್ಲಿ ಅನ್ಯೋನ್ಯತೆ ಹಾಗೂ ಉಪದೇಶ ಕೂಟಗಳನ್ನು ಮನೆಗಳಲ್ಲಿ ನಡೆಸುತ್ತಿದ್ದರು. **6**

**16:6** ಈಗಿನಂತೆ ಆಗಲೂ ಮರಿಯ ಎಂಬದು ಸಹಜವಾದ ಹೆಸರಾಗಿತ್ತು. ಆದರೆ ಈ ಮರಿಯಳ ಬಗ್ಗೆ ನಮಗೆ ಏನೂ ಗೊತ್ತಿಲ್ಲ. **7**

**16:7** ಪೌಲನು ಅನೇಕ ಸಲ ಸೆರೆಮನೆಗೆ ಹಾಕಲ್ಪಟ್ಟಿದ್ದನು (2 ಕೊರಿಂಥ 11:23). ಆದರೆ ಇದು ಯಾವಾಗ ಎಂಬದು ನಮಗೆ ಗೊತ್ತಿಲ್ಲ.

*"ಅಪೊಸ್ತಲರು"*– ಈ ಪದದ ಅರ್ಥ ನಿಯೋಗಕ್ಕಾಗಿ ಕಳುಹಿಸಲ್ಪಟ್ಟವರು. ಈ ದೇವಸೇವಕರಿಬ್ಬರು ಯೇಸು ಕ್ರಿಸ್ತನು ಆರಿಸಿಕೊಂಡ ಹನ್ನೆರಡು ಮಂದಿ ಅಪೊಸ್ತಲರಲ್ಲಿ ಇಲ್ಲ ಬದಲಾಗಿ ಸಭೆಯ ಪ್ರಮುಖ ನಾಯಕರಾಗಿದ್ದಾರೆ. **10**

**16:10** *"ಕ್ರಿಸ್ತನ ಸೇವೆಯಲ್ಲಿ ಪರಿಶೋಧಿತರು"*– ಇಲ್ಲಿ ವಿಶ್ವಾಸಿಗಳು ಮತ್ತು ದೇವಸೇವಕರಿಗೆ ದೊಡ್ಡ ಹೊಗಳಿಕೆ ಕೊಡಲಾಗಿರುವದನ್ನು ನೋಡಬಹುದಾಗಿದೆ. 1 ಕೊರಿಂಥ 9:27; 2 ತಿಮೊ 2:15 ಹೋಲಿಸಿ ನೋಡಿರಿ. **12**

**16:12** ಕೆಲವರು ಕರ್ತನಿಗಾಗಿ ಸೇವೆ ಮಾಡುತ್ತಿದ್ದರು; ಇನ್ನೂ ಕೆಲವರು "ಪ್ರಯಾಸದಿಂದ ಹೆಚ್ಚಾಗಿ" (ವ 6) ಸೇವೆ ಮಾಡುತ್ತಿದ್ದರು. ಪೌಲನು ಕಾರ್ಯಗಳು ಇದ್ದ ಹಾಗೆಯೇ ಹೇಳಿದ್ದಾನೆ. ನಾವು ದೇವರ ಎದುರಿನಲ್ಲಿ ನಿಂತುಕೊಳ್ಳುವ ದಿವಸದಲ್ಲಿಯೂ ಇದು ಸತ್ಯವಾಗಿರುವದು. ಆತನು ನಮ್ಮ ವಿಷಯದಲ್ಲಿ ನಿಜವಲ್ಲದ ಯಾವದನ್ನು ಹೇಳುವದಿಲ್ಲ ಹಾಗೆಯೇ ನಾವು ಮಾಡದಿರುವ ಕಾರ್ಯಗಳಿಗೆ ಬಹುಮಾನವನ್ನೂ ಕೊಡುವದಿಲ್ಲ – 2:6; 1 ಕೊರಿಂಥ 3:12-15. ಹಾಗೆಯೇ ಲೂಕ 19:12-26 ನೋಡಿರಿ. **13**

**16:13** *“ತಾಯಿ”*– ಮಾರ್ಕ 10:29-30. **16**

**16:16** ಆಗಿನ ದಿವಸಗಳಲ್ಲಿ ವಂದಿಸುವಾಗ ಗೌರವ ಸೂಚಿಸಲು ಕೆನ್ನೆಗೆ ಮುದ್ದಿಡುವದು ಸಾಮಾನ್ಯವಾದ ಪದ್ಧತಿಯಾಗಿತ್ತು (ಲೂಕ 7:45). “ಪವಿತ್ರವಾದ ಮುದ್ದು” ಎಂದರೆ ಅದರಲ್ಲಿ ಅಶುದ್ಧತೆಯ ಯಾವ ಭಾವವೂ ಇರಬಾರದು, ಕ್ರಿಸ್ತನಲ್ಲಿರುವ ಜೊತೆ ವಿಶ್ವಾಸಿಗಳನ್ನು ಗುರುತಿಸುವದು ಹಾಗೂ ಘನಪಡಿಸುವದು ಮಾತ್ರವೇ ಇರಬೇಕು. **17**

**16:17** ಪೌಲನು ತನ್ನ ಬಹುತೇಕ ಪತ್ರಿಕೆಗಳಲ್ಲಿ ಸುಳ್ಳು ಬೋಧಕರ ವಿಷಯದಲ್ಲಿ ಎಚ್ಚರಿಕೆಯಿಂದಿರುವಂತೆ ವಿಶ್ವಾಸಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾನೆ (2 ಕೊರಿಂಥ 11:13-15; ಗಲಾ 1:6-8; ಕೊಲೊ 2:8,18; 1 ತಿಮೊ 4:1-3; 2 ತಿಮೊ 3:1-8; 4:2-4). ಹಾಗೆಯೇ ಮತ್ತಾಯ 7:15-16; 24:4-5,24; ಅಪೊ 20:29-31; 2 ಪೇತ್ರ 2:1-2; 1 ಯೋಹಾನ 2:18-19; ಯೂದ 4. ಜನರನ್ನು ರಕ್ಷಿಸಲು ಮತ್ತು ವಿಶ್ವಾಸಿಗಳನ್ನು ದೃಢಪಡಿಸಲು ಹಾಗೂ ಕಟ್ಟಲು ದೇವರು ಸತ್ಯವನ್ನು ಸಾಧನವನ್ನಾಗಿ ಉಪಯೋಗಿಸುತ್ತಾನೆ. ಸುಳ್ಳುತನವು ಜನರನ್ನು ಹಾಳುಮಾಡಲು ಸೈತಾನನು ಪ್ರಯತ್ನಿಸುವ ವಿಧಾನವಾಗಿದೆ (ಯೋಹಾನ 8:44). ಸಭೆಗಳಲ್ಲಿ ಸುಳ್ಳು ಬೋಧನೆಗಳನ್ನು ಪರಿಚಯಪಡಿಸಲು ಸೈತಾನನು ಸುಳ್ಳು ಬೋಧಕರನ್ನು ಉಪಯೋಗಿಸುತ್ತಾನೆ. ಸುಳ್ಳು ಬೋಧಕರ ಬೋಧನೆಗಳ ಫಲಿತಾಂಶದಿಂದ ನಾವು ಅವರನ್ನು ಬೇಗ ಕಂಡುಹಿಡಿಯಬಹುದು (ಮತ್ತಾಯ 7:20). ಒಂದು ಫಲಿತಾಂಶ “ವಿಭಜನೆಗಳಾಗಿವೆ.” ಮತ್ತೊಂದು ಸತ್ಯವನ್ನು ಅನುಸರಿಸುವ ಮಾರ್ಗದಲ್ಲಿ ಅಡಚಣೆಗಳು ಎದುರಾಗುತ್ತವೆ ಮತ್ತು ಈ ಅಡಚಣೆಗಳು ಪ್ರಕಟಗೊಳ್ಳುವ ದೇವರ ಸತ್ಯಕ್ಕೆ ವಿರುದ್ಧವಾಗಿರುತ್ತವೆ. ಸಭೆಯೊಳಗೆ ಯಾರಾದರೂ ಸುಳ್ಳು ಬೋಧನೆಯನ್ನು ತರಲು ಪ್ರಯತ್ನಿಸಿದರೆ ನಾವು ಮಾಡಬೇಕಾಗಿರುವ ಒಂದೇ ಒಂದು ಕಾರ್ಯ ಅವುಗಳನ್ನು “ತಡೆಯಬೇಕು.” ಅವರು ಅದನ್ನು ಅಂಗೀಕರಿಸಿಕೊಳ್ಳಬಾರದು, ಅವರೊಂದಿಗೆ ಅನ್ಯೋನ್ಯತೆಯಲ್ಲಿ ಸೇರಬಾರದು ಅಥವಾ ಬೋಧಿಸಲು ಅವರಿಗೆ ಅನುಮತಿಸಬಾರದು. **18**

**16:18** ಒಂದುವೇಳೆ ಅವರು ದೇವರ ವಾಕ್ಯಕ್ಕೆ ವಿರುದ್ಧವಾಗಿ ಕಲಿಸುತ್ತಿರುವದಾದರೆ, ಅವರು ಯೇಸು ಕ್ರಿಸ್ತನ ನಿಜವಾದ ಸೇವಕರಾಗಿರಲು ಆಗುವದಿಲ್ಲ. ಅವರು ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುವವರಾಗಿರುತ್ತಾರೆ (ಮತ್ತು ಸೈತಾನನು ಅವರ ಹಿಂದೆ ನಿಂತಿರುತ್ತಾನೆ – 2 ಕೊರಿಂಥ 11:14-15). ಫಿಲಿಪ್ಪಿ 3:18-19; ಯೂದ 13,14 ನೋಡಿರಿ. ಅಂತರ್ಯದಲ್ಲಿ ಅವರು ದುರಾತ್ಮಗಳಂತಿರುತ್ತಾರೆ ಆದರೆ ಬಾಹ್ಯದಲ್ಲಿ ಸುಮಧುರವಾಗಿ ಮಾತನಾಡುವವರಾಗಿರುತ್ತಾರೆ. **19**

- **16:19** 1:8; 6:17; 15:14 ನೋಡಿರಿ. **20**

**16:20** *“ಶಾಂತಿದಾಯಕನಾದ ದೇವರು”*– 15:33. 1 ಪೂರ್ವ 21:1; ಮತ್ತಾಯ 4:1-10; ಯೋಹಾನ 8:44ರಲ್ಲಿ ಸೈತಾನನ ವಿಷಯವಾದ ನೋಟ್ಸ್ ನೋಡಿರಿ. 17,18 ವಚನದ

ಸುಳ್ಳು ಬೋಧಕರ ಹಿಂದೆ ಸೈತಾನನು ಇದ್ದಾನೆ ಎಂಬದನ್ನು ತೋರಿಸಲು ಇಲ್ಲಿ ಅವನ ಹೆಸರನ್ನು ಪ್ರಸ್ತಾಪಿಸಲಾಗಿದೆ. **22**

**16:22** ಪೌಲನು ಹೇಳಿದ ಮಾತುಗಳನ್ನು ತೆರ್ತ್ಯಲನು ಬರೆದಿದ್ದಾನೆ. **23**

**16:23** *"ಗಾಯನು"*– 1 ಕೊರಿಂಥ 1:14. **25**

**16:25** *"ಪ್ರವಾದಿಗಳ ಗ್ರಂಥ"*– ಪೌಲನು ಬಹುಶಃ ಅಪೊಸ್ತಲರ ಬರವಣಿಗೆಯ ಬಗ್ಗೆ ಹೇಳುತ್ತಿರಬಹುದು. ಅವರು ಹಳೆಯ ಒಡಂಬಡಿಕೆಯ ಪ್ರವಾದಿಗಳಿಗೆ ಸಮಾನರಾಗಿದ್ದರು, ಆದರೆ ದೇವರ ಸತ್ಯದ ಪೂರ್ಣ ಪ್ರಕಟನೆ ಹೊಂದಿದ್ದರು. 1 ಕೊರಿಂಥ 2:6-13ರೊಂದಿಗೆ ಹೋಲಿಸಿ ನೋಡಿರಿ. ಅಥವಾ (ಸುವಾರ್ತೆಯ ಚಿತ್ರಣ ಮತ್ತು ಪ್ರವಾದನೆಗಳನ್ನು ಹೊಂದಿದ್ದ) ಹಳೆಯ ಒಡಂಬಡಿಕೆಯನ್ನು ಈಗ ಅಪೊಸ್ತಲರು ಸ್ಪಷ್ಟಪಡಿಸಿದ್ದಾರೆ ಎಂದು ಪೌಲನು ಹೇಳುತ್ತಿರಬಹುದು. 3:21; ಲೂಕ 24:25-27,45-47; 1 ಪೇತ್ರ 1:10-12ರೊಂದಿಗೆ ಹೋಲಿಸಿ ನೋಡಿರಿ. ಹೇಗೇ ಆದರೂ ದೇವರ ಉದ್ದೇಶ ಒಂದೇ ಆಗಿದೆ. ಎಲ್ಲಾ ಜನಾಂಗಗಳು ಅತನನ್ನು ನಂಬಬೇಕು ಮತ್ತು ಆತನಿಗೆ ವಿಧೇಯರಾಗಬೇಕೆಂದು ಆತನು ಬಯಸುತ್ತಾನೆ – 1:5; 11:32; 15:9-12. **26**

**16:26** *"ನನ್ನ ಸುವಾರ್ತೆ"*– ಪೌಲನು ತಾನೇ ಕಂಡುಹಿಡಿದಿರುವದಾಗಿ ಹೇಳುತ್ತಿಲ್ಲ. ಬದಲಾಗಿ ಪೌಲನು ಬೋಧಿಸಿದ ಹಾಗೂ ಕಲಿಸಿದ ಸುವಾರ್ತೆ ಈ ಪತ್ರಿಕೆಯ ಮುಖ್ಯ ಧ್ಯೇಯವಾಗಿದೆ ಎಂದು ಹೇಳಿದ್ದಾನೆ (1:16). "ರಹಸ್ಯ" ಎಂದರೆ ದೇವರ ಆತ್ಮೀಕ ಸತ್ಯವಾಗಿದ್ದು ಜನರು ತಿಳಿಯಲು ಬಯಸುವದಾದರೆ ಆತನು ಅದನ್ನು ಪ್ರಕಟಪಡಿಸುತ್ತಾನೆ. ಬೇರೆ ಯಾವ ರೀತಿಯಲ್ಲಿಯೂ ಅದನ್ನು ತಿಳಿದುಕೊಳ್ಳಲು ಅವರಿಂದ ಆಗುವದಿಲ್ಲ. ಸುವಾರ್ತೆಯ ರಹಸ್ಯದ ಎಲ್ಲಾ ಅಂಶಗಳನ್ನು ಹಳೆಯ ಒಡಂಬಡಿಕೆಯ ಕಾಲದಲ್ಲಿ ಪೂರ್ತಿಯಾಗಿ ಪ್ರಕಟಪಡಿಸಲಾಗಿರಲಿಲ್ಲ (ಎಫೆ 3:5). **27**

**16:27** ಒಬ್ಬನೇ ನಿಜವಾದ ದೇವರು ಮಾತ್ರವೇ ಸರ್ವಜ್ಞಾನಿಯಾಗಿದ್ದಾನೆ. ಯಾವುದನ್ನು ತಿಳಿಯಬಹುದು ಮತ್ತು ಮಾನವರಿಗೆ ಏನನ್ನು ಪ್ರಕಟಪಡಿಸಬೇಕು ಹಾಗೂ ಅದನ್ನು ಯಾವಾಗ ಪ್ರಕಟಪಡಿಸಬೇಕು ಎಂಬದನ್ನು ಆತನು ಮಾತ್ರವೇ ಬಲ್ಲವನಾಗಿದ್ದಾನೆ. ಆತನು ಮಾತ್ರವೇ ಮಹಿಮೆಗೆ ಯೋಗ್ಯನಾಗಿದ್ದಾನೆ (11:33-36; ಪ್ರಕ 4:1; ಯೆಶಾಯ 48:11). ಮತ್ತು "ಯೇಸು ಕ್ರಿಸ್ತನ ಮೂಲಕ" ಆತನಿಗೇ ಎಲ್ಲಾ ಮಹಿಮೆ ಸಲ್ಲಬೇಕು – 1 ಪೇತ್ರ 4:11; ಯೂದ 25.

*ಮುನ್ನರಿವು* ಸತ್ಯವೇದದಲ್ಲಿ ಪ್ರಕಟಿಸಿರುವ ಪ್ರಕಾರ ದೇವರ ಮುನ್ನರಿವಿನ ಅರ್ಥದ ಬಗ್ಗೆ ಪೂರ್ಣವಾದ ಸಹಮತವಿನ್ನೂ ದೊರೆತಿಲ್ಲ. ಕೆಲವರು ಪಂಡಿತರು ಆತನ ಮುನ್ನರಿವಿನ ಬಗ್ಗೆ ಹೀಗೆ ಅಭಿಪ್ರಾಯಪಟ್ಟಿದ್ದಾರೆ – ದೇವರು ಲೋಕವನ್ನು ಸೃಷ್ಟಿಸುವದಕ್ಕಿಂತ ಮೊದಲು, ಯಾರನ್ನು ರಕ್ಷಣೆಗಾಗಿ ಆಯ್ಕೆ ಮಾಡಬೇಕೆಂಬದನ್ನು ಆತನು ಬಲ್ಲವನಾಗಿದ್ದನು ಮತ್ತು

ಅವರು ಕ್ರಮೇಣವಾಗಿ ತನ್ನ ಕುಮಾರನಂತಾಗಬೇಕೆಂದು ನಿಶ್ಚಯಿಸಿದನು. ಅವರು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುತ್ತಾರೆ ಅಥವಾ ತಮ್ಮ ಚಿತ್ತವನ್ನು ಆತನ ಚಿತ್ತಕ್ಕೆ ಒಪ್ಪಿಸುತ್ತಾರೆ ಎಂಬ ಕಾರಣಕ್ಕೆ ಆತನು ಅವರನ್ನು ಆಯ್ಕೆಮಾಡಲಿಲ್ಲ. ಆತನ ಆಯ್ಕೆ ಆತನ ಕೃಪೆ ಮತ್ತು ಜ್ಞಾನದ ಮೇಲೆ ಮಾತ್ರವೇ ಆಧಾರವಾಗಿತ್ತು. ಅದೇ ಸಮಯದಲ್ಲಿ ಆತನು ಉಳಿದವರನ್ನು ತಿರಸ್ಕರಿಸಿದನು. ಆತನು ಎಲ್ಲಾ ಮಾನವರನ್ನು ಆರಿಸಿಕೊಂಡು ಅವರನ್ನು ರಕ್ಷಿಸಬಹುದಾಗಿತ್ತು ಆದರೆ ಹಾಗೆ ಮಾಡಲಿಲ್ಲ. ಆತನು ಯಾರಲ್ಲಿಯೂ ಅವರ ಒಳ್ಳೇತನ ಅಥವಾ ಒಳ್ಳೆಯ ಕಾರ್ಯಗಳನ್ನು ಮುಂದಾಗಿಯೇ ನೋಡಿದ್ದರಿಂದ ಆಯ್ಕೆ ಮಾಡಿಕೊಳ್ಳಲಿಲ್ಲ, ಯಾಕಂದರೆ ಒಳ್ಳೆಯದನ್ನು ಮಾಡುವವರೇ ಯಾರೂ ಇರಲಿಲ್ಲ. ಹಾಗೆಯೇ ಉಳಿದವರು ತಾನಾದುಕೊಂಡವರಿಗಿಂತ ಹೀನ ಸ್ಥಿತಿಯಲ್ಲಿರುವವರು ಎಂಬದನ್ನು ಮುಂದಾಗಿಯೇ ನೋಡಿದ್ದರಿಂದ ಅವರನ್ನು ತಿರಸ್ಕರಿಸಲಿಲ್ಲ. ಬದಲಾಗಿ ಇವೆಲ್ಲವೂ ಆತನ ಕೃಪೆ ಮತ್ತು ಸಾರ್ವಭೌಮತ್ವಕ್ಕೆ ಸಂಬಂಧಿಸಿದ ಸಂಗತಿಗಳಾಗಿವೆ. ಈ ವ್ಯಾಖ್ಯಾನದ ನಿರಾಕರಣೆಯನ್ನು ಈ ರೀತಿಯಾಗಿ ಹೇಳಬಹುದಾಗಿದೆ: ಮಾನವರೆಲ್ಲರೂ ರಕ್ಷಣೆ ಹೊಂದಬೇಕೆಂದು ದೇವರು ಪ್ರಕಟಿಸುವವನಾಗಿದ್ದಾನೆ (11:32; 1 ತಿಮೊ 2:3-6; 4:10; 2 ಪೇತ್ರ 3:9; ಯೆಹೆಜ್ಕೇಲ 18:30-32; 33:11). ಆತನ ಪ್ರಮುಖ ಗುಣವೇ ಪ್ರೀತಿಯಾಗಿದೆ (1 ಯೋಹಾನ 4:8,16) ಮತ್ತು ಆತನು ಹೇಳಿರುವದೇನೆಂದರೆ ನಾನು ಇಡೀ ಲೋಕವನ್ನು ಪ್ರೀತಿಸುತ್ತೇನೆ (ಯೋಹಾನ 3:16) ಮತ್ತು ಆತನು ಎಲ್ಲರ ಮೇಲೆಯೂ ಕರುಣೆಯುಳ್ಳವನಾಗಿದ್ದಾನೆ (ಕೀರ್ತನೆ 145:8-9). ಸತ್ಯವೇದದಲ್ಲಿ ಆತನು ಆಗಾಗ ತನ್ನ ಹೃದಯದ ಬಯಕೆಯನ್ನು ತಿಳಿಯಪಡಿಸಿದ್ದಾನೆ (ಯೆರೆ 48:31-39; ಮತ್ತಾಯ 23:37; ಲೂಕ 19:41; ಪ್ರಕ 22:17). ಒಂದುವೇಳೆ ಈಗ ಆತನು ಎಲ್ಲಾ ಮಾನವರನ್ನು ಪ್ರೀತಿಸಿ, ಅವರನ್ನು ರಕ್ಷಿಸಬೇಕೆಂದು ಬಯಸುವದಾದರೆ ಮತ್ತು ಅವರನ್ನು ಆಯ್ಕೆ ಮಾಡಬೇಕೆಂದು ತೀರ್ಮಾನಿಸಿರುವದರಿಂದ ರಕ್ಷಿಸುವದಾದರೆ, ಆತನು ಅವರನ್ನು ಯಾಕೆ ಆಯ್ಕೆ ಮಾಡಲಿಲ್ಲ ಎಂಬ ಪ್ರಶ್ನೆ ಸಹಜವಾಗಿ ಹುಟ್ಟುಕೊಳ್ಳುತ್ತದೆ? ಸ್ವಾಭಾವಿಕವಾಗಿ ಕೆಲವರನ್ನು ಆರಿಸಿಕೊಂಡು ಕೆಲವರನ್ನು ತಿರಸ್ಕರಿಸುವದು ಆತನ ಸಾರ್ವಭೌಮತೆಯ ವ್ಯಕ್ತಪಡಿಸುವಿಕೆಯಾಗಿದೆಯಾದರೂ ಎಲ್ಲರನ್ನೂ ಪ್ರೀತಿಸಬೇಕು ಮತ್ತು ರಕ್ಷಿಸಬೇಕು ಎಂಬ ಆತನ ಬಯಕೆ ಏನಾಗುತ್ತದೆ? ಈ ರೀತಿಯ ಪ್ರಶ್ನೆಗಳು ಈ ವ್ಯಾಖ್ಯಾನಕ್ಕೆ ಎದುರಾಗುವದರಿಂದ, ಕೆಲವು ಪಂಡಿತರು ಇದನ್ನು ತಿರಸ್ಕರಿಸಿದ್ದಾರೆ. ಅವರು ಮುನ್ನರಿವೆಂದರೆ ಕೆಳಗಿನ ವಿಷಯಗಳಾಗಿವೆ ಎಂದು ನಂಬುವವರಾಗಿದ್ದಾರೆ: ಆತನು ಮೊದಲನೆಯ ಮಾನವನನ್ನು ಉಂಟು ಮಾಡುವ ಮೊದಲು, ತನ್ನ ಪವಿತ್ರಾತ್ಮನ ಕಾರ್ಯಕ್ಕೆ ಮಾನವ ಕುಲದಲ್ಲಿ ಯಾರು ಅಧೀನರಾಗುತ್ತಾರೆ ಮತ್ತು ಆತನನ್ನು ನಂಬುವ ಆಯ್ಕೆ ಮಾಡಿಕೊಳ್ಳುತ್ತಾರೆ ಎಂಬದನ್ನು ದೇವರು ತಿಳಿದಿದ್ದನು. ಆ ಜನರು ರಕ್ಷಣೆ ಹೊಂದಬೇಕೆಂದು ದೇವರು ಪ್ರತಿಷ್ಠಿಸಿದನು ಮತ್ತು ಕ್ರಮೇಣವಾಗಿ ಯೇಸು ಕ್ರಿಸ್ತನಂತಾಗಬೇಕೆಂದು ಬಯಸಿದನು.

ಕೆಲವರು ಉಳಿದವರಿಗಿಂತ ಉತ್ತಮರೆಂಬದನ್ನು ದೇವರು ಮೊದಲೇ ತಿಳಿದುಕೊಂಡು ಅವರನ್ನು ಆಯ್ಕೆ ಮಾಡಿಕೊಂಡನು ಅಥವಾ ಕೆಲವರು ಒಳ್ಳೇತನಗಳಲ್ಲಿ ನಿರತರಾಗಿ ರಕ್ಷಣೆಗೆ ಅರ್ಹರಾಗುವರು ಎಂಬದು ತಪ್ಪು ತಿಳುವಳಿಕೆಯಾಗಿದೆ. ಇದು ಖಂಡಿತವಾಗಿಯೂ ಸಾಧ್ಯವಿಲ್ಲ. 3:9-20,24; ಎಫೆ 2:1-10; ತೀತ 3:3-7 ನೋಡಿರಿ. ಪವಿತ್ರಾತ್ಮನು ಬಲಪಡಿಸದೆ ಹೋದರೆ ಮಾನವರಿಂದ ಯೇಸು ಕ್ರಿಸ್ತನನ್ನು ನಂಬಲು ಸಾಧ್ಯವಿಲ್ಲ (ಯೋಹಾನ 6:29,44; ಅಪೊ 13:48; ಫಿಲಿಪ್ಪಿ 1:29). ಆದರೆ ದೇವರಾತ್ಮನು ದೇವಜನರ ಹೃದಯಗಳಲ್ಲಿ ಕಾರ್ಯಮಾಡುವಾಗ ನಂಬಬೇಕೋ ಅಥವಾ ಬೇಡವೋ ಎಂಬ ತೀರ್ಮಾನ ತೆಗೆದುಕೊಳ್ಳುವಂತೆ ಅವರನ್ನು ಬಲಪಡಿಸುತ್ತಾನೆ. ಅವರ ಚಿತ್ತ ದೇವರ ಚಿತ್ತವನ್ನು ಎದುರುಗೊಳ್ಳುತ್ತದೆ ಮತ್ತು ದೇವರಿಗೆ “ಬೇಕು” ಅಥವಾ “ಬೇಡ” ಎಂದು ಹೇಳುವ ಹಾಗೂ ಆತನನ್ನು ಆಯ್ಕೆ ಮಾಡುವ ಅಥವಾ ತಿರಸ್ಕಾರ ಮಾಡುವ ಸ್ವಾತಂತ್ರ್ಯ ಅವರಿಗಿರುತ್ತದೆ. “ಬೇಕು” ಎಂಬದಾಗಿ ಹೇಳಲು ಬಲಗೊಂಡ ನಂತರವೂ ಕೆಲವರು ಬೇಕು ಎನ್ನುತ್ತಾರೆ ಕೆಲವರು ಬೇಡ ಎನ್ನುತ್ತಾರೆ. ದೇವರು ತನ್ನ ಸಾರ್ವಭೌಮತೆಗನುಸಾರವಾಗಿ ಆಯ್ಕೆಯ ಅಧಿಕಾರದೊಂದಿಗೆ ಮಾನವರನ್ನು ಸೃಷ್ಟಿಸಲು ತೀರ್ಮಾನಿಸಿದನು ಮತ್ತು ಆ ಆಯ್ಕೆಯು ನಿತ್ಯವಾದ ಪರಿಣಾಮಗಳನ್ನು ಹೊಂದಿದೆ. ದೇವರ ಸಹಾಯವಿಲ್ಲದೆ ಯಾರು ಸಹ ನಂಬುವ ಆಯ್ಕೆ ಮಾಡಿ ದೇವರಿಗೆ “ಬೇಕು” ಎಂದು ಹೇಳುವದಿಲ್ಲ, ಅದು ದೇವರು ರಕ್ಷಣೆಹೊಂದಿಗೆ ಸನ್ಮಾನಿಸುವ ಒಳ್ಳೇತನದ ಕಾರ್ಯವಲ್ಲ. ದೇವರ ವರವನ್ನು ಅಂಗೀಕರಿಸಿಕೊಳ್ಳುವದು ಒಳ್ಳೇತನದ ಕಾರ್ಯವಾಗಿರಲು ಹೇಗೆ ಸಾಧ್ಯ, ಯಾಕಂದರೆ ಆತನು ವರವನ್ನು ಅಂಗೀಕರಿಸಿಕೊಳ್ಳುವ ಸಾಮರ್ಥ್ಯವನ್ನೂ ಕೊಡುತ್ತಾನಲ್ಲವೇ? ವರವು ಸಹ ಅದರ ಬೆಲೆಯನ್ನು ಕಳೆದುಕೊಳ್ಳುವದಿಲ್ಲ ಯಾಕಂದರೆ ಯಾರಾದರೂ ಅದನ್ನು ತೆಗೆದುಕೊಳ್ಳುತ್ತಾರೆ. ದೇವರು ಯಾರು ತನ್ನನ್ನು ಆಯ್ಕೆಮಾಡುತ್ತಾರೆ ಮತ್ತು ತನ್ನ ವರವನ್ನು ಅಂಗೀಕರಿಸಿಕೊಳ್ಳುತ್ತಾರೆ ಎಂಬದು ಮುಂದಾಗಿಯೇ ಗೊತ್ತಿತ್ತು ಅದರಂತೆ ಅವರನ್ನು ಕ್ರಿಸ್ತನ ಸಾರೂಪ್ಯವುಳ್ಳವರಾಗಲು ಆತನು ಸಂಕಲ್ಪಿಸಿದನು. ಈ ದೃಷ್ಟಿಕೋನದನುಸಾರ, ದೇವರ ಸಾರ್ವಭೌಮತೆಯನ್ನು ಮೊದಲ ದೃಷ್ಟಿಕೋನಕ್ಕಿಂತ ಕಡಿಮೆ ಎಂದು ಪರಿಗಣಿಸಲು ಆಗುವದಿಲ್ಲ. ನಿಜವಾಗಿ ಹೇಳುವದಾರೆ ದೇವರು ಮಾನವನ ಚಿತ್ತಕ್ಕೆ ಈ ಅಧಿಕಾರವನ್ನು ಕೊಡದಿರುವದೇ ಆತನನ್ನು ನಿಯಂತ್ರಣದಲ್ಲಿರಿಸುವದಕ್ಕಾಗಿದೆ. ಸಾರ್ವಭೌಮನಾದ ದೇವರು ಇದನ್ನು ಮಾಡಬೇಕೆಂದು ಬಯಸಿದರೂ ಮಾಡುವದಿಲ್ಲ. ಮುನ್ನರಿವಿನ ವಿಷಯದಲ್ಲಿ ಮೇಲೆ ತಿಳಿಸಲಾಗಿರುವ ಎರಡನೇ ದೃಷ್ಟಿಕೋನವು ಸಂಪೂರ್ಣವಾಗಿ ಸತ್ಯವೇದದಿಂದ ಮಾನ್ಯತೆ ಪಡೆದಿದೆ ಎಂಬದಾಗಿ ಈ ನೋಟ್ಸ್‌ಗಳ ಬರಹಗಾರರು ಯೋಚಿಸುವದಿಲ್ಲ ಬದಲಾಗಿ ಅಲ್ಲಿ ಪ್ರಕಟಪಡಿಸಿರುವ ಪ್ರಕಾರ ಪ್ರೀತಿ ಸ್ವರೂಪನಾದ ದೇವರ ಸ್ವಭಾವದೊಂದಿಗೆ ಇದು ಸಾಮರಸ್ಯವುಳ್ಳದ್ದಾಗಿದೆ. ದೇವರು ರಕ್ಷಿಸಬಹುದಾಗಿತ್ತು ಆದರೂ ಆತನು ರಕ್ಷಿಸುವ ಆಯ್ಕೆ ಮಾಡಲಿಲ್ಲವಾದ್ದರಿಂದ

ಅಂತಿಮವಾಗಿ ನಾಶವಾಗುವವರು ಸಂಪೂರ್ಣವಾಗಿಯೇ ನಾಶವಾಗುತ್ತಾರೆ ಎಂದು ಯೋಚಿಸುವದು ಕಷ್ಟವಾಗುತ್ತದೆ ಯಾಕಂದರೆ ದೇವರು ಅವರನ್ನು ಕಡೆಗಣಿಸಿ ಅವರಂತೆಯೇ ಪಾಪಿಗಳಾಗಿದ್ದ ಬೇರೆಯವರನ್ನು ರಕ್ಷಣೆಗೆ ಆರಿಸಿಕೊಂಡನು, ಆತನು ತನ್ನ ಸಾರ್ವಭೌಮವಾದ ಅಯ್ಕೆಯನ್ನು ಬಿಟ್ಟರೆ ಬೇರೆ ಯಾವುದರ ಬಗ್ಗೆಯೂ ಯೋಚಿಸಲಿಲ್ಲ ಎಂದು ಹೇಳಲು ಆಗುವದಿಲ್ಲ. ಪ್ರಶ್ನೆಯು ಯಾವಾಗಲೂ ತೊಂದರೆಯುಳ್ಳದ್ದಾಗಿರುತ್ತದೆ - ಸಾರ್ವಭೌಮವಾದ ಪ್ರೀತಿ ಮತ್ತು ಕರುಣೆಯುಳ್ಳ ದೇವರು ಇದನ್ನು ಮಾಡುವನೇ? ಆದರೆ ದೇವರು ಮತ್ತು ಮಾನವನ ಚಿತ್ತದ ಕಾರ್ಯ ನಿರ್ವಹಣೆಯು ಅತ್ಯಂತ ಕಷ್ಟಕರ ಹಾಗೂ ರಹಸ್ಯವಾದ ಸಂಗತಿಯಾಗಿದೆ ಹಾಗೂ ಈ ವಿಷಯದಲ್ಲಿ ಅನುಭವವಿಲ್ಲದೆ ಮಾತನಾಡುವದು ಬುದ್ದಿವಂತೆಯಲ್ಲವಾಗಿದೆ. ಈ ವಿಷಯದಲ್ಲಿ (ದೈವಶಾಸ್ತ್ರದ ಇತರೆ ಕಷ್ಟಕರವಾಗಿರುವ ವಿಷಯದಂತೆ) ಅಪೊಸ್ತಲನಾದ ಪೌಲನನ್ನು ಅನುಸರಿಸಬೇಕು. ದೇವರಾತ್ಮನ ಪ್ರೇರಣೆಯಿಂದ, 11ನೇ ಅಧ್ಯಾಯದಲ್ಲಿ ಕೆಲವು ಅಗಾಧವಾದ ಸತ್ಯವನ್ನು ಬರೆದ ನಂತರ, ಆತನು ಹೇಳಿರುವದೇನೆಂದರೆ, "ಆಹಾ ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗವನ್ನು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ! ಕರ್ತನ ಮನಸ್ಸನ್ನು ತಿಳುಕೊಂಡವನಾರು? ಆತನಿಗೆ ಆಲೋಚನಾ ಕರ್ತನು ಯಾರು? ಮೊದಲು ಆತನಿಗೆ ಕೊಟ್ಟು ಪ್ರತಿಫಲವನ್ನು ತೆಗೆದುಕೊಳ್ಳುವವನು ಯಾರು? ಸಮಸ್ತವು ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ ಇರುತ್ತದೆ; ಆತನಿಗೇ ಸದಾಕಾಲವೂ ಸ್ತೋತ್ರ. ಆಮೆನ್".